prajavani.net prajavani | ಗುರುವಾರ, ನವೆಂಬರ್ 6, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 306 | ಪುಟ 16 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಚಿನ್ನ (Std. 10g) ₹1,25,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,55,000 (ಬೆಂಗಳೂರು)

ಸರ್ಕಾರದ ಆಹ್ವಾನಕ್ಕೆ ತಿರಸ್ಕಾರ

ಕಬ್ಬು ದರ ನಿಗದಿ: ಮುಖ್ಯಮಂತ್ರಿ, ಸಕ್ಕರೆ ಕಾರ್ಖಾನೆಗಳ ಮಾಲೀಕರು, ರೈತ ಮುಖಂಡರ ಸಭೆಗೆ ಸಚಿವರ ಆಹ್ವಾನ

• ಸಂತೋಷ ಈ. ಚಿನಗುಡಿ

ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಗುರ್ಲಾಪುರದಲ್ಲಿ ಹಮ್ಮಿಕೊಂಡಿದ್ದ ಅನಿರ್ದಿಷ್ಟಾವಧಿ ಧರಣಿ ಸ್ಥಳಕ್ಕೆ ಬುಧವಾರ ಭೇಟಿ ನೀಡಿದ ಸಚಿವ ಎಚ್‌.ಕೆ.ಪಾಟೀಲ ರೈತರನ್ನು ಉದ್ದೇಶಿಸಿ ಮಾತನಾಡಿದರು —ಪ್ರಜಾವಾಣಿ ಚಿತ್ರ: ಬಾಲಶೇಖರ ಬಂದಿ

ಗುರ್ಲಾಪುರ (ಬೆಳಗಾವಿ ಜಿಲ್ಲೆ): 'ರೈತರ ಸಮಸ್ಯೆಗಳನ್ನು ಸ್ಥಳದಲ್ಲೇ ಬಗೆಹರಿಸಲಾಗದು. ಬೆಂಗಳೂರಿಗೆ ಬನ್ನಿ. ಮುಖ್ಯಮಂತ್ರಿ ಹಾಗೂ ಸಕ್ಕರೆ ಕಾರ್ಖಾನೆಗಳ ಮಾಲೀಕರೊಂದಿಗೆ ಚರ್ಚಿಸೋಣ' ಎಂದು ಪ್ರವಾಸೋದ್ಯಮ ಸಚಿವ ಎಚ್‌.ಕೆ.ಪಾಟೀಲ ಬುಧವಾರ ನೀಡಿದ ಆಹ್ವಾನವನ್ನು ರೈತರು ನೇರಾನೇರ ತಿರಸ್ಕರಿಸಿದರು.

ರೈತರ ಮನವೊಲಿಸುವ ಸಚಿವರ ಯತ್ನ ಫಲ ನೀಡಲಿಲ್ಲ. ಟನ್‌ ಕಬ್ಬಿಗೆ ₹3,500 ದರ ನೀಡಬೇಕು ಎಂದು ಪಟ್ಟುಹಿಡಿದು ಕಳೆದೊಂದು ವಾರದಿಂದ ಮೂಡಲಗಿ ತಾಲ್ಲೂಕಿನ ಗುರ್ಲಾಪುರ ಕ್ರಾಸ್‌ನ ಹೆದ್ದಾರಿಯಲ್ಲಿ ರೈತರು ನಡೆಸುತ್ತಿರುವ ಅಹೋರಾತ್ರಿ ಮುಷ್ಕರ 8ನೇ ದಿನದಲ್ಲಿ ಮುಂದುವರಿಯಿತು.

ಧರಣಿ ಸ್ಥಳಕ್ಕೆ ಬಂದ ಎಚ್‌.ಕೆ.ಪಾಟೀಲ ಮುಖಂಡರೊಂದಿಗೆ ಮಾತುಕತೆ ನಡೆಸಿದರು. 'ಟನ್‌ ಕಬ್ಬಿಗೆ ₹3,500 ದರ ನೀಡಿ ಎಂಬುದೂ ಸೇರಿ ಎಂಟು ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟಿದ್ದೀರಿ. ಗುರುವಾರ (ನ.6) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚೆ ಮಾಡುತ್ತೇನೆ. 20 ಮಂದಿ ರೈತ ಮುಖಂಡರೂ ಬನ್ನಿ' ಎಂದು ಆಹ್ವಾನಿಸಿದರು.

ಆಗ ರೈತ ಸಮೂಹದಿಂದ ಜೋರಾದ ಕೂಗಾಟ, ಚೀರಾಟ ಕೇಳಿಬಂತು. 'ಸಚಿವರ ಆಹ್ವಾನವನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ. ನ್ಯಾಯ ಕೇಳಲು ಎಲ್ಲಿಗೂ ಬರುವುದಿಲ್ಲ. ಬೇಕಿದ್ದರೆ ಸರ್ಕಾರವೇ ಇಲ್ಲಿಗೆ ಬರಲಿ' ಎಂದು ಪ್ರತಿಭಟನಕಾರರು ಘೋಷಣೆ ಕೂಗಿದರು.

'ಇದು ನಿಮ್ಮ ಪಕ್ಷದ ವೇದಿಕೆ ಅಲ್ಲ. ರೈತಪಕ್ಷದ ವೇದಿಕೆ. ಇಲ್ಲಿಗೆ ಬಂದು ಬರೀ 'ಶೋ' ಕೊಟ್ಟು ಹೋಗುವುದಾದರೆ ನಮಗೆ ಯಾರೂ ಬೇಡ. ಚಳವಳಿಗೆ ಶಕ್ತಿ ಕೊಡುವುದಾದರೆ ಮಾತ್ರ ಬನ್ನಿ ಎಂಬುದು ನಮ್ಮ ಕರೆ' ಎಂದು ಮುಖಂಡರೊಬ್ಬರು ಹೇಳಿದರು.

ಆಗ ರೈತ ಸಮೂಹದಿಂದ ಕೂಗಾಟ ಆರಂಭವಾಯಿತು. ಮಧ್ಯ ಪ್ರವೇಶಿಸಿದ ರೈತ ಮುಖಂಡರು, 'ಸಚಿವರು ಹೇಳುವುದನ್ನು ಹೇಳಲಿ ಬಿಡಿ. ಮುಂದೆ ನಮ್ಮ ಜಾತ್ರೆ ಏನೆಂದು ನಾವು ತೋರಿಸೋಣ' ಎಂದು ಸಮಾಧಾನ ಮಾಡಿದರು.

▸8

ತಕ್ಷಣ ನೆರವು ಘೋಷಿಸಿ: ಪ್ರಕಾಶ ಹುಕ್ಕೇರಿ

ಚಿಕ್ಕೋಡಿ: 'ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ಸಕ್ಕರೆ ಸಚಿವ ಶಿವಾನಂದ ಪಾಟೀಲ ರೈತರ ಕಷ್ಟ ಅರಿಯಬೇಕು. ಕೂಡಲೇ ಕಬ್ಬಿಗೆ ನೆರವು ಘೋಷಿಸಬೇಕು' ಎಂದು ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಆಗ್ರಹಿಸಿದ್ದಾರೆ.

'2013–14ರಲ್ಲಿ ನಾನು ಸಕ್ಕರೆ ಸಚಿವನಾಗಿದ್ದಾಗ ಇದೇ ಸಮಸ್ಯೆ ತಲೆದೋರಿತ್ತು. ಆಗ ಸರ್ಕಾರದ ಪರವಾಗಿ ಪ್ರತಿ ಟನ್‌ ಕಬ್ಬಿಗೆ ₹165 ನೆರವು ಘೋಷಿಸಿದ್ದೆ. ಅದಕ್ಕಾಗಿ ಸಿದ್ದರಾಮಯ್ಯ ₹300 ಕೋಟಿ ಪ್ರೋತ್ಸಾಹಧನ ಬಿಡುಗಡೆ ಮಾಡಿದ್ದರು. ಈಗಲೂ ಅಂಥದ್ದೇ ನಿರ್ಧಾರ ಕೈಗೊಳ್ಳಬೇಕು' ಎಂದೂ ಪ್ರಕಟಣೆ ಮೂಲಕ ಆಗ್ರಹಿಸಿದ್ದಾರೆ.

ಒಂದು ದಿನ ಗಡುವು, ಇಲ್ಲದಿದ್ದರೆ ಬಂದ್‌

'ಗುರುವಾರ (ನ.6) ರಾತ್ರಿ 8 ಗಂಟೆಯವರೆಗೆ ಗಡುವು ನೀಡುತ್ತೇವೆ. ಅಷ್ಟರೊಳಗೆ ಸರ್ಕಾರ ನಿರ್ಧಾರ ಹೇಳಬೇಕು. ಇಲ್ಲದಿದ್ದರೆ ನ.7ರಿಂದ ಆಮರಣ ಉಪವಾಸ ಹಾಗೂ ರಾಷ್ಟ್ರೀಯ ಹೆದ್ದಾರಿ ಬಂದ್‌ ಮಾಡುತ್ತೇವೆ' ಎಂದು ರೈತ ಮುಖಂಡರು ಸಚಿವ ಎಚ್‌.ಕೆ.ಪಾಟೀಲ ಎದುರಿಗೆ ಹೇಳಿದರು.

'ರೈತರಿಗೆ ನ್ಯಾಯ ಪಡೆಯಲು ಬೆಂಗಳೂರಿಗೆ ಆಹ್ವಾನಿಸುತ್ತಿದ್ದೀರಿ. ನಾವು ಎಲ್ಲಿಗೂ ಬರುವುದಿಲ್ಲ. ಬೇಕಿದ್ದರೆ ಸರ್ಕಾರವೇ ಇಲ್ಲಿಗೆ ಬರಬೇಕು' ಎಂದೂ ಹೇಳಿದರು.

ಬಳಿಕ ಸಚಿವರು ಸ್ಥಳದಿಂದ ಹೊರಟರು. ಸಚಿವ ರಾತ್ರಿ ಇಲ್ಲಿಯೇ ಇರಬೇಕು ಎಂದು ಆಗ್ರಹಿಸಿ ಕೆಲ ರೈತರು ಅವರ ಕಾರಿಗೆ ಮುತ್ತಿಗೆ ಹಾಕಿದರು. ಮಧ್ಯಪ್ರವೇಶಿಸಿದ ಪೊಲೀಸರು ರೈತರನ್ನು ಚದುರಿಸಿದರು.

'ಮಹಾ' ಕಾರ್ಖಾನೆಗಳ 'ರೇಟ್‌ವಾರ್‌'

ಸಂಕೇಶ್ವರ: ರೈತರ ಹೋರಾಟವನ್ನೇ ಬಂಡವಾಳ ಮಾಡಿಕೊಂಡ ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಗಳು 'ರೇಟ್‌ವಾರ್‌' ಆರಂಭಿಸಿವೆ. ಬಿದ್ರಿಯ ವೇದಗಂಗಾ–ದೂಧಗಂಗಾ ಸಹಕಾರ ಸಕ್ಕರೆ ಕಾರ್ಖಾನೆ ಕಬ್ಬಿಗೆ ₹3,614 ದರ ಘೋಷಿಸಿದ ಬೆನ್ನಲ್ಲೇ, ಅಲ್ಲಿನ ಇನ್ನೂ ನಾಲ್ಕು ಕಾರ್ಖಾನೆಗಳೂ ದರ ಹೆಚ್ಚಳ ಮಾಡಿವೆ.

▸8

ಬಿಹಾರ: ಮೊದಲ ಹಂತದ ಮತದಾನ ಇಂದು

ಪಟ್ನಾ: ಬಿಹಾರದ ವಿಧಾನಸಭಾ ಚುನಾವಣೆಯ ಮೊದಲ ಹಂತದ ಮತದಾನವು ಗುರುವಾರ ನಡೆಯಲಿದೆ.

▸9

'ಹರಿಯಾಣ: 25 ಲಕ್ಷ ಮತಗಳ ಕಳವು'

ಕಾಂಗ್ರೆಸ್‌ ಗೆಲುವು ಕಸಿಯಲು ವ್ಯವಸ್ಥಿತ ವಿಧಾನ • ಬಿಜೆಪಿ ಜತೆ ಕೈಜೋಡಿಸಿರುವ ಆಯೋಗ: ರಾಹುಲ್‌

ನವದೆಹಲಿ (ಪಿಟಿಐ): 'ಹರಿಯಾಣದಲ್ಲಿ ಕಳೆದ ವರ್ಷ ನಡೆದ ವಿಧಾನಸಭಾ ಚುನಾವಣೆ ವೇಳೆ ಭಾರಿ ಪ್ರಮಾಣದ ಮತಕಳವು ನಡೆದಿದ್ದು, ಕಾಂಗ್ರೆಸ್‌ನ ಗೆಲುವನ್ನು ಸೋಲಾಗಿ ಪರಿವರ್ತಿಸಲಾಗಿದೆ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್‌ ಗಾಂಧಿ ಆರೋಪಿಸಿದರು.

'ಹರಿಯಾಣದ ಮತದಾರರ ಪಟ್ಟಿಯ ದತ್ತಾಂಶವನ್ನು ಗಮನಿಸಿದರೆ 25 ಲಕ್ಷಕ್ಕೂ ಹೆಚ್ಚು ನಕಲಿ ಮತದಾರರು ಸೇರ್ಪಡೆ ಆಗಿರುವುದು ಗೊತ್ತಾಗುತ್ತದೆ. ಚುನಾವಣಾ ಆಯೋಗವು ಬಿಜೆಪಿ ಜತೆ ಕೈಜೋಡಿಸಿ, ಅವರನ್ನು ಗೆಲ್ಲಿಸಿದೆ' ಎಂದು ದೂರಿದರು.

▸9

> ಬಿಹಾರದಲ್ಲೂ ಇದೇ ಕಾರ್ಯತಂತ್ರ ನಡೆಯಲಿದೆ. ಚುನಾವಣೆ ನಂತರ ಇಲ್ಲೂ ನಮಗೆ ಮತಕಳವಿನ ಪುರಾವೆಗಳು ದೊರೆಯುತ್ತವೆ. ಅದನ್ನೂ ನಿಮ್ಮ ಮುಂದಿಡುತ್ತೇವೆ
>
> **ರಾಹುಲ್‌ ಗಾಂಧಿ,** ಲೋಕಸಭೆ ವಿರೋಧ ಪಕ್ಷದ ನಾಯಕ

ಮತದಾರರ ಪಟ್ಟಿಯಲ್ಲಿ ಇದೆ ಬ್ರೆಜಿಲ್‌ ರೂಪದರ್ಶಿ ಫೋಟೊ

ರಾಯ್‌ ವಿಧಾನಸಭಾ ಕ್ಷೇತ್ರದಲ್ಲಿ ಮಹಿಳೆಯೊಬ್ಬರ ಚಿತ್ರ 10 ಮತಗಟ್ಟೆಗಳಲ್ಲಿನ ಮತದಾರರ ಪಟ್ಟಿಯಲ್ಲಿ 22 ಬಾರಿ ಕಾಣಿಸಿಕೊಂಡಿದೆ. ಇದು 'ಕೇಂದ್ರೀಕೃತ ಕಾರ್ಯಾಚರಣೆ' ಅಲ್ಲವೇ? ಹೀಗೆ ಹಲವು ಬಾರಿ ಮತದಾರರ ಪಟ್ಟಿಯಲ್ಲಿ ಕಾಣಿಸಿಕೊಂಡಿರುವ ಮಹಿಳೆ ಬ್ರೆಜಿಲ್‌ನ ರೂಪದರ್ಶಿ ಎಂದು ರಾಹುಲ್‌ ಹೇಳಿದರು. ಮಹಿಳೆಯ ಚಿತ್ರವನ್ನು ಪರದೆ ಮೇಲೆ ಪ್ರದರ್ಶಿಸಿದರು.

ಎಸ್‌ಎಸ್‌ಎಲ್‌ಸಿ, ಪಿಯು ಪರೀಕ್ಷೆ: ಅಂತಿಮ ವೇಳಾಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ 2026ರ ಫೆಬ್ರುವರಿ 28 ರಿಂದ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾರ್ಚ್‌ 18ರಿಂದ ಆರಂಭವಾಗಲಿದ್ದು, ಅಂತಿಮ ವೇಳಾಪಟ್ಟಿಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ

ಬುಧವಾರ ಬಿಡುಗಡೆ ಮಾಡಿದೆ.

ದ್ವಿತೀಯ ಪಿಯು ಪರೀಕ್ಷೆ ಮಾರ್ಚ್‌ 17ಕ್ಕೆ, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಏಪ್ರಿಲ್‌ 2ಕ್ಕೆ ಮುಕ್ತಾಯವಾಗಲಿದೆ.

▸7

'ನಂದಿನಿ' ತುಪ್ಪ ₹90 ದುಬಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದೂವರೆ ತಿಂಗಳ ಹಿಂದೆಯಷ್ಟೇ ತುಪ್ಪ ಸೇರಿದಂತೆ ನಂದಿನಿ ಉತ್ಪನ್ನಗಳ ದರ ಇಳಿಕೆ ಮಾಡಿದ್ದ ಕರ್ನಾಟಕ ಹಾಲು ಮಹಾಮಂಡಳವು (ಕೆಎಂಎಫ್‌) ದಸರಾ, ದೀಪಾವಳಿ ಹಬ್ಬ ಮುಗಿಯುತ್ತಿದ್ದಂತೆ ತುಪ್ಪ, ಬೆಣ್ಣೆಯ ದರವನ್ನು ದಿಢೀರನೇ ಏರಿಕೆ ಮಾಡಿದೆ.

▸13

ದರ ಹೆಚ್ಚಳ ಎಷ್ಟು?

- ಒಂದು ಲೀಟರ್‌ ಪ್ಯಾಕೆಟ್‌ ತುಪ್ಪ ₹610ರಿಂದ ₹700 (₹90 ಹೆಚ್ಚಳ)
- ಒಂದು ಕೆ.ಜಿ ಬೆಣ್ಣೆಯ ದರ ₹572 ರಿಂದ ₹610 (₹38 ಹೆಚ್ಚಳ)

ಭಾರತ ಸಂಜಾತ ನ್ಯೂಯಾರ್ಕ್‌ ಮೇಯರ್‌

ನ್ಯೂಯಾರ್ಕ್‌ (ಪಿಟಿಐ): ನ್ಯೂಯಾರ್ಕ್‌ ನಗರದ ಮೇಯರ್‌ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಡೆಮಾಕ್ರಟಿಕ್‌ ಪಕ್ಷದ ಅಭ್ಯರ್ಥಿ, ಭಾರತ ಸಂಜಾತ ಜೊಹ್ರಾನ್‌ ಮಮ್ದಾನಿ (34) ಐತಿಹಾಸಿಕ ಗೆಲುವು ದಾಖಲಿಸಿದ್ದಾರೆ.

ಜೊಹ್ರಾನ್‌ ಮಮ್ದಾನಿ

ಅಮೆರಿಕದ ಅತಿ ದೊಡ್ಡ ನಗರವಾದ ನ್ಯೂಯಾರ್ಕ್‌ನ 'ಪ್ರಥಮ ಪ್ರಜೆ'ಯಾಗಿ ಆಯ್ಕೆಯಾದ ಮೊದಲ ಮುಸ್ಲಿಂ ಹಾಗೂ ದಕ್ಷಿಣ ಏಷ್ಯಾದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾಗಿದ್ದಾರೆ. ಜೊಹ್ರಾನ್‌ ಅವರು ಭಾರತದ ಸಿನಿಮಾ ನಿರ್ದೇಶಕಿ ಮತ್ತು ನಿರ್ಮಾಪಕಿ ಮೀರಾ ನಾಯರ್‌ ಮತ್ತು ಪ್ರೊ. ಮಹಮದ್‌ ಮಮ್ದಾನಿ ಅವರ ಪುತ್ರ. ನ್ಯೂಯಾರ್ಕ್‌ನ ಮಾಜಿ ಗವರ್ನರ್‌, ಪ್ರಭಾವಿ ರಾಜಕೀಯ ಮುಖಂಡ ಆ್ಯಂಡ್ರ್ಯೂ ಕೌಮೊ ಮತ್ತು ರಿಪಬ್ಲಿಕನ್‌ ಅಭ್ಯರ್ಥಿ ಕರ್ಟಿಸ್‌ ಸ್ಲಿವಾ ಅವರನ್ನು ಮಮ್ದಾನಿ ಸೋಲಿಸಿದ್ದಾರೆ.

ವಿವರ ▸12

ಚಿನಕುರುಳಿ — ಪ್ರಕಾಶ್‌ ಶೆಟ್ಟಿ

R.V. TOURS AND TRAVELS PVT. LTD.

ಅತಿಥಿ ದೇವೋಭವ

ಮೆಗಾ ಟ್ರಾವೆಲ್ ಮೇಳ

NOVEMBER 15TH TO DECEMBER 31ST 2025

R V Ramana
Chairman & Founder

ಕಾಶಿ-ಅಯೋಧ್ಯೆ-ಪ್ರಯಾಗರಾಜ್

3 Nights / 4 Days

Rs. 25,999/- Only +5% GST

Ph : 9154225655

Flight | Breakfast & Dinner | AC Transport | AC Room

ಬ್ಯಾಂಕಾಕ್-ಪಟ್ಟಾಯ 4 N / 5 D (ಫ್ಲೈಟ್ ಪ್ಯಾಕೇಜ್)
Rs.42,999/- +5% GST +5% TCS

ಯುರೋಪ್ 13 N / 14 D (ಫ್ಲೈಟ್ ಪ್ಯಾಕೇಜ್)
~~Rs.3,25,000/-~~
Rs.2,99,999/- + 5% GST +5% TCS

Ph : 9100090938, 9154225673

- **ಸಿಂಗಾಪುರ್-ಮಲೇಷಿಯಾ** 4 N 5 D (ಫ್ಲೈಟ್ ಪ್ಯಾಕೇಜ್) Rs.99,999/-
- **ದುಬೈ** 4 N 5 D (ಫ್ಲೈಟ್ ಪ್ಯಾಕೇಜ್) Rs.97,500/-
- **ಬಾಲಿ** 4 N 5 D (ಫ್ಲೈಟ್ ಪ್ಯಾಕೇಜ್) Rs.95,000/-
- **ಬಾಕು** 4 N 5 D (ಫ್ಲೈಟ್ ಪ್ಯಾಕೇಜ್) Rs.1,05,000/-
- **ವಿಯೆಟ್ನಾಂ** 4 N 5 D (ಫ್ಲೈಟ್ ಪ್ಯಾಕೇಜ್) Rs.99,999/-
- **ಮಾಲ್ಡೀವ್ಸ್** 4 N 5 D (ಫ್ಲೈಟ್ ಪ್ಯಾಕೇಜ್) Rs.99,999/-
- **ಪುಕೆಟ್-ಕ್ರಾಬಿ** 4 N 5 D (ಫ್ಲೈಟ್ ಪ್ಯಾಕೇಜ್) Rs.69,999/-
- **ಆಸ್ಟ್ರೇಲಿಯಾ-ನ್ಯೂಜಿಲೆಂಡ್** 13 N 14 D (ಫ್ಲೈಟ್ ಪ್ಯಾಕೇಜ್) Rs.5,30,000/-

Ph : 9154225639, 9154225675

- **ಗ್ಯಾಂಗ್ಟಾಕ್-ಡಾರ್ಜಿಲಿಂಗ್** 4 N 5 D Rs.39,999/-
- **ಕೇರಳ** 3 N 4 D Rs.25,999/-
- **ಗೋವಾ** 3 N 4 D Rs.19,999/-
- **ಶಿಮ್ಲಾ-ಮನಾಲಿ** 7 N 8 D Rs.54,800/-
- **ಚಾರ್ಧಾಮ್ ಯಾತ್ರಾ** 13 N 14 D Rs.67,500/-
- **ತಮಿಳುನಾಡು** 4 N 5 D Rs.29,999/-
- **ಗುಜರಾತ್** 5 N 6 D Rs.36,999/-
- **ಮುಕ್ತಿನಾಥ್** 4 N 5 D Rs.49,999/-

9154225646, 8712018312, 9154225664, 9100090938

RV Tours and Travels Pvt. Ltd.: No. 313,Varsha Arcade, Next to sub-registar office, Ganganagar, Bellary road, Bengaluru. *T&C Apply

ಉಪನಗರ ರೈಲು ಯೋಜನೆ: ಮರು ಟೆಂಡರ್

ಗುತ್ತಿಗೆಯಿಂದ ಹಿಂದಕ್ಕೆ ಸರಿದಿದ್ದ ಎಲ್ ಆ್ಯಂಡ್ ಟಿ
• ಮಾರ್ಚ್‌ನಲ್ಲಿ ಸ್ಥಗಿತಗೊಂಡಿದ್ದ ಕಾಮಗಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಗಿತಗೊಂಡಿರುವ ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಕಾರಿಡಾರ್–2ರ ಕಾಮಗಾರಿಗಾಗಿ ಕೆ–ರೈಡ್ ಹೊಸದಾಗಿ ಟೆಂಡರ್ ಕರೆದಿದೆ. ಉಳಿದಿರುವ ಕಾಮಗಾರಿಯನ್ನು ಮೂರು ಪ್ಯಾಕೇಜ್‌ಗಳನ್ನಾಗಿ ವಿಂಗಡಿಸಲಾಗಿದೆ.

ಚಿಕ್ಕಬಾಣಾವರ– ಬೆನ್ನಿಗಾನಹಳ್ಳಿ ನಡುವಿನ ಈ ಯೋಜನೆಯನ್ನು ಎಲ್ ಆ್ಯಂಡ್ ಟಿ ಗುತ್ತಿಗೆ ಪಡೆದಿತ್ತು. ಕಳೆದ ಮಾರ್ಚ್‌ನಲ್ಲಿ ಈ ಗುತ್ತಿಗೆ ಕಂಪನಿಯು ಕಾಮಗಾರಿ ಸ್ಥಗಿತಗೊಳಿಸಿತ್ತು. ಗುತ್ತಿಗೆ ಒಪ್ಪಂದವನ್ನು ಏಕಪಕ್ಷೀಯವಾಗಿ ರದ್ದು ಮಾಡಿತ್ತು. ಹಾಗಾಗಿ ಕಾಮಗಾರಿ ಪೂರ್ಣಗೊಳಿಸಲು ಮರು ಟೆಂಡರ್ ಕರೆಯಲಾಗಿದೆ ಎಂದು ಕೆ–ರೈಡ್ ಅಧಿಕಾರಿಗಳು ತಿಳಿಸಿದ್ದಾರೆ.

ಪ್ಯಾಕೇಜ್–1: 7.795 ಕಿ.ಮೀ ಉದ್ದದ ಎತ್ತರಿಸಿದ ಮಾರ್ಗ ವಿಭಾಗದ ವಿನ್ಯಾಸ ಮತ್ತು ನಿರ್ಮಾಣವನ್ನು ಒಳಗೊಂಡಿದೆ. ಬೆನ್ನಿಗಾನಹಳ್ಳಿ ಮತ್ತು ಶೆಟ್ಟಿಹಳ್ಳಿ ನಡುವೆ ಇರುವ ಎತ್ತರಿಸಿದ ವಯಾಡಕ್ಟ್ ಮತ್ತು ರ‍್ಯಾಂಪ್‌ಗಳನ್ನು ನಿರ್ಮಿಸಬೇಕಿದೆ. ಲೆವೆಲ್ 1ರಲ್ಲಿ ಬಿಬಿಎಂಪಿ ರಸ್ತೆ ಮೇಲ್ಸೇತುವೆ, ಲೆವೆಲ್ 2ರಲ್ಲಿ ಬಿಎಸ್‌ಆರ್‌ಪಿ ಹಳಿಗಳನ್ನು ಹೊಂದಿರುವ ಡಬಲ್ ಡೆಕರ್ ವಯಾಡಕ್ಟ್‌ನ ವಿನ್ಯಾಸ ಮತ್ತು ನಿರ್ಮಾಣವೂ ಒಳಗೊಂಡಿದೆ. ಲೊಟ್ಟೇಗೊಲ್ಲಹಳ್ಳಿ ಮತ್ತು ಯಶವಂತಪುರ ನಡುವಿನ 1.20 ಕಿ.ಮೀ ಇದಾಗಿದೆ. ಅಲ್ಲದೇ ಮತ್ತಿಕೆರೆ ನಿಲ್ದಾಣ ಮತ್ತು ಬೆನ್ನಿಗಾನಹಳ್ಳಿ ನಿಲ್ದಾಣಗಳ ನಿರ್ಮಾಣವೂ ಸೇರಿದೆ. ಈ ಕಾಮಗಾರಿಯನ್ನು ಪೂರ್ಣಗೊಳಿಸಲು 24 ತಿಂಗಳ ಗಡುವು ನಿಗದಿಪಡಿಸಲಾಗಿದೆ.

ಪ್ಯಾಕೇಜ್–2: ಬೆನ್ನಿಗಾನಹಳ್ಳಿ–ಬಾಣಸವಾಡಿ ಮತ್ತು ಬಾಣಸವಾಡಿ–ಹೆಬ್ಬಾಳ ನಡುವಿನ 11.569 ಕಿ.ಮೀ ಅಟ್‌ಗ್ರೇಡ್ ವಿಭಾಗದ ವಿನ್ಯಾಸ ಮತ್ತು ನಿರ್ಮಾಣ ಕಾಮಗಾರಿಗಳನ್ನು ಒಳಗೊಂಡಿದೆ. ನಾಗವಾರ ಮತ್ತು ಕನಕನಗರ ನಿಲ್ದಾಣಗಳ ಸ್ಟೇಷನ್ ಬಾಕ್ಸ್‌ಗಳ ನಿರ್ಮಾಣ ಸೇರಿದೆ. ಜೊತೆಗೆ ಕಾರಿಡಾರ್–2 ರ ಪ್ರಮುಖ ಸೇತುವೆಗಳು, ಕಿರು ಸೇತುವೆಗಳು, ಆರ್‌ಯುಬಿ (ರೋಡ್ ಅಂಡರ್ ಬ್ರಿಡ್ಜ್), ಇಆರ್‌ಎಸ್/ ರಿಟೇನಿಂಗ್ ವಾಲ್‌ಗಳ ವಿನ್ಯಾಸ ಮತ್ತು ನಿರ್ಮಾಣವೂ ಈ ಪ್ಯಾಕೇಜ್‌ನಲ್ಲಿದೆ. ಪೂರ್ಣಗೊಳಿಸಲು 18 ತಿಂಗಳ ಗಡುವು ನಿಗದಿಪಡಿಸಲಾಗಿದೆ.

ಪ್ಯಾಕೇಜ್–3: ಯಶವಂತಪುರದಿಂದ ಚಿಕ್ಕಬಾಣವರವರೆಗೆ 5.80 ಕಿ.ಮೀ ಉದ್ದದ ಅಟ್‌ಗ್ರೇಡ್ ವಿಭಾಗದ ವಿನ್ಯಾಸ ಮತ್ತು ನಿರ್ಮಾಣ ಕಾಮಗಾರಿಗಳನ್ನು ಒಳಗೊಂಡಿದೆ. ಯಶವಂತಪುರ ಮತ್ತು ಚಿಕ್ಕಬಾಣವರ ನಡುವಿನ 185 ಮೀಟರ್ ಉದ್ದದ ಎತ್ತರಿಸಿದೆ ವಯಾಡಕ್ಟ್ ವಿಭಾಗದ ವಿನ್ಯಾಸ ಮತ್ತು ನಿರ್ಮಾಣವೂ ಸೇರಿದ್ದು, ಕಾಮಗಾರಿಗಳನ್ನು ಪೂರ್ಣಗೊಳಿಸಲು 18 ತಿಂಗಳ ಗಡುವು ನಿಗದಿಪಡಿಸಲಾಗಿದೆ.

ಕಾರಿಡಾರ್–2ರ ಮೂರು ಪ್ಯಾಕೇಜುಗಳ ಮೂಲಕ ಈ ಮಾರ್ಗದಲ್ಲಿರುವ 8 ಲೆವೆಲ್ ಕ್ರಾಸಿಂಗ್‌ಗಳು (ಎಲ್‌ಸಿ) ನಿವಾರಣೆಯಾಗಲಿವೆ ಎಂದು ಬಿಎಸ್‌ಆರ್‌ಪಿ ಅಧಿಕಾರಿಗಳು ತಿಳಿಸಿದ್ದಾರೆ.

ಬಿಎಸ್‌ಟಿಪಿಯೇ ಬಿಎಸ್‌ಆರ್‌ಪಿ

ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ (ಬಿ–ರೈಡ್), ಇದು ಕೆ–ರೈಡ್‌ನ ವಿಶೇಷ ಉದ್ದೇಶ ಸಂಸ್ಥೆ (ಎಸ್‌ಪಿವಿ) ಆಗಿದೆ. ಬೆಂಗಳೂರು ಉಪನಗರ ಸಾರಿಗೆ ಯೋಜನೆಯನ್ನೇ ಬೆಂಗಳೂರು ಉಪನಗರ ರೈಲು ಯೋಜನೆ ಎಂದು ಕರೆಯಲಾಗುತ್ತಿದೆ.

ಭಾರತೀಯ ತೋಟಗಾರಿಕೆ ವಿಜ್ಞಾನ ಕಾಂಗ್ರೆಸ್ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವದೆಹಲಿಯ ಇಂಡಿಯನ್ ಅಕಾಡೆಮಿ ಆಫ್ ಹಾರ್ಟಿಕಲ್ಚರ್ ಸೈನ್ಸಸ್ (ಐಎಎಚ್‌ಎಸ್), ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಬಾಗಲಕೋಟೆಯ ತೋಟಗಾರಿಕೆ ವಿಶ್ವವಿದ್ಯಾಲಯ, ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಸಹಯೋಗದಲ್ಲಿ ಇದೇ 6ರಿಂದ 9ರವರೆಗೆ ಜಿಕೆವಿಕೆಯ ಡಾ.ಬಾಬುರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ಭಾರತೀಯ ತೋಟಗಾರಿಕೆ ವಿಜ್ಞಾನ ಕಾಂಗ್ರೆಸ್ ನಡೆಯಲಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಐಸಿಎಆರ್ ಉಪ ಮಹಾನಿರ್ದೇಶಕ ಸಂಜಯ್ ಕುಮಾರ್ ಸಿಂಗ್, ‘ಸಮ್ಮೇಳನದಲ್ಲಿ ತೋಟಗಾರಿಕೆಗೆ ಸಂಬಂಧಿಸಿದ 11 ವಿಷಯಗಳ ಕುರಿತು ಚರ್ಚೆಗಳು ನಡೆಯಲಿವೆ. ವಿಜ್ಞಾನಿಗಳು, ಸಂಶೋಧಕರು, ಉದ್ಯಮಿಗಳು, ರೈತರು, ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ತೋಟಗಾರಿಕೆ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿಜ್ಞಾನಿಗಳು, ಉದ್ಯಮಿಗಳು, ರೈತರಿಗೆ ಸನ್ಮಾನ ಮಾಡಲಾಗುತ್ತದೆ’ ಎಂದರು.

‘ತೋಟಗಾರಿಕೆ ಅಭಿವೃದ್ಧಿಗೆ ಹೊಸ ಮಾರ್ಗಸೂಚಿಯನ್ನು ಮರು ವ್ಯಾಖ್ಯಾನಿಸುವುದು. ವಿವಿಧ ಬೆಳೆಗಳಿಗೆ ಆದ್ಯತೆ ನೀಡುವುದು, ನೂತನ ತಂತ್ರಜ್ಞಾನಗಳನ್ನು ಉತ್ತೇಜಿಸುವುದು ಮತ್ತು ರೈತ ಆಧಾರಿತ ನಾವೀನ್ಯತೆಗಳನ್ನು ಬಲಪಡಿಸುವುದು ಇದರ ಉದ್ದೇಶವಾಗಿದೆ’ ಎಂದು ತಿಳಿಸಿದರು.

‘ನ.6ರಂದು ಬೆಳಿಗ್ಗೆ 9ಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಈ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಡಿಎಆರ್‌ಇ ಕಾರ್ಯದರ್ಶಿ ಮಂಗಿ ಲಾಲ್ ಜಾಟ್, ಐಸಿಎಆರ್‌ನ ಮಾಜಿ ನಿರ್ದೇಶಕ ಆರ್.ಎಸ್. ಪರೋಡಾ ಭಾಗವಹಿಸಲಿದ್ದಾರೆ’ ಎಂದರು.

ಐಸಿಎಆರ್‌ನ ಎಡಿಜಿ ವಿ.ಬಿ. ಪಟೀಲ್, ಐಐಎಚ್‌ಆರ್‌ನ ನಿರ್ದೇಶಕ ತುಷಾರ್ ಕಾಂತಿ ಬೆಹರಾ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕೃಷಿ ಡೀನ್ ಎನ್.ಬಿ. ಪ್ರಕಾಶ್ ಸುದ್ದಿಗೋಷ್ಠಿಯಲ್ಲಿದ್ದರು.

ನಗರದಲ್ಲಿ ನವೋದ್ಯಮ ಪಾರ್ಕ್ ನಿರ್ಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಕ್ಯು ವೆಂಚರ್ಸ್ ವತಿಯಿಂದ ಹೊಸೂರು ರಸ್ತೆಯಲ್ಲಿ ಮಡಿವಾಳ ಸಂಚಾರ ಪೊಲೀಸ್ ಠಾಣೆ ಎದುರು ನವೋದ್ಯಮಿಗಳಿಗಾಗಿ ‘ಸ್ಟಾರ್ಟ್‌ಅಪ್ ಪಾರ್ಕ್’ ನಿರ್ಮಿಸಲಾಗಿದ್ದು, ಇದೇ 7ರಂದು ಈ ಪಾರ್ಕ್ ಉದ್ಘಾಟನೆಯಾಗಲಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಐಕ್ಯು ವೆಂಚರ್ಸ್ ಅಧ್ಯಕ್ಷ ಶಫಿ ಶೌಕತ್, ‘ದೇಶದ ಪ್ರಥಮ ‘ಸ್ಟಾರ್ಟ್‌ಅಪ್ ಪಾರ್ಕ್’ ಇದಾಗಿದೆ. 20 ಸಾವಿರ ಚದರ ಅಡಿಯಲ್ಲಿ ಇದನ್ನು ನಿರ್ಮಿಸಲಾಗಿದೆ. ಕಾರ್ಯನಿರ್ವಹಣೆಗೆ ಸ್ಥಳಾವಕಾಶ ಒದಗಿಸುವ ಜತೆಗೆ, ನವೋದ್ಯಮ ಪ್ರಾರಂಭಕ್ಕೆ ಹಾಗೂ ನವೋದ್ಯಮ ನಡೆಸಲು ಅಗತ್ಯವಿರುವ ಎಲ್ಲ ಸೌಲಭ್ಯಗಳು ದೊರೆಯಲಿವೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ಪಾರ್ಕ್ ಉದ್ಘಾಟಿಸುತ್ತಾರೆ’ ಎಂದು ತಿಳಿಸಿದರು.

‘ಬೆಂಗಳೂರು ನಗರದಲ್ಲಿ ನವೋದ್ಯಮಕ್ಕೆ ಉತ್ತಮ ಅವಕಾಶ ಇರುವುದರಿಂದ ಇಲ್ಲಿ ಸ್ಟಾರ್ಟ್‌ಅಪ್ ಪಾರ್ಕ್ ನಿರ್ಮಿಸಲಾಗಿದೆ. 2030ರ ವೇಳೆಗೆ 10 ಸಾವಿರ ನವೋದ್ಯಮಗಳನ್ನು ಪೋಷಿಸಿ, 1 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿ ಹೊಂದಲಾಗಿದೆ. ಈ ಪಾರ್ಕ್ ನಗರದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುವ ವಿಶ್ವಾಸವಿದೆ. ಅಗತ್ಯ ಮೂಲಸೌಕರ್ಯದ ಜತೆಗೆ ನವೋದ್ಯಮ ಶಾಲೆ, ಹೂಡಿಕೆದಾರರ ಸ್ಟುಡಿಯೊ, ಮಾರ್ಗದರ್ಶನ ಕೇಂದ್ರ, ಕಾರ್ಯಕ್ರಮಗಳಿಗೆ ಸ್ಥಳಾವಕಾಶ, ಗ್ರಂಥಾಲಯ, ಪ್ರಯೋಗಾಲಯ ಸೇರಿ ಹಲವು ಸೌಲಭ್ಯ ಹೊಂದಿದೆ’ ಎಂದರು.

‘ಈ ಪಾರ್ಕ್ ಉದ್ಘಾಟನೆ ಪ್ರಯುಕ್ತ ನವೆಂಬರ್ ತಿಂಗಳು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮಹಿಳಾ ಉದ್ಯಮಿಗಳ ಸಮಾವೇಶ, ಹೂಡಿಕೆದಾರರ ಶೃಂಗ ಸೇರಿ ವಿವಿಧ ಸಮಾವೇಶ ಆಯೋಜಿಸಲಾಗಿದೆ’ ಎಂದು ಹೇಳಿದರು.

ಮುಜರಾಯಿ ಆಯುಕ್ತರ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಹಾರದ ವಿಧಾನಸಭಾ ಚುನಾವಣಾ ಕರ್ತವ್ಯಕ್ಕೆ ಹಾಜರಾಗದ ಕಾರಣ ಮುಜರಾಯಿ ಇಲಾಖೆ ಆಯುಕ್ತ ಎಂ.ವಿ.ವೆಂಕಟೇಶ್ ಅವರನ್ನು ಅಮಾನತು ಮಾಡಲಾಗಿದೆ. ಬಿಹಾರದ ಕೈಮೂರ್ ವಿಧಾನಸಭಾ ಕ್ಷೇತ್ರದ ವೀಕ್ಷಕರನ್ನಾಗಿ ಅವರನ್ನು ನೇಮಕ ಮಾಡಲಾಗಿತ್ತು. ಆದರೆ, ಅವರು ಅಲ್ಲಿಗೆ ಹೋಗಿರಲಿಲ್ಲ. ಹೀಗಾಗಿ ಚುನಾವಣಾ ಆಯೋಗದ ಸೂಚನೆಯ ಮೇರೆಗೆ ಅಮಾನತು ಮಾಡಲಾಗಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಕ್ಯಾನ್ಸರ್ ಹೆಚ್ಚಳಕ್ಕೆ ತಂಬಾಕು ಸೇವನೆ ನಂಟು

ರೋಗಿಗಳಲ್ಲಿ ಶೇ 25ರಷ್ಟು ಮಂದಿ ತಂಬಾಕು ಉತ್ಪನ್ನಗಳ ವ್ಯಸನಿಗಳು

• ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಅಧ್ಯಯನದಿಂದ ದೃಢ

• ವರುಣ ಹೆಗಡೆ

1,116 ಕಿದ್ವಾಯಿಗೆ ನಿತ್ಯ ಭೇಟಿ ನೀಡುವ ಸರಾಸರಿ ಹೊರ ರೋಗಿಗಳು

1,243 ಫಾಲೊ ಅಪ್ ಚಿಕಿತ್ಸೆಗೆ ನಿತ್ಯ ಭೇಟಿ ನೀಡುವವರು

ಆರಂಭಿಕ ಹಂತದಲ್ಲೇ ಕ್ಯಾನ್ಸರ್ ಪತ್ತೆ ಮಾಡಿದಲ್ಲಿ ಸುಲಭವಾಗಿ ಗುಣಪಡಿಸಬಹುದು. ಪ್ರತಿಯೊಬ್ಬರಿಗೂ ರೋಗ ಲಕ್ಷಣಗಳ ಬಗ್ಗೆ ಅರಿವು ಅಗತ್ಯ

ಡಾ.ಟಿ.ನವೀನ್, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ಬೆಂಗಳೂರು: ತಂಬಾಕು ಉತ್ಪನ್ನಗಳ ಸೇವನೆಯು ಕ್ಯಾನ್ಸರ್ ಪ್ರಕರಣಗಳ ಹೆಚ್ಚಳಕ್ಕೆ ಕಾರಣವಾಗುತ್ತಿದೆ. ರಾಜ್ಯದ ಕ್ಯಾನ್ಸರ್ ಪೀಡಿತರಲ್ಲಿ ಶೇ 25 ರಷ್ಟು ಮಂದಿ ತಂಬಾಕು ಉತ್ಪನ್ನಗಳ ವ್ಯಸನಿಗಳು ಎನ್ನುವುದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಡೆಸಿದ ಅಧ್ಯಯನದಿಂದ ದೃಢಪಟ್ಟಿದೆ.

ಬದಲಾದ ಜೀವನಶೈಲಿ ಸೇರಿ ವಿವಿಧ ಕಾರಣಗಳಿಂದ ಕ್ಯಾನ್ಸರ್ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಸಂಸ್ಥೆಯ ಪ್ರಕಾರ ಕಳೆದ ವರ್ಷ ಒಟ್ಟು 87,855 ಪ್ರಕರಣಗಳು ವರದಿಯಾಗಿವೆ. ಈ ಪ್ರಕರಣಗಳಲ್ಲಿ 21,898 ಪ್ರಕರಣಗಳು ತಂಬಾಕು ಸಂಬಂಧಿ ಕ್ಯಾನ್ಸರ್ ಪ್ರಕರಣಗಳಾಗಿವೆ. ಕಳೆದ ವರ್ಷ ಪುರುಷರಲ್ಲಿ ದೃಢಪಟ್ಟ 39,170 ಪ್ರಕರಣಗಳಲ್ಲಿ, 14,439 (ಶೇ 37) ಮಂದಿ ತಂಬಾಕು ಉತ್ಪನ್ನಗಳ ವ್ಯಸನಿಗಳಾಗಿದ್ದಾರೆ. ಅದೇ ರೀತಿ, ಮಹಿಳೆಯರಲ್ಲಿ ದೃಢಪಟ್ಟ 48,685 ಪ್ರಕರಣಗಳಲ್ಲಿ 7,459 (ಶೇ 15) ಮಂದಿ ತಂಬಾಕು ಸಂಬಂಧಿ ಕ್ಯಾನ್ಸರ್ ಎದುರಿಸುತ್ತಿರುವುದು ಖಚಿತಪಟ್ಟಿದೆ. ಕ್ಯಾನ್ಸರ್ ಪೀಡಿತರಲ್ಲಿ ಕಳೆದ ವರ್ಷ ಒಟ್ಟು 26,516 ಮಂದಿ ಮೃತಪಟ್ಟಿದ್ದಾರೆ.

ಹೆಚ್ಚಿನ ಕ್ಯಾನ್ಸರ್ ಪ್ರಕರಣಗಳು ಬೆಂಗಳೂರಿನಲ್ಲಿಯೇ ವರದಿಯಾಗುತ್ತಿದ್ದು, ಕಳೆದ ವರ್ಷ 15,153 ಪ್ರಕರಣಗಳು ಖಚಿತಪಟ್ಟಿವೆ. ಈ ಪ್ರಕರಣಗಳಲ್ಲಿ ಶೇ 24.1 ರಷ್ಟು ಮಂದಿ (3,771) ತಂಬಾಕು ಉತ್ಪನ್ನದ ನಂಟು ಹೊಂದಿದ್ದಾರೆ. ತಂಬಾಕು ಸಂಬಂಧಿ ಕ್ಯಾನ್ಸರ್ ಎದುರಿಸುತ್ತಿರುವ ಪುರುಷರ ಪ್ರಮಾಣ ಶೇ 36.6 ರಷ್ಟಿದ್ದರೆ, ಮಹಿಳೆಯರ ಪ್ರಮಾಣ ಶೇ 15.2ರಷ್ಟಿದೆ.

ಹೊಸ ಪ್ರಕರಣ ಅಧಿಕ: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಕ್ಯಾನ್ಸರ್‌ಗೆ ಸಂಬಂಧಿಸಿದಂತೆ ಚಿಕಿತ್ಸೆ ಜತೆಗೆ ತಪಾಸಣೆ, ಸಂಶೋಧನೆ ಹಾಗೂ ಜಾಗೃತಿಗೆ ಆದ್ಯತೆ ನೀಡಿದೆ. ಕಳೆದ ವರ್ಷ ಸಂಸ್ಥೆಯಲ್ಲಿ 21,881 ಹೊಸ ಕ್ಯಾನ್ಸರ್ ಪ್ರಕರಣಗಳು ನೋಂದಣಿಯಾಗಿವೆ. 12,930 ಪ್ರಕರಣಗಳಲ್ಲಿ ಬಯಾಪ್ಸಿ ಪರೀಕ್ಷೆ ನಡೆಸಲಾಗಿದ್ದು, 3,939 (ಶೇ 30.5) ಮಂದಿ ತಂಬಾಕು ಸಂಬಂಧಿ ಉತ್ಪನ್ನಗಳ ಸೇವನೆಯ ಇತಿಹಾಸ ಹೊಂದಿದವರಾಗಿದ್ದಾರೆ.

ಕಳೆದ ವರ್ಷ ದೃಢ ಪ್ರಕರಣಗಳಲ್ಲಿ ಬಯಾಪ್ಸಿ ಪರೀಕ್ಷೆಗೆ ಒಳಪಟ್ಟವರ ಲಿಂಗವಾರು ವಿಶ್ಲೇಷಣೆ ಮಾಡಲಾಗಿದ್ದು, ಕ್ಯಾನ್ಸರ್ ಪೀಡಿತ 6,075 ಮಂದಿ ಪುರಷರಲ್ಲಿ ಶೇ 43.8ರಷ್ಟು (2,662) ಮಂದಿ ತಂಬಾಕು ಸಂಬಂಧಿತ ಕ್ಯಾನ್ಸರ್ ಎದುರಿಸುತ್ತಿ ರುವವರಾಗಿದ್ದಾರೆ. 6,855 ಮಹಿಳಾ ರೋಗಿಗಳಲ್ಲಿ 1,277 (ಶೇ 18.6) ಮಂದಿ ತಂಬಾಕು ಸಂಬಂಧಿ ಕ್ಯಾನ್ಸರ್ ಎದುರಿಸಿದವರಾಗಿದ್ದಾರೆ.

ಪರೋಕ್ಷ ಧೂಮಪಾನದಿಂದಲೂ ಸಮಸ್ಯೆ

ಪರೋಕ್ಷ ಧೂಮಪಾನವೂ ನೇರ ಧೂಮಪಾನಕ್ಕೆ ಸಮಾನ. ಮಕ್ಕಳು, ಮಹಿಳೆಯರು ಮತ್ತು ವೃದ್ಧರು ಪರೋಕ್ಷ ಧೂಮಪಾನದಿಂದ ಹೆಚ್ಚಿನ ಸಮಸ್ಯೆ ಎದುರಿಸುತ್ತಿದ್ದಾರೆ. ನಿರಂತರ ಪರೋಕ್ಷ ಧೂಮಪಾನದಿಂದಲೂ ಕ್ಯಾನ್ಸರ್ ಪೀಡಿತರಾಗುವ ಸಾಧ್ಯತೆಯಿದೆ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ವಿಶ್ಲೇಷಿಸಿದೆ.

'ಕ್ಯಾನ್ಸರ್ ಪ್ರಕರಣಗಳು ಹೆಚ್ಚಳವಾಗಲು ತಂಬಾಕು ಉತ್ಪನ್ನಗಳ ಸೇವನೆ ಪ್ರಮುಖ ಕಾರಣ. ತಂಬಾಕು ಉತ್ಪನ್ನಗಳನ್ನು ಬಳಸುವಂತೆ ಯುವಜನರು ಮತ್ತು ಮಕ್ಕಳಿಗೆ ತಂಬಾಕು ಉತ್ಪನ್ನಗಳ ಕಂಪನಿಗಳು ಆಮಿಷ ಒಡ್ಡುತ್ತಿವೆ. ಮಹಿಳೆಯರಲ್ಲಿಯೂ ತಂಬಾಕು ಉತ್ಪನ್ನ ಸೇವನೆ ಹೆಚ್ಚಳವಾಗಿದೆ' ಎಂದು ಸಂಸ್ಥೆಯ ವೈದ್ಯರೊಬ್ಬರು ತಿಳಿಸಿದರು.

ರಾಜ್ಯದಲ್ಲಿ ಕಳೆದ ವರ್ಷ ವರದಿಯಾದ ಕ್ಯಾನ್ಸರ್ ಪ್ರಕರಣ

ಲಿಂಗ	ದೃಢ ಪ್ರಕರಣ	ತಂಬಾಕು ಸಂಬಂಧಿ	ಮರಣ
ಪುರುಷರು	39,170	14,439	12,554
ಮಹಿಳೆಯರು	48,685	7,459	13,962

ಶಿಕ್ಷಣ ಸಂಸ್ಥೆಗಳಿಂದ ನಮೂನೆ 19 ಅರ್ಜಿ ಪಡೆಯಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಶಿಕ್ಷಕರ ಕ್ಷೇತ್ರ'ದ ಚುನಾವಣೆಗೆ ಮತದಾರರ ಪಟ್ಟಿ ತಯಾರಿಸಲು, ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ ಶಿಕ್ಷಕರಿಂದ ನಮೂನೆ 19 ಪಡೆಯಬೇಕು ಎಂದು ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಹಾಗೂ ಪಾಲಿಕೆಯ ವ್ಯಾಪ್ತಿಯ ಎಲ್ಲಾ ಸಹಾಯಕ ಮತದಾರರ ನೋಂದಣಾಧಿಕಾರಿಗಳೊಂದಿಗೆ ಮಂಗಳವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

'ನಗರ ಪಾಲಿಕೆ ವ್ಯಾಪ್ತಿಯಲ್ಲಿ ಇದುವರೆಗೂ ಒಟ್ಟು 583 ಅರ್ಜಿಗಳನ್ನು ಸ್ವೀಕರಿಸಿದ್ದು, ನಮೂನೆ-19 ಅರ್ಜಿಗಳನ್ನು ಪಡೆಯಲು ನ.6 ಕೊನೆಯ ದಿನವಾಗಿದೆ. ಹೆಚ್ಚು ಶಿಕ್ಷಕರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳ್ಳುವಂತೆ ಮಾಡಲು ವಿಧಾನ ಸಭಾವಾರು ಸಹಾಯಕ ಮತದಾರರ ನೋಂದಣಾಧಿ ಕಾರಿಗಳು ತಮ್ಮ ವ್ಯಾಪ್ತಿಯ ಶಿಕ್ಷಣ ಸಂಸ್ಥೆಗಳಿಗೆ ಖುದ್ದಾಗಿ ಭೇಟಿ ನೀಡಿ, ನಮೂನೆ 19 ನೀಡಿ, ಭರ್ತಿ ಮಾಡಿದ ಶಿಕ್ಷಕರ ಅರ್ಜಿಗಳನ್ನು ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಂದ ಪಡೆದುಕೊಳ್ಳಬೇಕು' ಎಂದು ಸೂಚಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

RAJYA VOKKALIGARA SANGHA ®
BANGALORE INSTITUTE OF TECHNOLOGY
(An Autonomous Institution under VTU Belagavi, Approved by AICTE, New-Delhi)
K.R.ROAD, V.V. PURA, BENGALURU – 560 004
Phone: 080-26613237, 26615865 Website: bit-bangalore.edu.in
Ref: BIT/STORE/1164/2025-2026 Date: 05/11/2025

Short Term E-Tender Notice

The Short term Tenders are invited through e-procurement portal from eligible tenderers, registered contractors*/Companies/agencies/ suppliers by the Principal, BIT, Bangalore for the works detailed in the table below under standard tender document procedure formats (The tenderers who have executed similar nature of single work costing not less than 50% of this tender amount during 2021-24,). Website: https://kppp.karnataka.gov.in

Sl. No	Name of work	Approx. Value of the works (Rs.)	EMD (Rs)	Cost of tender form (GST Included)	Period of completion
01	Supplying, Installation, Testing, Erection and Commissioning of outdoor (i) LED Video Wall UHD (4K). (ii). Professional Display Panel UHD (4K). (iii). Interactive Display Panel.	35 Lakhs	70,000/-	2,000/-	30 days

Calendar of events:

Tender Documents available in E-Procurement website	From 04.11.2025 to 24.11.2025 up to 04.00 PM
Date and Time of Pre-Bid Meeting	13.11.2025 at 11.00 AM
Last date of receipt of tenders	24.11.2025 up to 04.00 PM
Opening of Tenders	26.11.2025

01. Tender documents (Specifications, Term & Conditions) may be obtained from e-procurement website https://kppp.karnataka.gov.in
02. EMD Paid through E-Procurement in the following modes only, 1. Debit Card, 2. Credit Card, 3. NET Banking, 4. NEFT 5. RTGS only.
03. The Contractors / Agencies / Suppliers shall bear the GST on works contract and any corporation and any other Local Authority & royalty due to the Government of Karnataka at the prevailing rates. R.V.Sangha / BIT is not responsible for all taxes with respect to the work.
04. Tenders may be applied to all items or tenders for individual items also accepted.
05. Right to reject any or all the tenders without assigning any reason is reserved with the R.V. Sangha /BIT authority.
06. In the event of any holiday on the notified dates, the next working day will hold good.
07. For any enquiries contact Principal Office at V.V Pura, K.R Road Bengaluru-04 during office hours.
*Company/Authorized Dealers can only apply.

Principal BIT | Chairman BIT | Chairman Purchase Committee, RVS | Treasurer RVS | Joint Secretary RVS
General Secretary RVS | Vice President RVS | President RVS

REAL ESTATE SELLING

Commerical

Sahakarnagar

SALE 1200 sqft. Semi commercial 40x30 W/F 2nd site to 60 ft road behind Manasa Hospital, Virupakshapura, Bangalore. 8197636042.

Sites

Banashankari

BANASHANKARI 6TH Stage 10th Block 40x60 West Facing. And 30x40 West Facing. More Details Call: 9148914809, 9993959099.

PERSONAL

Change of Name

CHANGE OF NAME
I, RIMA CHUGANI, residing at Flat No. B-21, Diamond District Apartments, Old Airport Road, Near Leela Palace Hotel, Kodihalli, Domlur, Bengaluru - 560 008, have changed my name to RIMA ASHOK CHUGANI vide affidavit dated 05.11.2025 before notary Ramesh D Shah, Bengaluru. Henceforth I shall be called RIMA ASHOK CHUGANI only

CHANGE OF NAME
I, Mary Rani, residing at No. 125/3, Rose Castle Radiant Enclave, Banjara Layout Sector-2, Horamavu Agara, Bengaluru-560043, have changed my name to MARY JOHNSON vide affidavit dated 05.11.2025 before notary Uday Kumar K, Bengaluru.

I, BHUVANA Chandra S/o N Banu Prakash aged about 22Years residing at Maruthi Nilaya Sadashiva Badavane, Gauribidanur Town, Chikkaballapur District 561208. Have changed my name to Bhuvan Chandra B and my father's name as N Banu Prakash vide affidavit dated 05.11.2025 before Notary N.S Ashok Kumar Gowribidanur. Henceforth I shall be called as Bhuvan Chandra B & my father's name as N Banu Prakash only.

CHANGE OF NAME
I, THOTA SAI HAARISH S/o Late VENKATESWARA RAO, residing at Flat No. 412B, SMR Vinay Crescent, Hennur Main Road, Kalyan Nagar Post, Bangalore - 560043, have changed my name to SAI HAARISH for all purposes vide affidavit dated 31-10-2025 sworn before Notary C. Santhosh, Bangalore. Henceforth, I shall be called SAI HAARISH only.

I, BHADRINATH S/o N Banu Prakash aged about 23 Years residing at Maruthi Nilaya Sadashiva Badavane, Gauribidanur Town, Chikkaballapur District 561208. Have changed my name to Badrinath B and my father's name as N Banu Prakash vide affidavit dated 05.11.2025 before Notary N S Ashok Kumar Gowribidanur. Henceforth I shall be called as Badrinath B & my father's name as Banu Prakash only.

JOB OPPORTUNITIES

Teachers/ Professors

TEACHER FOR Science Required For Class 6 to 10 SSLC State Board Contact 9901501185.

BUSINESS

Business to Business

Business

PROPERTY COLLATERALS/ Joint Ventures/ Takeovers/ Training/ New Ideas/ Finance for Big Projects. Dr. Swamy Naidu, Vamshadhara Projects & Services:- 9342247637.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ನಿರ್ಧಾರ

'400 ವಿಪ್ರರಿಗೆ ಸ್ವ ಉದ್ಯಮ ನೇರ ಸಾಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಪ್ರ ಸ್ವ ಉದ್ಯಮ ನೇರ ಸಾಲ ಯೋಜನೆ'ಗೆ 1,333 ಮಂದಿ ಅರ್ಜಿ ಸಲ್ಲಿಸಿದ್ದು, ಸದ್ಯದಲ್ಲೇ 400 ಮಂದಿಗೆ ₹2 ಲಕ್ಷವರೆಗೂ ಸಾಲ ನೀಡಲು ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ನಿರ್ಧರಿಸಿದೆ.

'ಈ ಯೋಜನೆಯಡಿ ಸಾಲ ಪಡೆದವರಿಗೆ ಶೇ 20ರಷ್ಟು ಸಹಾಯಧನ ಮಂಡಳಿಯಿಂದ ಸಿಗಲಿದೆ. ಶೇ 4ರ ಬಡ್ಡಿ ದರದಲ್ಲಿ ಉಳಿದ ಮೊತ್ತವನ್ನು 34 ಕಂತುಗಳಲ್ಲಿ ಪಾವತಿಸಲು ಅವಕಾಶ ಮಾಡಿಕೊಡಲಾಗುತ್ತದೆ. ಹಂತ ಹಂತವಾಗಿ ಉಳಿದ ಅರ್ಜಿದಾರರಿಗೂ ಸಾಲ ನೀಡಲಾಗುತ್ತದೆ' ಎಂದು ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಕೇಂದ್ರ ಲೋಕಸೇವಾ ಆಯೋಗ ಹಾಗೂ ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಗಳಿಗೆ ತಯಾರಿ ಮಾಡಿಕೊಳ್ಳುತ್ತಿರುವ ಸಮುದಾಯದ 100 ವಿದ್ಯಾರ್ಥಿಗಳಿಗೆ ₹1 ಲಕ್ಷ ನೆರವು ನೀಡುವ ಚಾಣಕ್ಯ ಆಡಳಿತ ತರಬೇತಿ ಯೋಜನೆಗೂ ಚಾಲನೆ ನೀಡಲಾಗುತ್ತಿದೆ. ಇದಲ್ಲದೇ ಸಾಂದಿಪಿನಿ ಯೋಜನೆಯಡಿ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗುತ್ತಿದೆ' ಎಂದರು.

'ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದಾಗ 2018ರಲ್ಲಿ ಮಂಡಳಿ ಸ್ಥಾಪಿಸಿ ₹25 ಕೋಟಿ ನೀಡಿದ್ದರು. ಆ ನಂತರ ಯಡಿಯೂರಪ್ಪ ಅವರು ಬರೀ ₹6.25 ಕೋಟಿ ನೀಡಿ ತಾತ್ಸಾರ ಮಾಡಿದರು. ಬಸವರಾಜ ಬೊಮ್ಮಾಯಿ ಅವರು ₹9.25 ಕೋಟಿ ನೀಡಿದ್ದರು. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮಂಡಳಿಗೆ ಹೆಚ್ಚಿನ ಅನುದಾನ ನೀಡಿದೆ. ಈಗ ವಾರ್ಷಿಕವಾಗಿ ₹10 ಕೋಟಿ ಅನುದಾನ ಸಿಗುತ್ತಿದ್ದು, ₹25 ಕೋಟಿ ನೀಡುವಂತೆ ಬೇಡಿಕೆ ಇಡಲಾಗಿದೆ' ಎಂದರು.

ಮಂಡಳಿ ವ್ಯವಸ್ಥಾಪಕ ನಿರ್ದೇಶಕಿ ದೀಪಶ್ರೀ, ಸದಸ್ಯರಾದ ಮಾಲತೇಶ್, ವೆಂಕೋಬರಾವ್, ಶ್ರೀನಿವಾಸಮೂರ್ತಿ ಹಾಜರಿದ್ದರು.

ಆಚಾರ್ಯತ್ರಯರ ಜಯಂತಿ ನಾಳೆ

ಅಸಗೋಡು ಜಯಸಿಂಹ

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯಿಂದ ಆಚಾರ್ಯತ್ರಯರ ಜಯಂತಿಯನ್ನು ನ.7ರ ಬೆಳಿಗ್ಗೆ 10.30ಕ್ಕೆ ಶೇಷಾದ್ರಿ ರಸ್ತೆಯ ಬಬ್ಬೂರು ಕಮ್ಮೆ ಸೇವಾ ಸಮಿತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಸಚಿವ ಕೃಷ್ಣಬೈರೇಗೌಡ ಜಯಂತಿ ಉದ್ಘಾಟಿಸುವರು. ಸಚಿವ ದಿನೇಶ್ ಗುಂಡೂರಾವ್ ಅಧ್ಯಕ್ಷತೆ ವಹಿಸುವರು ಎಂದು ಅಸಗೋಡು ಜಯಸಿಂಹ ತಿಳಿಸಿದರು.

ಶಂಕರಾಚಾರ್ಯರ ಕುರಿತು ಬೆಳವಾಡಿ ಮಂಜುನಾಥ, ರಾಮಾನುಜಾಚಾರ್ಯರ ಕುರಿತು ಶೆಲ್ವಪಿಳ್ಳೈ ಅಯ್ಯಂಗಾರ್, ಮಧ್ವಾಚಾರ್ಯರ ಕುರಿತು ವ್ಯಾಸನಕೆರೆ ಪ್ರಭಂಜನಾಚಾರ್ಯ ಉಪನ್ಯಾಸ ನೀಡುವರು. ಬಿ.ವಿ.ಆಚಾರ್ಯ, ಡಾ.ಎನ್. ಅನಂತರಾಮನ್, ಡಾ.ಶ್ರೀನಾಥ, ಆರ್.ವಿ.ಜಾಗೀರದಾರ್, ಕ್ಯಾಪ್ಟನ್ ಗೋಪಿನಾಥ್, ಬಿ.ಕೆ. ಅನಂತರಾವ್, ರಘೋತ್ತಮ ಕೊಪ್ಪರ್, ಗಂಗಮ್ಮ ಕೇಶವಮೂರ್ತಿ, ತ್ರಿವೇಣಿ ಬಾಯಿ, ನರಸಿಂಹಮೂರ್ತಿ ನಾರಾಯಣ, ರಾಘವ ವಿಷ್ಣು ಬಾಳೇರಿ, ಬಿ.ಎಸ್.ಜಯಪ್ರಕಾಶ ನಾರಾಯಣ ಅವರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದರು.

ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ನಾಗವಾರ ವೃತ್ತದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು

ಮತಗಳ್ಳತನ: ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: ದೇಶದಾದ್ಯಂತ ನಡೆಯುತ್ತಿರುವ ಮತಗಳ್ಳತನ ವಿರೋಧಿಸಿ ಹಾಗೂ ಸವಿತಾ ಸಮಾಜದ ವಿರುದ್ಧ ಸಿ.ಟಿ. ರವಿ ನೀಡಿರುವ ಅವಹೇಳನಕಾರಿ ಹೇಳಿಕೆಯನ್ನು ಖಂಡಿಸಿ, ನಾಗವಾರ ವೃತ್ತದಲ್ಲಿ ಬುಧವಾರ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಎನ್. ಬಸವರಾಜು ಮಾತನಾಡಿ, 'ದೇಶದಾದ್ಯಂತ ಬಿಜೆಪಿ ಮತ್ತು ಆರ್‌ಎಸ್‌ಎಸ್ ಪರಿವಾರದಿಂದ ಮತಗಳ್ಳತನ ನಡೆಯುತ್ತಿದೆ. ಅಧಿಕಾರ ದುರುಪಯೋಗ ಪಡಿಸಿಕೊಳ್ಳುವ ಮೂಲಕ ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡುತ್ತಿದೆ' ಎಂದು ಆರೋಪಿಸಿದರು.

ಪರಿಶಿಷ್ಟ, ಹಿಂದುಳಿದವರ್ಗ ಹಾಗೂ ಅಲ್ಪಸಂಖ್ಯಾತರ ಮತಗಳನ್ನು ಗುರಿಯಾಗಿಸಿಕೊಂಡು ಮತದಾರರ ಪಟ್ಟಿಯಿಂದ ಕೈಬಿಟ್ಟಿರುವುದು ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ. ರಾಹುಲ್ ಗಾಂಧಿ ಅವರು ಮಹದೇವಪುರದಲ್ಲಿ ಮತಗಳ್ಳತನದ ಅಕ್ರಮ ನಡೆದಿರುವ ಬಗ್ಗೆ ದಾಖಲೆ ಸಮೇತ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದು, ಅವರ ಹೋರಾಟದಿಂದ ಮತದಾರರ ಹೆಸರು ಸೇರ್ಪಡೆ ಮತ್ತು ತೆಗೆಯಲು ಒಟಿಪಿ ಜಾರಿಗೊಳಿಸಲಾಗಿದೆ ಎಂದು ಹೇಳಿದರು.

ಬ್ಯಾಟರಾಯನಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ. ಜಯಗೋಪಾಲಗೌಡ ಮಾತನಾಡಿ, 'ದೇಶದಲ್ಲಿ ಬಿಜೆಪಿ ನ್ಯಾಯಯುತವಾಗಿ ಚುನಾವಣೆ ನಡೆಸುವುದನ್ನು ಬಿಟ್ಟು, ಅಧಿಕಾರ ದುರುಪಯೋಗ ಮಾಡಿಕೊಂಡು ವಾಮಮಾರ್ಗದಿಂದ ಅಧಿಕಾರ ಹಿಡಿಯುತ್ತಿದೆ. ಕಾಂಗ್ರೆಸ್ ಕಾರ್ಯಕರ್ತರು ಈ ಬಗ್ಗೆ ಎಚ್ಚರವಹಿಸುವುದರ ಜೊತೆಗೆ ಮನೆಮನೆಗೆ ತೆರಳಿ ಜನರಲ್ಲಿ ಜಾಗೃತಿ ಮೂಡಿಸಬೇಕು' ಎಂದು ಸಲಹೆ ನೀಡಿದರು.

ಮತಗಳ್ಳತನ ವಿರೋಧಿಸಿ, ಸಹಿ ಸಂಗ್ರಹ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಕಾಂಗ್ರೆಸ್ ಮುಖಂಡರಾದ ಎಚ್.ಎ. ಶಿವಕುಮಾರ್, ಟಿ.ಎಂ. ಶ್ರೀನಿವಾಸ್, ರಮೇಶ್, ಪಾರ್ವತಮ್ಮ, ಅರುಣ್‌ಕುಮಾರ್, ವಿ.ಮೋಹನ್‌ರಾಜ್, ಕಾಂತರಾಜ್, ಅಫ್ಜಲ್ ಖಾನ್ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

'ಮುಂದಿನ ಎಲ್ಲ ಚುನಾವಣೆಗಳಿಗೆ ಸಿದ್ದರಾಮಯ್ಯ ನೇತೃತ್ವ'

ಬೆಂಗಳೂರು: 'ಸಿದ್ದರಾಮಯ್ಯ ಅವರಿಗೆ ವಯಸ್ಸಾಗಿಲ್ಲ. ಮುಂದಿನ ಎಲ್ಲ ಚುನಾವಣೆಗಳು ಅವರ ನೇತೃತ್ವದಲ್ಲೇ ನಡೆಯಲಿವೆ. ಮುಂದೆಯೂ ಅವರೇ ಮುಖ್ಯಮಂತ್ರಿಯಾಗಿರಬಹುದು' ಎಂದು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿದರು.

'ಸಿದ್ದರಾಮಯ್ಯ ಅವರು ಎಷ್ಟು ದಿನ ಮುಖ್ಯಮಂತ್ರಿಯಾಗಿ ಇರುತ್ತಾರೋ ಅಷ್ಟೂ ದಿನ ಅವರೇ ಮುಖ್ಯಮಂತ್ರಿ. ನಾಯಕತ್ವ ಬದಲಾವಣೆ, ಅಧಿಕಾರ ಹಸ್ತಾಂತರ ವಿಚಾರವಾಗಿ ನಡೆಯುತ್ತಿರುವ ಚರ್ಚೆಗಳೆಲ್ಲವೂ ಊಹಾಪೋಹ. ಮಾಧ್ಯಮಗಳಲ್ಲಿನ ಚರ್ಚೆಗಳು ಪಕ್ಷದ ಮುಂದೆ ಇಲ್ಲ. ಸಿದ್ದರಾಮಯ್ಯ ಅವರು ನಮ್ಮ ನಾಯಕರು. ಅವರ ನೇತೃತ್ವದಲ್ಲೇ ಪಕ್ಷ ಕಟ್ಟುತ್ತಿದ್ದೇವೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

'ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಬೇಕು ಎಂದು ಅಭಿಮಾನಿಗಳು ಆಸೆ ಪಡುವುದು ಸಹಜ. ಕೆಲವರು ಎಚ್.ಡಿ.ಕುಮಾರ ಸ್ವಾಮಿ, ಮತ್ತೆ ಕೆಲವರು ಬಿ.ವೈ.ವಿಜಯೇಂದ್ರ, ಅಶ್ವತ್ಥನಾರಾಯಣ, ಆರ್.ಅಶೋಕ, ಜಿ. ಪರಮೇಶ್ವರ, ಸತೀಶ ಜಾರಕಿಹೊಳಿ ಮುಖ್ಯಮಂತ್ರಿ ಆಗಬೇಕು ಎನ್ನುತ್ತಾರೆ. ಆಯಾ ಊರಿನ ಜನರು ತಮ್ಮ ನಾಯಕರು ಆಗಬೇಕು ಎಂದು ಬಯಸುತ್ತಾರೆ. ಕೆಲವರು ವೇದಿಕೆ ಮೇಲೆ ನಾಲ್ಕು ಒಳ್ಳೆ ಮಾತುಗಳನ್ನು ಆಡಿ ತಮ್ಮ ಅಭಿಮಾನ ತೋರುತ್ತಾರೆ. ಇವೆಲ್ಲವು ರಾಜಕಾರಣದ ಭಾಗ. ಇಂತಹ ವಿಷಯಗಳ ಬಗ್ಗೆ ಹೈಕಮಾಂಡ್ ನಾಯಕರು ತೀರ್ಮಾನ ಮಾಡುತ್ತಾರೆ' ಎಂದರು.



'ಮೇಕೆದಾಟು ಯೋಜನೆ ಕುರಿತು ಚರ್ಚಿಸಲು ಶಿವಕುಮಾರ್ ಅವರು ದೆಹಲಿಗೆ ತೆರಳಿದ್ದಾರೆ. ಪ್ರಕರಣದ ವಿಚಾರಣೆ ಡಿ.6ರಂದು ನಡೆಯಲಿದೆ. ವಿಚಾರಣೆ ವೇಳೆ ನಮ್ಮ ನಿಲುವು ಏನಿರಬೇಕು ಎಂಬ ಬಗ್ಗೆ ಅಧಿಕಾರಿಗಳು ಮತ್ತು ವಕೀಲರ ಜತೆ ಚರ್ಚೆ ನಡೆಸುವರು. ಇದಕ್ಕಾಗಿ, ವಿಶೇಷ ಪೀಠವೊಂದನ್ನು ಸುಪ್ರೀಂಕೋರ್ಟ್ ರಚಿಸುವ ಸಾಧ್ಯತೆ ಇದೆ' ಎಂದರು.

'ಅನಧಿಕೃತ ಪಿಜಿಗಳಿಗೆ ಬೀಗ ಹಾಕಿ'

ಬೆಂಗಳೂರು: ಪ್ರಮಾಣೀಕೃತ ಮಾರ್ಗಸೂಚಿಯ ಪ್ರಕಾರ ಕಾರ್ಯ ನಿರ್ವಹಿಸದ ಹಾಗೂ ನಿಯಮಗಳನ್ನು ಉಲ್ಲಂಘಿಸಿರುವ ವಸತಿ ಗೃಹಗಳಿಗೆ (ಪಿಜಿ) ಬೀಗ ಹಾಕುವ ಪ್ರಕ್ರಿಯೆಯನ್ನು ಕೂಡಲೇ ಆರಂಭಿಸಲು ಬೆಂಗಳೂರು ಪೂರ್ವ ನಗರ ಪಾಲಿಕೆಯ ಹೆಚ್ಚುವರಿ ಆಯುಕ್ತ (ಅಭಿವೃದ್ಧಿ) ಲೋಖಂಡೆ ಸ್ನೇಹಲ್ ಸುಧಾಕರ್ ಸೂಚಿಸಿದರು.

ಆರೋಗ್ಯ ವಿಭಾಗದ ಪ್ರಗತಿ ಪರಿಶೀಲನಾ ಸಭೆಯನ್ನು ಮಂಗಳವಾರ ನಡೆಸಿದ ಅವರು, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು, ಜನನ ಮತ್ತು ಮರಣ ನೋಂದಣಿ, ಇಂದಿರಾ ಕ್ಯಾಂಟೀನ್, ವಸತಿ ಗೃಹಗಳು, ಆಹಾರ ಸುರಕ್ಷತೆ ಮತ್ತು ಗುಣಮಟ್ಟ, ಉದ್ದಿಮೆ ಪರವಾನಗಿ ಕುರಿತಂತೆ ಮಾಹಿತಿ ಪಡೆದರು.

ತಂಬಾಕು ನಿಯಂತ್ರಣ: ಅಂಗಡಿಗಳಲ್ಲಿ ನಿಯಮ ಉಲ್ಲಂಘಿಸಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿರುವುದನ್ನು ತಡೆಗಟ್ಟಬೇಕು. ದಾಳಿ ನಡೆಸಿ ವಸ್ತುಗಳನ್ನು ಜಪ್ತಿ ಮಾಡಿ, ನಿಯಮಿತವಾಗಿ ಆರೋಗ್ಯ ಪರಿವೀಕ್ಷಕರು ಮೇಲ್ವಿಚಾರಣೆ ಮಾಡಬೇಕು ಎಂದರು.

ಜನನ ಮತ್ತು ಮರಣ ಪ್ರಮಾಣ ಪತ್ರ ಸಂಬಂಧ ಸಾರ್ವಜನಿಕರು ಎದುರಿಸುತ್ತಿರುವ ತೊಂದರೆಗಳ ಬಗ್ಗೆ ಗಮನಹರಿಸಬೇಕು. ಯಾವುದೇ ದೂರಿನ ಹಿನ್ನೆಲೆಯಲ್ಲಿ ಸಂಬಂಧಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

'ಗೃಹಲಕ್ಷ್ಮಿ'ಯರಿಗಾಗಿ ಸಹಕಾರ ಸಂಘ

ಪ್ರಜಾವಾಣಿ ವಾರ್ತೆ

ಲಕ್ಷ್ಮೀ ಹೆಬ್ಬಾಳಕರ

ಬೆಂಗಳೂರು: 'ಗೃಹಲಕ್ಷ್ಮಿ ಫಲಾನುಭವಿಗಳಿಗೆ ಲಾಭ ತಂದುಕೊಡಲು ಗೃಹಲಕ್ಷ್ಮಿ ವಿವಿಧೋದ್ದೇಶ ಸಹಕಾರ ಸಂಘವನ್ನು ಆರಂಭಿಸಲಾಗುವುದು' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ನ.19ರಂದು ನಡೆಯಲಿರುವ ಐಸಿಡಿಎಸ್ ಯೋಜನೆಯ ಅಂಗನವಾಡಿ ಸುವರ್ಣ ಮಹೋತ್ಸವ, ಅಕ್ಕಾ ಪಡೆ ಲೋಕಾರ್ಪಣೆ, ಗೃಹಲಕ್ಷ್ಮಿ ಬ್ಯಾಂಕ್ ಉದ್ಘಾಟನೆ ಕುರಿತು ಬುಧವಾರ ನಡೆದ ರಾಜ್ಯಮಟ್ಟದ ಪೂರ್ವ ಭಾವಿ ಸಭೆಯಲ್ಲಿ ಅವರು ಮಾತನಾಡಿದರು.

'2000 ಫಲಾನುಭವಿಗಳಿಂದ ಹಣ ಸಂಗ್ರಹಿಸಲಾಗಿದೆ. ಗೃಹಲಕ್ಷ್ಮಿ ಯೋಜನೆಯ ಮಾದರಿಯಲ್ಲೆ ಗೃಹಲಕ್ಷ್ಮಿ ಬ್ಯಾಂಕ್ ಕೂಡ ಜನಮನ್ನಣೆ ಗಳಿಸಲು ಅಧಿಕಾರಿಗಳು ಶ್ರಮಿಸಬೇಕು. ಮೂರು ತಿಂಗಳಲ್ಲಿ ಜಿಲ್ಲಾ ಮಟ್ಟಕ್ಕೂ ಗೃಹಲಕ್ಷ್ಮಿ ಸೊಸೈಟಿಯನ್ನು ವಿಸ್ತರಣೆ ಮಾಡಲಾಗುವುದು' ಎಂದು ಸಚಿವರು ಹೇಳಿದರು.

'ಗೃಹಲಕ್ಷ್ಮಿ ಸೊಸೈಟಿ ಮೂಲಕ ಮೂರು ಲಕ್ಷದವರೆಗೆ ಕಡಿಮೆ ಬಡ್ಡಿ ದರದಲ್ಲಿ ಫಲಾನುಭವಿಗಳಿಗೆ ಸಾಲ ನೀಡಲಾಗುವುದು. ಸೊಸೈಟಿ ಯಶಸ್ಸಿಗೆ ಎಲ್ಲರ ಸಹಕಾರ, ಜವಾಬ್ದಾರಿ ಇರಬೇಕು. ನಾವು ಯಾರಿಂದಲೂ ಹಣ ಪಡೆಯುವುದಿಲ್ಲ, ಫಲಾನುಭವಿಗಳಿಂದ ಫೋನ್ ಪೇ ಮೂಲಕ ಹಣ ಸಂಗ್ರಹಿಸಲಾಗುವುದು' ಎಂದು ವಿವರ ನೀಡಿದರು.

ಮಹಿಳೆಯರಿಗೆ ಹೆಚ್ಚು ಸುರಕ್ಷತೆ ನೀಡಲು ಅಕ್ಕಾಪಡೆಯನ್ನು ರಾಜ್ಯದಾದ್ಯಂತ ಆರಂಭಿಸಲಾಗುತ್ತಿದೆ. ಇದಕ್ಕೆ ಇಲಾಖೆಯ ಅಧಿಕಾರಿಗಳು ಪೊಲೀಸ್ ಇಲಾಖೆಯೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದು, ಅಕ್ಕಾ ಪಡೆ ಮನೆ ಮಾತಾಗುವಂತೆ ನೋಡಿಕೊಳ್ಳಬೇಕು ಎಂದರು.

ಹೋಮ್ ಗಾರ್ಡ್ಸ್, ಎನ್‌ಸಿಸಿ ವಿದ್ಯಾರ್ಥಿಗಳು ಅಕ್ಕಾ ಪಡೆಯಲ್ಲಿ ಕಾರ್ಯನಿರ್ವಹಿಸಲಿದ್ದು, ಬೆಳಿಗ್ಗೆ 8 ರಿಂದ ರಾತ್ರಿ 8ರವರೆಗೆ ಅಕ್ಕಾ ಪಡೆ ಶಾಲಾ ಕಾಲೇಜು, ಪಾರ್ಕ್, ಶಾಪಿಂಗ್ ಮಾಲ್ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಗಸ್ತು ತಿರುಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮೀಣ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಕೋಲಾರ, ತುಮಕೂರು, ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳಿಂದ ಹೆಚ್ಚು ಮಹಿಳೆಯರು ಭಾಗವಹಿಸಲಿದ್ದಾರೆ. ಈ ಜಿಲ್ಲೆಗಳ ಉಪ ನಿರ್ದೇಶಕರು ಹೆಚ್ಚಿನ ನಿಗಾ ವಹಿಸಬೇಕು ಎಂದು ಸೂಚಿಸಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿಯ ಮಾಜಿ ಅಧ್ಯಕ್ಷ ಜಿ. ಮರಿಸ್ವಾಮಿ ಅವರು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಹೂಗುಚ್ಛ ನೀಡಿ ಹುಟ್ಟುಹಬ್ಬದ ಶುಭಾಶಯ ಕೋರಿದರು

ಕಾಂ ಡೀಲ್ ಟ್ರಸ್ಟ್ ರಜತ ಸಂಭ್ರಮ

ಬೆಂಗಳೂರು: ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್ (ಎಎಸ್‌ಡಿ) ಕುರಿತು ಸಮುದಾಯದಲ್ಲಿ ಜಾಗೃತಿ ಜತೆಗೆ ನಾನಾ ರೀತಿಯ ಚಟುವಟಿಕೆಗಳನ್ನು ಎರಡೂವರೆ ದಶಕದಿಂದ ನಡೆಸುತ್ತಿರುವ ನಗರದ ದಿ ಕಾಂ ಡೀಲ್ ಟ್ರಸ್ಟ್ (ಟಿಸಿಡಿಟಿ) ಸಂಸ್ಥೆಯ ರಜತ ಮಹೋತ್ಸವ ಶುಕ್ರವಾರ (ನ.7) ನಡೆಯಲಿದೆ.

ದೊಮ್ಮಲೂರಿನಲ್ಲಿರುವ ಬೆಂಗಳೂರು ಇಂಟರ್ ನ್ಯಾಷನಲ್ ಸೆಂಟರ್‌ನಲ್ಲಿ (ಬಿಐಸಿ) ಅಂದು ಸಂಜೆ 5.30ಕ್ಕೆ ನಡೆಯುವ ಸಮಾರಂಭದಲ್ಲಿ, ಮುಖ್ಯ ಅತಿಥಿಯಾಗಿ ಅಭಿವೃದ್ಧಿ ಆಯುಕ್ತೆ ಉಮಾ ಮಹಾದೇವನ್ ಪಾಲ್ಗೊಂಡು ಸಂಸ್ಥೆಯ ಸಾಕ್ಷ್ಯಚಿತ್ರ ಹಾಗೂ ಕಾಫಿ ಟೇಬಲ್ ಬುಕ್ ಬಿಡುಗಡೆ ಮಾಡುವರು.

ಸಂಸ್ಥೆ ವೆಬ್‌ಸೈಟ್ ಹಾಗೂ ಆ್ಯಪ್ ಅನ್ನು ತಿರುವನಂತಪುರದ ಕ್ಯಾಡ್ರೆ ಟೆಕ್ನೋಪಾರ್ಕ್ ಹಾಗೂ ನಿಶ್ ಸಂಸ್ಥೆಯ ಸಂಸ್ಥಾಪಕ ಜಿ.ವಿಜಯರಾಘವನ್ ಜನಾರ್ಪಣೆಗೊಳಿಸುವರು. ಸಂಸ್ಥೆಯ ಬೆಳವಣಿಗೆ ಹಾದಿ, ಚಟುವಟಿಕೆ ಆಧರಿತ ವಸ್ತು ಪ್ರದರ್ಶನವನ್ನು ಇದೇ ವೇಳೆ ಉದ್ಘಾಟಿಸಲಾಗುತ್ತದೆ. ಸಂಸ್ಥೆಯ ಸಂಸ್ಥಾಪಕ ನಿರ್ದೇಶಕರಾದ ಡಾ.ಪ್ರತಿಭಾ ಕಾರಂತ್ ಉಪಸ್ಥಿತರಿರುವರು. ನ.8 ಹಾಗೂ 9ರಂದು ಕಾರ್ಯಾಗಾರ, ವಿವಿಧ ತಜ್ಞರೊಂದಿಗೆ ಚರ್ಚಾ ಚಟುವಟಿಕೆ ಇರಲಿವೆ ಎಂದು ಪ್ರಕಟಣೆ ತಿಳಿಸಿದೆ.

ಕಾಂ ಡೀಲ್ ಸಂಸ್ಥೆಯು ಆಟಿಸಂ ಕಾಣಿಸಿಕೊಂಡ ನೂರಾರು ಮಕ್ಕಳಲ್ಲಿ ಜಾಗೃತಿ ಮೂಡಿಸುವ ಜತೆಯಲ್ಲಿ ಆರಂಭಿಕ ಮಾರ್ಗದರ್ಶನವನ್ನು ನೀಡುತ್ತಿದೆ. ಇದೇ ಕ್ಷೇತ್ರದಲ್ಲಿ ಹಲವು ಕಾರ್ಯಕ್ರಮಗಳನ್ನು ರೂಪಿಸಿ ಪ್ರಶಸ್ತಿಗಳನ್ನೂ ಪಡೆದುಕೊಂಡಿದೆ.

ಮಾಹಿತಿಗೆ ಮೊ.ಸಂ. 9480958560 ಸಂಪರ್ಕಿಸಬಹುದು

ನಗರದಲ್ಲಿ ಇಂದು

36ನೇ ಅಂತರ್ ಕಾಲೇಜು ಮಾದರಿ ಲೋಕಸಭಾ ಸ್ಪರ್ಧೆ: ಅತಿಥಿಗಳು: ಎಲಿಜಬೆತ್ ಚೆರಿಯನ್, ಲಲಿತಾಂಬ ಸಿ., ಪಿ. ಸೇತು, ಆಯೋಜನೆ: ಯಂಗ್ ಮೆನ್ಸ್ ಕ್ರಿಶ್ಚಿಯನ್‌ಅಸೋಸಿಯೇಷನ್ (ವೈಎಂಸಿಎ), ರೋಟರಿ ಬೆಂಗಳೂರು ಪೀಣ್ಯ, ಸ್ಥಳ: ವೈಎಂಸಿಎ, ನೃಪತುಂಗ ರಸ್ತೆ, ಬೆಳಿಗ್ಗೆ 9.30

ಎಐಎಎಂಎ ಎಕ್ಸ್‌ಪೊ-2025: ಅತಿಥಿಗಳು: ಪ್ರಲ್ಹಾದ ಜೋಶಿ, ಶೋಭಾ ಕರಂದ್ಲಾಜೆ, ಎಂ.ಬಿ. ಪಾಟೀಲ, ಸುಬ್ರತ್ ಪಾಠಕ್, ಆಯೋಜನೆ: ಆಲ್ ಇಂಡಿಯಾ ಅಗರಬತ್ತಿ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಷನ್, ಸ್ಥಳ: ತ್ರಿಪುರ ವಾಸಿನಿ ಅರಮನೆ ಮೈದಾನ, ಬೆಳಿಗ್ಗೆ 9.30

ಶುದ್ಧೀಕರಿಸಿದ ನೀರಿನ ಮರುಬಳಕೆ ಕುರಿತ ರಾಷ್ಟ್ರೀಯ ಕಾರ್ಯಾಗಾರದ ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಉಪಸ್ಥಿತಿ: ಶಾಲಿನಿ ರಜನೀಶ್, ತುಷಾರ್ ಗಿರಿನಾಥ್, ಡಾ. ರಾಮ್‌ಪ್ರಸಾತ್ ಮನೋಹರ್, ಆಯೋಜನೆ: ಬೆಂಗಳೂರು ಜಲಮಂಡಳಿ, ಸ್ಥಳ: ಹೋಟೆಲ್ ಶಾಂಗ್ರೀಲಾ, ಬೆಳಿಗ್ಗೆ 9.30

ಭಾರತದ ಉತ್ಪಾದನಾ ಪ್ರದರ್ಶನ: ಅತಿಥಿಗಳು: ರಾಜನಾಥ್ ಸಿಂಗ್, ಎಚ್.ಡಿ. ಕುಮಾರಸ್ವಾಮಿ, ಪ್ರಲ್ಹಾದ ಜೋಶಿ, ಪ್ರಮೋದ್ ಸಾವಂತ್, ಶೋಭಾ ಕರಂದ್ಲಾಜೆ, ಸುಧಾಂಶು ತ್ರಿವೇದಿ, ತೇಜಸ್ವಿ ಸೂರ್ಯ, ಅಮರ್ ಪ್ರೀತ್ ಸಿಂಗ್, ಸಮಿರ್ ವಿ. ಕಾಮತ್, ವಿ. ನಾರಾಯಣನ್, ಸಂಜೀವ್ ಕುಮಾರ್, ಬಾಬಾ ಕಲ್ಯಾಣಿ, ಸತ್ಯನಾರಾಯಣ ನುವಾಲ್, ಆಯೋಜನೆ: ಐಎಂಎಸ್ ಫೌಂಡೇಷನ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ, ತುಮಕೂರು ರಸ್ತೆ, ಬೆಳಿಗ್ಗೆ 11

ಉಚಿತ ಆಯುರ್ವೇದ ಚಿಕಿತ್ಸಾ, ರಕ್ತದಾನ ಶಿಬಿರ, ಗಣ್ಯರಿಗೆ ಧನ್ವಂತರಿ ಪುರಸ್ಕಾರ ಪ್ರದಾನ: ಅತಿಥಿಗಳು: ಉದಯ್ ಬಿ. ಗರುಡಾಚಾರ್, ಶ್ರೀಧರ ಮಯ್ಯ, ಕೆ.ಇ. ರಾಧಾಕೃಷ್ಣ, ಎಸ್. ಹರಿದಾಸ್ ಉಪಾಧ್ಯಾಯ, ಪುರಸ್ಕಾರ ಸ್ವೀಕರಿಸುವವರು: ವ.ಚ. ಚನ್ನೇಗೌಡ, ಚಂದ್ರಹಾಸ ಎಸ್. ಶೆಟ್ಟಿಗಾರ್, ಕಾರ್ತಿಕ್ ಪಂಡಿತ್, ಆಯೋಜನೆ: ಉಪಾಧ್ಯ ಪ್ರತಿಷ್ಠಾನ, ಆನಂದ ಬಳಗ, ಸ್ಥಳ: ಸಂಕರ್ಷಣ ಸಭಾಂಗಣ, ಪೂರ್ಣಿಮಾ ರೀಜೆನ್ಸಿ, ಹೊಂಬೇಗೌಡನಗರ, ಬೆಳಿಗ್ಗೆ 10ರಿಂದ

ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳ ಕುರಿತು ಚಿತ್ರಕಲೆ ಪ್ರದರ್ಶನ: ಅತಿಥಿಗಳು: ಗಿರೀಶ ಕಾಸರವಳ್ಳಿ, ಗೀತಾ ಪ್ರಿಯಾ, ಎಸ್.ಜಿ. ವಾಸುದೇವ, ಪ.ಸ. ಕುಮಾರ್, ಚಂದ್ರನಾಥ ಆಚಾರ್ಯ, ಸುರೇಶ್ ಹೆಬ್ಳೀಕರ್, ಆಯೋಜನೆ: ಇಕೋ-ವಾಚ್, ಕರ್ನಾಟಕ ರಾಜ್ಯ ಪಶ್ಚಿಮ ಘಟ್ಟ ಸಂರಕ್ಷಣಾ ಸಮಿತಿ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5.30



ಗಿರೀಶ ಕಾಸರವಳ್ಳಿ

'ಶಿವಪ್ರಿಯ' ವಾರ್ಷಿಕೋತ್ಸವ: ಅತಿಥಿಗಳು: ಶುಭಾ ಧನಂಜಯ್, ರವಿ ಸುಬ್ರಮಣ್ಯ, ಆಯೋಜನೆ: ನಾಟ್ಯಭೈರವಿ ಡಾನ್ಸ್ ಸ್ಕೂಲ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

ನಾಟಕೋತ್ಸವ-2025: ರಂಗ ಗೀತೆಗಳು: ಆದಿಮೂಲ ರಂಗತಂಡ, 'ಚಂದ್ರಗಿರಿ ತೀರದಲ್ಲಿ' ನಾಟಕ ಪ್ರದರ್ಶನ: ನಿರ್ದೇಶನ: ರಾಜ್‌ಗುರು, ಆಯೋಜನೆ: ರಂಗಪಯಣ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6

ಕಾರ್ತಿಕ ಸಂಗೀತ ಸಂಭ್ರಮ, ಕನಕದಾಸರ ಜಯಂತಿ, ಕರ್ನಾಟಕ ರಾಜ್ಯೋತ್ಸವ, ಹರಿದಾಸ ಸಂಭ್ರಮ, ಅನ್ನಮಾಚಾರ್ಯರ ಸಂಸ್ಮರಣೆ: ತ್ರಿವೇಣಿ-ಶಾಸ್ತ್ರೀಯ, ಭಾವಗೀತೆ, ಚಿತ್ರಗೀತೆಗಳ ಸಂಗಮ: ಗಾಯನ: ದತ್ತ ಪ್ರಸಾದ್, ಪಿಟೀಲು: ಪ್ರಣವಿ ಗುರುಪ್ರಸನ್ನ, ಮೃದಂಗ: ಬಿ.ಜಿ. ಶ್ರೀನಿವಾಸ್, ಮೋರ್ಸಿಂಗ್: ಲಿಖಿತ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಹೊಸಕೆರೆಹಳ್ಳಿ ಮೇಲ್ಸೇತುವೆ: ಶೇ 90ರಷ್ಟು ಪೂರ್ಣ

ಮುಂದಿನ ವಾರ ಪ್ರಾಯೋಗಿಕ ಸಂಚಾರ
•ಪಶ್ಚಿಮ ನಗರ ಪಾಲಿಕೆ ಆಯುಕ್ತ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸಕೆರೆಹಳ್ಳಿ ಕೆರೆಕೋಡಿ ಜಂಕ್ಷನ್‌ನಲ್ಲಿರುವ ಮೇಲ್ಸೇತುವೆಯಲ್ಲಿ ಮುಂದಿನ ವಾರ ವಾಹನಗಳ ಪ್ರಾಯೋಗಿಕ ಸಂಚಾರಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ಕೆ.ವಿ. ರಾಜೇಂದ್ರ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮೇಲ್ಸೇತುವೆಯ ಎರಡೂ ಬದಿಯ ಸರ್ವೀಸ್ ರಸ್ತೆಯಲ್ಲಿ ಗುಂಡಿಗಳನ್ನು ಮುಚ್ಚಬೇಕು. ಹಾಳಾದ ಭಾಗಗಳನ್ನು ಕೂಡಲೇ ದುರಸ್ತಿಪಡಿಸಬೇಕು. ಕಟ್ಟಡ ಭಗ್ನಾವಶೇಷ/ತ್ಯಾಜ್ಯವನ್ನು ಸಂಪೂರ್ಣವಾಗಿ ತೆರವುಗೊಳಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಹೊಸಕೆರೆಹಳ್ಳಿ ಜಂಕ್ಷನ್‌ನಲ್ಲಿನ 500 ಮೀಟರ್ ಉದ್ದದ ಮೇಲ್ಸೇತುವೆ ಕಾಮಗಾರಿಯು ಶೇ 90 ರಷ್ಟು ಪೂರ್ಣಗೊಂಡಿದ್ದು, ಮೇಲ್ಸೇತುವೆ ಮಧ್ಯಭಾಗದಲ್ಲಿ ಈಗಾಗಲೇ ಡಾಂಬರೀಕರಣ ಮಾಡಲಾಗಿದೆ. ಎರಡೂ ಕಡೆ ವೆಟ್ ಮಿಕ್ಸ್ ಹಾಕಿದ್ದು, ಡಾಂಬರೀಕರಣ ಮಾಡುವ ಕೆಲಸ ಬಾಕಿಯಿದೆ. ಬಣ್ಣ ಬಳಿಯುವ ಕೆಲಸವೂ ಬಹುತೇಕ ಪೂರ್ಣಗೊಂಡಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ತುರ್ತು ಕಾಮಗಾರಿ: ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಕಂಠೀರವ ಸ್ಟೇಡಿಯಂನಲ್ಲಿ ರಾಜಕಾಲುವೆ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಬೇಕು ಎಂದು ಆಯುಕ್ತ ರಾಜೇಂದ್ರ ಚೋಳನ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಳೆಗಾಲದ ವೇಳೆ ಕಂಠೀರವ ಸ್ಟೇಡಿಯಂ ಜಲಾವೃತವಾಗಲಿದ್ದು, ಕ್ರೀಡಾಪಟುಗಳಿಗೆ ಅನಾನುಕೂಲವಾಗುತ್ತಿದೆ. ಇದನ್ನು ತಪ್ಪಿಸುವ ಸಲುವಾಗಿ ರಾಜಕಾಲುವೆಯ ತಡೆಗೋಡೆ ಎತ್ತರಿಸುವ ಕಾಮಗಾರಿ ಪ್ರಗತಿಯಲ್ಲಿದೆ. ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಹೇಳಿದರು.

ಅನಧಿಕೃತ ಕಟ್ಟಡಗಳನ್ನು ಗುರುತಿಸಿ, ಪಟ್ಟಿ ಮಾಡಬೇಕು. ಹಂತ-ಹಂತವಾಗಿ ತೆರವುಗೊಳಿಸುವ ಕಾರ್ಯವನ್ನು ಪ್ರಾರಭಿಸಬೇಕು. ಕಟ್ಟಡ ಕಟ್ಟುವ ಮುನ್ನವೇ ಯಾವುದೇ ರೀತಿಯ ಉಲ್ಲಂಘನೆ ಮಾಡದಂತೆ ಮನವರಿಕೆ ಮಾಡಿಕೊಡಬೇಕು ಎಂದು ಸೂಚನೆ ನೀಡಿದರು.

ಉತ್ತರ ನಗರ ಪಾಲಿಕೆಯಲ್ಲಿ ತೆರಿಗೆ ವಸೂಲಿ ಅಭಿಯಾನ

ಸುಸ್ತಿದಾರಿಂದ ಆಸ್ತಿ ತೆರಿಗೆದಾರ ಸಂಗ್ರಹಿಸುವ ಹಾಗೂ ತಪ್ಪಾಗಿ ಆಸ್ತಿ ವಿವರ ಘೋಷಣೆ ಮಾಡಿರುವರಿಗೆ ನೋಟಿಸ್ ಜಾರಿ ಮಾಡುವ 'ತೆರಿಗೆ ಅಭಿಯಾನ'ವನ್ನು ಉತ್ತರ ನಗರ ಪಾಲಿಕೆಯಲ್ಲಿ ಆಯೋಜಿಸಲಾಗಿದೆ.

ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 4,57,951 ಆಸ್ತಿಗಳಿದ್ದು, ಅವುಗಳಲ್ಲಿ ವಸತಿ–3,36,989, ವಸತಿಯೇತರ–15,949, ವಸತಿ ಹಾಗೂ ವಸತಿಯೇತರ–23,214 ಹಾಗೂ ಖಾಲಿ ನಿವೇಶನ–81,799 ಇವೆ. ಒಟ್ಟು 1,697 ಆಸ್ತಿಗಳಿಗೆ ಕಂದಾಯ ಪರಿಷ್ಕರಣೆ ಅಗತ್ಯವಿದ್ದು, 78,565 ಆಸ್ತಿಗಳಿಂದ ಕೆಲವು ವರ್ಷಗಳಿಂದ ತೆರಿಗೆ ಬಾಕಿ ಉಳಿದಿದೆ ಎಂದು ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಹೇಳಿದರು.

2025–26ನೇ ಸಾಲಿನಲ್ಲಿ ಒಟ್ಟು ₹1,242 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ನಿಗದಿಪಡಿಸಲಾಗಿದೆ. ಈವರೆಗೆ ₹548 ಕೋಟಿ ತೆರಿಗೆ ಸಂಗ್ರಹವಾಗಿದೆ.

ಹೀಗಾಗಿ ಹೆಚ್ಚು ಬಾಕಿ ಉಳಿಸಿಕೊಂಡಿರುವ ಸುಸ್ತಿದಾರರಿಗೆ ನೋಟಿಸ್ ಗಳನ್ನು ಜಾರಿ ಮಾಡಿ, ಬಾಕಿ ಮೊತ್ತ ವಸೂಲಿ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕೆಐಎಡಿಬಿ ಹಂಚಿಕೆ: ಅರ್ಜಿ ವಿಲೇವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕರ ಬಳಕೆಗಾಗಿ ಮೀಸಲಿಟ್ಟು ಅಭಿವೃದ್ಧಿ ಪಡಿಸಲಾದ ನಾಗರಿಕ ಸೌಲಭ್ಯದ (ಸಿ.ಎ) ನಿವೇಶನಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಕಾನೂನು ಬಾಹಿರವಾಗಿ ಖಾಸಗಿ ವ್ಯಕ್ತಿಗಳಿಗೆ ಹಂಚಿಕೆ ಮಾಡಿದೆ' ಎಂದು ಆಕ್ಷೇಪಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಿಲೇವಾರಿ ಮಾಡಿದೆ.

ಈ ಸಂಬಂಧ ದಿನೇಶ್ ಕಲ್ಲಹಳ್ಳಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ಆಲಿಸಿದ ನ್ಯಾಯಪೀಠ, 'ಅರ್ಜಿದಾರರಿಗೆ ಇದರಿಂದ ವೈಯಕ್ತಿಕ ಸಮಸ್ಯೆ ಏನಾಗಿದೆ' ಎಂದು ಪ್ರಶ್ನಿಸಿತಲ್ಲದೆ, 'ಇದೊಂದು ಸಾರ್ವಜನಿಕ ಹಿತಾಸಕ್ತಿ ವಿಚಾರ ಒಳಗೊಂಡ ಅರ್ಜಿಯಾಗಿದ್ದು ಪರಿಹಾರ ಕೋರಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಬಹುದು' ಎಂದು ಸೂಚಿಸಿ ವಿಲೇವಾರಿ ಮಾಡಿತು.

ಕೋರಿಕೆ: 'ಸಿ.ಎ ನಿವೇಶನಗಳನ್ನು ಕೆಐಎಡಿಬಿ ಖಾಸಗಿ ವ್ಯಕ್ತಿಗಳಿಗೆ ಹಂಚಿಕೆ ಮಾಡುತ್ತಿರುವುದನ್ನು ಆಕ್ಷೇಪಿಸಿರುವ ಮನವಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಚಿಟಿಕೆ ಸುದ್ದಿ

ವಿಭೂತಿಪುರ ಮಠದ ಪ್ರಶಸ್ತಿಗೆ ಆಯ್ಕೆ

ಬೆಂಗಳೂರು: ನಗರದ ವಿಭೂತಿಪುರ ಸಂಸ್ಥಾನ ಮಠವು ನೀಡುವ 2025ನೇ ಸಾಲಿನ ಸುವರ್ಣಶ್ರೀ ರಾಷ್ಟ್ರೀಯ ಪ್ರಶಸ್ತಿ ಹಾಗೂ ಜಾನಪದ ವಿಭೂತಿ ರಾಷ್ಟ್ರೀಯ ಪ್ರಶಸ್ತಿಗೆ ಇಬ್ಬರನ್ನು ಆಯ್ಕೆ ಮಾಡಲಾಗಿದೆ.

ಬೆಂಗಳೂರು ಗಾಂಧಿಭವನದ ಅಧ್ಯಕ್ಷರಾದ ವೂಡೇ ಪಿ.ಕೃಷ್ಣ ಅವರನ್ನು 'ಸುವರ್ಣಶ್ರೀ ರಾಷ್ಟ್ರೀಯ ಪ್ರಶಸ್ತಿ'ಗೆ ಹಾಗೂ ಗದಗ ಜಿಲ್ಲೆ ರೋಣ ತಾಲ್ಲೂಕು ಕೊತಬಾಳ ಗ್ರಾಮದ ಜೋಗತಿ ನೃತ್ಯ ಕಲಾವಿದ ರಾಚಯ್ಯ ವೀರಭದ್ರಯ್ಯ ಮುಧೋಳ ಅವರನ್ನು 'ಜಾನಪದ ವಿಭೂತಿ ರಾಷ್ಟ್ರೀಯ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ.

ವೂಡೇ ಪಿ.ಕೃಷ್ಣ

ರಾಚಯ್ಯ ವೀರಭದ್ರಯ್ಯ

ಸುವರ್ಣಶ್ರೀ ರಾಷ್ಟ್ರೀಯ ಪ್ರಶಸ್ತಿಯು ₹50 ಸಾವಿರ, ಫಲಕವನ್ನು ಒಳಗೊಂಡಿದೆ. ನ.17ರಂದು ಮಠದಲ್ಲಿ ನಡೆಯುವ ವೀರಭದ್ರ ಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಪ್ರದಾನ ಮಾಡಲಾಗುತ್ತದೆ.

ಜಾನಪದ ವಿಭೂತಿ ರಾಷ್ಟ್ರೀಯ ಪ್ರಶಸ್ತಿಯು ₹25 ಸಾವಿರ ನಗದು, ಫಲಕ ಒಳಗೊಂಡಿದೆ. ನ.16ರಂದು ಮಠದಲ್ಲಿ ನಡೆಯುವ ಜಾನಪದೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ವಿಭೂತಿಪುರ ಸಂಸ್ಥಾನ ಮಠದ ಕಾರ್ಯದರ್ಶಿ ಸಿ.ಬಸವರಾಜು ಅವರು ತಿಳಿಸಿದ್ದಾರೆ.

ಸಾಂಸ್ಕೃತಿಕ ಮುನ್ನೋಟ

ಹಿಂದೂಸ್ತಾನಿ ಸಂಗೀತ ಜುಗಲ್‌ಬಂದಿ


ನಾಗರಾಜ್ ರಾವ್ ಹವಾಲ್ದಾರ್

ಬೆಂಗಳೂರು: ಬನಶಂಕರಿ 2ನೇ ಹಂತದಲ್ಲಿರುವ ಶ್ರೀರಾಮ ಲಲಿತ ಕಲಾ ಮಂದಿರವು ತನ್ನ ಕೇಂದ್ರದಲ್ಲಿ ಇದೇ 8ರಂದು ಸಂಜೆ 5 ಗಂಟೆಗೆ ಹಿಂದೂಸ್ತಾನಿ ಸಂಗೀತ ಜುಗಲ್‌ಬಂದಿ ಹಮ್ಮಿಕೊಂಡಿದೆ.

ಗಾಯನದಲ್ಲಿ ನಾಗರಾಜ್ ರಾವ್ ಹವಾಲ್ದಾರ್, ಓಂಕಾರನಾಥ್ ಹವಾಲ್ದಾರ್ ಭಾಗವಹಿಸಲಿದ್ದಾರೆ. ಹಾರ್ಮೋನಿಯಂನಲ್ಲಿ ಸಮೀರ್ ಹವಾಲ್ದಾರ್ ಮತ್ತು ತಬಲಾದಲ್ಲಿ ಕೇದಾರನಾಥ್ ಹವಾಲ್ದಾರ್ ಸಾಥ್ ನೀಡಲಿದ್ದಾರೆ.

ಸಿಂಧೂರ ನಮನ

ಬೆಂಗಳೂರು: ಶ್ರೀ ಅಕಾಡೆಮಿ ಆಫ್ ಮ್ಯೂಸಿಕ್ ಆ್ಯಂಡ್ ಆರ್ಟ್ಸ್ ಸಂಸ್ಥೆಯು 'ಆಪರೇಷನ್ ಸಿಂಧೂರ' ಸ್ಮರಣಾರ್ಥ ಇದೇ 8 ಮತ್ತು 9ರಂದು 'ಸಿಂಧೂರ ನಮನ' ಶೀರ್ಷಿಕೆಯಡಿ ಕಲಾವಿದರಿಗೆ ಸನ್ಮಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಂಡಿದೆ.

ಜಯನಗರದ 8ನೇ ಬ್ಲಾಕ್‌ನಲ್ಲಿರುವ ಜಯರಾಮ ಸೇವಾ ಮಂಡಳಿಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ. 8ರಂದು ಬೆಳಿಗ್ಗೆ 9ಕ್ಕೆ ಶಾಸ್ತ್ರೀಯ ಸಂಗೀತ ಕಛೇರಿ ನಡೆಯಲಿದೆ. ಮಾಲಿನಿ ಸುಬ್ರಹ್ಮಣ್ಯ (ಗಾಯನ), ಸಿ.ವಿ. ಶೃತಿ (ಪಿಟೀಲು), ನರಸಿಂಹನ್ ಆರ್. (ಮೃದಂಗ), ಫಣೀಂದ್ರ ಎನ್. (ಘಟ) ಭಾಗವಹಿಸುತ್ತಾರೆ. ಮೊದಲ ದಿನ ನಾಲ್ಕು ಸಂಗೀತ ಕಛೇರಿಗಳು ನಡೆಯಲಿವೆ.

9ರಂದು ಬೆಳಿಗ್ಗೆ 8.30ರಿಂದ ಕಾರ್ಯಕ್ರಮಗಳು ಪ್ರಾರಂಭವಾಗಲಿದ್ದು, ಇಡೀ ದಿನ ನಡೆಯಲಿವೆ. ಎರಡು ದಿನಗಳ ಈ ಕಾರ್ಯಕ್ರಮದಲ್ಲಿ ಸಂಗೀತ ಕಛೇರಿ, ವೇದ ಪಾರಾಯಣ, ಹಾಸ್ಯ ಸಂವಾದ, ನೃತ್ಯ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಅಲ್ಲದೇ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಸನ್ಮಾನಿಸಲಾಗುತ್ತದೆ.

'ಶಬರಾರ್ಜುನ' ಯಕ್ಷಗಾನ

ಬೆಂಗಳೂರು: ಹುಕ್ಲಮಕ್ಕಿಯ ಸಿದ್ಧಿವಿನಾಯಕ ದುರ್ಗಾಂಬಾ ಯಕ್ಷಗಾನ ಮಿತ್ರಮಂಡಳಿಯು ಮೇಳದ ಶತಮಾನೋತ್ಸವ ಸಂಭ್ರಮದ ಅಂಗವಾಗಿ ಆನಂದರಾವ್ ವೃತ್ತದಲ್ಲಿರುವ ಕವಿಪ್ರನಿನಿ ಲೆಕ್ಕಾಧಿಕಾರಿ ಸಂಘದಲ್ಲಿ ಇದೇ 8ರಂದು ಸಂಜೆ 4 ಗಂಟೆಗೆ 'ಶಬರಾರ್ಜುನ' ಯಕ್ಷಗಾನ ಪ್ರದರ್ಶನ ಹಮ್ಮಿಕೊಂಡಿದೆ.

ಹಿಮ್ಮೇಳದಲ್ಲಿ ಪ್ರಸನ್ನ ಹೆಗಡೆ, ನಂದನ ಹೆಗಡೆ ದಂಟ್ಕಲ್, ನಾರಾಯಣ ಹೆಬ್ಬಾರ, ಅಮೃತದೇವ ಪಾಲ್ಗೊಳ್ಳಲಿದ್ದಾರೆ. ಮುಮ್ಮೇಳದಲ್ಲಿ ಶ್ರೀಪಾದ ಹೆಗಡೆ ಶುಂಠಿ, ರಾಧಾಕೃಷ್ಣ ಬೆಳಿಯೂರು, ರವಿ ಮಡೋಡಿ, ಆದಿತ್ಯ ಹಲ್ಕೋಡ, ಕಾರ್ತಿಕ್ ದಂಡ್ಕಲ್ ಹಾಗೂ ಅವಿನಾಶ್ ಭಾಗವಹಿಸಲಿದ್ದಾರೆ. ಪ್ರವೇಶ ಉಚಿತ ಇರಲಿದೆ.

ನೃತ್ಯ ರೂಪಕ ಪ್ರದರ್ಶನ

ಬೆಂಗಳೂರು: ಕಲಾಕ್ಷಿತಿ ಕಲಾ ಸಂಸ್ಥೆಯು ಇದೇ 7ರಂದು ಸಂಜೆ 5.30ಕ್ಕೆ ಜಯನಗರದ ಜೆ.ಎಸ್.ಎಸ್. ಸಭಾಂಗಣದಲ್ಲಿ 'ಚಿತ್ರಕೂಟೇ ಧರ್ಮವೈಭವಂ' ನೃತ್ಯರೂಪಕ ಪ್ರದರ್ಶನ ಹಮ್ಮಿಕೊಂಡಿದೆ.

ಇದು ವಾಲ್ಮೀಕಿ ರಾಮಾಯಣ ಆಧರಿಸಿದ್ದು, ಎಂ.ಆರ್. ಕೃಷ್ಣಮೂರ್ತಿ ಮತ್ತು ಎ. ಜನಾರ್ದನನ್ ಅವರು ನಿರ್ದೇಶಿಸಿದ್ದಾರೆ. ಕೆ. ಹರಿಪ್ರಸಾದ್ ಅವರು ಸಂಗೀತ ಸಂಯೋಜಿಸಿದ್ದಾರೆ.

ಕಾರ್ತಿಕ ಸಂಗೀತ ಸಂಭ್ರಮ

ಬೆಂಗಳೂರು: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಶ್ರೀರಾಮ ಮಂದಿರದಲ್ಲಿ ಕಾರ್ತಿಕ ಸಂಗೀತ ಸಂಭ್ರಮ, ಕನಕದಾಸರ ಜಯಂತಿ, ಕರ್ನಾಟಕ ರಾಜ್ಯೋತ್ಸವ, ಹರಿದಾಸ ಸಂಭ್ರಮ ಮತ್ತು ಅನ್ನಮಾಚಾರ್ಯರ ಸಂಸ್ಮರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಇದೇ 7ರಂದು ಸಂಜೆ 6 ಗಂಟೆಗೆ ಎಸ್.ಸಿ. ಶರ್ಮ ಅವರಿಂದ ಗಾಯನ ನಡೆಯಲಿದೆ. ಅನಂತ ಪದ್ಮನಾಭ (ಪಿಟೀಲು), ಸಿ. ಚೆಲುವರಾಜ್ (ಮೃದಂಗ), ಎನ್. ಗುರುಮೂರ್ತಿ (ಘಟ) ಹಾಗೂ ಮೇಲುಕೋಟೆ ಶ್ರೀನಿವಾಸ್ (ಮೋರ್ಸಿಂಗ್) ಅವರು ಸಾಥ್ ನೀಡಲಿದ್ದಾರೆ. 8ರಂದು ಪ್ರಗಲ್ಭ ಆರ್.ಎಸ್. ಅವರಿಂದ ಗಾಯನ ನಡೆಯಲಿದ್ದು, ಕಶ್ಯಪ್ ಶಂಕರ್ (ಸಹ ಗಾಯನ), ವಿಭುದೇಂದ್ರ ಸಿಂಹ ಜಿ.ಜಿ. (ಪಿಟೀಲು) ಹಾಗೂ ನಿಶ್ಚಿತ್ ಟಿ.ಆರ್. (ಮೃದಂಗ) ಪಾಲ್ಗೊಳ್ಳಲಿದ್ದಾರೆ.

9ರಂದು ಸಂಜೆ 5 ಗಂಟೆಯಿಂದ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಅವರು ಹರಿದಾಸ ರೂಪಕವನ್ನು ನಿರೂಪಿಸಲಿದ್ದಾರೆ. ಬಳಿಕ ಅಂಜಲಿ ಶ್ರೀರಾಮ್ ಅವರಿಂದ ಗಾಯನ ನಡೆಯಲಿದೆ. ಆರ್. ಅಚ್ಯುತರಾವ್ (ಪಿಟೀಲು), ಎಸ್.ಪಿ. ನಾಗೇಂದ್ರ ಪ್ರಸಾದ್ (ಮೃದಂಗ) ಸಾಥ್ ನೀಡಲಿದ್ದಾರೆ.

ಕೆ.ಕೆ.ಮೂರ್ತಿ ಸ್ಮಾರಕ ಸಂಗೀತೋತ್ಸವ

ಎಲ್.ಸುಬ್ರಮಣ್ಯಂ

ಬೆಂಗಳೂರು: ಅಕಾಡೆಮಿ ಆಫ್ ಮ್ಯೂಸಿಕ್ ಚೌಡಯ್ಯ ಸ್ಮಾರಕ ಭವನದಲ್ಲಿ ಕೆ.ಕೆ.ಮೂರ್ತಿ ಸ್ಮಾರಕ ಸಂಗೀತ ಉತ್ಸವ ಹಮ್ಮಿಕೊಂಡಿದೆ.

ಇದೇ ಶುಕ್ರವಾರ ಸಂಜೆ 7 ಗಂಟೆಗೆ ವಿಶಾಖಾ ಹರಿ ಅವರಿಂದ ಸಂಗೀತ ತ್ರಿಮೂರ್ತಿಗಳ ಬಗ್ಗೆ ಹರಿಕಥೆ ನಡೆಯಲಿದೆ. ಶನಿವಾರ ಸಂಜೆ 7 ಗಂಟೆಗೆ ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಸುರೇಶ್ ಬಾಪಟ್, ನೂಪುರ್ ಗಾಡ್ಗಿಲ್, ಅನುಜಾ ಜೊಕಾರ್ಕರ್, ಕೇದಾರ್ ಕೆಲ್ಕರ್ ಪಾಲ್ಗೊಳ್ಳಲಿದ್ದಾರೆ. ಭಾನುವಾರ ಸಂಜೆ 6 ಗಂಟೆಯಿಂದ ಪ್ರಶಸ್ತಿ ಪ್ರದಾನ ಹಾಗೂ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಎಲ್. ಸುಬ್ರಮಣ್ಯಂ ಮತ್ತು ತಂಡದಿಂದ ಸಂಗೀತ ಕಛೇರಿ ನಡೆಯಲಿದೆ.

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ಕೆರೆಗಳಿಗೆ ಸಂಸ್ಕರಿಸದ ನೀರು ಅಪಾಯ: ಮಂಜುನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರಿನ ಕೊಳಚೆ ನೀರನ್ನು ಸರಿಯಾಗಿ ಸಂಸ್ಕರಿಸದೇ ಕೋಲಾರ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಆನೇಕಲ್ ಭಾಗದ ಕೆರೆಗಳಿಗೆ ಹರಿಸುತ್ತಿರುವುದರಿಂದ ಮಾಲಿನ್ಯದ ಜತೆಗೆ ಆ ಭಾಗದ ಜನರಲ್ಲಿ ರೋಗಗಳಿಗೆ ದಾರಿ ಮಾಡಿಕೊಡಲಿದೆ' ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್.ಮಂಜುನಾಥ್ ಕಳವಳ ವ್ಯಕ್ತಪಡಿಸಿದರು.

ಗ್ರೀನ್ ಸ್ಕಿಲ್ಸ್ ಅಕಾಡೆಮಿ ಹಾಗೂ ಸೆಂಟರ್ ಫಾರ್ ಸಸ್ಟೇನಬಲ್ ಡೆವಲಪ್‌ಮೆಂಟ್ (ಸಿಎಸ್‌ಡಿ) ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 3ನೇ ವಾರ್ಷಿಕ ಸುಸ್ಥಿರ ನಾಯಕತ್ವ ಶೃಂಗಸಭೆಯಲ್ಲಿ ಅವರು ಮಾತನಾಡಿದರು.

'ಕೊಳಚೆ ನೀರನ್ನು ಸಂಪೂರ್ಣ ಸಂಸ್ಕರಣೆ ಮಾಡಿದ ಬಳಿಕವೇ ಕೆರೆಗಳಿಗೆ ಇಲ್ಲವೇ ಅಂತರ್ಜಲ ವೃದ್ಧಿಗೆ ಬಳಸಬೇಕು ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ನಿಯಮ ರೂಪಿಸಿದೆ. ಆದರೆ, ಸರಿಯಾಗಿ ಸಂಸ್ಕರಣೆ ಮಾಡದೇ ನೀರು ಹರಿಸುತ್ತಿರುವ ಬಗ್ಗೆ ದೂರುಗಳು ಕೇಳಿ ಬರುತ್ತಿವೆ. ಈ ಭಾಗದಲ್ಲಿ ನೀರಿನ ರುಚಿ, ವಾಸನೆ ಕೂಡ ಭಿನ್ನವಾಗಿದೆ. ಎಳನೀರು ಕೂಡ ಭಿನ್ನರುಚಿಗೆ ತಿರುಗಿದೆ. ಇದರ ಬಳಕೆ ಕ್ಯಾನ್ಸರ್, ಚರ್ಮರೋಗ ಉಲ್ಬಣಕ್ಕೂ ದಾರಿ ಮಾಡಿಕೊಡಬಹುದು' ಎಂದು ಹೇಳಿದರು.

'ನಗರ ಪ್ರದೇಶಗಳಲ್ಲಿ ಮಾಲಿನ್ಯ ಪ್ರಮಾಣ ಮಿತಿ ಮೀರುತ್ತಿದೆ. ಅತಿಯಾದ ಕಾಮಗಾರಿ, ವಾಹನಗಳ ದಟ್ಟಣೆ, ಹಸಿರು ಪ್ರಮಾಣದಲ್ಲಿ ಇಳಿಕೆಯಿಂದಾಗಿ ಮಾಲಿನ್ಯ ಹೆಚ್ಚಿ ಇದರ ಪರಿಣಾಮ ಜನರ ಮೇಲೆ ಬೀರುತ್ತಿದೆ. ದೂಳಿನ ಕಣಗಳು ದೇಹದೊಳಕ್ಕೆ ಸೇರಿ ಹೃದಯಾಘಾತ, ಪಾರ್ಶ್ವವಾಯು, ಶ್ವಾಸಕೋಶ ಸಂಬಂಧಿ ಕಾಯಿಲೆಗಳ ಹೆಚ್ಚಳಕ್ಕೂ ದಾರಿ ಮಾಡಿಕೊಡುತ್ತಿದೆ' ಎಂದರು.

'ಪ್ರತಿಯೊಬ್ಬರೂ ಶುದ್ಧ ಆಹಾರ, ಗಾಳಿ, ನೀರು ಪಡೆಯಲೇಬೇಕು. ಆಗ ಮಾತ್ರ ಆರೋಗ್ಯಯುತ ಜೀವನ ನಡೆಸಲು ಸಾಧ್ಯವಿದೆ. ನವೀಕರಿಸಬಹುದಾದ ಇಂಧನ ಉತ್ಪಾದನೆಗೆ ಕೇಂದ್ರ ಸರ್ಕಾರ ಕಳೆದ ಬಜೆಟ್‌ನಲ್ಲಿ ₹26,500 ಕೋಟಿ ಮೀಸಲಿರಿಸಿದೆ. ಚೀನಾದಂತೆ ಭಾರತದಲ್ಲಿ ಕೂಡ ಇದಕ್ಕಾಗಿ ಸ್ಪಷ್ಟವಾದ ನೀತಿ ಜಾರಿ ಮಾಡಬೇಕು' ಎಂದು ಸಲಹೆ ನೀಡಿದರು.

ನಿವೃತ್ತ ಮುಖ್ಯ ಕಾರ್ಯದರ್ಶಿ ಎ.ರವೀಂದ್ರ ಮಾತನಾಡಿ, 'ಇಂದಿನ ಯುವ ಪೀಳಿಗೆ ಮಾತ್ರವಲ್ಲದೇ ಮುಂದಿನ ಪೀಳಿಗೆಗೆ ಶುದ್ಧ ಗಾಳಿ, ನೀರು ಮತ್ತು ಆಹಾರ ನೀಡಲು ಸಾಮೂಹಿಕ ಪ್ರಯತ್ನ ಅತ್ಯಗತ್ಯ' ಎಂದರು.

ನಿವೃತ್ತ ಐಎಎಸ್ ಅಧಿಕಾರಿಗಳಾದ ಉಪೇಂದ್ರ ತ್ರಿಪಾಠಿ, ಕೆ.ಜೈರಾಜ್, ಸಿಎಸ್‌ಡಿ ನಿರ್ದೇಶಕ ಆರ್.ಶ್ರೀನಿವಾಸ್ ಹಾಜರಿದ್ದರು. ಬಳಿಕ ಸುಸ್ಥಿರ ಅಭಿವೃದ್ಧಿ ಸಾಧಿಸಲು ಹೊಸ ತಂತ್ರಜ್ಞಾನ ಹಾಗೂ ವಿನೂತನ ಆವಿಷ್ಕಾರಗಳ ಅಳವಡಿಕೆ ಕುರಿತು ಸಂವಾದ ನಡೆಯಿತು.


ಶೃಂಗಸಭೆಯಲ್ಲಿ ಸಿಎಸ್‌ಡಿ ಅಧ್ಯಕ್ಷ ಎ.ರವೀಂದ್ರ ಮತ್ತು ಸಂಸದ ಡಾ.ಸಿ.ಎನ್. ಮಂಜುನಾಥ್ ಸಮಾಲೋಚನೆಯಲ್ಲಿ ತೊಡಗಿದ್ದರು. ಉಪೇಂದ್ರ ತ್ರಿಪಾಠಿ, ಶ್ರೀನಿವಾಸುಲು ಮತ್ತು ಜೈರಾಜ್ ಇದ್ದರು. ಪ್ರಜಾವಾಣಿ ಚಿತ್ರ

ಅರಣ್ಯ ನಾಶ ತಗ್ಗಿಸಿ: ಶ್ರೀನಿವಾಸುಲು

ಪರಿಸರ ಇಲಾಖೆ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸುಲು ಮಾತನಾಡಿ, 'ಅರಣ್ಯದ ನಾಶ ಮಾತ್ರ ನಿರಂತರವಾಗಿ ನಡೆದೇ ಇದೆ. ಆಯುರ್ವೇದಕ್ಕೆ ಬೇಕಾದ ವಸ್ತುಗಳಿಗೆ ಅರಣ್ಯವೇ ಮೂಲವಾಗಿರುವಾಗ ಅರಣ್ಯ ನಾಶ ಮಾಡುವುದರಿಂದ ನಮ್ಮ ಆರೋಗ್ಯದ ಮೇಲೂ ಪರೋಕ್ಷವಾಗಿ ಪರಿಣಾಮ ಬೀರಲಿದೆ' ಎಂದು ಎಚ್ಚರಿಸಿದರು.

'ಕೋವಿಡ್ ನಂತರವಂತೂ ಪ್ರವಾಸೋದ್ಯಮ ಹೆಚ್ಚು ಬೆಳೆಯುತ್ತಿರುವುದು ಪರಿಸರದ ಮೇಲೆ ಪರಿಣಾಮ ಬೀರುತ್ತಿದೆ' ಎಂದರು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, ಈ ಕೆಳಕಂಡ **'ಷೆಡ್ಯೂಲ್'** ನಲ್ಲಿ ವಿವರವಾಗಿ ವಿವರಿಸಿರುವ ಮತ್ತು ಇದನ್ನು ಇನ್ನು ಮುಂದೆ **"ಷೆಡ್ಯೂಲ್ ಸ್ವತ್ತುಗಳು"** ಎಂದು ಕರೆಯಲ್ಪಡುವ, ಸದರಿ ಸ್ವತ್ತುಗಳ ಪ್ರಸ್ತುತ ಮಾಲೀಕರಾದ **ಶ್ರೀ ಪಿ. ವಿ. ಮಥಾಯಿ ಬಿನ್ ಶ್ರೀ ಪಿ. ಯು. ವರ್ಗೀಸ್** (ಇನ್ನು ಮುಂದೆ **'ಮಾಲೀಕರು'** ಎಂದು ಕರೆಯಲ್ಪಡುವ) ಇವರೊಂದಿಗೆ ಈ ಸ್ಥಿರಾಸ್ತಿ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹಾರ ನಡೆಸಲು ಅಪೇಕ್ಷಿಸಿರುತ್ತಾರೆ, ಹಾಗೂ ಇವರ ಮಾಲೀಕತ್ವದ ಹಕ್ಕನ್ನು ಪರೀಶೀಲನೆ ನಡೆಸಲು ಇಚ್ಛಿಸಿರುತ್ತಾರೆ. ಮತ್ತು ಮಾಲೀಕರು ತಾವುಗಳೇ ಷೆಡ್ಯೂಲ್ ಸ್ವತ್ತಿಗೆ ಏಕಮೇವ ಮಾಲೀಕರೆಂದು ಹಾಗೂ ಷೆಡ್ಯೂಲ್ ಸ್ವತ್ತುಗಳ ಮಾರಾಟ ಮಾಡುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತಾರೆ ಎಂಬುದಾಗಿ ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಷೆಡ್ಯೂಲ್ ಸ್ವತ್ತುಗಳ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಋಣಬಾಧ್ಯತೆ, ಹೊಣೆಗಾರಿಕೆ, ಕ್ಲೇಮ್‌ಗಳು ಅಥವಾ ಷೆಡ್ಯೂಲ್ ಸ್ವತ್ತುಗಳ ಬಗ್ಗೆ ಆಸಕ್ತಿಯನ್ನು ಹೊಂದಿದ್ದಲ್ಲಿ, ಅಥವಾ ಯಾವುದೇ ಸ್ವರೂಪದ ಷೆಡ್ಯೂಲ್ ಸ್ವತ್ತುಗಳ ಮೇಲೆ ಯಾವುದೇ ಕ್ಲೇಮುಗಳನ್ನು ಅಥವಾ ಈ ಮೇಲೆ ತಿಳಿಸಿರುವ ವ್ಯವಹಾರಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಹೊಂದಿದ್ದರೆ, ಅಂತಹ ಕ್ಲೇಮುಗಳನ್ನು ಅಥವಾ ಆಕ್ಷೇಪಣೆಗಳನ್ನು ಸೂಕ್ತ ಸಾಕ್ಷಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ **10 (ಹತ್ತು)** ದಿನಗಳ ಕಾಲಾವಧಿಯ ಒಳಗೆ ಈ ಕೆಳಕಂಡ ವಿಳಾಸಕ್ಕೆ ತಲುಪಿಸಬೇಕೆಂದು ಈ ಮೂಲಕ ಕರೆ ನೀಡಲಾಗಿದೆ. ತಿಳಿಸಿದ ಅವಧಿಯೊಳಗೆ ಯಾವುದೇ ಕ್ಲೇಮುಗಳು ಅಥವಾ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ, ಮೇಲೆ ತಿಳಿಸಿರುವ ಮಾಲೀಕರನ್ನು ಹೊರತುಪಡಿಸಿ ಮತ್ತಾರೂ ಕೂಡ ಷೆಡ್ಯೂಲ್ ಸ್ವತ್ತುಗಳ ಮೇಲೆ ಹಕ್ಕು, ಋಣಬಾಧ್ಯತೆ, ಹಿತಾಸಕ್ತಿ ಅಥವಾ ಕ್ಲೇಮುಗಳನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತುಗಳ ಮೇಲೆ ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.

ಷೆಡ್ಯೂಲ್

(ಷೆಡ್ಯೂಲ್ ಸ್ವತ್ತುಗಳ ವಿವರಣೆ)

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡತೋಗೂರು ಗ್ರಾಮದಲ್ಲಿರುವ ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತಿತವಾಗಿರುವ ಸ್ಥಿರಾಸ್ತಿ ಸ್ವತ್ತುಗಳ ಒಟ್ಟಾರೆ ವಿಸ್ತೀರ್ಣ 14 ಎಕರೆ 03 ಗುಂಟೆಗಳು (3½ ಗುಂಟೆ ಖರಾಬ್ ಜಮೀನನ್ನು ಹೊರತುಪಡಿಸಿ), ಈ ಸ್ಥಿರಾಸ್ತಿ ಸ್ವತ್ತುಗಳನ್ನು ಈ ಕೆಳಕಂಡ ಟೇಬಲ್‌ನಲ್ಲಿ ವಿವರವಾಗಿ ವಿವರಿಸಲಾಗಿದೆ.

ಕ್ರಮ ಸಂಖ್ಯೆ	ಸರ್ವೆ ನಂ.	ವಿಸ್ತೀರ್ಣ ('ಬಿ' ಖರಾಬ್ ಜಮೀನನ್ನು ಹೊರತುಪಡಿಸಿ)	ಪರಿವರ್ತನೆಗೊಂಡಿರುವ ಉದ್ದೇಶ	ಚಕ್ಕುಬಂದಿ	
1.	87/1	2 ಎಕರೆಗಳು	ವಸತಿ	ಪೂರ್ವಕ್ಕೆ	ಸರ್ವೆ ನಂ. 81ರ ಜಮೀನು;
				ಪಶ್ಚಿಮಕ್ಕೆ	ಸರ್ವೆ ನಂ. 88ರ ಜಮೀನು;
				ಉತ್ತರಕ್ಕೆ	ಸರ್ವೆ ನಂ. 80ರ ಜಮೀನು; ಮತ್ತು
				ದಕ್ಷಿಣಕ್ಕೆ	ಸರ್ವೆ ನಂ. 87/2, 87/4, 87/5, 87/6, 87/7 ಮತ್ತು 87/8ರ ಜಮೀನುಗಳು.
2.	87/2	18 ¾ ಗುಂಟೆಗಳು	ಕೈಗಾರಿಕೆ	ಪೂರ್ವಕ್ಕೆ	ಸರ್ವೆ ನಂ. 87/4ರ ಜಮೀನು;
				ಪಶ್ಚಿಮಕ್ಕೆ	ಸರ್ವೆ ನಂ. 88 ರ ಜಮೀನು;
				ಉತ್ತರಕ್ಕೆ	ಸರ್ವೆ ನಂ. 87/1ರ ಜಮೀನು; ಮತ್ತು
				ದಕ್ಷಿಣಕ್ಕೆ	ಸರ್ವೆ ನಂ. 87/3ರ ಜಮೀನು.
3.	87/4 (ಹಿಂದೆ ಸರ್ವೆ ನಂ.87/2ರ ಭಾಗವಾಗಿರುತ್ತದೆ)	18 ¾ ಗುಂಟೆಗಳು	ಕೈಗಾರಿಕೆ	ಪೂರ್ವಕ್ಕೆ	ಸರ್ವೆ ನಂ. 87/5 ರ ಜಮೀನು;
				ಪಶ್ಚಿಮಕ್ಕೆ	ಸರ್ವೆ ನಂ. 87/2 ರ ಜಮೀನು;
				ಉತ್ತರಕ್ಕೆ	ಸರ್ವೆ ನಂ. 87/1ರ ಜಮೀನು; ಮತ್ತು
				ದಕ್ಷಿಣಕ್ಕೆ	ಸರ್ವೆ ನಂ. 87/3ರ ಜಮೀನು.
4.	87/5 (ಹಿಂದೆ ಸರ್ವೆ ನಂ.87/2ರ ಭಾಗವಾಗಿರುತ್ತದೆ)	18 ¾ ಗುಂಟೆಗಳು	ಕೈಗಾರಿಕೆ	ಪೂರ್ವಕ್ಕೆ	ಸರ್ವೆ ನಂ. 87/6 ರ ಜಮೀನು;
				ಪಶ್ಚಿಮಕ್ಕೆ	ಸರ್ವೆ ನಂ. 87/4 ರ ಜಮೀನು;
				ಉತ್ತರಕ್ಕೆ	ಸರ್ವೆ ನಂ. 87/1ರ ಜಮೀನು; ಮತ್ತು
				ದಕ್ಷಿಣಕ್ಕೆ	ಸರ್ವೆ ನಂ. 87/3ರ ಜಮೀನು.
5.	87/6 (ಹಿಂದೆ ಸರ್ವೆ ನಂ.87/2ರ ಭಾಗವಾಗಿರುತ್ತದೆ)	18 ½ ಗುಂಟೆಗಳು	ಕೈಗಾರಿಕೆ	ಪೂರ್ವಕ್ಕೆ	ಸರ್ವೆ ನಂ. 87/7 ರ ಜಮೀನು;
				ಪಶ್ಚಿಮಕ್ಕೆ	ಸರ್ವೆ ನಂ. 87/5 ರ ಜಮೀನು;
				ಉತ್ತರಕ್ಕೆ	ಸರ್ವೆ ನಂ. 87/1ರ ಜಮೀನು; ಮತ್ತು
				ದಕ್ಷಿಣಕ್ಕೆ	ಸರ್ವೆ ನಂ. 87/3ರ ಜಮೀನು.
6.	87/7 (ಹಿಂದೆ ಸರ್ವೆ ನಂ.87/2ರ ಭಾಗವಾಗಿರುತ್ತದೆ)	18 ¾ ಗುಂಟೆಗಳು	ಕೈಗಾರಿಕೆ	ಪೂರ್ವಕ್ಕೆ	ಸರ್ವೆ ನಂ. 87/8 ರ ಜಮೀನು;
				ಪಶ್ಚಿಮಕ್ಕೆ	ಸರ್ವೆ ನಂ. 87/6 ರ ಜಮೀನು;
				ಉತ್ತರಕ್ಕೆ	ಸರ್ವೆ ನಂ. 87/1ರ ಜಮೀನು; ಮತ್ತು
				ದಕ್ಷಿಣಕ್ಕೆ	ಸರ್ವೆ ನಂ. 87/9 ರ ಜಮೀನು.
7.	87/8 (ಹಿಂದೆ ಸರ್ವೆ ನಂ.87/2ರ ಭಾಗವಾಗಿರುತ್ತದೆ)	18 ½ ಗುಂಟೆಗಳು	ಕೈಗಾರಿಕೆ	ಪೂರ್ವಕ್ಕೆ	ಸರ್ವೆ ನಂ. 81 ರ ಜಮೀನು;
				ಪಶ್ಚಿಮಕ್ಕೆ	ಸರ್ವೆ ನಂ. 87/7 ರ ಜಮೀನು;
				ಉತ್ತರಕ್ಕೆ	ಸರ್ವೆ ನಂ. 87/1ರ ಜಮೀನು; ಮತ್ತು
				ದಕ್ಷಿಣಕ್ಕೆ	ಸರ್ವೆ ನಂ. 87/9 ರ ಜಮೀನು.
8.	88/1	1 ಎಕರೆ 35 ಗುಂಟೆಗಳು (1 ಗುಂಟೆ 'ಬಿ' ಖರಾಬ್ ಜಮೀನನ್ನು ಹೊರತುಪಡಿಸಿ)	ವಸತಿ	ಪೂರ್ವಕ್ಕೆ	ಸರ್ವೆ ನಂ. 88/2 ಮತ್ತು 88/4ರ ಜಮೀನುಗಳು;
				ಪಶ್ಚಿಮಕ್ಕೆ	ಸರ್ವೆ ನಂ. 156 ರ ಜಮೀನು;
				ಉತ್ತರಕ್ಕೆ	ಸರ್ವೆ ನಂ. 89/2ಎ ರ ಜಮೀನು; ಮತ್ತು
				ದಕ್ಷಿಣಕ್ಕೆ	ಸರ್ವೆ ನಂ. 101 ರ ಜಮೀನು.
9.	88/2	16 ಗುಂಟೆಗಳು	ವಸತಿ	ಪೂರ್ವಕ್ಕೆ	ಸರ್ವೆ ನಂ. 87 ರ ಜಮೀನು;
				ಪಶ್ಚಿಮಕ್ಕೆ	ಸರ್ವೆ ನಂ. 88/1 ರ ಜಮೀನು;
				ಉತ್ತರಕ್ಕೆ	ಸರ್ವೆ ನಂ. 89/2ಬಿ ರ ಜಮೀನು; ಮತ್ತು
				ದಕ್ಷಿಣಕ್ಕೆ	ಸರ್ವೆ ನಂ. 88/3 ಮತ್ತು 88/4ರ ಜಮೀನು.
10.	88/3	1 ಎಕರೆ 12 ಗುಂಟೆಗಳು (½ ಗುಂಟೆ 'ಬಿ' ಖರಾಬ್ ಜಮೀನನ್ನು ಹೊರತುಪಡಿಸಿ)	ವಸತಿ	ಪೂರ್ವಕ್ಕೆ	ಸರ್ವೆ ನಂ. 87 ರ ಜಮೀನು;
				ಪಶ್ಚಿಮಕ್ಕೆ	ಸರ್ವೆ ನಂ. 88/4 ರ ಜಮೀನು;
				ಉತ್ತರಕ್ಕೆ	ಸರ್ವೆ ನಂ. 88/2 ರ ಜಮೀನು; ಮತ್ತು
				ದಕ್ಷಿಣಕ್ಕೆ	ಸರ್ವೆ ನಂ. 101 ರ ಜಮೀನು.
11.	88/4	1 ಎಕರೆ 11 ಗುಂಟೆಗಳು (½ ಗುಂಟೆ 'ಬಿ' ಖರಾಬು ಜಮೀನನ್ನು ಹೊರತುಪಡಿಸಿ)	ವಸತಿ	ಪೂರ್ವಕ್ಕೆ	ಸರ್ವೆ ನಂ. 88/3 ರ ಜಮೀನು;
				ಪಶ್ಚಿಮಕ್ಕೆ	ಸರ್ವೆ ನಂ. 88/1 ರ ಜಮೀನು;
				ಉತ್ತರಕ್ಕೆ	ಸರ್ವೆ ನಂ. 88/2 ರ ಜಮೀನು; ಮತ್ತು
				ದಕ್ಷಿಣಕ್ಕೆ	ಸರ್ವೆ ನಂ. 101 ರ ಜಮೀನು.
12.	89/1	1 ಎಕರೆ 37 ಗುಂಟೆಗಳು (ಒಟ್ಟಾರೆ 3 ಎಕರೆ 34 ಗುಂಟೆಗಳಲ್ಲಿ 1½ ಗುಂಟೆ 'ಬಿ' ಖರಾಬ್ ಜಮೀನನ್ನು ಹೊರತುಪಡಿಸಿ)	ವಸತಿ	ಪೂರ್ವಕ್ಕೆ	ಸರ್ವೆ ನಂ. 89/3 ಮತ್ತು 89/4ರ ಜಮೀನುಗಳು;
				ಪಶ್ಚಿಮಕ್ಕೆ	ಸರ್ವೆ ನಂ. 89/1 ರ ಉಳಿಕೆ ಜಮೀನು;
				ಉತ್ತರಕ್ಕೆ	ಸರ್ವೆ ನಂ. 91 ರ ಜಮೀನು; ಮತ್ತು
				ದಕ್ಷಿಣಕ್ಕೆ	ಸರ್ವೆ ನಂ. 89/2ಎ ಮತ್ತು 89/2ಬಿರ ಜಮೀನುಗಳು.
13.	89/2A	1 ಎಕರೆ 10 ಗುಂಟೆಗಳು	ವಸತಿ	ಪೂರ್ವಕ್ಕೆ	ಸರ್ವೆ ನಂ. 89/2ಬಿರ ಜಮೀನು;
				ಪಶ್ಚಿಮಕ್ಕೆ	ಸರ್ವೆ ನಂ. 90 ರ ಜಮೀನು;
				ಉತ್ತರಕ್ಕೆ	ಸರ್ವೆ ನಂ. 89/1 ರ ಜಮೀನು; ಮತ್ತು
				ದಕ್ಷಿಣಕ್ಕೆ	ಸರ್ವೆ ನಂ. 88/1 ರ ಜಮೀನು.
14.	89/2B	10 ಗುಂಟೆಗಳು	ವಸತಿ	ಪೂರ್ವಕ್ಕೆ	ಸರ್ವೆ ನಂ. 89/3 ರ ಜಮೀನು;
				ಪಶ್ಚಿಮಕ್ಕೆ	ಸರ್ವೆ ನಂ. 89/2ಎ ರ ಜಮೀನು;
				ಉತ್ತರಕ್ಕೆ	ಸರ್ವೆ ನಂ. 89/1 ರ ಜಮೀನು; ಮತ್ತು
				ದಕ್ಷಿಣಕ್ಕೆ	ಸರ್ವೆ ನಂ. 88/2 ರ ಜಮೀನು.
15.	89/3	20 ಗುಂಟೆಗಳು	ವಸತಿ	ಪೂರ್ವಕ್ಕೆ	ರಸ್ತೆ ಮತ್ತು ಸರ್ವೆ ನಂ. 80 ರ ಜಮೀನು;
				ಪಶ್ಚಿಮಕ್ಕೆ	ಸರ್ವೆ ನಂ. 89/1 ರ ಜಮೀನು;
				ಉತ್ತರಕ್ಕೆ	ಸರ್ವೆ ನಂ. 89/4 ರ ಜಮೀನು; ಮತ್ತು
				ದಕ್ಷಿಣಕ್ಕೆ	ಸರ್ವೆ ನಂ. 89/2ಬಿ ರ ಜಮೀನು.
16.	89/4	20 ಗುಂಟೆಗಳು	ವಸತಿ	ಪೂರ್ವಕ್ಕೆ	ಸರ್ವೆ ನಂ. 80 ರ ಜಮೀನು;
				ಪಶ್ಚಿಮಕ್ಕೆ	ಸರ್ವೆ ನಂ. 89/1 ರ ಜಮೀನು;
				ಉತ್ತರಕ್ಕೆ	ಸರ್ವೆ ನಂ. 91 ರ ಜಮೀನು; ಮತ್ತು
				ದಕ್ಷಿಣಕ್ಕೆ	ಸರ್ವೆ ನಂ. 89/3 ರ ಜಮೀನು.

ಸಹಿ/-
ಶ್ರೀನಿವಾಸ್ ಬಿ.ಆರ್. ಪಾಲುದಾರರು
ಡಿಎಸ್‌ಕೆ ಲೀಗಲ್,
ಪ್ರೆಸ್ಟೀಜ್ ಲೋಕ, ನಂ.201, 2ನೇ ಮಹಡಿ, ನಂ.7/1 & 7/7,
ಬ್ರುಂಟನ್ ರಸ್ತೆ, ಬೆಂಗಳೂರು – 560025, ದೂ. ಸಂ. 080–69548770

ದಿನಾಂಕ : 06.11.2025
ಸ್ಥಳ : ಬೆಂಗಳೂರು

ನಗರಸಭಾ ಕಾರ್ಯಾಲಯ, ನೆಲಮಂಗಲ

ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ–562123, ದೂ.: 080–27722735, ಸಹಾಯವಾಣಿ: 080–27722135, Web : www.nelamangala.mrc.gov.in, Email : itstaff_ulb_nelamangala@yahoo.com

ಸಂಖ್ಯೆ: ನಸನೆ/ತಾಂತ್ರಿಕ(ವಿ)/ಟೆಂಡರ್/61/2025–26   ದಿನಾಂಕ: 05.11.2025

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
(ಸ್ಟ್ಯಾಂಡರ್ಡ್‌ಡಾಕ್ಯುಮೆಂಟ್ KW ನಿಬಂಧನೆಗಳಂತೆ ಅರ್ಜಿ & ಆಹ್ವಾನಿಸಲಾಗಿದೆ)

ಪೌರಾಯುಕ್ತರು ನಗರಸಭೆ ನೆಲಮಂಗಲ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2025–26ನೇ ಸಾಲಿನ ನಗರಸಭಾ ನಿಧಿಯಡಿ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು ಒಟ್ಟು ಮೊತ್ತ **ರೂ.356.20 ಲಕ್ಷಗಳ** ಕಾಮಗಾರಿಗಳಿಗೆ ಐಟಂವಾರು ಇ–ಪ್ರೊಕ್ಯೂರ್‌ಮೆಂಟ್‌ನ ಕೆಪಿಪಿ ಪೋರ್ಟಲ್‌ನ ಏಕ ಲಕೋಟೆ ಹಾಗೂ ದ್ವಿ–ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ.

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ತೆರೆಯುವ ದಿನಾಂಕ ಮುಂತಾದ ಹೆಚ್ಚಿನ ವಿವರಗಳಿಗಾಗಿ ವೆಬ್ ಸೈಟ್: **https://kppp.karnataka.gov.in/** ಹಾಗೂ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/-	ಸಹಿ/-	ಸಹಿ/-	ಸಹಿ/-
ಮಾನ್ಯ ಅಧ್ಯಕ್ಷರು ನಗರಸಭೆ, ನೆಲಮಂಗಲ	ಮಾನ್ಯ ಉಪಾಧ್ಯಕ್ಷರು ನಗರಸಭೆ, ನೆಲಮಂಗಲ	ಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ನೆಲಮಂಗಲ	ಪೌರಾಯುಕ್ತರು ನಗರಸಭೆ, ನೆಲಮಂಗಲ

ವಾ.ಸಾ.ಸಂ.ಇ/ವಾಪ್ರ/3614/ಶಿರಡಿಸಾಯಿ/2025–26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.:ಬೆಂಅಪ್ರಾ/ವಿಭೂಸ್ವಾ/03/2025–26   ದಿನಾಂಕ: 04.11.2025

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿ ಕೊತ್ತನೂರು ಗ್ರಾಮದ ಸರ್ವೆ ನಂ. 122 ರ 17 ಎಕರೆ 17 ಗುಂಟೆ ಜಮೀನು ಜೆ.ಪಿ ನಗರ 8ನೇ ಹಂತ ಬಡಾವಣೆ ನಿರ್ಮಾಣಕ್ಕಾಗಿ ಪ್ರಾಧಿಕಾರದಿಂದ ಸರ್ಕಾರದ ಅಂತಿಮ ಅಧಿಸೂಚನೆ ಸಂಖ್ಯೆ: HUD 292 MNX 93, ದಿನಾಂಕ: 19.10.1994 ರಂದು ಹೊರಡಿಸಿದ್ದು, ಈ ಜಮೀನಿಗೆ ದಿನಾಂಕ: 22.09.1997 ರಂದು ಸರ್ಕಾರದಿಂದ ಐತೀರ್ಪು ಅನುಮೋದನೆಗೊಂಡಿರುತ್ತದೆ. ಶ್ರೀ ಬಿ.ಎ ನಾಗರಾಜ ಬಿನ್ ಬಿ.ಪಿ ಅಶ್ವತ್ಥ ನಾರಾಯಣ ಮತ್ತು ಶ್ರೀ ಬಿ.ಎ ವಾಸುದೇವ ಎಂಬುವವರು ಅಧಿಸೂಚಿತ ಖಾತೆದಾರರಾಗಿರುತ್ತಾರೆ. ಸದರಿ ಜಮೀನಿನಲ್ಲಿ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ನೃಪತುಂಗ ಬಡಾವಣೆ ಎಂಬ ಖಾಸಗಿ ಬಡಾವಣೆಯನ್ನು ರಚನೆ ಮಾಡಿರುವುದು ಕಂಡುಬಂದಿರುತ್ತದೆ.

ಸದರಿ ಜಮೀನು ಪ್ರಾಧಿಕಾರದ ಅಧಿಸೂಚಿತ ಪ್ರದೇಶವಾಗಿರುವುದರಿಂದ ಹಾಲಿ ಸರ್ವೆ ನಂ. 122 ರ ಜಮೀನಿನಲ್ಲಿ ನಿವೇಶನ ಖರೀದಿಸಿ ಕಟ್ಟಡ ನಿರ್ಮಾಣ ಮಾಡಿರುವ/ಮಾಡುತ್ತಿರುವ ಹಾಗೂ ಖಾಲಿ ಇರುವ ನಿವೇಶನಗಳಿಗೆ ಸಂಬಂಧಪಟ್ಟವರು ಎಲ್ಲಾ ಮೂಲ ದಾಖಲಾತಿಗಳು ಮತ್ತು ಅವುಗಳ ಎರಡು ಸೆಟ್ ನಕಲು ಪ್ರತಿಗಳನ್ನು **ಕಾರ್ಯಪಾಲಕ ಅಭಿಯಂತರ ಕಛೇರಿ, ದಕ್ಷಿಣ ವಿಭಾಗ, ಬನಶಂಕರಿ ಬಿಡಿಎ ಕಾಂಪ್ಲೆಕ್ಸ್, ಬೆಂಗಳೂರು–560070** ಈ ಕಛೇರಿಗೆ **ದಿನಾಂಕ: 21.11.2025** ರ ಒಳಗಾಗಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಸಲ್ಲಿಸದಿದ್ದಲ್ಲಿ ಪ್ರಾಧಿಕಾರದ ನಿಯಮಾನುಸಾರ ಮುಂದಿನ ಕ್ರಮಕೈಗೊಳ್ಳಲಾಗುತ್ತದೆ.

ಸಹಿ/– ಆಯುಕ್ತರು, ಬೆಂ.ಅ.ಪ್ರಾ, ಬೆಂಗಳೂರು.

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ

ಭಾರತದ ರಾಷ್ಟ್ರಪತಿಗಳ ಪರವಾಗಿ ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು ವಿಭಾಗದ ಹನಕೆರೆ ನಿಲ್ದಾಣದಲ್ಲಿರುವ ರೈಲ್ವೆ ಭೂಮಿಯಲ್ಲಿ ಸಂಪೂರ್ಣವಾಗಿ ಅಥವಾ ಭಾಗಶಃ ಗತಿ ಶಕ್ತಿ ಮಲ್ಟಿ–ಮೋಡಲ್ ಕಾರ್ಗೋ ಟರ್ಮಿನಲ್‌ಗಳನ್ನು (ಜಿಸಿಟಿ) ಅಭಿವೃದ್ಧಿಪಡಿಸಲು ಬಿಡ್ಡರ್‌ಗಳನ್ನು ಐಆರ್‌ಇಪಿಎಸ್ ಮೂಲಕ ಆಹ್ವಾನಿಸಿದ್ದಾರೆ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:
28–11–2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: **www.ireps.gov.in** ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು,
ಪಿಯುಬಿ/615/ಎಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2025–26 ಬೆಂಗಳೂರು

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್

TeamLease® Putting India to Work

CIN: L74140KA2000PLC118395

ನೋಂದಾಯಿತ ಕಚೇರಿ: ವರ್ಕ್ ಅವಿನ್ಯೂ ಕ್ಯಾಂಪಸ್, ಅಸೆಂಟ್ ಬಿಲ್ಡಿಂಗ್, ಕೋರಮಂಗಲ ಇಂಡಸ್ಟ್ರಿಯಲ್ ಲೇಔಟ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ, ಕೋರಮಂಗಲ, ಬೆಂಗಳೂರು – 560 095, ಕರ್ನಾಟಕ, ಭಾರತ
ಈ–ಮೇಲ್: corporateaffairs@teamlease.com | ವೆಬ್‌ಸೈಟ್: https://group.teamlease.com

ಸೆಪ್ಟೆಂಬರ್ 30, 2025 ರಂದು ಕೊನೆಗೊಂಡ ತ್ರೈಮಾಸಿಕದ ಮತ್ತು ಅರ್ಧ ವರ್ಷಕ್ಕೆ ವಿಸ್ತೃತ ಲೆಕ್ಕ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಾರಾಂಶ

ಆಡಿಟ್ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ, ನವೆಂಬರ್ 05, 2025 ರಂದು ನಡೆದ ಸಭೆಯಲ್ಲಿ ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್ ("ಟೀಮ್‌ಲೀಸ್/ಕಂಪನಿ") ನಿರ್ದೇಶಕರ ಮಂಡಳಿಯು ಸೆಪ್ಟೆಂಬರ್ 30, 2025 ರಂದು ಕೊನೆಗೊಂಡ ತ್ರೈಮಾಸಿಕದ ಮತ್ತು ಅರ್ಧ ವರ್ಷಕ್ಕೆ ವಿಸ್ತೃತ ಲೆಕ್ಕ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಅನುಮೋದಿಸಿದೆ, ಇವುಗಳನ್ನು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಯಮಗಳು, 2015 ರ ನಿಯಮ 33 ರ ಪ್ರಕಾರ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರಾದ ಎಸ್.ಆರ್. ಬ್ಯಾಟ್ಲಿಬಾಯ್ & ಅಸೋಸಿಯೇಟ್ಸ್, ಎಲ್‌ಎಲ್‌ಪಿ, ಚಾರ್ಟರ್ಡ್ ಅಕೌಂಟೆಂಟ್ಸ್, ಇವರ ಪರಿಶೀಲನೆಗೆ ಒಳಪಡಿಸಲಾಗಿದೆ.

ಅಪರಿಶೋಧಿತ ಬಿಡಿ ಮತ್ತು ಕ್ರೋಢೀಕೃತ ಹಣಕಾಸು ಫಲಿತಾಂಶಗಳ ಸಂಪೂರ್ಣ ಪಾಠವು ಸ್ಟಾಕ್ ಎಕ್ಸ್‌ಚೇಂಜುಗಳ ಬಿಎಸ್‌ಇ (www.bseindia.com) ಮತ್ತು ಎನ್‌ಎಸ್‌ಇ (www.nseindia.com) ವೆಬ್‌ಸೈಟುಗಳಲ್ಲಿ ಮತ್ತು ಕಂಪನಿಯ https://group.teamlease.com/investor/quarterly-results/ ವೆಬ್‌ಸೈಟಿನಲ್ಲಿ ಲಭ್ಯವಿರುತ್ತದೆ. ಕೆಳಗೆ ನೀಡಲಾದ ಕ್ವಿಕ್ ರೆಸ್ಪಾನ್ಸ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕವೂ ಇದನ್ನು ಪಡೆಯಬಹುದು:

ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಕಂಪನಿಯ ವೆಬ್‌ಸೈಟಿನಲ್ಲಿರುವ ಫಲಿತಾಂಶಗಳನ್ನು ನೋಡಬಹುದು.

ದಿನಾಂಕ: ನವೆಂಬರ್ 05, 2025
ಸ್ಥಳ: ಬೆಂಗಳೂರು

ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್‌ನ ನಿರ್ದೇಶಕ ಮಂಡಲಿಗಾಗಿ, ಮತ್ತು ಅದರ ಪರವಾಗಿ
ಸಹಿ/–
ಅಶೋಕ್ ಕುಮಾರ್ ನೆಡುರುಮಲ್ಲಿ
ಮ್ಯಾನೇಜಿಂಗ್ ಡೈರೆಕ್ಟರ್ & ಸಿಇಒ
DIN: 00151814

ಚಿಟಿಕೆ ಸುದ್ದಿ

‘ರೈತರ ಹೋರಾಟಕ್ಕೆ ಎಎಪಿ ಬೆಂಬಲ’

ಬೆಂಗಳೂರು: ಕೇಂದ್ರ ಸರ್ಕಾರವು ಕಬ್ಬು ಬೆಳೆಗಾರರಿಗೆ ನಿಗದಿ ಮಾಡಿರುವ ₹3,550 ಎಫ್.ಆರ್.ಪಿ ದರವನ್ನು ನೀಡಲು ಹಿಂಜರಿಯುತ್ತಿರುವ ರಾಜ್ಯದ ಸಕ್ಕರೆ ಕಾರ್ಖಾನೆಗಳ ಮಾಲೀಕರ ಕ್ರಮವನ್ನು ಹಾಗೂ ಮಾಲೀಕರ ಪರವಾದ ರಾಜ್ಯ ಸರ್ಕಾರದ ಧೋರಣೆಯನ್ನು ಖಂಡಿಸಿ ಕಬ್ಬು ಬೆಳೆಗಾರರು ನಡೆಸುತ್ತಿರುವ ಹೋರಾಟಕ್ಕೆ ಆಮ್ ಆದ್ಮಿ ಪಕ್ಷದ ಬೆಂಬಲವಿದೆ ಎಂದು ಎಎಪಿ ರಾಜ್ಯ ಘಟಕದ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ತಿಳಿಸಿದ್ದಾರೆ.

‘ಪಕ್ಕದ ಮಹಾರಾಷ್ಟ್ರ, ತಮಿಳುನಾಡು ರಾಜ್ಯದ ಕಾರ್ಖಾನೆಗಳು ಕೇಂದ್ರದ ಎಫ್‌ಆರ್‌ಪಿ ದರದಲ್ಲಿ ಲಕ್ಷಾಂತರ ಟನ್ ಕಬ್ಬನ್ನು ತೆಗೆದುಕೊಳ್ಳುತ್ತಿವೆ. ಇದರಿಂದ ರಾಜ್ಯದ ಬೊಕ್ಕಸಕ್ಕೂ ನಷ್ಟವಾಗುತ್ತಿದೆ. ನಮ್ಮ ರೈತರ ಹೋರಾಟಕ್ಕೆ ಜಯ ಸಿಗುವವರೆಗೆ ಆಮ್ ಆದ್ಮಿ ಪಕ್ಷವು ರೈತರ ಜತೆ ಇರಲಿದೆ’ ಎಂದು ಹೇಳಿದ್ದಾರೆ.

ಕಾನ್‌ಸ್ಟೆಬಲ್‌ಗೆ ₹5 ಲಕ್ಷ ವಂಚನೆ

ಬೆಂಗಳೂರು: ಸೈಬರ್ ವಂಚನೆ ಕುರಿತು ಜಾಗೃತಿ ಮೂಡಿಸುತ್ತಿರುವ ಪೊಲೀಸರಿಂದಲೇ ಸೈಬರ್ ವಂಚಕರು ಹಣ ದೋಚಿದ್ದಾರೆ. ಈ ಸಂಬಂಧ ಆಡುಗೋಡಿ ಪೊಲೀಸ್ ಠಾಣೆಯಲ್ಲಿ ಸೈಬರ್ ವಂಚಕರ ವಿರುದ್ಧ ಪ್ರಕರಣ ದಾಖಲಾಗಿದೆ.

ಪೊಲೀಸ್ ಕಾನ್‌ಸ್ಟೆಬಲ್ ಎಂ.ಪಿ.ಶಬೀರ್ ವಂಚನೆಗೆ ಒಳಗಾದವರು. ಎಸ್‌ಬಿಐ ಬ್ಯಾಂಕ್ ಹೆಸರಲ್ಲಿ ವಾಟ್ಸ್‌ಆ್ಯಪ್ ಗ್ರೂಪ್‌ವೊಂದನ್ನು ಸೃಷ್ಟಿಸಿ, ಅದಕ್ಕೆ ಶಬೀರ್ ಅವರ ಮೊಬೈಲ್ ಸಂಖ್ಯೆಯನ್ನು ಆರೋಪಿಗಳು ಸೇರಿಸಿದ್ದರು. ಸ್ವಲ್ಪ ಸಮಯದ ಬಳಿಕ ಎಪಿಕೆ ಫೈಲ್ ಅನ್ನು ಕಳುಹಿಸಿ, ‘ಈ ದಿನ ನಿಮ್ಮ ಖಾತೆಯನ್ನು ಅಪ್‌ಡೇಟ್ (ಕೆವೈಸಿ) ಮಾಡಿಕೊಳ್ಳಿ. ಇಲ್ಲವಾದಲ್ಲಿ ನಿಮ್ಮ ಬ್ಯಾಂಕ್ ಖಾತೆಯನ್ನು ನಿಷ್ಕ್ರಿಯಗೊಳಿಸಲಾಗುತ್ತದೆ’ ಎಂದು ಸಂದೇಶ ಕಳುಹಿಸಿದ್ದರು. ಹೀಗಾಗಿ ಅವರು ಎಪಿಕೆ ಫೈಲ್ ತೆರೆದು ಕೆವೈಸಿಗೆ ಸಂಬಂಧಿಸಿದ ಮಾಹಿತಿಗಳು, ಆಧಾರ್ ಕಾರ್ಡ್, ಎಟಿಎಂ ನಂಬರ್ ಹಾಗೂ ಪಾನ್ ನಂಬರ್ ಅಪ್‌ಡೇಟ್ ಮಾಡಿದ್ದರು. ಇದಾದ ಸ್ವಲ್ಪ ಸಮಯದ ನಂತರ ಅವರ ಖಾತೆಯಿಂದ ₹5 ಲಕ್ಷ ಕಡಿತವಾಗಿತ್ತು ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಕೃತಕ ಬುದ್ಧಿಮತ್ತೆ ವಿಷಯ ಪರಿಚಯ

ಸ್ಯಾಮ್‌ಸಂಗ್ ಹಾಗೂ ಹಲವು ವಿ.ವಿ.ಗಳ ಜತೆ ಬೆಂಗಳೂರು ಕೃಷಿ ವಿ.ವಿ ಒಪ್ಪಂದ

• ಖಲೀಲಅಹ್ಮದ ಶೇಖ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಬೋಧನೆ, ಸಂಶೋಧನೆ ಹಾಗೂ ವಿಸ್ತರಣಾ ಚಟುವಟಿಕೆಗಳಲ್ಲಿ ಕೃತಕ ಬುದ್ಧಿಮತ್ತೆ (ಎಐ) ಹಾಗೂ ಮಷಿನ್ ಲರ್ನಿಂಗ್ (ಎಂಎಲ್) ತಂತ್ರಜ್ಞಾನ ಅಳವಡಿಸಿಕೊಳ್ಳುವ ಉದ್ದೇಶದಿಂದ 2025–26ನೇ ಶೈಕ್ಷಣಿಕ ಸಾಲಿನಿಂದ ಪದವಿ ಹಾಗೂ ಸ್ನಾತಕೋತ್ತರ ಪದವಿ (ಬಿ.ಎಸ್ಸಿ ಕೃಷಿ ಹಾಗೂ ಎಂ.ಎಸ್ಸಿ ಕೃಷಿ) ವಿದ್ಯಾರ್ಥಿಗಳಿಗೆ ಎಐ ಹಾಗೂ ಎಂಎಲ್ ವಿಷಯವನ್ನು ಪರಿಚಯಿಸಲಾಗುತ್ತಿದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಸ್ಯಾಮ್‌ಸಂಗ್ ಕಂಪನಿಯೊಂದಿಗೆ ಎಐ ಮತ್ತು ಎಂಎಲ್ ವಿಷಯದ ತರಬೇತಿ ನೀಡುವ ಕುರಿತು ಒಪ್ಪಂದ ಮಾಡಿಕೊಂಡಿದೆ. ಸ್ಯಾಮ್‌ಸಂಗ್‌ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ (ಸಿಎಸ್‌ಆರ್)

ಮುಖ್ಯಾಂಶಗಳು

- 300 ವಿದ್ಯಾರ್ಥಿಗಳಿಗೆ 80 ಗಂಟೆಗಳ ತರಬೇತಿ
- ಕೃಷಿ, ಸಂಶೋಧನೆ, ವಿಸ್ತರಣೆಯಲ್ಲಿ ಎಐ–ಎಂಎಲ್ ಅಳವಡಿಕೆ
- ಎಐ–ಎಂಎಲ್‌ನಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಬೇಕು

ಮೊದಲ ಹಂತದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡುತ್ತಿರುವ 300 ವಿದ್ಯಾರ್ಥಿಗಳಿಗೆ ಎಐ–ಎಂಎಲ್ ವಿಷಯದ ಬಗ್ಗೆ 80 ಗಂಟೆಗಳ ಕಾಲ ಆನ್‌ಲೈನ್ ಹಾಗೂ ಆಫ್‌ಲೈನ್ ತರಬೇತಿ ಕಾರ್ಯಕ್ರಮ ನಡೆಯುತ್ತಿದೆ.

‘ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಪ್ರಥಮ ವರ್ಷದ ಪದವಿಯ ಎರಡನೇ ಸೆಮಿಸ್ಟರ್‌ನಲ್ಲಿ ಎಐ–ಎಂಎಲ್ ವಿಷಯ ಇರಲಿದ್ದು, ಇದಕ್ಕೆ ಅಂಕಗಳು ಇರುವುದಿಲ್ಲ. ಆದರೆ ಕಡ್ಡಾಯವಾಗಿ ಉತ್ತೀರ್ಣ ಆಗಬೇಕು. ಎಂ.ಎಸ್ಸಿ ಪ್ರಥಮ ವರ್ಷದ ಎರಡನೇ ಸೆಮಿಸ್ಟರ್‌ಗೆ ಎಐ–ಎಲ್ ವಿಷಯ ಇರಲಿದ್ದು, ವಿದ್ಯಾರ್ಥಿಗಳಿಗೆ ಆರು ತಿಂಗಳ ತರಬೇತಿ ನೀಡಲಾಗುತ್ತದೆ’ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ ‘ಪ್ರಜಾವಾಣಿ’ಗೆ ತಿಳಿಸಿದರು.

‘ವಿಶ್ವವಿದ್ಯಾಲಯದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಹಾಗೂ ಮಷಿನ್ ಲರ್ನಿಂಗ್ (ಎಂಎಲ್) ಎಂಬ ನೂತನ ವಿಭಾಗವನ್ನು ಪ್ರಾರಂಭಿಸಲಾಗಿದೆ. ಇದು ಬಹುಶಿಸ್ತೀಯ ಅಧ್ಯಯನ ವಿಭಾಗವಾಗಿದ್ದು, ಕಂಪ್ಯೂಟರ್ ತಂತ್ರಜ್ಞಾನದ ಬಗ್ಗೆ ಹೆಚ್ಚು ಮಾಹಿತಿ ಇರುವವರನ್ನು ಇದರ ಮುಖ್ಯಸ್ಥರನ್ನಾಗಿ ಮಾಡಲಾಗುತ್ತದೆ’ ಎಂದು ಹೇಳಿದರು.

‘ಎಐ–ಎಂಎಲ್ ನೂತನ ವಿಭಾಗದಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ನಗರದ ಹಲವು ಎಂಜಿನಿಯರಿಂಗ್ ಕಾಲೇಜುಗಳ ನುರಿತ ತಜ್ಞರಿಂದ ತರಬೇತಿ ನೀಡಲಾಗುತ್ತದೆ. ಇದರ ಭಾಗವಾಗಿ ಈಗಾಗಲೇ ಗೀತಂ ವಿಶ್ವವಿದ್ಯಾಲಯದೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ರೇವಾ ವಿಶ್ವವಿದ್ಯಾಲಯ, ಮಣಿಪಾಲ್ ಅಕಾಡೆಮಿಯೊಂದಿಗೆ ಒಪ್ಪಂದ ಮಾಡಿಕೊಳ್ಳುವ ಕುರಿತು ಮಾತುಕತೆ ನಡೆಯುತ್ತಿದೆ. ಎಐ–ಎಂಎಲ್‌ಗೆ ಸಂಬಂಧಿಸಿದ ಕಂಪ್ಯೂಟರ್ ಆಧಾರಿತ ಪಠ್ಯ ವಿಷಯಗಳ ಬಗ್ಗೆ ಎಂಜಿನಿಯರಿಂಗ್ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಅಧ್ಯಾಪಕರು ನಮ್ಮ ವಿದ್ಯಾರ್ಥಿಗಳಿಗೆ ಪಾಠ ಮಾಡಲಿದ್ದಾರೆ’ ಎಂದರು.

‘ಸ್ಯಾಮ್‌ಸಂಗ್ ಕಂಪನಿಯೊಂದಿಗೆ ಮತ್ತೊಂದು ಒಪ್ಪಂದ ಮಾಡಿಕೊಳ್ಳಲಾಗುತ್ತಿದ್ದು, ನೂತನ ಎಐ–ಎಂಎಲ್‌ನ ವಿಭಾಗದ ವಿಷಯಗಳಿಗೆ ಸಂಬಂಧಿಸಿದಂತೆ ಕಂಪನಿಯ ಸಿಬ್ಬಂದಿಯು ವಿದ್ಯಾರ್ಥಿಗಳಿಗೆ ತರಬೇತಿ ನೀಡಲಿದ್ದಾರೆ. ಪದವಿ ಹಂತದಲ್ಲಿಯೇ ವಿದ್ಯಾರ್ಥಿಗಳಿಗೆ ಇಂತಹ ಈ ವಿಷಯಗಳನ್ನು ಪರಿಚಯಿಸುತ್ತಿದ್ದೇವೆ. ವಿದ್ಯಾರ್ಥಿಗಳು ಉತ್ತೀರ್ಣರಾದ ನಂತರ ಕೃಷಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗ ಪಡೆದುಕೊಳ್ಳಲು ಸಹಾಯಕವಾಗಲಿದೆ’ ಎಂದು ತಿಳಿಸಿದರು.

‘ಎಐ–ಎಂಎಲ್ ಪದವಿ ಪ್ರಾರಂಭಿಸುವ ಚಿಂತನೆ’

ಎಸ್‌.ವಿ. ಸುರೇಶ

‘ರಾಜ್ಯದಲ್ಲಿರುವ ಕೃಷಿ ವಿಶ್ವವಿದ್ಯಾಲಯಗಳ ಪೈಕಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಎಐ–ಎಂಎಲ್ ಕೋರ್ಸ್ ಅನ್ನು ಮೊದಲ ಬಾರಿಗೆ ಪರಿಚಯಿಸಲಾಗುತ್ತಿದೆ. ನಾಲ್ಕು ವರ್ಷಗಳ ನಂತರ ಬಿ.ಎಸ್ಸಿ ಅಗ್ರಿ ಇನ್ ಎಐ–ಎಂಎಲ್, ಬಿ.ಎಸ್ಸಿ ಹಾರ್ಟಿಕಲ್ಚರ್ ಇನ್ ಎಐ–ಎಂಎಲ್ ವಿಷಯಗಳಲ್ಲಿ ಪದವಿಯನ್ನೂ ಪ್ರಾರಂಭಿಸುವ ಚಿಂತನೆ ಇದೆ’ ಎಂದು ಎಸ್.ವಿ. ಸುರೇಶ ತಿಳಿಸಿದರು.

‘ಈಗ ಬಹುತೇಕ ಎಲ್ಲ ಕ್ಷೇತ್ರಗಳಲ್ಲೂ ಎಐ–ಎಂಎಲ್ ಆಕ್ರಮಿಸಿಕೊಂಡಿದೆ. ಆದ್ದರಿಂದ ಕೃಷಿ ಕ್ಷೇತ್ರದಲ್ಲಿ ಬದಲಾವಣೆ ತರಲು ವಿದ್ಯಾರ್ಥಿಗಳನ್ನು ಈ ನೂತನ ಕೋರ್ಸ್‌ಗೆ ಅಣಿಗೊಳಿಸುತ್ತಿದ್ದೇವೆ’ ಎಂದರು.

ಸುದ್ದಿ 2 ನಿಮಿಷ

ಉಡುಪಿ ಕೃಷ್ಣ ಮಠಕ್ಕೆ ಆನೆ: ಆಕ್ಷೇಪಣೆಗೆ ಕೊನೆ ಅವಕಾಶ

ಬೆಂಗಳೂರು: ಹೆಣ್ಣಾನೆ ‘ಸುಭದ್ರೆ’ಯ ಮಾಲೀಕತ್ವದ ವಿಚಾರಕ್ಕೆ ಸಂಬಂಧಿಸಿದಂತೆ ದಾವಣಗೆರೆ ಜಿಲ್ಲೆ ಹೊನ್ನಾಳ್ಳಿಯ ಹಿರೇಕಲ್ಮಠ ಸಂಸ್ಥಾನ ಹಾಗೂ ಉಡುಪಿ ಶ್ರೀಕೃಷ್ಣ ಮಠದ ನಡುವಿನ ಪ್ರಕರಣದಲ್ಲಿ, ಆಕ್ಷೇಪಣೆ ಸಲ್ಲಿಸಲು ಶ್ರೀಕೃಷ್ಣ ಮಠಕ್ಕೆ ಹೈಕೋರ್ಟ್ ಕೊನೆಯ ಅವಕಾಶ ನೀಡಿದೆ.

ಈ ಸಂಬಂಧ ಸರ್ಕಾರದ ಆದೇಶ ಪ್ರಶ್ನಿಸಿ ಹಿರೇಕಲ್ಮಠ ಸಂಸ್ಥಾನದ ಅಧಿಕೃತ ಪ್ರತಿನಿಧಿ ಚನ್ನಬಸಪ್ಪ ಸ್ವಾಮಿ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಇದೇ 27ರೊಳಗೆ ಆಕ್ಷೇಪಣೆ ಸಲ್ಲಿಸಬೇಕು’ ಎಂದು ಶ್ರೀಕೃಷ್ಣ ಮಠದ ಪರ ವಕೀಲರಿಗೆ ಸೂಚಿಸಿ ವಿಚಾರಣೆಯನ್ನು ಡಿಸೆಂಬರ್ 2ಕ್ಕೆ ಮುಂದೂಡಿದೆ.

ಅಂತೆಯೇ, ಸುಭದ್ರೆಯನ್ನು ಆತುರಾತುರವಾಗಿ ಸ್ಥಳಾಂತರ ಮಾಡದಂತೆ ಸೆಪ್ಟೆಂಬರ್ 23ರಂದು ನೀಡಿದ್ದ ಮಧ್ಯಂತರ ಆದೇಶವನ್ನು ನ್ಯಾಯಪೀಠ ವಿಸ್ತರಿಸಿ ಆದೇಶಿಸಿದೆ.

‘ಸುಭದ್ರೆ’ಯನ್ನು 1993 ರಿಂದ 2019 ರವರೆಗೆ ಉಡುಪಿ ಶ್ರೀಕೃಷ್ಣ ಮಠದಿಂದ ಆರೈಕೆ ಮಾಡಲಾಗುತ್ತಿತ್ತು. ನಂತರ ಅದನ್ನು ಹಿರೇಕಲ್ಮಠ ಸಂಸ್ಥಾನಕ್ಕೆ ಸ್ಥಳಾಂತರಿಸಲಾಗಿತ್ತು. ಹಿರೇಕಲ್ಮಠ ಸಂಸ್ಥಾನಕ್ಕೆ ಸುಭದ್ರೆಯ ಮಾಲೀಕತ್ವದ ಪ್ರಮಾಣ ಪತ್ರವನ್ನೂ ನೀಡಲಾಗಿತ್ತು.

ಏತನ್ಮಧ್ಯೆ, ಸುಭದ್ರೆಯನ್ನು ಉಡುಪಿ ಶ್ರೀಕೃಷ್ಣ ಮಠಕ್ಕೆ ಹಸ್ತಾಂತರಿಸಬೇಕು ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪಿಸಿಸಿಎಫ್) 2025ರ ಸೆಪ್ಟೆಂಬರ್ 10ರಂದು ಆದೇಶ ಹೊರಡಿಸಿದ್ದರು. ಅಂತೆಯೇ, ಹಿರೇಕಲ್ಮಠಕ್ಕೆ ನೀಡಲಾಗಿದ್ದ ಸುಭದ್ರೆಯ ಮಾಲಿಕತ್ವದ ಪ್ರಮಾಣ ಪತ್ರವನ್ನು ರದ್ದುಪಡಿಸಿದ್ದರು. ಅರ್ಜಿದಾರರು ಇದನ್ನು ಪ್ರಶ್ನಿಸಿದ್ದಾರೆ.



ಅಂಗನವಾಡಿ ನೇಮಕಾತಿ ಸರ್ಕಾರಕ್ಕೆ ತುರ್ತು ನೋಟಿಸ್

ಬೆಂಗಳೂರು: 20 ಅಂಗನವಾಡಿ ಕಾರ್ಯಕರ್ತೆಯರ ನೇಮಕ ರದ್ದುಗೊಳಿಸುವಂತೆ ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ತುರ್ತು ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

‘ನಿಯಮಗಳನ್ನು ಉಲ್ಲಂಘಿಸಿ ಮಾಡಲಾಗಿರುವ ಈ ನೇಮಕಾತಿ ಆದೇಶ ರದ್ದುಗೊಳಿಸಬೇಕು’ ಎಂದು ಕೋರಿ ರಾಯಚೂರಿನ ಕವಿತಾಳದ ರಾಜೇಶ್ವರಿ ಸೇರಿದಂತೆ ಒಟ್ಟು ಆರು ಜನರು ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಕಾರ್ಯದರ್ಶಿ, ರಾಯಚೂರು ಜಿಲ್ಲಾಧಿಕಾರಿ, ನೇಮಕಗೊಂಡಿರುವ ವಿವಿಧ ಜಿಲ್ಲೆಗಳ 20 ಕಾರ್ಯಕರ್ತೆಯರೂ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ಪೀಠ ವಿಚಾರಣೆ ಮುಂದೂಡಿದೆ.

ಅರ್ಜಿಯಲ್ಲಿ ಏನಿದೆ?: ‘ರಾಯಚೂರು ಜಿಲ್ಲೆಯನ್ನು ಆಶೋತ್ತರ ಜಿಲ್ಲೆ ಎಂದು ಪರಿಗಣಿಸಿದ್ದ ಕೇಂದ್ರ ಸರ್ಕಾರ 2018ರ ಮಾರ್ಚ್ 14ರಂದು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ನೇಮಕಾತಿ ಅಧಿಕಾರವನ್ನು ಆಯಾ ಜಿಲ್ಲಾಧಿಕಾರಿಗಳಿಗೆ ನೀಡಿ ಆದೇಶ ಹೊರಡಿಸಿದೆ. ಅದರಂತೆ ಜಿಲ್ಲಾಧಿಕಾರಿಗಳು ಜಿಲ್ಲೆಯ ಅಂಗನವಾಡಿ ಕೇಂದ್ರಗಳಿಗೆ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಅಥವಾ ಮೇಲ್ವಿಚಾರಕರನ್ನು ನೇಮಕ ಮಾಡಬೇಕಾಗಿತ್ತು. ಆದರೆ, ಈ ನಿಯಮವನ್ನು ಉಲ್ಲಂಘಿಸಲಾಗಿದೆ’ ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ. ‘ಕೆಪಿಎಸ್‌ಸಿ ಮೂಲಕ ಅಂಗನವಾಡಿ ಕಾರ್ಯಕರ್ತೆಯರನ್ನು ನೇಮಕ ಮಾಡಿರುವ ಸರ್ಕಾರ ನೇಮಕಾತಿ ಪಟ್ಟಿಯನ್ನೇ ರದ್ದು ಮಾಡಬೇಕು. ಪುನಃ ಹೊಸದಾಗಿ ನೇಮಕಾತಿ ಪ್ರಕ್ರಿಯೆ ನಡೆಸುವಂತೆ ಕೋರಿ 2025ರ ಆಗಸ್ಟ್ 2ರಂದು ನೀಡಿರುವ ನಮ್ಮ ಮನವಿ ಪರಿಗಣಿಸಲು ಆದೇಶಿಸಬೇಕು’ ಎಂದು ಕೋರಿದ್ದಾರೆ.

150ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಭಾಗಿ: ಆರೋಪಿ ಸೆರೆ

ಸೈಯದ್ ಅಸ್ಲಾಂ

ನಾರಾಯಣಸ್ವಾಮಿ

ಅಪರಾಧ ಸುದ್ದಿ

ಬೆಂಗಳೂರು: 150ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಈಶಾನ್ಯ ವಿಭಾಗದ ವಿದ್ಯಾರಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸೈಯದ್ ಅಸ್ಲಂ ಅಲಿಯಾಸ್ ಅಸ್ಲಂ(40) ಬಂಧಿತ ಆರೋಪಿ. ಬೆಂಗಳೂರು ನಗರ ಹಾಗೂ ಗ್ರಾಮಾಂತರ, ಹಾವೇರಿ, ಶಿವಮೊಗ್ಗ, ಮೈಸೂರು, ಚಿಕ್ಕಮಗಳೂರು, ಹಾಸನ ಜಿಲ್ಲೆಯ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆರೋಪಿ ಅಪರಾಧ ಕೃತ್ಯ ಎಸಗಿದ್ದ.

ಸ್ವತ್ತು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಲು ವಿಶೇಷ ತಂಡ ರಚಿಸಲಾಗಿತ್ತು. ವಿವಿಧೆಡೆ ಹುಡುಕಾಟ ನಡೆಸಿ ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು ಎಂದು ಪೊಲೀಸರು ಹೇಳಿದರು.

ಆರೋಪಿ ಸೆರೆ: ಎಂಟು ವರ್ಷದಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪಿ ನಾರಾಯಣಸ್ವಾಮಿ (35) ಎಂಬಾತನನ್ನು ಯಲಹಂಕ ಉಪನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯ ಸ್ವಂತ ಊರು ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ದಾರನಾಯಕನಪಾಳ್ಯ, ಯಲಹಂಕ ಉಪನಗರ, ವಿದ್ಯಾರಣ್ಯಪುರ ಗೌರಿಬಿದನೂರು, ಚಿಕ್ಕಬಳ್ಳಾಪುರ ಗ್ರಾಮಾಂತರ, ಗುಡಿಬಂಡೆ ಹಾಗೂ ಉಡುಪಿಯ ಮಣಿಪಾಲ್ ಪೊಲೀಸ್ ಠಾಣೆಯಲ್ಲಿ ಆರೋಪಿ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು ಎಂದು ಪೊಲೀಸರು ಹೇಳಿದರು.

ಬಾಡಿಗೆದಾರರಿಂದ ಕೃತ್ಯ, 24 ತಾಸಿನಲ್ಲಿ ದಂಪತಿ ಸೆರೆ

ಸಾಲ ತೀರಿಸಲು ವೃದ್ಧೆ ಕೊಲೆ

ಪ್ರಜಾವಾಣಿ ವಾರ್ತೆ

ಪ್ರಸಾದ್

ಸಾಕ್ಷಿ

ಬೆಂಗಳೂರು: ಸಾಲ ತೀರಿಸಲು ವೃದ್ಧೆಯನ್ನು ಕೊಲೆ ಮಾಡಿ ಮಾಂಗಲ್ಯದ ಸರ ಕಳವು ಮಾಡಿಕೊಂಡು ಪರಾರಿ ಆಗಿದ್ದ ದಂಪತಿಯನ್ನು ಸುಬ್ರಹ್ಮಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಘಟನೆ ನಡೆದ 24 ತಾಸಿನಲ್ಲೇ ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿ ಆಗಿದ್ದಾರೆ.

ಉತ್ತರಹಳ್ಳಿಯ ನ್ಯೂಮಿಲೆನಿಯಂ ರಸ್ತೆ ನಿವಾಸಿ ಲಕ್ಷ್ಮೀ (60) ಕೊಲೆಯಾದ ವೃದ್ಧೆ.

ಕೊಲೆ ಪ್ರಕರಣದ ಸಂಬಂಧ ಪ್ರಸಾದ್ ಶ್ರೀಶೈಲ ಮಕಾಯ್(26) ಮತ್ತು ಆತನ ಪತ್ನಿ ಸಾಕ್ಷಿ ಹಣಮಂತ ಹೊದ್ಲೂರು(23) ಎಂಬುವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಲಕ್ಷ್ಮೀ ಅವರ ಮನೆಯಲ್ಲಿ ಬಾಡಿಗೆಗೆ ವಾಸವಾಗಿದ್ದ ಆರೋಪಿಗಳು, ನ.4ರಂದು ಕೊಲೆ ಮಾಡಿ ಪರಾರಿ ಆಗಿದ್ದರು. ಲಕ್ಷ್ಮೀ ಅವರ ಪತಿ ಅಶ್ವತ್ಥನಾರಾಯಣ ಅವರು ನೀಡಿದ ದೂರಿನ ಮೇರೆಗೆ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಉತ್ತರಹಳ್ಳಿಯಲ್ಲಿ ನ್ಯೂಮಿಲೆನಿಯಂ ರಸ್ತೆಯಲ್ಲಿರುವ ಸ್ವಂತ ಮನೆಯಲ್ಲಿ ಅಶ್ವತ್ಥನಾರಾಯಣ ಮತ್ತು ಪತ್ನಿ ಲಕ್ಷ್ಮೀ ದಂಪತಿ ವಾಸವಾಗಿದ್ದರು. ಅಗರಬತ್ತಿ ಕಾರ್ಖಾನೆಯಲ್ಲಿ ಅಶ್ವತ್ಥ ನಾರಾಯಣ ಅವರು ಕೆಲಸ ಮಾಡುತ್ತಿದ್ದಾರೆ. ಮಂಗಳವಾರ ಬೆಳಿಗ್ಗೆ ಅಶ್ವತ್ಥನಾರಾಯಣ ಕೆಲಸಕ್ಕೆ ತೆರಳಿದ್ದರು. ಲಕ್ಷ್ಮೀ ಅವರು ಒಬ್ಬರೇ ಮನೆಯಲ್ಲಿ ಇದ್ದರು. ಆಗ ಆರೋಪಿಗಳು ಕೃತ್ಯ ಎಸಗಿ ಪರಾರಿ ಆಗಿದ್ದಾರೆ.

ಸಾಲ ತೀರಿಸಲು ಕೃತ್ಯ: ಮಹಾರಾಷ್ಟ್ರದ ಸೊಲ್ಲಾಪುರದ ದಂಪತಿ, ಆರು ತಿಂಗಳಿಂದ ಅಶ್ವತ್ಥನಾರಾಯಣ ಮತ್ತು ಲಕ್ಷ್ಮೀ ದಂಪತಿಗೆ ಸೇರಿದ ಮನೆಯಲ್ಲಿ ಬಾಡಿಗೆಗೆ ವಾಸವಿದ್ದರು. ಪ್ರಸಾದ್ ಶ್ರೀಶೈಲ ಮಕಾಯ್ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದ. ಆತನ ಪತ್ನಿ ಸಾಕ್ಷಿ ಹಣಮಂತ ಹೊದ್ಲೂರು ಪದ್ಮನಾಭನಗರದ ಶ್ರೀಸಾಯಿಗೋಲ್ಡ್ ಪ್ಯಾಲೇಸ್‌ನಲ್ಲಿ ಕೆಲಸ ಮಾಡುತ್ತಿದ್ದಳು. ಪ್ರಸಾದ್ ಅವರು ಸೊಲ್ಲಾಪುರದಲ್ಲಿ ಸಾಲ ಮಾಡಿದ್ದರು. ಸಾಲ ನೀಡಿದವರು ಹಣ ಕೊಡುವಂತೆ ಒತ್ತಾಯ ಮಾಡುತ್ತಿದ್ದರು. ಅಲ್ಲಿಂದ ನಗರಕ್ಕೆ ಬಂದು ಆರೋಪಿ ವಾಸವಾಗಿದ್ದರು ಎಂದು ಪೊಲೀಸರು ಹೇಳಿದರು.

‘ಅಶ್ವತ್ಥನಾರಾಯಣ ಮತ್ತು ಲಕ್ಷ್ಮೀ ದಂಪತಿಗೆ ಮಕ್ಕಳು ಇರಲಿಲ್ಲ. ಅವರಿಗೆ ಕೋಟ್ಯಂತರ ರೂಪಾಯಿ ಮೌಲ್ಯದ ಕಟ್ಟಡವಿದ್ದು ಎರಡ್ಮೂರು ಮನೆಗಳಿಂದ ಬಾಡಿಗೆ ಬರುತ್ತಿತ್ತು. ಅದನ್ನು ಗಮನಿಸಿದ್ದ ಆರೋಪಿಗಳು, ಮಾಲೀಕರ ಮನೆಯಲ್ಲಿ ಕಳ್ಳತನ ಮಾಡಿದರೆ ಹಣ ದೋಚಬಹುದೆಂದು ಸಂಚು ರೂಪಿಸಿದ್ದರು. ಮನೆಯಲ್ಲಿ ಲಕ್ಷ್ಮೀ ಅವರು ಒಬ್ಬರೇ ಇರುವುದನ್ನು ಗಮನಿಸಿದ್ದ ಆರೋಪಿಗಳು ಮನೆಗೆ ನುಗ್ಗಿದ್ದರು. ಬಳಿಕ ಚಿನ್ನಾಭರಣ ಮತ್ತು ನಗದು ಕೊಡುವಂತೆ ಬೇಡಿಕೆ ಇಟ್ಟಿದ್ದರು. ಚಿನ್ನಾಭರಣ ಹಾಗೂ ನಗದು ಕೊಡಲು ನಿರಾಕರಿಸಿದ್ದಕ್ಕೆ ಕೋಪಗೊಂಡಿದ್ದ ಆರೋಪಿಗಳು, ಲಕ್ಷ್ಮೀ ಅವರನ್ನು ಕೊಂದು ಮನೆಯ ಬೀರುವನ್ನು ತೆಗೆಯಲು ಯತ್ನಿಸಿದ್ದರು. ಆದರೆ, ಸಾಧ್ಯವಾಗಿರಲಿಲ್ಲ. ಬಳಿಕ ಮಾಂಗಲ್ಯ ಸರ ಕಳವು ಮಾಡಿ ಪರಾರಿ ಆಗಿದ್ದರು’ ಎಂದು ಪೊಲೀಸರು ಹೇಳಿದರು.

ಚಿತ್ರಾವಳಿ

ಎಂ.ಜಿ. ರಸ್ತೆಯಲ್ಲಿರುವ ಕೆನರಾ ಬ್ಯಾಂಕ್ ವೃತ್ತ ಕಚೇರಿಯಲ್ಲಿ ಕರ್ನಾಟಕ ರಾಜ್ಯೋತ್ಸವ ಸಮಾರಂಭವನ್ನು ಬುಧವಾರ ಆಚರಿಸಲಾಯಿತು. ಬ್ಯಾಂಕಿನ ಮಹಾಪ್ರಬಂಧಕರಾದ ಮಹೇಶ್ ಎಂ. ಪೈ, ಪುಷ್ಕರ ನಿನ್ಹಾ (ತಪಾಸಣಾ ವಿಭಾಗ), ಭಾರತೀಯ ರಿಸರ್ವ್ ಬ್ಯಾಂಕ್‌ನ ನಿವೃತ್ತ ಮುಖ್ಯ ಮಹಾಪ್ರಬಂಧಕ ಬಾಲು ಕೆಂಚಪ್ಪ, ಹಾಸ್ಯ ಭಾಷಣಕಾರ ವೈ.ವಿ. ಗುಂಡೂರಾವ್ ಉಪಸ್ಥಿತರಿದ್ದರು

ಬಿ.ಎಂ.ಎಸ್. ಪದವಿ ಪೂರ್ವ ಮಹಿಳಾ ಕಾಲೇಜು ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಅಂತರ ಕಾಲೇಜು ಸಮಾರಂಭದಲ್ಲಿ ಸ್ಪರ್ಧೆಯ ವಿಜೇತರಿಗೆ ಕಾಲೇಜಿನ ಪ್ರಾಂಶುಪಾಲ ಸುರೇಶ ಪಿ.ಎಚ್. ಅವರು ಟ್ರೋಫಿ ವಿತರಿಸಿದರು. ಉಪ ಪ್ರಾಂಶುಪಾಲರು ಸುನೀತಾ ಕೆ. ಉಪಸ್ಥಿತರಿದ್ದರು

ಕುರುಬರ ಸಂಘದ ಕಟ್ಟಡ : 12ಕ್ಕೆ ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕುರುಬ ಸಮಾಜದ ಪ್ರಗತಿಗಾಗಿ ಗಾಂಧಿನಗರದಲ್ಲಿ ಸುಮಾರು ₹35 ಕೋಟಿ ವೆಚ್ಚದಲ್ಲಿ ಆರು ಅಂತಸ್ತಿನ ಕಟ್ಟಡ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನ.12 ರಂದು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಸೋಮಣ್ಣ ಹೇಳಿದರು.

ಕೆ.ಆರ್.ಪುರ ಸಮೀಪದ ಬಾಬುಸಪಾಳ್ಯದಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿರುವ ಕುರುಬ ಸಮಾಜದ ಶೈಕ್ಷಣಿಕ, ಆರ್ಥಿಕ, ವಾಣಿಜ್ಯ, ಸಂಘದ ಚಟುವಟಿಕೆಗಳ ಉದ್ದೇಶಕ್ಕಾಗಿ ಸಚಿವ ಬೈರತಿ ಸುರೇಶ್ ನೇತೃತ್ವದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆರು ಅಂತಸ್ತಿನ ಕಟ್ಟಡದಲ್ಲಿ ಎರಡು ಅಂತಸ್ತಿನಲ್ಲಿ ಪಾರ್ಕಿಂಗ್ ವ್ಯವಸ್ಥೆ, ಎರಡು ಅಂತಸ್ತಿನಲ್ಲಿ ಸಮಾಜದ ಬಡ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಹಾಗೂ ವಾಣಿಜ್ಯ ಉದ್ದೇಶಕ್ಕಾಗಿ ವಾಣಿಜ್ಯ ಸಂಕೀರ್ಣ ಕಟ್ಟಡವನ್ನು ನಿರ್ಮಾಣ ಮಾಡಲಾಗುತ್ತದೆ ಎಂದರು.

ಸಂಘದ ನಿರ್ದೇಶಕ ಗುಂಜೂರು ರಾಮಕೃಷ್ಣಪ್ಪ, ‘ನೂರಾರು ವರ್ಷಗಳ ಇತಿಹಾಸವಿರುವ ಕುರುಬ ಸಮಾಜಕ್ಕೆ ವ್ಯವಸ್ಥಿತ ಕಟ್ಟಡವಿರಲಿಲ್ಲ. ಸಮಾಜದ ಬಡ ವಿದ್ಯಾರ್ಥಿಗಳಿಗೆ ಸಹಕಾರಿಯಾಗುವ ಸುಸಜ್ಜಿತ ಕಟ್ಟಡ ಇದಾಗಲಿದೆ. ಪೂರ್ವ ತಾಲ್ಲೂಕಿನಲ್ಲಿ ಕಾಳಿದಾಸ ಸಹಕಾರಿ ಬ್ಯಾಂಕ್ ಆರಂಭಿಸುವ ಉದ್ದೇಶವಿದೆ. ನಿವೇಶನ ದೊರಕಿದ ನಂತರ ಕಟ್ಟಡ ನಿರ್ಮಾಣ ಮಾಡುವ ಜೊತೆಗೆ ಶಾಖೆ ಆರಂಭಗೊಳ್ಳಲಿದೆ’ ಎಂದರು.

ಸಂಘದ ಖಜಾಂಚಿ ಕೃಷ್ಣಮೂರ್ತಿ, ಸಂಘದ ಪೂರ್ವ ಜಿಲ್ಲಾ ಅಧ್ಯಕ್ಷ ಆಗರ ಪ್ರಕಾಶ್, ಮಹಿಳಾ ಘಟಕದ ಅಧ್ಯಕ್ಷೆ ಪ್ರಭಾವತಿ, ಬಾಬುಸಪಾಳ್ಯ ನರಸಿಂಹಮೂರ್ತಿ, ವರ್ತೂರು ಚಂದ್ರು, ರಾಜು, ರಮೇಶ್, ಚಂದ್ರಣ್ಣ, ದಿನ್ನೂರು ಶ್ರೀನಿವಾಸ್, ಮರಿಯಪ್ಪ, ಕೃಷ್ಣಪ್ಪ, ಯಮಲೂರು ಲೋಕೇಶ್ ಭಾಗವಹಿಸಿದ್ದರು.

ಮಕ್ಕಳ ಹವಾಮಾನ ಕ್ರಿಯಾ ಸಭೆ ನಾಳೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಹವಾಮಾನ ಕ್ರಿಯಾ ಕೋಶವು ‘ಮಕ್ಕಳ ಹವಾಮಾನ ಕ್ರಿಯಾ ಸಭೆ’ಯನ್ನು ಪುರಭವನದಲ್ಲಿ ನ.7ರಂದು ಆಯೋಜಿಸಿದೆ.

ನಗರ ಮಟ್ಟದಲ್ಲಿ ಶಾಲಾ, ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಮೊದಲ ಬಾರಿಗೆ ಹವಾಮಾನ ಕ್ರಿಯೆ ಕುರಿತು ಚರ್ಚಿಸಲು, ವಿನೂತನ ಆಲೋಚನೆಗಳ ಮಂಡನೆ, ಸ್ಥಳೀಯ ನಾಯಕತ್ವವನ್ನು ವಹಿಸಲು ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ತಿಳಿಸಿದರು.

ಜಲ ವಿವಾದ: ವಿಶೇಷ ಪೀಠ ರಚನೆಗೆ ರಾಜ್ಯ ಒತ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಜಲವಿವಾದಗಳ ತ್ವರಿತ ವಿಚಾರಣೆಗೆ ವಿಶೇಷ ಪೀಠ ರಚನೆ ಮಾಡಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ರಾಜ್ಯದ ಜಲವಿವಾದಗಳ ಕುರಿತು ಸಮರ್ಥ ವಾದ ಮಂಡನೆ ಮಾಡುವ ಸಂಬಂಧ ಕಾನೂನು ತಜ್ಞರು ಹಾಗೂ ಜಲಸಂಪನ್ಮೂಲ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಕರ್ನಾಟಕ ಭವನದಲ್ಲಿ ಬುಧವಾರ ರಾತ್ರಿ ಸಭೆ ನಡೆಸಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿ, ‘ಸಭೆಯಲ್ಲಿ ಮೇಕೆದಾಟು, ಕೃಷ್ಣಾ, ಮಹದಾಯಿ ಜಲವಿವಾದಗಳ ಕುರಿತು ಚರ್ಚೆ ನಡೆಸಲಾಗಿದೆ. ಸುಪ್ರೀಂ ಕೋರ್ಟ್‌ನಲ್ಲಿ ಸಮರ್ಥವಾಗಿ ವಾದ ಮಂಡಿಸಲು ನಿರ್ದೇಶನ ನೀಡಲಾಗಿದೆ’ ಎಂದರು.

ಜಲವಿವಾದಗಳಿಗೆ ಸಂಬಂಧಿಸಿದಂತೆ ರಾಜ್ಯದ ಬಿಜೆಪಿ ಸಂಸದರು ಚಕಾರ ಎತ್ತುತ್ತಿಲ್ಲ. ಹೀಗಾಗಿ ರಾಜಕೀಯ ಒತ್ತಡ ಹೇರಲು ಆಗಿಲ್ಲ ಎಂದರು.

‘ರಾಷ್ಟ್ರೀಯ ನಾಯಕರ ಭೇಟಿ ಇಲ್ಲ’ ನಾನು ಹೈಕಮಾಂಡ್‌ನ ಯಾವುದೇ ನಾಯಕರನ್ನು ಭೇಟಿ ಮಾಡುವುದಿಲ್ಲ. ಬಿಹಾರ ವಿಧಾನಸಭಾ ಚುನಾವಣೆಯ ಪ್ರಚಾರ ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ರಾಷ್ಟ್ರೀಯ ನಾಯಕರು ನಿರ್ದೇಶನ ನೀಡಿದರೆ ಪಾಲಿಸುತ್ತೇನೆ ಎಂದರು.

ಮತ ಕಳವು ಬಗ್ಗೆ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲಾ ಅವರು ಎಲ್ಲ ರಾಜ್ಯ ಘಟಕಗಳ ಅಧ್ಯಕ್ಷರ ಜತೆಗೆ ಸಭೆ ನಡೆಸುತ್ತಿದ್ದಾರೆ. ರಾಜ್ಯದಲ್ಲೂ ಹೋರಾಟ ರೂಪಿಸುವ ಬಗ್ಗೆ ಚರ್ಚೆ ನಡೆದಿದೆ ಎಂದು ಹೇಳಿದರು.

ಕೋಲ್ಕತ್ತ ರೇಸ್

ಬ್ಲ್ಯಾಕ್ ಈಗಲ್ ಗೆಲ್ಲುವ ನಿರೀಕ್ಷೆ

ಹಿಲ್ಲಿಯಾರ್ಡ್ ಕಪ್ ಗುರುವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಬ್ಲ್ಯಾಕ್ ಈಗಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:15ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಹರ್ಮೊಡ್ 1, ಅಮಾಲ್ಫಿಟಾನ 4, ಫಾರ್ಚೂನ್ ವಾರಿಯರ್ 5
2ನೇ ರೇಸ್: ವಿಕ್ಟೋರಿಯಾ ಕ್ರಾಸ್ 4, ಪೋಲ್ಕಾ ಡಾಟ್ 5, ಗೋಲ್ಡ್ ಎಂಪೈರ್ 2
3ನೇ ರೇಸ್: ಜ್ಯೂರಿ 5, ರೋಮನ್ ಸ್ಪಿರಿಟ್ 6, ಆಭೂಷನ್ 3
4ನೇ ರೇಸ್: ಕಾರ್ಟಾಡೊ 1, ಲಾಮಿಕ 8, ಟೊಗೊ 4
5ನೇ ರೇಸ್: ಕ್ಯಾಶ್ ಯುವರ್ ಲಕ್ 2, ಥ್ರೀ ಲಿಟ್ಲ್ ವರ್ಡ್ಸ್ 4, ಡ್ಯಾನ್ಸಿಂಗ್ ಕ್ವೀನ್ 10
6ನೇ ರೇಸ್: ಬ್ಲ್ಯಾಕ್ ಈಗಲ್ 1, ಕ್ಲಿಫರ್ಡ್ 3, ಮಿಸ್ಟಿ 5
7ನೇ ರೇಸ್: ಪಂಟಾಜಿ 1, ಎಲಿಯನೋರ 5, ಇನ್‌ಟು ದಿ ಸ್ಟಾರ್ಮ್ 6

ಉತ್ತಮ ಬೆಟ್: ಪಂಟಾಜಿ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಎಂಎಫ್‌ಎಆರ್ ಸ್ಟುಡೆಂಟ್ಸ್ ಯೂನಿಯನ್ ಎಫ್‌ಸಿ ವಿರುದ್ಧದ ಪಂದ್ಯದಲ್ಲಿ ಗೋಲು ಗಳಿಸಿ ಸಂಭ್ರಮಿಸಿದ ಎಫ್‌ಸಿ ಅಗ್ನಿಪುತ್ರ ತಂಡದ ಗೌತಮ್ ಆರ್. (ಎಡ)
–ಚಿತ್ರ: ಬಿ.ಕೆ.ಜನಾರ್ದನ

ಫುಟ್‌ಬಾಲ್: ಅಗ್ನಿಪುತ್ರ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಎಫ್‌ಸಿ ಅಗ್ನಿಪುತ್ರ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಬುಧವಾರ 3–1ರಿಂದ ಎಂಎಫ್‌ಎಆರ್ ಸ್ಟುಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಸಲ್ಮಾನ್ ಉಲ್ ಫಾರಿಸ್ ಅವರು 34ನೇ ನಿಮಿಷದಲ್ಲಿ ಗೋಲು ಗಳಿಸಿ ಎಂಎಫ್‌ಎಆರ್ ತಂಡಕ್ಕೆ ಆರಂಭಿಕ ಮುನ್ನಡೆ ತಂದುಕೊಟ್ಟರು. ಅಗ್ನಿಪುತ್ರ ತಂಡದ ಕ್ರಿಸ್ಪಿನ್ ಕ್ಲೀಟಸ್ ಅವರು 37ನೇ ನಿಮಿಷದಲ್ಲಿ ಗೋಲು ಹೊಡೆದು ಸಮಬಲ ಸಾಧಿಸಿದರು. ಬಳಿಕ, ಗೌತಮ್ ಆರ್. (61ನೇ ನಿ.) ಹಾಗೂ ಅಫ್ಜರ್ ನೂರಾನಿ (99 + 2ನೇ ನಿ.) ಅವರು ಗೋಲು ಹೊಡೆದು ಜಯ ತಂದಿತ್ತರು.

ಇನ್ನೊಂದು ಪಂದ್ಯದಲ್ಲಿ ಕೊಡಗು ಎಫ್‌ಸಿ ತಂಡವು 3–0ಯಿಂದ ಬೆಂಗಳೂರು ಸಿಟಿ ಫುಟ್‌ಬಾಲ್ ಕ್ಲಬ್ ತಂಡದ ವಿರುದ್ಧ ಸುಲಭ ಜಯ ಸಾಧಿಸಿತು. ಲಾಲ್ಕರಾಸ್ಮಾವಿಯಾ (35ನೇ ನಿ. ಹಾಗೂ 57ನೇ ನಿ.) ಅವಳಿ ಗೋಲು ಹೊಡೆದರೆ, ಬಿ.ಎಸ್. ಮೃಣಾಲ್ ಮುತ್ತಣ್ಣ (8ನೇ ನಿ.) ಒಂದು ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ವಿ.ವಿಘ್ನೇಶ್ (41ನೇ ನಿ.) ಹಾಗೂ ಎನ್. ರಾಕೇಶ್ ಸಿಂಗ್ (89ನೇ ನಿ.) ಅವರ ಗೋಲಿನ ನೆರವಿನಿಂದ ಕಿಕ್‌ಸ್ಟಾರ್ಟ್ ಫುಟ್‌ಬಾಲ್ ಕ್ಲಬ್ ತಂಡವು 2–0ಯಿಂದ ಸ್ಪೋರ್ಟಿಂಗ್ ಕ್ಲಬ್ ತಂಡವನ್ನು ಸುಲಭವಾಗಿ ಮಣಿಸಿತು.

ಕೃತಕ ಅಂಗ ಅಳತೆ ಶಿಬಿರ

ಬೆಂಗಳೂರು: ಕರ್ನಾಟಕ ಮಾರವಾರಿ ಸಮಾಜವು (ಕೆಎಂಎಸ್) ಭಗವಾನ್ ಮಹಾವೀರ ಜೈನ್ ವಿಕಲಾಂಗ್ ಸಹಾಯತಾ ಸಮಿತಿ (ಜೈಪುರ್ ಫೂಟ್) ಸಹಯೋಗದಲ್ಲಿ ‘ಕೃತಕ ಕಾಲು ಉಚಿತ ಶಿಬಿರ’ ಆಯೋಜಿಸಲಾಗಿದೆ.

ಕೃತಕ ಕೈಗಳು, ಕ್ಯಾಲಿಪರ್, ಕ್ರಚಸ್ ಸೇರಿದಂತೆ ಸಂಬಂಧಿತ ಸಾಧನಗಳ ಜೋಡಣೆ ನಡೆಯಲಿದೆ. ಸಾಧನಗಳಿಗೆ ಸಂಬಂಧಪಟ್ಟವರ ಅಳತೆ ಪಡೆಯಲು ಡಿ.6ರಂದು ಬೆಳಿಗ್ಗೆ 8ರಿಂದ ಮಧ್ಯಾಹ್ನ 3ರವರೆಗೆ ಮಹಾರಾಜ ಅಗ್ರಸೇನ್ ಭವನ್, ಅಶೋಕ ಪಿಲ್ಲರ್ ಬಳಿ, ಜಯನಗರ, ಬೆಂಗಳೂರು- 560011 ಇಲ್ಲಿ ಶಿಬಿರ ಆಯೋಜಿಸಲಾಗಿದೆ ಎಂದು ಕೆಎಂಎಸ್ ಅಧ್ಯಕ್ಷ ಪ್ರವೀಣ್ ತುಳಸಿಯಾನ್, ಯೋಜನಾ ನಿರ್ದೇಶಕ ಬಿಮಲ್ ಕುಮಾರ್ ಸರೋಗಿ ತಿಳಿಸಿದ್ದಾರೆ.

ಅಗತ್ಯ ಇರುವವರು ಸಂದೀಪ್ ಪೊಡ್ಡಾರ್ (8792288404), ರಿಂಕೇಶ್ ಬರೊಲಿಯಾ (9886521885) ಅವರನ್ನು ಸಂಪರ್ಕಿಸಿ ನೋಂದಣಿ ಮಾಡಿಕೊಳ್ಳಲು ಕೋರಿದ್ದಾರೆ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಕಡ್ಡಾಯ

‘ಅನ್ಯ ಭಾಷಿಕರಿಗೆ ಕನ್ನಡ ಪಾಠ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಹೊರ ರಾಜ್ಯಗಳ ಅನ್ಯಭಾಷೆಯ ವಿದ್ಯಾರ್ಥಿಗಳಿಗೆ ಕನ್ನಡ ಕಲಿಕೆಯನ್ನು ಕಡ್ಡಾಯಗೊಳಿಸಲಾಗಿದೆ. ವಿಶ್ವವಿದ್ಯಾಲಯದ ಬಹುತೇಕ ಆಡಳಿತ ವ್ಯವಹಾರ ಕನ್ನಡದಲ್ಲೇ ನಡೆಸಲಾಗುತ್ತಿದೆ ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಸಿ.ಭಗವಾನ್ ಹೇಳಿದರು.

ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಹಯೋಗದಲ್ಲಿ ಬುಧವಾರ ಆಯೋಜಿಸಲಾಗಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಕನ್ನಡ ಭಾಷೆಯ ಪ್ರಚಾರ–ಪ್ರಸಾರ ವಿಶ್ವವಿದ್ಯಾಲಯದ ಸಾಂಸ್ಕೃತಿಕ ಹೊಣೆಗಾರಿಕೆ, ಬೌದ್ಧಿಕ ಕರ್ತವ್ಯವೂ ಆಗಿದೆ. ಕನ್ನಡ ಬರಹಗಾರರನ್ನು ಪ್ರೋತ್ಸಾಹಿಸಲು ಹಾಗೂ ವೈದ್ಯಕೀಯ ಕನ್ನಡ ಸಾಹಿತ್ಯವನ್ನು ವಿಸ್ತರಿಸಲು ಪ್ರಸಾರಾಂಗದ ಮೂಲಕ ಅಮೂಲ್ಯ ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದೆ’ ಎಂದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ನಟ ಡಾಲಿ ಧನಂಜಯ್ ಮಾತನಾಡಿದರು

‘ಕನ್ನಡ ವ್ಯವಹಾರ ಭಾಷೆಯಾಗಬೇಕು ಎಂಬ ಸಂಕಲ್ಪದ ಫಲವಾಗಿ ವಿಶ್ವವಿದ್ಯಾಲಯದ ಬಹುತೇಕ ಕಾರ್ಯಕ್ರಮಗಳು ಕನ್ನಡದಲ್ಲೇ ನಡೆಯುತ್ತಿವೆ. ವಿಶ್ವವಿದ್ಯಾಲಯದ ಗುರುತಿನ ಚಿಹ್ನೆಯಾಗಿ, ಭಾಷಾ ಅಸ್ಮಿತೆಯ ಸಂಕೇತವಾಗಿ ನಮ್ಮದೇ ಆದ ಕನ್ನಡ ಧ್ಯೇಯ ಗೀತೆಯನ್ನು ಪರಿಚಯಿಸುತ್ತಿದ್ದೇವೆ’ ಎಂದು ಮಾಹಿತಿ ನೀಡಿದರು.

ನಟ ಡಾಲಿ ಧನಂಜಯ ಮಾತನಾಡಿ, ‘ವೈದ್ಯನಾಗಬೇಕು ಎನ್ನುವ ಆಸೆ ಇತ್ತು. ಆದರೆ, ಕಡಿಮೆ ರ್‍ಯಾಂಕ್ ಬಂತು. ಹಣ ಕೊಟ್ಟು ಓದುವ ಅವಕಾಶ ಇಲ್ಲದ್ದಕ್ಕೆ ಎಂಜಿನಿಯರ್ ಕೋರ್ಸ್ ಮುಗಿಸಿದೆ. ವೈದ್ಯೆಯನ್ನು ಮದುವೆಯಾಗಿರುವುದು ಆ ಕೊರತೆಯನ್ನು ನೀಗಿಸಿದೆ’ ಎಂದರು.

ಹಾಸ್ಯಲೇಖಕ ಎಂ.ಎಸ್. ನರಸಿಂಹಮೂರ್ತಿ, ಕುಲಸಚಿವ ಅರ್ಜುನ್ ಒಡೆಯರ್, ಪರೀಕ್ಷಾಂಗ ಕುಲಸಚಿವ ಎಸ್.ರಿಯಾಜ್ ಬಾಷಾ, ಹಣಕಾಸು ಅಧಿಕಾರಿ ಬಿ.ಕೆ. ಗಂಗಾಧರ ಉಪಸ್ಥಿತರಿದ್ದರು.

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು

Raichur Institute of Medical Sciences, Raichur

(ಸರ್ಕಾರದ ಸ್ವಾಯತ್ತ ಸಂಸ್ಥೆ) ಹೈದ್ರಾಬಾದ್ ರೋಡ್, ರಾಯಚೂರು –584102

Phone /Fax-08532-238488/89

www.rims-raichur.karnataka.gov.in info@rims-raichur.com

ರಿಮ್ಸ್/ಸಿಬ್ಬಂದಿ(1)/ನೇಮಕಾತಿ/2025-26/601 ದಿನಾಂಕ:04.11.2025

ಅಧಿಸೂಚನೆ

ಈ ಕಛೇರಿಯ ಪರಿಷ್ಕೃತ ನೇಮಕಾತಿ ಅಧಿಸೂಚನೆ ಸಂ. ರಿಮ್ಸ್/ಸಿಬ್ಬಂದಿ(1)/ನೇಮಕಾತಿ/2025-26/536 ದಿನಾಂಕ:01.10.2025 ಮತ್ತು 24.10.2025 ರಂದು ಪ್ರಕಟಿಸಲಾದ ನೇಮಕಾತಿ ಅಧಿಸೂಚನೆಗೆ ಸಮಾಜ ಕಲ್ಯಾಣ ಇಲಾಖೆ, ರಾಯಚೂರು ಇವರು ಮೀಸಲಾತಿಯನ್ನು ಪರಿಶೀಲಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಪ್ರಕಟಿಸಲಾದ ನೇಮಕಾತಿ ಅಧಿಸೂಚನೆಯನ್ನು ರದ್ದುಪಡಿಸಲಾಗಿದೆ.

ಸಹಿ/– ನಿರ್ದೇಶಕರು

DIP/RCR/517/KSMC&A/518/2025-26 ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರಾಯಚೂರು

Infosys

Navigate your next

ಇನ್‌ಫೋಸಿಸ್ ಲಿಮಿಟೆಡ್

ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್): L85110KA1981PLC013115

ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560100

ದೂರವಾಣಿ: +91 80 2852 0261, ಫ್ಯಾಕ್ಸ್: +91 80 2852 0362

investors@infosys.com, www.infosys.com

ಸೂಚನೆ

ಕಂಪನಿಯ ಈಕ್ವಿಟಿ ಷೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ವರ್ಗಾವಣೆ (ಐಇಪಿಎಫ್) ಕುರಿತು

ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ ಪ್ರಾಧಿಕಾರ (ಲೆಕ್ಕಪತ್ರಗಳು, ಪರಿಶೋಧನೆ, ವರ್ಗಾವಣೆ ಮತ್ತು ಮರುಪಾವತಿ) ನಿಯಮಾವಳಿಗಳು, 2016 (ನಿಯಮಾವಳಿಗಳು), ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಇದರ ಅನ್ವಯ ಕೋರಿಕೆ ಬಾರದ ಏಳು ವರ್ಷಗಳವರೆಗೆ ಉಳಿದ, ಆರ್ಥಿಕ ವರ್ಷ 2018–19ರಲ್ಲಿ ಘೋಷಿಸಲಾದ ವಿಶೇಷ ಲಾಭಾಂಶ ಮತ್ತು ತತ್ಸಂಬಂಧಿತ ಷೇರುಗಳನ್ನು ಮೇಲೆ ಹೇಳಲಾದ ನಿಯಮಾವಳಿಗಳನುಸಾರವಾಗಿ ಐಇಪಿಎಫ್ ಖಾತೆಗೆ ದಿನಾಂಕ **ಫೆಬ್ರವರಿ 10, 2026** ರಂದು ವರ್ಗಾಯಿಸಲಾಗುವುದು ಎಂದು ಷೇರುದಾರರಿಗೆ ಈ ಮೂಲಕ ಸೂಚನೆ ನೀಡಲಾಗಿದೆ.

ನಿಯಮಾವಳಿಗಳನುಸಾರವಾಗಿ ಕಂಪನಿಯು ಯಾರ ಷೇರುಗಳು ಐಇಪಿಎಫ್‌ಗೆ ವರ್ಗಾವಣೆಯಾಗಲು ಅರ್ಹವಾಗಿವೆಯೋ ಅಂತಹ ಷೇರುದಾರರಿಗೆ ಸೂಚನಾ ಪತ್ರಗಳನ್ನು ವೈಯಕ್ತಿಕವಾಗಿ ಕಳುಹಿಸಲಾಗುತ್ತಿದೆ. ಅಂತಹ ಷೇರುದಾರರ ಪೂರ್ಣವಿವರಗಳನ್ನು ಕಂಪನಿಯ ಜಾಲತಾಣದಲ್ಲಿ ಒದಗಿಸಲಾಗಿದೆ:https://www.infosys.com/investors/shareholder-services/Pages/transfer-equity-shares.aspx.

ಈ ಸಂಬಂಧವಾಗಿ ಕೆಳಕಂಡ ಅಂಶಗಳನ್ನು ದಯಮಾಡಿ ಗಮನಿಸಿ:

1) **ಷೇರುಗಳನ್ನು ನೀವು ಭೌತಿಕ ರೂಪದಲ್ಲಿ ಹೊಂದಿದ್ದರೆ:** ಷೇರುಗಳ ದ್ವಿಪ್ರತಿ(ಗಳನ್ನು)ಯನ್ನು ನೀಡಿ ಐಇಪಿಎಫ್‌ಗೆ ವರ್ಗಾಯಿಸಲಾಗುವುದು. ನಿಮ್ಮ ಹೆಸರಿನಲ್ಲಿ(ರುಗಳಲ್ಲಿ) ನೋಂದಾಯಿಸಲ್ಪಟ್ಟಿದ್ದ ಮೂಲ ಷೇರುಪತ್ರ(ಗಳು) ಸ್ವಯಂ ರದ್ದಾಗುತ್ತವೆ.

2) **ಷೇರುಗಳನ್ನು ನೀವು ವಿದ್ಯುನ್ಮಾನ ರೂಪದಲ್ಲಿ ಹೊಂದಿದ್ದಿರೆ:** ಐಇಪಿಎಫ್ ಖಾತೆಗೆ ವರ್ಗಾವಣೆಗೆ ಅರ್ಹವಾದ ನಿಮ್ಮ ಷೇರುಗಳನ್ನು ನಿಮ್ಮ ಡಿಮ್ಯಾಟ್ ಖಾತೆಯಿಂದ ವರ್ಗಾವಣೆ ಮಾಡಲಾಗುವುದು.

ಒಂದು ವೇಳೆ ದಿನಾಂಕ **ಫೆಬ್ರವರಿ 7, 2026**ರ ಒಳಗೆ ಕ್ರಮಬದ್ಧ ಕೋರಿಕೆ ಬರದಿದ್ದಲ್ಲಿ, ಕಂಪನಿಯು ಲಾಭಾಂಶ ಮತ್ತು ತತ್ಸಂಬಂಧಿತ ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸುವ ಪ್ರಕ್ರಿಯೆಯನ್ನು, ಯಾವುದೇ ಸೂಚನೆ ನೀಡದೆ ಜಾರಿಮಾಡುತ್ತದೆ. ನಿಯಮಾವಳಿಗಳನುಸಾರ ಐಇಪಿಎಫ್‌ಗೆ ವರ್ಗಾವಣೆಯಾದ ಕೋರಿಕೆ ಬಾರದ ಲಾಭಾಂಶದ ಹಣ/ತತ್ಸಂಬಂಧಿತ ಷೇರುಗಳ ಕುರಿತಾಗಿ ಕಂಪನಿಗೆ ಯಾವುದೇ ಬಾಧ್ಯತೆಯಿರುವುದಿಲ್ಲವೆಂಬುದನ್ನು ಈ ಮೂಲಕ ಸ್ಪಷ್ಟಪಡಿಸಲಾಗಿದೆ. ಸದರಿ ಷೇರುದಾರರು ತಮ್ಮ ಲಾಭಾಂಶ ಮತ್ತು ಷೇರುಗಳನ್ನು ಐಇಪಿಎಫ್‌ನಿಂದ ಮರಳಿ ಪಡೆಯಲು ಕಂಪನಿಯಿಂದ ಹಕ್ಕು ಪತ್ರ ಪಡೆದ ನಂತರ ಐಇಪಿಎಫ್‌ಗೆ ನಿಗದಿತ ಐಇಪಿಎಫ್–5 ನಮೂನೆಯಲ್ಲಿ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಿ ತಮ್ಮ ಷೇರುಗಳನ್ನು ಹಾಗೂ ಲಾಭಾಂಶವನ್ನು ಪಡೆಯಬಹುದಾಗಿರುತ್ತದೆ.

ಸದರಿ ವಿಷಯ ಕುರಿತಾದ ಯಾವುದೇ ವಿಚಾರಣೆಗಳಿದ್ದಲ್ಲಿ ಷೇರುದಾರರು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಾದ ಶ್ರೀಮತಿ ಶೋಭಾ ಆನಂದ್, ಉಪಾಧ್ಯಕ್ಷರು, ಮೆ॥ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ವಿಭಾಗ: ಇನ್‌ಫೋಸಿಸ್ ಲಿಮಿಟೆಡ್, ಸೆಲೆನಿಯಮ್ ಬಿಲ್ಡಿಂಗ್, ಟವರ್ ಬಿ, ಪ್ಲಾಟ್ ನಂ. 31–32, ಫೈನಾನ್ಶಿಯಲ್ ಡಿಸ್ಟ್ರಿಕ್ಟ್, ನಾನಕ್ರಮಗೂಡ, ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ, ರಂಗಾರೆಡ್ಡಿ, ತೆಲಂಗಾಣ, ಭಾರತ – 500032. ದೂರವಾಣಿ: +91 40 6716 2222 ಅಥವಾ ಇ ಅಂಚೆ: einward.ris@kfintech.com ಸಂಪರ್ಕಿಸಲು ಕೋರಲಾಗಿದೆ.

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/–
ಎ.ಜಿ.ಎಸ್. ಮಣಿಕಂಠ
ಕಂಪನಿ ಕಾರ್ಯದರ್ಶಿ
ಸದಸ್ಯತ್ವ ಸಂಖ್ಯೆ ಎ21918

ನವೆಂಬರ್ 5, 2025
ಬೆಂಗಳೂರು, ಭಾರತ

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ,

ಕ್ಯಾನ್ಸರ್ ಸಂಶೋಧನೆ ಮತ್ತು ತರಬೇತಿ ಕೇಂದ್ರ (ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)

ಪ್ರಾದೇಶಿಕ ಅರ್ಬುದ ಸಂಶೋಧನಾ ಮತ್ತು ಚಿಕಿತ್ಸಾ ಕೇಂದ್ರ

ಡಾ॥ ಎಂ.ಎಚ್. ಮರೀಗೌಡ ರಸ್ತೆ, ಬೆಂಗಳೂರು–560029 ದೂ: 080–6669 7999

NO.KMIO/SME(1)/TENDER/M.EQUIP/H&N/467/2025-26 Date: 05.11.2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಇವರು, ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡವುಗಳಿಗಾಗಿ ದ್ವಿಲಕೋಟೆ ಬಿಡ್ ಪದ್ಧತಿಯಲ್ಲಿ ಆನ್‌ಲೈನ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ

Sl No.	Tender No. & Date	Name of the Items
1	KMIO/SME(1)/TENDER/M.EQUIP/H&N/467/2025-26, DT: 05.11.2025	Supply and Installation of Medical Equipments to the Dept. of Head and Neck at KMIO., (Estimated Budget: 1.6 Cr)
2	KMIO/SME(1)/TENDER/M.EQUIP/DMB/468/2025-26, DT: 05.11.2025	Supply and Installation of Medical Equipments to the Dept. of Microbiology at KMIO (Estimated Budget: 24 Lakh)
3	KMIO/SME(1)/TENDER/M.EQUIP/DMO/469/ 2025-26, DT: 05.11.2025	Supply and Installation of Medical Equipments to the Dept. of Medical Oncology at KMIO(Estimated Budget: 88 lakh)
4	KMIO/SME(1)/TENDER/M.EQUIP/GYNAEC/470/ 2025-26, DT: 05.11.2025	Supply and Installation of Medical Equipments to the Dept. of Gynaec Oncology at KMIO (Estimated Budget: 1.63 Cr)
5	KMIO/SME(1)/TENDER/M.EQUIP/DBC/471/2025-26, DT: 05.11.2025	Supply and Installation of Medical Equipments to the Dept. of Biochemistry at KMIO (Estimated Budget: 25 Lakh)
6	KMIO/SME(1)/TENDER/ GENERAL DRUGS & IV FLUIDS/472/2025-26, DT: 05.11.2025	Supply of General Drugs and IV Fluids to KMIO., (Estimated Budget: 3.96 Cr)
7	KMIO/SME(1)/TENDER/ HOSPITAL CONSUMABLES/473/2025-26, DT: 305.11.2025	Supply of Hospital Consumables items to KMIO., (Estimated Budget: 4.33 Cr)
8	KMIO/SME(1)/TENDER/ ANAESTHESIA DRUGS & SURGICALS/ 474/2025-26, DT: 05.11.2025	Supply of Anaesthesia Drugs and Surgical items to KMIO., (Estimated Budget: 3.87 Cr)
9	KMIO/SME(1)/TENDER/INTERVEN-TIONAL RADIOLOGY/475/2025-26, DT: 05.11.2025	Supply of Interventional Radiology and Radiology Items to KMIO., (Estimated Budget: 4.03 Cr)
10	KMIO/SME(1)/TENDER/HNS/476/ 2025-26, DT: 05.11.2025	Supply of Hospital Necessary Supply items to KMIO., (Estimated Budget: 2.35 Cr)
11	KMIO/MNT/TENDER/AC/477/ 2025-26, DT: 05.11.2025	Supply and Installation of Split AC and Ductable AC to KMIO., (Estimated Budget: 23.5 Lakh)
12	KMIO/SME(1)/TENDER/DRUGS/ 478/2025-26, DT: 05.11.2025	Supply of Anticancer Injection to KMIO., (Estimated Budget: 1.55 Cr)
13	KMIO/SME(1)/TENDER/ ORAL DRUGS/479/2025-26, DT: 05.11.2025	Supply of Anticancer Oral Durgs to KMIO., (Estimated Budget: 34.83 lakh)
14	KMIO/SME(1)/TENDER/ ANTIBIOTIC AND ANTIFUNGAL DRUGS/480/ 2025-26, DT: 05.11.2025	Supply of Antibiotic and Antifungal Drugs to KMIO., (Estimated Budget: 1.43Cr)
15	KMIO/SME(1)/TENDER/DRUGS/ 481/2025-26, DT: 05.11.2025	Short Term tender for Supply of Drugs to KMIO. (Estimated Budget: 20.30 Lakh)
16	KMIO/MNT/ELECTRICAL/446/ 2025-26, DT: 05.11.2025 (Call-2)	Providing CAMC (Comprehensive Annual Maintenance contract services) services for Air conditioning units, Air Handling units (AHU, s) 24x7 at various Units including BMT(Bone Marrow Transplant unit) at KMIO (Estimated Cost: Rs. 90.32 Lakhs)

ಬಿಡ್ ದಾಖಲೆಗಳು ಕ್ರಮ ಸಂಖ್ಯೆ: 01 ರಿಂದ 10ರ ವರಗೆ ದಿನಾಂಕ: 10.11.2025 ರಿಂದ 10.12.2025ರ ವರೆಗೆ, ಕ್ರಮ ಸಂಖ್ಯೆ: 11 ರಿಂದ 14ರ ವರಗೆ ದಿನಾಂಕ: 10.11.2025 ರಿಂದ 24.11.2025ರ ವರೆಗೆ ಮತ್ತು ಕ್ರಮ ಸಂಖ್ಯೆ: 15 ರಿಂದ 16ರ ವರಗೆ ದಿನಾಂಕ: 10.11.2025 ರಿಂದ 19.11.2025ರ ವರಗೆ ಆನ್‌ಲೈನ್‌ನಲ್ಲಿ ಲಭ್ಯವಿರುತ್ತದೆ. ಬಿಡ್ಡರುಗಳು ಬಿಡ್‌ದಾಖಲೆಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ನೋಡಬಹುದು ಮತ್ತು ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್‌ಗಳನ್ನು ಮತ್ತು ಶುಲ್ಕಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಸಲ್ಲಿಸಬಹುದು. ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 10.12.2025, 24.11.2025 ಮತ್ತು 19.11.2025ರ ಸಂಜೆ 4:00 ಗಂಟೆಯವರೆಗೆ. ಟೆಂಡರ್ ಅಂಗೀಕಾರ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀಕಾರ/ತಿರಸ್ಕಾರ/ರದ್ದುಗೊಳಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.

ಸಹಿ/–
ಆರ್ಥಿಕ ಸಲಹೆಗಾರರು

ಡಿಐಪಿಆರ್/ಎಸ್‌ಐ/3592/2025–26

National Dairy Development Board

PB No. 40, Anand, Gujarat-388001, Tel: 02692-260 148/149/160 Fax: 02692-260 159

Website: http://www.nddb.coop, Email: purchase@nddb.coop

INVITATION FOR BIDS (IFB) / LOCAL COMPETITIVE BIDDING (LCB)

Bids are invited on behalf of Service Recipients/ NDDB from eligible bidders for the works listed below:

Sl. No.	Description of Works/ Bid Reference	Estd.Cost (₹) incl GST /Duration	Event Start / Close Date	Bid Submission / Opening Date & Time
A	Civil, Structural, Water Supply, Sanitary & Other Misc. works including Internal Electrification works for:			
I	Renovation of Office Building and Miscellaneous Civil Repairs at FES, Anand. NDDB/HO/Purchase/72/25-26/ET/72 [Civil-ANAND]	250 Lakh / 06 Months	06.11.25 27.11.25	27.11.25 15:00 hrs. 27.11.25 15:30 hrs.
II	Road work, Boundary wall & other miscellaneous works for Dairy Plant at Davanagere, Karnataka. NDDB/HO/Purchase/73/25-26/ET/73 [Civil-DAVANAGERE]	1057 Lakh / 08 Months	08.11.25 01.12.25	01.12.25 15:00 hrs. 01.12.25 15:30 hrs.
B	Design, Supply, Installation, Testing and Commissioning of the following :			
I	50 TLPD LMP Dairy (EXP. to 1.0 LLPD) at Giridih, Jharkhand NDDB/HO/Purchase/76/25-26/ET/76 [LMP-GIRIDIH]	1150 Lakh/ 12 Months	07.11.25 28.11.25	28.11.25 15:00 hrs. 28.11.25 15:30 hrs.
II	Upgradation of Substation at NDDB Kolkata, including DSITC of 40 kVA DG Set with Buy-Back of Existing Equipment. NDDB/HO/Purchase/75/25-26/ET/75 [Substation-KOLKATA]	115 Lakh 10 Months	07.11.25 28.11.25	28.11.25 15:00 hrs. 28.11.25 15:30 hrs.

For further details pertaining to IFB and for downloading the bid document, please visit these websites : www.nddb.coop, and www.mstcecommerce.com/eprocn For any clarification please contact Group Head (Purchase), NDDB, Anand 388001

NB: Any corrigendum/modification etc. will be posted only on these websites.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ನೋಂದಾಯಿತ ಕಚೇರಿ: 30/1, 1ನೇ ಮತ್ತು 2ನೇ ಮಹಡಿ, ಬಿಬಿಎಂಪಿ ಕಟ್ಟಡ,
ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ, ವಸಂತ ನಗರ, ಬೆಂಗಳೂರು – 560051.

ಸಂಖ್ಯೆ: ಡಿಜಿಎಂ–3/ಬಿಎಸ್‌ಡಬ್ಲ್ಯೂಎಂಎಲ್/ಪಿಆರ್/280/2025–26 ದಿನಾಂಕ: 05.11.2025

ಆಸಕ್ತಿ ಅಭಿವ್ಯಕ್ತಿಪಡಿಸುವಿಕೆಗಾಗಿ ಆಹ್ವಾನ (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಲಿಮಿಟೆಡ್ ಅವರು ಅರ್ಹ ಸಂಸ್ಥೆಗಳು / ಏಜೆನ್ಸಿಗಳು / ವ್ಯಕ್ತಿಗಳಿಂದ ಕೆಳಕಂಡ ಕಾಮಗಾರಿಗಾಗಿ ಆಸಕ್ತಿ ಅಭಿವ್ಯಕ್ತಪಡಿಸುವಿಕೆ(EOI) ಆಹ್ವಾನಿಸುತ್ತದೆ

ಕಾಮಗಾರಿಯ ಹೆಸರು
ತರಬೇತಿ ಸಂಸ್ಥೆಗಳೊಂದಿಗೆ ಸಮನ್ವಯ, ಮಾಡ್ಯೂಲ್‌ಗಳ ಪರಿಶೀಲನೆ, ಉತ್ತಮ ಅಭ್ಯಾಸಗಳ ಗುರುತಿಸುವಿಕೆ, ಜ್ಞಾನ ನಿರ್ವಹಣೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಇತ್ಯಾದಿಗಳಿಗಾಗಿ ಸ್ವಚ್ಛ ಭಾರತ ಮಿಷನ್ ಘಟಕಗಳ ವಿವಿಧ ಕ್ಷೇತ್ರಗಳಲ್ಲಿ 8 ತಜ್ಞರನ್ನು ಒಳಗೊಂಡ ಸಂಪನ್ಮೂಲ ಕೇಂದ್ರವನ್ನು ಸ್ಥಾಪಿಸುವ ಕಾಮಗಾರಿ.

1. ಅಂದಾಜುಗಳನ್ನು ತಯಾರಿಸಲು ಮಾರುಕಟ್ಟೆ ದರಗಳನ್ನು ಪಡೆಯಲು ಮಾತ್ರ ಈ ಆಸಕ್ತಿ ಅಭಿವ್ಯಕ್ತಿಯನ್ನು ಆಹ್ವಾನಿಸಲಾಗಿದೆ.
2. ಆಸಕ್ತಿಯ ಅಭಿವ್ಯಕ್ತಿಯ (ಇಓಐ) ವಿವರಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ https://kppp.karnataka.gov.in/ ನಲ್ಲಿ ದಿನಾಂಕ: 07.11.2025 ರಿಂದ ತೆಗೆದುಕೊಳ್ಳಬಹುದು ಅಥವಾ ಡೌನ್‌ಲೋಡ್ ಮಾಡಬಹುದು.
3. ಪ್ರತಿಕ್ರಿಯೆ ಸ್ವೀಕರಿಸಲು ಕೊನೆಯ ದಿನಾಂಕ (ಕೊನೆಯ ದಿನಾಂಕ): **20.11.2025 ರಂದು ಸಂಜೆ 4.00 ಗಂಟೆಯವರೆಗೆ.**
4. ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರತಿಕ್ರಿಯೆಗಳನ್ನು ತೆರೆಯುವ **ದಿನಾಂಕ: 21.11.2025 ರಂದು ಸಂಜೆ 4.30 ಗಂಟೆಯ ನಂತರ.**
5. ಸ್ವೀಕರಿಸಿದ ಯಾವುದೇ ಅಥವಾ ಎಲ್ಲಾ ಪ್ರತಿಕ್ರಿಯೆಗಳನ್ನು ಸ್ವೀಕರಿಸುವ / ತಿರಸ್ಕರಿಸುವ ಹಕ್ಕನ್ನು ಯಾವುದೇ ಕಾರಣಗಳನ್ನು ನೀಡದೆ **ಬಿಎಸ್‌ಡಬ್ಲ್ಯೂಎಂಎಲ್‌ನ ಉಪ ಪ್ರಧಾನ ವ್ಯವಸ್ಥಾಪಕರು–3** ರವರಿಗೆ ಕಾಯ್ದಿರಿಸಲಾಗಿದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/3622/ಎಎಎ/2025–26

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪರು–2 ರವರ ಕಛೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ,
ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052. ಇ–ಮೇಲ್: bswmlee4@gmail.com

ಸಂಖ್ಯೆ: ಡಿಜಿಎಂ–2/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/24/2025–26 ದಿನಾಂಕ: 05–11–2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಉಪ ಪ್ರಧಾನ ವ್ಯವಸ್ಥಾಪಕರು–2, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ಇವರು ಬೆಂಗಳೂರಿನ ಬಿಎಸ್‌ಡಬ್ಲ್ಯೂಎಂಎಲ್ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಲಿಮಿಟೆಡ್‌ನ ಉಪ ಪ್ರಧಾನ ವ್ಯವಸ್ಥಾಪಕರು–2, ಇವರು ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಕೆಲಸಗಳಿಗೆ ಯೋಜನಾ ನಿರ್ವಹಣಾ ಸಲಹಾ ಸೇವೆಗಳಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್‌ಗಳು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಸೇವೆಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು (ಉದಾ. https://kppp.karnataka.gov.in). ಟೆಂಡರ್‌ದಾರರು ಪ್ರಮಾಣಿತ ಬಿಡ್ ದಾಖಲೆಯ ಪ್ರಕಾರ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸಲು ಸೂಚಿಸಲಾಗಿದೆ. ಇತರ ವಿವರಗಳನ್ನು ಬಿಡ್ಡಿಂಗ್ ದಾಖಲೆಗಳಲ್ಲಿ ಕಾಣಬಹುದು.

ಕ್ರ. ಸಂ.	ಕಾಮಗಾರಿಗಳ ಹೆಸರು	ಕಾಮಗಾರಿಗಳ ಅಂದಾಜು ಮೊತ್ತ (ಲಕ್ಷಗಳಲ್ಲಿ)	ಅವಧಿ (ಮಳೆಗಾಲ ಒಳಗೊಂಡಂತೆ)	ಇಎಂಡಿ ಮೊತ್ತ (ರೂ. ಗಳಲ್ಲಿ)
1	Appointment of PMC for the work of Lump Sum,Turn Key, Fixed Price, No Variation Tender based on Tenderers Own Design for the work of Construction of larger transfer station for effective solid waste management (CAPEX only) for a capacity of 200 MTPD.	Rs.1069.49 (Construction Cost Rs.305.80)	06 ತಿಂಗಳುಗಳು	ರೂ. 8000/–
2	Appointment of PMC for the work of Turn Key, Lump Sum, Fixed price, no variation Tender based on Tenderer's Own Design for the work of "Treatment and disposal of legacy leachate accumulated in Mittaganahalli& Kannur Landfill sites.	Rs.47489.00 (Capex cost: Rs.13525.60)	09 ತಿಂಗಳುಗಳು	ರೂ. 5,10,000/–

ಕಾರ್ಯಕ್ರಮಗಳ ವೇಳಾಪಟ್ಟಿ : (1) ಬಿಡ್ ಪೂರ್ವಭಾವಿ ಸಭೆಯ **ದಿನಾಂಕ: 17.11.2025 ರಂದು 15.00 ಗಂಟೆಗೆ** ಸಿಇ & ಸಿಜಿಎಂ (ಟೆಕ್), ಬಿಎಸ್‌ಡಬ್ಲ್ಯೂಎಂಎಲ್, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು ಕಚೇರಿಯಲ್ಲಿ. (2) ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 27.11.2025 ರಂದು ಸಂಜೆ 16.00 ಗಂಟೆಗಳವರೆಗೆ.** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 28.11.2025 ರಂದು ಸಂಜೆ 16.30 ಗಂಟೆಯವರೆಗೆ.** (4) ತಾಂತ್ರಿಕವಾಗಿ ಅರ್ಹ ಬಿಡ್‌ದಾರರಿಗೆ ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

1. ತನ್ನ ನಿಯಂತ್ರಣ ಮೀರಿದ ವ್ಯವಸ್ಥೆಯ ವೈಫಲ್ಯದಿಂದ ಉಂಟಾಗುವ ಯಾವುದೇ ವಿಳಂಬಗಳಿಗೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳ ಬಗ್ಗೆ ಟೆಂಡರ್‌ದಾರರಿಗೆ ತಿಳಿಸಲು ವ್ಯವಸ್ಥೆಯು ಪ್ರಯತ್ನಿಸಿದರೂ ಸಹ, ಟೆಂಡರ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್ ಅನ್ನು ಪರಿಶೀಲಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿದೆ, ಸಹಾಯವಾಣಿಯ ಇ–ಮೇಲ್ ವಿಳಾಸ hphelpdesk.blr@intarvo.com ಕೆಪಿಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆಗಳು: 080– 22371090/22373788. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಟೆಂಡರ್‌ದಾರರು ಖಚಿತಪಡಿಸಿಕೊಳ್ಳಬೇಕು. ಇಂಟರ್‌ನೆಟ್ ಸಂಪರ್ಕ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಕೆಪಿಪಿ ಪೋರ್ಟಲ್ ಪ್ರವೇಶಿಸಲಾಗದಿದ್ದರೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ. 2. ಯಾವುದೇ ತಿದ್ದುಪಡಿ / ಅನುಬಂಧವನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–2, ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/3623/ಎಎಎ/2025–26

ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ (ನಿ).

(ಕರ್ನಾಟಕ ಸರ್ಕಾರದ ಉದ್ಯಮ)

ನಂ.16/ಜೆ, ಕರ್ನಾಟಕ ರೀಜನಲ್ ಚಾಪ್ಟರ್ ಕಟ್ಟಡ, 01ನೇ ಮಹಡಿ, ತಿಮ್ಮಯ್ಯ ರಸ್ತೆ,
ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052.

ಸಂಖ್ಯೆ: ಕ.ಮ.ಸ.ಅ.ನಿ/ಸಿಆರ್–22/2025–26 **ಪ್ರಕಟಣೆ** ದಿ:– 05.11.2025

• 2025–26 ನೇ ಸಾಲಿನ ಹೊಲಿಗೆ ಯಂತ್ರ ವಿತರಣಾ ಯೋಜನೆಯ ಅರ್ಜಿ ಆಹ್ವಾನ. •

ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದಿಂದ 2025–26ನೇ ಸಾಲಿನ ಹೊಲಿಗೆ ಯಂತ್ರ ವಿತರಣಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಹಾಗೂ ಈ ಯೋಜನೆಯಡಿ ಸೌಲಭ್ಯವನ್ನು ಪಡೆಯಲು ಇಚ್ಛಿಸುವವರು ಕಡ್ಡಾಯವಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 06.12.2025 ರಂದು ಸಾಯಂಕಾಲ: 5.30 ಗಂಟೆಯವರೆಗೆ ನಿಗಧಿ ಪಡಿಸಿದೆ.

ಅರ್ಜಿ ಸಲ್ಲಿಸಲು ಇರಬೇಕಾದ ಸಾಮಾನ್ಯ ಅರ್ಹತೆಗಳು:–

1) ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ (ನಿ.) ದ ವತಿಯಿಂದ ಈ ಯೋಜನೆಗೆ ಅರ್ಜಿ ಸಲ್ಲಿಸಲು ಪ್ರವರ್ಗ–3–ಬಿ ಅಡಿಯಲ್ಲಿ 2(ಎ) ಯಿಂದ 2(ಎಫ್)ವರೆಗೆ ಬರುವ ಸಮುದಾಯಕ್ಕೆ ಸೇರಿರಬೇಕು. 2) ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನಮೂನೆ–3ಬಿ ಯಲ್ಲಿ ಪಡೆದಿರಬೇಕು (ಪ್ರಮಾಣ ಪತ್ರವು ಚಾಲ್ತಿಯಲ್ಲಿರಬೇಕು), 3) ಅರ್ಜಿದಾರರು ಕರ್ನಾಟಕ ರಾಜ್ಯದವರಾಗಿರಬೇಕು ಹಾಗೂ ಅವರ ಖಾಯಂ ವಿಳಾಸವು ಕರ್ನಾಟಕ ರಾಜ್ಯದಲ್ಲಿರಬೇಕು ಹಾಗೂ ಆಧಾರ್ ಕಾರ್ಡ್ ಹೊಂದಿರಬೇಕು. 4) ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಹಾಗೂ ಗರಿಷ್ಠ 55 ವರ್ಷಗಳನ್ನು ಮೀರಿರತಕ್ಕದ್ದಲ್ಲ. 5) ಒಂದು ಕುಟುಂಬದಲ್ಲಿ ಓರ್ವ ಸದಸ್ಯರನ್ನು ಮಾತ್ರ ಈ ಸೌಲಭ್ಯಕ್ಕೆ ಪರಿಗಣಿಸತಕ್ಕದ್ದು. 6)ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನವು ಗ್ರಾಮೀಣ ಪ್ರದೇಶದಲ್ಲಿ ರೂ.98.000/– ಹಾಗೂ ನಗರ ಪ್ರದೇಶದಲ್ಲಿ ರೂ. 1,20.000/–ಗಳನ್ನು ಮೀರತಕ್ಕದ್ದಲ್ಲ. 7) ಅಂಗವಿಕಲ ಮಹಿಳೆಯರಿಗೆ ಶೇ.5 ರಷ್ಟು ಮೀಸಲಿರಿಸತಕ್ಕದ್ದು. 8) ಆಯ್ಕೆ ಮಾಡುವಾಗ ಮಹಿಳೆಯರಿಗೆ ಶೇ.33 ರಷ್ಟು, ವಿಕಲಚೇತನರಿಗೆ ಶೇ.5 ರಷ್ಟು ಹಾಗೂ ತೃತೀಯ ಲಿಂಗಗಳಿಗೆ ಶೇ.1 ರಷ್ಟು ಅಂಗವಿಕಲ ಮಹಿಳೆಯರಿಗೆ ಶೇ.2 ರಷ್ಟನ್ನು ಮೀಸಲಿರಿಸುವುದು. 9) ವಿಧವೆಯರಿಗೆ, ಪರಿತ್ಯಕ್ತ ಮಹಿಳೆಯರಿಗೆ ಹೆಚ್.ಐ.ವಿ ಪೀಡಿತರಿಗೆ 35 ವರ್ಷ ವಯೋಮಿತಿ ಮೀರಿರತಕ್ಕ ಅವಿವಾಹಿತ ಮಹಿಳೆಯರಿಗೆ ಶೇ.2 ರಷ್ಟನ್ನು ಮೀಸಲಿರಿಸುವುದು.

ವಿಶೇಷ ಸೂಚನೆ:–

- ಈ ಯೋಜನೆಗೆ ಅರ್ಜಿಗಳನ್ನು ಸೇವಾಸಿಂಧು ಪೋರ್ಟಲ್ ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾಕೇಂದ್ರಗಳಲ್ಲಿ ಆನ್‌ಲೈನ್ ಮೂಲಕವೇ ಸಲ್ಲಿಸಬೇಕಾಗಿರುತ್ತದೆ.
- ನಿರ್ದೇಶಕರ ಮಂಡಳಿಯ ವಿವೇಚನಾ ಕೋಟಾದಡಿ ಸೌಲಭ್ಯ ಪಡೆಯಬಯಸುವವರೂ ಸಹ ಆನ್‌ಲೈನ್‌ನಲ್ಲಿ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸುವುದು, ಒಂದು ಕುಟುಂಬದ ಒಬ್ಬ ಸದಸ್ಯರು ಮಾತ್ರ ಈ ಯೋಜನೆಯಲ್ಲಿ ಒಂದು ಸಲ ಸೌಲಭ್ಯ ಪಡೆಯಲು ಅರ್ಜಿ ಸಲ್ಲಿಸಬಹುದು.

ಸಂಪರ್ಕ ವಿವರ: ನಿಗಮದ ಸಹಾಯವಾಣಿ: 8867537799/ ದೂ.ಸಂ: 080–29903994

(ಬೆಳಿಗ್ಗೆ: 10.00 ರಿಂದ ಸಂಜೆ: 5.30 ವರೆಗೆ ಸಂಪರ್ಕಿಸಬಹುದಾಗಿದೆ).

ಯೋಜನೆಗಳ ಮಾರ್ಗಸೂಚಿಗಳು, ಸಲ್ಲಿಸಬೇಕಾದ ದಾಖಲೆಗಳು, ಜಿಲ್ಲಾ ವ್ಯವಸ್ಥಾಪಕರ ಕಛೇರಿ ವಿಳಾಸಗಳನ್ನು ಹಾಗೂ ಹೆಚ್ಚಿನ ವಿವರಗಳನ್ನು https://kmcdc.karnataka.gov.in ಇಲ್ಲಿ ತಿಳಿಯಬಹುದಾಗಿದೆ.

ಸಹಿ/– (ಜಿ.ಹೆಚ್. ಮರಿಯೋಜಿರಾವ್) ಅಧ್ಯಕ್ಷರು

ಸಹಿ/– (ಡಾ. ಪ್ರಕಾಶ್ ಆರ್ ಪಾಗೋಜಿ) ವ್ಯವಸ್ಥಾಪಕ ನಿರ್ದೇಶಕರು

ವಾ.ಸಾ.ಸಂ.ಇ/ವಾಪ್ರ/3609/ಆಕಾರ್/2025–26

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು

ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಂಪೌಂಡ್, ಡೈರಿ ಸರ್ಕಲ್,
ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 029. ಕರ್ನಾಟಕ

ಫೋನ್: 080–29753354/56, ಇ–ಮೇಲ್: karbuildworkerswelfare@gmail.com

ಸಂಖ್ಯೆ: ಕ.ಕ&ಇ.ನಿ.ಕಾ.ಕ.ಮ/ಪ್ರಕಟಣೆ/2025–26 ದಿನಾಂಕ: 05.11.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕೆ.ಪಿ.ಪಿ.ಪೋರ್ಟಲ್ ಮೂಲಕ ಮಾತ್ರ)

ಈ ಅಧಿಸೂಚನೆ ಮತ್ತು ಟೆಂಡರ್ ದಾಖಲೆಗಳಲ್ಲಿ ವಿವರಿಸಿದ ನಿಯಮಗಳ ಪ್ರಕಾರ ಕೆಳಗೆ ತಿಳಿಸಿರುವ ಟೆಂಡರ್‌ಗಳನ್ನು ಈ ಮೂಲಕ ಆಹ್ವಾನಿಸಲಾಗಿದೆ

1. ಮಂಡಳಿಯ 35 ಅಸ್ತಿತ್ವದಲ್ಲಿರುವ ಮೊಬೈಲ್ ವೈದ್ಯಕೀಯ ಘಟಕ ವಾಹನಗಳಲ್ಲಿ ಸಂಪರ್ಕಿತ ಆರೋಗ್ಯ ಪರಿಸರ ವ್ಯವಸ್ಥೆಯ ಏಕೀಕರಣದೊಂದಿಗೆ ನವೀಕರಣ ಮತ್ತು ಮಾರ್ಪಾಡುಗಳಿಗಾಗಿ ಸೇವಾ ಪೂರೈಕೆದಾರರ ಆಯ್ಕೆ".

2. ಮಂಡಳಿಗೆ ಹೊರಗುತ್ತಿಗೆ ಮೂಲಕ ಮಾಸಿಕ ಆಧಾರದ ಮೇಲೆ A/C ವಾಹನಗಳನ್ನು ಒದಗಿಸುವ ಏಜೆನ್ಸಿಯ ಆಯ್ಕೆ.

ಸದರಿ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಏಜೆನ್ಸಿಯವರು ಕೆ.ಪಿ.ಪಿ.ಪೋರ್ಟಲ್ https://kppp.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಇ–ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕವು ಕೆ.ಪಿ.ಪಿ.ಪೋರ್ಟಲ್‌ನಂತೆ ಇರುತ್ತದೆ. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ.ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ಜಂಟಿ ಕಾರ್ಯದರ್ಶಿ, ಕ.ಕ.ಇ.ನಿ.ಕಾ.ಕ.ಮಂಡಳಿ

ವಾಸಾಸಂಇ/ಬೆಂ.ನ/ಜಿಎ/3613/2025–26

ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ

ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.

ದೂರವಾಣಿ: 080–22255210

ಸಂಖ್ಯೆ: ಕಾಅ/ಕವಿ.1/ಎಇ–4/2025–26/52 ದಿನಾಂಕ: 03.11.2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

ಮೇಲ್ಕಂಡ ಇಲಾಖೆಯು ಬೆಂಗಳೂರಿನ ವಿವಿಧ ಸೂಚಿತ ಸ್ಥಳಗಳಲ್ಲಿ ಕ್ವಾಡ್ರಾಂಗಲ್ ಗಾರ್ಡನ್, ಮೆಡಿಕಲ್ ಪ್ಲಾಂಟೇಷನ್, ಫೌಂಟನ್‌ಗಳ ವಾರ್ಷಿಕ ನಿರ್ವಹಣೆ, ಭದ್ರತಾ ಸೇವೆಗಳು ಹಾಗೂ ಪಂಪ್ ಡ್ರೈವರ್‌ಗಳನ್ನು ಒದಗಿಸುವುದು, ಫೈರ್ ಎಕ್ಸ್‌ಟಿಂಗ್ವಿಷರ್‌ಗಳ ರೀಫಿಲ್ಲಿಂಗ್, ಬಾವುಟದ ಜೊತೆಗೆ ಸ್ಟಾಂಡಿಂಗ್ ಪೋಲ್ ಒದಗಿಸುವುದು, ವಿಐಪಿ/ವಿವಿಐಪಿಗಳ ಪ್ರವಾಸ ಕಾರ್ಯಕ್ರಮಗಳಿಗೆ ಹೆಲಿಕಾಪ್ಟರ್/ವಿಮಾನ ಸೇವೆಗಳನ್ನು ಒದಗಿಸಲು ಸೇವಾ ಪೂರೈಕೆದಾರರ ನೇಮಕಾತಿಗೆ ಆಸಕ್ತಿ ವ್ಯಕ್ತಪಡಿಸುವಿಕೆ, ಫೈರ್ ಫೈಟಿಂಗ್ ಕಾಮಗಾರಿಗಳ ವಾರ್ಷಿಕ ನಿರ್ವಹಣೆ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಒಟ್ಟು **07 ಕಾಮಗಾರಿಗಳಿಗೆ** ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೊತ್ತ: **ಕನಿಷ್ಠ: ರೂ.1.02 ಲಕ್ಷಗಳು, ಗರಿಷ್ಠ: ರೂ.2574.86 ಲಕ್ಷಗಳು.** ಇಎಂಡಿ: **ಕನಿಷ್ಠ: ರೂ.2,600/–, ಗರಿಷ್ಠ: ರೂ.50,000/–.** ಪ್ರತೀ ಕಾಮಗಾರಿಯ ದಸ್ತಾವೇಜು ಬೆಲೆ: ಕೆಪಿಪಿ–ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಲಾವಧಿ: **01 ರಿಂದ 36 ತಿಂಗಳು.** ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: **ಕ್ರ.ಸಂ.1,2,6,7ಕ್ಕೆ 10.11.2025, ಕ್ರ.ಸಂ.3 ಮತ್ತು 4ಕ್ಕೆ 18.11.2025, ಕ್ರ.ಸಂ.5ಕ್ಕೆ 04.12.2025, ಸಂಜೆ 4.30 ಗಂಟೆಯೊಳಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: **ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಿರುವಂತೆ.** ಕ್ರ.ಸಂ.5ರ ಕಾಮಗಾರಿಗೆ ಪ್ರೀ–ಬಿಡ್ ಸಭೆ: ಮೇಲ್ಕಂಡ ಕಚೇರಿಯಲ್ಲಿ **17.11.2025ರಂದು ಬೆಳಿಗ್ಗೆ 11.30 ಗಂಟೆಗೆ** ನಡೆಸಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸಂಕ್ಷಿಪ್ತ ವಿವರ, ಅಂದಾಜು ಮೊತ್ತ, ಇಎಂಡಿ, ಕಾಲಾವಧಿ, ಮೀಸಲಾತಿ ಮತ್ತು ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ ಪಡೆಯಬಹುದು.

ವಾಸಸಂಇ/ಉನಿ–ಸಿ.ಪಿ/3604/ಕೆಎಸ್‌ಎಂಸಿಎ/2025-26 **ಸಹಿ/–ಕಾರ್ಯಪಾಲಕ ಅಭಿಯಂತರರು.**

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನೀಯರರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ

ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 19/2025–26 ದಿನಾಂಕ: 23.10.2025

(ದ್ವಿ ಟೆಂಡರ್ ದಾಖಲೆ & ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ ಇವರಿಂದ **KPWD Class-I/CPWD Class-1 & Above registration** ದರ್ಜೆಯ ಗುತ್ತಿಗೆದಾರರಿಂದ ಕೆ.ಪಿ.ಪಿ–ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ಧತಿಯಡಿ ಟೆಂಡರ್ ಆಹ್ವಾನಿಸಲಾಗಿದೆ.

"Survey, Investigation, Design, Supply, Erection, Testing and Commissioning of Tank Filling Scheme System for filling up of 15tanks by lifting water from Dandavathi River in SorabaTaluk of Shivamogga District consisting of the following components: construction of Bridge cum Barrage, Intake structure, Jackwell cum pump house, Pumping machineries, 11/0.433KV sub-station, 11 KV Transmission line and 11 KV Terminal bay, Rising main, Pressure distribution network, surge analysis and protection system for filling up of 15 tanks including supply of spares parts and tools, O & M for five years after successful commissioning of the work under Yadagoppa Tank filling scheme on turn-key basis". (INDENT No: 3317) ಕಾಮಗಾರಿಯ ಟೆಂಡರಿಗಿಟ್ಟ ಮೊತ್ತ ರೂ. 34.93 ಕೋಟಿಗಳು & ಇ.ಎಂ.ಡಿ ಮೊತ್ತ ರೂ. 0.30 ಕೋಟಿಗಳು.

1) ಟೆಂಡರ್‌ನಲ್ಲಿ ಭಾಗವಹಿಸಬಹುದಾದ ದಿನಾಂಕ: 03–11–2025 ರಿಂದ 03–12–2025 ಸಂಜೆ 4.00 ರವರೆಗೆ, 2) ಪ್ರೀಬಿಡ್ ಸಭೆಯ ದಿನಾಂಕ: 17.11.2025 ಬೆಳಿಗ್ಗೆ 11.00 ಗಂಟೆಗೆ (ಸ್ಥಳ :ಮುಖ್ಯ ಇಂಜಿನೀಯರವರ ಕಛೇರಿ, ಕನೀನಿನಿ, ತುಂಗಾ ಮೇಲ್ದಂಡೆ ಯೋಜನಾ ವಲಯ ಶಿವಮೊಗ್ಗ 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 05.12.2025 ಬೆಳಿಗ್ಗೆ 11.00 ಗಂಟೆಗೆ 4)ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು.

ಹೆಚ್ಚಿನ ಮಾಹಿತಿಗಾಗಿ (www.kppp.karnataka.gov.in) ಅಥವಾ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ.

ವಾ.ಸಾ.ಸಂ.ಇ/ಶಿ/ನಂ.05–11/ಝೇಂಕಾರ್/2025–26

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ ಪೌರಾಡಳಿತ ನಿರ್ದೇಶನಾಲಯ

9ನೇ ಮಹಡಿ, ವಿಶ್ವೇಶ್ವರಯ್ಯ ಟವರ್, ಡಾ॥ ಬಿ.ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು–01.

ದೂರವಾಣಿ: 080–22867172/22866302 ಫ್ಯಾಕ್ಸ್: 080–22863576/22861665

ಇ–ಮೇಲ್: sedmatech@gmail.com Website: www.municipaladmn.gov.in

ಸಂಖ್ಯೆ: 1802916 DMA/TECH/MGNV/31/2025 ದಿನಾಂಕ: 05.11.2025

ಟೆಂಡರ್ ಪ್ರಕಟಣೆ

ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ (ಹಂತ–2) ಯಡಿ UIDF ಮಾರ್ಗಸೂಚಿಯನ್ವಯ ರಾಯಚೂರು ಮಹಾನಗರ ಪಾಲಿಕೆಗೆ ಯೋಜನಾ ಸಮಾಲೋಚಕರನ್ನು ನೇಮಿಸಲು ಮತ್ತು ಹುಬ್ಬಳ್ಳಿ–ಧಾರವಾಡ, ಮತ್ತು ವಿಜಯಪುರ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕೆಳಕಂಡಂತೆ ಟೆಂಡರ್ ಪ್ರಕ್ರಿಯೆ ನಡೆಸಲು ಉದ್ದೇಶಿಸಲಾಗಿದೆ. **ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕ್ರ ಸಂ	ಕಾಮಗಾರಿ ಇಂಡೆಂಟ್‌ಸಂಖ್ಯೆ	ಯೋಜನಾ ಮೊತ್ತ (ರೂ. ಲಕ್ಷಗಳಲ್ಲಿ)
1.	DMA/2025-26/SE5512/CALL-2 ರಾಯಚೂರು ಮಹಾನಗರ ಪಾಲಿಕೆ	254.20
2.	DMA/2025-26/RD/WORK_INDENT46382/CALL-3 ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ	2616.00
	ಟೆಂಡರ್ ಪ್ರಕಟಣೆ	
1.	DMA/2025-26/RD/WORK_INDENT51003 ವಿಜಯಪುರ ಮಹಾನಗರ ಪಾಲಿಕೆ	4050.00
2.	DMA/2025-26/RD/WORK_INDENT51053 ವಿಜಯಪುರ ಮಹಾನಗರ ಪಾಲಿಕೆ	3750.00
3.	DMA/2025-26/RD/WORK_INDENT50998 ವಿಜಯಪುರ ಮಹಾನಗರ ಪಾಲಿಕೆ	3550.00
4.	DMA/2025-26/RD/WORK_INDENT51063 ವಿಜಯಪುರ ಮಹಾನಗರ ಪಾಲಿಕೆ	2600.00
5.	DMA/2025-26/RD/WORK_INDENT50997 ವಿಜಯಪುರ ಮಹಾನಗರ ಪಾಲಿಕೆ	1050.00

ಟೆಂಡರ್‌ನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಚಾರಪಡಿಸಲಾಗಿದ್ದು. ಕೆ.ಪಿ.ಪಿ ಪೋರ್ಟಲ್‌ನಲ್ಲಿ ಸೂಚಿಸಿರುವ ದಿನಾಂಕದೊಳಗೆ ಆಸಕ್ತ ಬಿಡ್‌ದಾರರು/ ಏಜೆನ್ಸಿದಾರರು ಭಾಗವಹಿಸಲು ಕೋರಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ಇತರೇ ಯಾವುದೇ ಮಾಹಿತಿಯನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರವೇ ಪಡೆಯುವುದು.

ಸಹಿ/–
ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.

DIPR/CP/3618/Zen/2025-26

ಹಣವೆಂಬುದು ಸಾಧನ ಮಾತ್ರ. ಅದು ನೀವು ಬಯಸಿದಲ್ಲಿಗೆ ನಿಮ್ಮನ್ನು ಕೊಂಡೊಯ್ಯುತ್ತದೆ. ಆದರೆ ಅದೇ ನಿಮ್ಮ ಚಾಲಕನಂತೆ ಕೆಲಸ ಮಾಡುವುದಿಲ್ಲ
ಅಯಾನ್ ರಾಂಡ್, ಬರಹಗಾರ್ತಿ

ದುಡ್ಡಿನಂಥಾ ಮಾತು

ಎಸ್‌ಐಪಿ ಚಿಕ್ಕದು, ಫಲ ದೊಡ್ಡದು

ಷೇರುಪೇಟೆಗಳಲ್ಲಿ ಹೂಡಿಕೆ ಮಾಡುವುದು ಸಣ್ಣ ಆದಾಯದ ವರ್ಗಗಳಿಗೂ ಸಾಧ್ಯವಾಗಬೇಕು ಎಂಬ ಉದ್ದೇಶದಿಂದ ರೂಪುಗೊಂಡಿವೆ 'ಸಣ್ಣ ಎಸ್‌ಐಪಿ' ಯೋಜನೆಗಳು. ಇವು ದೇಶದ ಬಂಡವಾಳ ಮಾರುಕಟ್ಟೆಗಳನ್ನು ಎಲ್ಲರಿಗೂ ಹತ್ತಿರವಾಗಿಸಿವೆ. ಹೂಡಿಕೆ ಮತ್ತು ಸಂಪತ್ತು ಸೃಷ್ಟಿಯಲ್ಲಿ ದೊಡ್ಡ ಬದಲಾವಣೆಯೊಂದನ್ನು ತರುತ್ತಿವೆ

• ರವಿ ಕುಮಾರ್ ಝಾ

ನಮ್ಮ ದೇಶದಲ್ಲಿ ಹಣಕ್ಕೆ ಸಂಬಂಧಿಸಿದ ಮಾತುಗಳು ಬಂದಾಗ, ದೊಡ್ಡ ಹೂಡಿಕೆಯ ಅಗತ್ಯವಿರುವ ರಿಯಲ್ ಎಸ್ಟೇಟ್ ಅಥವಾ ಚಿನ್ನದ ಬಗ್ಗೆ ಪ್ರಸ್ತಾಪ ಆಗುವುದಿದೆ. ಆದರೆ ಬಹಳ ಸಣ್ಣ ಮೊತ್ತದ ಹೂಡಿಕೆಗಳ ಮೂಲಕವೇ ಸಂಪತ್ತು ಸೃಷ್ಟಿಸುವ ಕೆಲಸವೊಂದು ಹೆಚ್ಚು ಸದ್ದುಮಾಡದೆ ನಡೆಯುತ್ತಿದೆ.

ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ನಿರ್ದೇಶನದ ಅನುಸಾರ ದೇಶದ ಹಲವಾರು ಮ್ಯೂಚುವಲ್ ಫಂಡ್ ಕಂಪನಿಗಳು 'ಕಿರು ಎಸ್‌ಐಪಿ' ಹೆಸರಿನಲ್ಲಿ ವ್ಯವಸ್ಥಿತ ಹೂಡಿಕೆ ಯೋಜನೆಗಳನ್ನು ರೂಪಿಸಿವೆ. ತಿಂಗಳಿಗೆ ಕೇವಲ ₹250 ಹೂಡಿಕೆಯೊಂದಿಗೆ ಆರಂಭವಾಗುವ ಈ ವ್ಯವಸ್ಥಿತ ಹೂಡಿಕೆ ಯೋಜನೆಗಳು (ಎಸ್‌ಐಪಿ) ಭಾರತೀಯರಲ್ಲಿ ಉಳಿತಾಯದ ಬಗ್ಗೆ ಇರುವ ಆಲೋಚನಾ ಕ್ರಮವನ್ನೇ ಬದಲಾಯಿಸುತ್ತಿವೆ.

ಸಂಪತ್ತು ಸೃಷ್ಟಿಸುವುದು ಅಂದರೆ ಭಾರಿ ಮೊತ್ತವನ್ನು ತೆಗೆದಿರಿಸುವ ಸಾಮರ್ಥ್ಯವಿರುವ ವ್ಯಕ್ತಿಗಳಿಂದ ಮಾತ್ರ ಆಗುವಂಥದ್ದು ಎಂಬ ಕಲ್ಪನೆ ಬಹುಕಾಲದಿಂದ ಇದೆ. ಹೀಗಿದ್ದರೂ, 'ಕಿರು ಎಸ್‌ಐಪಿ'ಗಳು ಈ ಕಲ್ಪನೆಗೆ ಸವಾಲೆಸೆಯುತ್ತಿವೆ. ಹೂಡಿಕೆಯ ಮೊತ್ತ ಚಿಕ್ಕದಾಗಿದ್ದರೂ, ಹೂಡಿಕೆಯಲ್ಲಿ ಶಿಸ್ತು ಇದ್ದರೆ ಅದರಿಂದ ಅರ್ಥಪೂರ್ಣವಾದ ಫಲಿತಾಂಶ ಸಿಗುತ್ತದೆ ಎಂಬುದನ್ನು 'ಕಿರು ಎಸ್‌ಐಪಿ' ತೋರಿಸಿಕೊಡುತ್ತಿವೆ.

ಚಿಕ್ಕದು ಚಿಕ್ಕದಲ್ಲ!

ಸಂಪತ್ತು ಸೃಷ್ಟಿಸಬೇಕು ಎಂದಾದರೆ ಜೇಬಿನಲ್ಲಿ ದೊಡ್ಡ ಮೊತ್ತ ಇರಬೇಕು ಎಂದು ದೇಶದ ಮಧ್ಯಮ ವರ್ಗದವರು ದಶಕಗಳಿಂದಲೂ ಭಾವಿಸಿದ್ದಾರೆ. ಹೂಡಿಕೆಯ ಆರಂಭದಲ್ಲಿ ಹೆಚ್ಚು ಹಣವಿದ್ದರೆ, ಅದರಿಂದ ಹೆಚ್ಚು ಸಂಪಾದಿಸುವ ಸಾಧ್ಯತೆ ಕೂಡ ಅಧಿಕ ಎಂಬುದು ಈ ನಂಬಿಕೆಯ ಹಿಂದಿನ ತರ್ಕ. ಆದರೆ ಇಂದು, ಮ್ಯೂಚುವಲ್ ಫಂಡ್ ಹೂಡಿಕೆಯು ದಿನಗೂಲಿಯವರಿಗೆ, ಆಟೊ ಚಾಲಕರಿಗೆ, ಸಣ್ಣ ಅಂಗಡಿ ಮಾಲೀಕರಿಗೆ, ಗಿಗ್ ಕಾರ್ಮಿಕರಿಗೆ ಕೂಡ ಲಭ್ಯವಾಗುವಂತೆ ಮಾಡಿ, ಮ್ಯೂಚುವಲ್ ಫಂಡ್ ಕಂಪನಿಗಳು ಈ ಆಲೋಚನೆಯನ್ನು ತಲೆಕೆಳಗು ಮಾಡುತ್ತಿವೆ.

ಮ್ಯೂಚುವಲ್ ಫಂಡ್ ಕಂಪನಿಗಳು ಈಗ ಪಾಕ್ಷಿಕ ಹಾಗೂ ಮಾಸಿಕ ಎಸ್‌ಐಪಿ ಆಯ್ಕೆಯನ್ನು ನೀಡುತ್ತಿವೆ.



ಇದರಿಂದಾಗಿ ಸ್ಥಿರವಾದ ಆದಾಯ ಇಲ್ಲದವರೂ ಬಂಡವಾಳ ಮಾರುಕಟ್ಟೆಯನ್ನು ಪ್ರವೇಶಿಸಬಹುದು. ಈ ಒಳಗೊಳ್ಳುವಿಕೆಯು ಹಣಕಾಸಿಗೆ ಮಾತ್ರವೇ ಸಂಬಂಧಿಸಿದ್ದಲ್ಲ; ಇದು ಮನಸ್ಸಿಗೂ ಸಂಬಂಧಿಸಿದೆ! ಹೂಡಿಕೆ ಮಾಡುವುದು ಅಂದರೆ ಅದು ಉಳ್ಳವರಿಂದ ಮಾತ್ರ ಆಗುವ ಕೆಲಸವಲ್ಲ. ಅದು ಈಗ ಎಲ್ಲರಿಗೂ ಸಾಧ್ಯವಾಗುತ್ತಿದೆ.

'ಕಿರು ಎಸ್‌ಐಪಿ'ಗಳು ಮ್ಯೂಚುವಲ್ ಫಂಡ್ ಜಗತ್ತಿಗೆ ಹೊಸಬರಾಗಿರುವ ವ್ಯಕ್ತಿಗಳಿಗೆ ಮಾತ್ರ ಲಭ್ಯ. ಈ ಹೆಸರಿನ ಅಡಿಯಲ್ಲಿ ಮೂರು ಎಸ್‌ಐಪಿಗಳನ್ನು (ಗರಿಷ್ಠ ಮೂರು ಆಸ್ತಿ ನಿರ್ವಹಣಾ ಕಂಪನಿಗಳಲ್ಲಿ ತಲಾ ಒಂದು ಎಸ್‌ಐಪಿ) ಒಬ್ಬ ಹೂಡಿಕೆದಾರ ಹೊಂದಬಹುದು. ಹೂಡಿಕೆದಾರರು 'ಕಿರು ಎಸ್‌ಐಪಿ' ಹೊರತುಪಡಿಸಿ ಬೇರೆ ಎಸ್‌ಐಪಿ ಆರಂಭಿಸಿದರೆ ಅಥವಾ ದೊಡ್ಡ ಮೊತ್ತದ ಹೂಡಿಕೆ ಮಾಡಿದರೆ ಮುಂದೆ ಅವರು 'ಕಿರು ಎಸ್‌ಐಪಿ' ಹೂಡಿಕೆದಾರರು ಎಂದು ಪರಿಗಣಿತರಾಗುವುದಿಲ್ಲ. 'ಕಿರು ಎಸ್‌ಐಪಿ' ಚೌಕಟ್ಟಿನ ಅಡಿಯಲ್ಲಿ ತಿಂಗಳಿಗೆ ₹250ರಿಂದ ಎಸ್‌ಐಪಿ ಆರಂಭಿಸಬಹುದು.

ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ: ಈಚಿನ ವರ್ಷಗಳಲ್ಲಿ ದೇಶದಲ್ಲಿ ಕುಟುಂಬಗಳು ಉಳಿತಾಯ ಮಾಡುವ ಪ್ರಮಾಣ ಇಳಿಕೆ ಆಗುತ್ತಿದೆ. ಅದು ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಶೇಕಡ 30ಕ್ಕಿಂತ ಕಡಿಮೆ ಆಗಿದೆ. ಆದರೆ ಖರೀದಿಯ ಬಯಕೆ ಹೆಚ್ಚುತ್ತಿದೆ. ಉಳಿತಾಯ ಸಾಮರ್ಥ್ಯ ಹಾಗೂ ಖರೀದಿಯ ಬಯಕೆಯ ನಡುವಿನ ಅಂತರವು ಹಲವರನ್ನು ಸಮಸ್ಯೆಗೆ ಸಿಲುಕಿಸಬಲ್ಲದು. 'ಕಿರು ಎಸ್‌ಐಪಿ'ಯು ಈ ಸಮಸ್ಯೆಗೆ ಪರಿಹಾರ ರೂಪದಲ್ಲಿ ಒದಗಿಬರಬಲ್ಲದು.

ದೇಶದ 50 ಕೋಟಿ ದುಡಿಯುವ ಜನರ ಪೈಕಿ ಶೇಕಡ 10ರಷ್ಟು ಮಂದಿ ತಿಂಗಳಿಗೆ ₹250 ಹೂಡಿಕೆ ಮಾಡಿದರೆ, 20 ವರ್ಷಗಳಲ್ಲಿ ಅವರೆಲ್ಲರಿಂದ ಒಗ್ಗೂಡುವ ಮೊತ್ತವು ₹30 ಲಕ್ಷ ಕೋಟಿಗಿಂತ ಹೆಚ್ಚು. ಇದು ವೈಯಕ್ತಿಕ ಮಟ್ಟದ ಸಂಪತ್ತು ಸೃಷ್ಟಿಯಷ್ಟೇ ಆಗಿರುವುದಿಲ್ಲ. ಇದರಿಂದಾಗಿ ದೇಶದ ಬಂಡವಾಳ ಮಾರುಕಟ್ಟೆಗಳ ವ್ಯಾಪ್ತಿ ಹೆಚ್ಚುತ್ತದೆ, ದೇಶದ ಕೈಗಾರಿಕೆಗಳಿಗೆ ಮತ್ತು ಮೂಲಸೌಕರ್ಯ ಯೋಜನೆಗಳಿಗೆ ಅಗತ್ಯವಿರುವ ದೀರ್ಘಾವಧಿ ಹಣಕಾಸಿನ ನೆರವು ಸಿಗುತ್ತದೆ. ವಿದೇಶಿ ಬಂಡವಾಳದ ಮೇಲಿನ ಅವಲಂಬನೆ ಕಡಿಮೆ ಆಗುತ್ತದೆ.

'ಕಿರು ಎಸ್‌ಐಪಿ' ಸಂಖ್ಯೆಗಳಿಗೆ ಸೀಮಿತವಲ್ಲ. ಅದು ಹಣದ ಜೊತೆ ನಾವು ಹೊಂದಿರುವ ಸಂಬಂಧವನ್ನು ಮರುವ್ಯಾಖ್ಯಾನಿಸುತ್ತದೆ. ಹೂಡಿಕೆ ಆರಂಭಿಸಲು ನೀವು ಶ್ರೀಮಂತರೇ ಆಗಬೇಕೆಂದಿಲ್ಲ, ಆದರೆ ಶ್ರೀಮಂತರಾಗಲು ಹೂಡಿಕೆಯನ್ನು ಆರಂಭಿಸಬೇಕು ಎಂಬುದನ್ನು ಇದು ಹೇಳುತ್ತದೆ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ, ಯುವ ವೃತ್ತಿಪರರಿಗೆ ತಮ್ಮ ತಿಂಗಳ ಬಜೆಟ್ ಹಿಗ್ಗಿಸದೆಯೂ ಮೊದಲ ಹೆಜ್ಜೆಯೊಂದನ್ನು ಇರಿಸಲು 'ಕಿರು ಎಸ್‌ಐಪಿ' ಸಹಾಯ ಮಾಡುತ್ತದೆ. ಇವು ಹೂಡಿಕೆಗಳು ಎಲ್ಲರನ್ನೂ ಒಳಗೊಳ್ಳುವಂತೆ ಮಾಡುವ ಮೂಲಕ ಹಣಕಾಸಿನ ಸ್ವಾತಂತ್ರ್ಯಕ್ಕೆ ಹೊಸ ವ್ಯಾಖ್ಯಾನ ನೀಡುತ್ತಿವೆ.

ಇದು ಸಣ್ಣ ಮೊತ್ತದ ಹೂಡಿಕೆಗಳಿಗಷ್ಟೇ ಸಂಬಂಧಿಸಿದ್ದಲ್ಲ. ಹೂಡಿಕೆಯಿಂದ ಸಿಗುವ ಲಾಭ, ಆ ಲಾಭಕ್ಕೆ ಸಿಗುವ ಲಾಭವನ್ನು ಪಡೆದುಕೊಳ್ಳುವ ಹಾಗೂ ಹಣಕಾಸಿನ ವಿಚಾರದಲ್ಲಿ ಶಿಸ್ತನ್ನು ಬೆಳೆಸಿಕೊಳ್ಳುವುದಕ್ಕೆ ಸಂಬಂಧಿಸಿದ ವಿಚಾರ ಇದು. ದೊಡ್ಡ ಮೊತ್ತವನ್ನು ರಾತ್ರೋರಾತ್ರಿ ಒಗ್ಗೂಡಿಸಲು ಆಗದು. ಜನಸಾಮಾನ್ಯರೇ ಒಂದೊಂದು ರೂಪಾಯಿ ಕೂಡಿಟ್ಟು, ಶಿಸ್ತಿನಿಂದ ಹೂಡಿಕೆ ಮಾಡಿ ದೊಡ್ಡ ಮೊತ್ತವನ್ನು ಒಗ್ಗೂಡಿಸಬಹುದು. ಇದೇ ಅಭ್ಯಾಸವೇ 'ಕಿರು ಎಸ್‌ಐಪಿ'ಗಳನ್ನು ಅಸಾಮಾನ್ಯ ಆಗಿಸುತ್ತದೆ. ಸಣ್ಣ ಸಣ್ಣ ಹೆಜ್ಜೆಗಳ ಮೂಲಕ ದೊಡ್ಡ ಕನಸುಗಳನ್ನು ಈಡೇರಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ.

ಲೇಖಕ ಎಲ್‌ಐಸಿ ಮ್ಯೂಚುವಲ್ ಫಂಡ್ ಅಸೆಟ್ ಮ್ಯಾನೇಜ್ಮೆಂಟ್ ಕಂಪನಿಯ ಎಂ.ಡಿ ಹಾಗೂ ಸಿಇಒ. ಅಭಿಪ್ರಾಯಗಳು ಲೇಖಕರವು

ಕಿರು ಎಸ್‌ಐಪಿ ಮಾದರಿಯು ಮೂರು ಸ್ತಂಭಗಳನ್ನು ಆಶ್ರಯಿಸಿದೆ:

1) **ಲಭ್ಯತೆ:** ಇದರಲ್ಲಿ ಹೂಡಿಕೆ ಆರಂಭಿಸಲು ಅಗತ್ಯವಿರುವ ಮೊತ್ತ ₹250 ಮಾತ್ರ. ಈ ಬಗೆಯ ಎಸ್‌ಐಪಿಗಳು ಬಂಡವಾಳ ಮಾರುಕಟ್ಟೆಗಳಿಂದ ಇದುವರೆಗೆ ದೂರವಿದ್ದವರನ್ನು ಅವುಗಳ ಸನಿಹಕ್ಕೆ ತಂದಿವೆ.

2) **ಹೂಡಿಕೆಯ ಅಭ್ಯಾಸ ಬೆಳೆಸುವಿಕೆ:** ಸಣ್ಣ ಮೊತ್ತದ ಹೂಡಿಕೆಯು ಸ್ವಯಂಚಾಲಿತವಾಗಿ ಆಗುವಂತೆ ಮಾಡುವ ಮೂಲಕ ಎಸ್‌ಐಪಿಯು ಜನರು ಶಿಸ್ತುಬದ್ಧ ಹೂಡಿಕೆ ಸಂಸ್ಕೃತಿಯನ್ನು ಬೆಳೆಸಿಕೊಳ್ಳಲು ನೆರವಾಗುತ್ತದೆ. ಹೀಗೆ ಬೆಳೆಯುವ ಹೂಡಿಕೆ ಸಂಸ್ಕೃತಿಯು ಬಂಡವಾಳ ಮಾರುಕಟ್ಟೆಗಳ ಏರಿಳಿತಗಳಿಂದ ವಿಚಲಿತಗೊಳ್ಳುವುದಿಲ್ಲ.

3) **ಅನಿಶ್ಚಿತತೆಗೆ ಒಗ್ಗಿಕೊಳ್ಳುವುದು:** ಸಣ್ಣ ಮೊತ್ತವನ್ನು ಕಾಲಕಾಲಕ್ಕೆ ಹೂಡಿಕೆ ಮಾಡುತ್ತ ಸಾಗುವ ಮೂಲಕ ಈ ಬಗೆಯ ಎಸ್‌ಐಪಿಗಳು, ಅನಿಶ್ಚಿತ ಸಂದರ್ಭಗಳೂ ಹೂಡಿಕೆದಾರರಿಗೆ ಪೂರಕವಾಗುವಂತೆ ಮಾಡುತ್ತವೆ. 'ಕಿರು ಎಸ್‌ಐಪಿ' ಆಯ್ಕೆ ಮಾಡಿಕೊಂಡವರು ಕನಿಷ್ಠ 60 ಕಂತುಗಳಲ್ಲಿ ಹೂಡಿಕೆ ಮಾಡಬೇಕಾಗುತ್ತದೆ.

ಸಣ್ಣ ಹೂಡಿಕೆಯ ಶಕ್ತಿ

ಇಲ್ಲಿ ನಿಜವಾದ ಶಕ್ತಿ ಕಾಣಿಸುವುದು, ಹೂಡಿಕೆಯ ಅಭ್ಯಾಸವನ್ನು ಬೆಳೆಸುವಲ್ಲಿ. ವ್ಯಕ್ತಿಯು 20ರ ಹರೆಯದಲ್ಲಿ ಇದ್ದಾಗ ಸಣ್ಣ ಹೆಜ್ಜೆಯಾಗಿ ಆರಂಭವಾಗುವ ಈ ಬಗೆಯ ಹೂಡಿಕೆಯು ಆ ವ್ಯಕ್ತಿಗೆ ಹೆಚ್ಚು ವಯಸ್ಸಾದಂತೆಲ್ಲ ಹೆಚ್ಚುತ್ತ ಸಾಗುತ್ತದೆ. ಇಂದು ₹250ರ ಮೊತ್ತದೊಂದಿಗೆ ಎಸ್‌ಐಪಿ ಆರಂಭಿಸಿ, ವರ್ಷಕ್ಕೆ ಮೊತ್ತವನ್ನು ಶೇಕಡ 10ರಷ್ಟು ಹೆಚ್ಚಿಸುತ್ತ ಹೋದರೂ, ಆ ವ್ಯಕ್ತಿ ಮಧ್ಯವಯಸ್ಕ ಆಗುವ ವೇಳೆಗೆ ಹಲವು ಲಕ್ಷದಷ್ಟು ಮೊತ್ತವನ್ನು ಒಗ್ಗೂಡಿಸಬಹುದು. ಹೂಡಿಕೆಯ ಮೇಲೆ ಲಾಭ ಸಿಗುವುದು, ಆ ಲಾಭದ ಮೇಲೆ ಇನ್ನಷ್ಟು ಲಾಭ ಸಿಗುವುದು ಹೆಚ್ಚಿನ ಅವಧಿಗೆ ಹೂಡಿಕೆ ಮಾಡಿದಾಗ. ಅದು ಹೂಡಿಕೆಯ ಮೊತ್ತವನ್ನು ಮಾತ್ರವೇ ಆಧರಿಸಿ ಇರುವುದಿಲ್ಲ. ವಾಸ್ತವದಲ್ಲಿ ಹೆಚ್ಚಿನ ಅವಧಿಗೆ ತಾಳ್ಮೆಯಿಂದ ಹೂಡಿಕೆ ಮಾಡಿದವರಿಗೆ ಈ ಬಗೆಯ ಲಾಭ ಹೆಚ್ಚಿನ ಪ್ರಮಾಣದಲ್ಲಿ ಸಿಗುತ್ತದೆ.

ನಾಲ್ವರಲ್ಲಿ ಒಬ್ಬ ಮಹಿಳಾ ಹೂಡಿಕೆದಾರರು

ಮಹಾರಾಷ್ಟ್ರವು ಶೇ 28.5ರಷ್ಟು ನೋಂದಾಯಿತ ಮಹಿಳಾ ಹೂಡಿಕೆದಾರರನ್ನು ಹೊಂದುವ ಮೂಲಕ ದೇಶದಲ್ಲಿ ಅಗ್ರ ಸ್ಥಾನದಲ್ಲಿದೆ. ಗುಜರಾತ್‌ನಲ್ಲಿ ಇದು ಶೇ 26.6ರಷ್ಟಿದೆ. ದೇಶದ ಅರ್ಧದಷ್ಟು ರಾಜ್ಯಗಳಲ್ಲಿ ಮಹಿಳಾ ಹೂಡಿಕೆದಾರರ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತಲೂ ಹೆಚ್ಚಿದೆ. ಪ್ರತಿ ನಾಲ್ವರು ಪುರುಷರಲ್ಲಿ ಒಬ್ಬ ಮಹಿಳಾ ಹೂಡಿಕೆದಾರರು ಇದ್ದಾರೆ.

ಒಟ್ಟು ಹೂಡಿಕೆದಾರರಲ್ಲಿ ಮಹಿಳೆಯರು, ಪುರುಷರು ಎಷ್ಟು?



ಕರ್ನಾಟಕದಲ್ಲಿ 66 ಲಕ್ಷ ಹೂಡಿಕೆದಾರರು



(ಆಧಾರ: ಎನ್‌ಎಸ್‌ಇ ಮಾರ್ಕೆಟ್ ಪಲ್ಸ್ ವರದಿ)

ಬ್ರೋಕರೇಜ್ ಮಾತು

ಸಿಟಿ ಯೂನಿಯನ್ ಬ್ಯಾಂಕ್

ಸಿಟಿ ಯೂನಿಯನ್ ಬ್ಯಾಂಕ್‌ನ ಷೇರು ಮೌಲ್ಯವು ₹295ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಕಂಪನಿ ಆನಂದ್ ರಾಠಿ ಹೇಳಿದೆ. ಸಿಟಿ ಯೂನಿಯನ್ ಬ್ಯಾಂಕ್ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ನಿರೀಕ್ಷೆಗಿಂತ ಹೆಚ್ಚಿನ ಪ್ರಮಾಣದ ವರಮಾನ ಕಂಡಿದೆ. ಬ್ಯಾಂಕ್‌ನ ಸಾಲ ನೀಡಿಕೆ ಪ್ರಮಾಣವು ಶೇಕಡ 18.7ರಷ್ಟು ಹೆಚ್ಚಾಗಿದ್ದು, ಆರೋಗ್ಯಕರ ಮಟ್ಟದಲ್ಲಿದೆ ಎಂದು ಬ್ರೋಕರೇಜ್ ಕಂಪನಿ ಹೇಳಿದೆ.

ಎಂಎಸ್‌ಎಂಇ ವಲಯದಲ್ಲಿ ಸಾಲ ನೀಡಿಕೆ ಪ್ರಮಾಣವು ಹೆಚ್ಚಳ ಕಂಡಿದೆ, ಬ್ಯಾಂಕ್‌ನ ಹಣಕಾಸಿನ ಸ್ಥಿತಿ ಚೆನ್ನಾಗಿದೆ ಎಂದು ಅದು ಹೇಳಿದೆ. ಮುಂದಿನ ದಿನಗಳಲ್ಲಿ ಸಾಲ ನೀಡಿಕೆ ಪ್ರಮಾಣವು ಹೆಚ್ಚಿನ ಮಟ್ಟದಲ್ಲಿ ಇರುವ ನಿರೀಕ್ಷೆ ಇದೆ ಹಾಗೂ ಸಾಲ ನೀಡಿಕೆಯ ಮೇಲಿನ ವೆಚ್ಚವು ಸಮಾಧಾನಕರ ಮಟ್ಟದಲ್ಲಿರುವ ಸಾಧ್ಯತೆ ಇದೆ ಎಂದೂ ಬ್ರೋಕರೇಜ್ ಕಂಪನಿ ಹೇಳಿದೆ. ಬ್ಯಾಂಕ್‌ನ ಷೇರು ಮೌಲ್ಯವು ಮಂಗಳವಾರದ ವಹಿವಾಟಿನ ಅಂತ್ಯಕ್ಕೆ ₹254.60 ಆಗಿತ್ತು.

ಕೊಫೋರ್ಜ್ ಲಿಮಿಟೆಡ್

ಮಾಹಿತಿ ತಂತ್ರಜ್ಞಾನ ವಲಯದ ಕಂಪನಿ ಕೊಫೋರ್ಜ್‌ನ ಪ್ರತಿ ಷೇರಿನ ಮೌಲ್ಯ ₹2,400 ಆಗಲಿದೆ ಎಂದು ಬ್ರೋಕರೇಜ್ ಕಂಪನಿ ಮೋತಿಲಾಲ್ ಓಸ್ವಾಲ್ ಹೇಳಿದೆ.

ಕಂಪನಿಯು ಸೆಪ್ಟೆಂಬರ್ ತ್ರೈಮಾಸಿಕದ ವರಮಾನದಲ್ಲಿ ಶೇ 5.9ರಷ್ಟು ಮತ್ತು ತೆರಿಗೆ ನಂತರದ ಲಾಭದಲ್ಲಿ ಶೇ 18ರಷ್ಟು ಹೆಚ್ಚಳವಾಗಿದೆ. ಇದೇ ತ್ರೈಮಾಸಿಕದಲ್ಲಿ ₹4,556 ಕೋಟಿ ಮೌಲ್ಯದ ಕಾರ್ಯಾದೇಶ ಪಡೆದಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕಂಪನಿಯು 20 ಅತಿದೊಡ್ಡ ಒಪ್ಪಂದ ಮಾಡಿಕೊಳ್ಳುವ ಗುರಿ ಹೊಂದಿದೆ. ಈ ಪೈಕಿ 10 ಒಪ್ಪಂದಗಳು ಈಗಾಗಲೇ ಆಗಿವೆ. ಹೆಚ್ಚಿದ ಕಾರ್ಯಾದೇಶ, ಸದೃಢ ಕಾರ್ಯಾಚರಣೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಬೆಳವಣಿಗೆಯ ಮುನ್ನೋಟಕ್ಕೆ ಪೂರಕವಾಗಿದೆ ಎಂದು ಹೇಳಿದೆ. ಮಂಗಳವಾರದ ವಹಿವಾಟಿನ ಅಂತ್ಯದ ವೇಳೆಗೆ ಕಂಪನಿಯ ಷೇರಿನ ಮೌಲ್ಯ ₹1,765.25 ಇತ್ತು.


ಪ್ರಾತಿನಿಧಿಕ ಚಿತ್ರ

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ದ್ವಿತೀಯ ಭಾಷೆ ಇಂಗ್ಲಿಷ್ ವ್ಯಾಕರಣ ಮಾದರಿ ಪ್ರಶ್ನೋತ್ತರಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಶಂಕರನಾರಾಯಣ ರಾವ್, ನಿವೃತ್ತ ಇಂಗ್ಲಿಷ್ ಅಧ್ಯಾಪಕ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

Biology

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

The Concert

Share Your Responses

4.'They had come with high hopes'

a. What were their ' high hopes'?

b. Do you think their hopes would be fulfilled? Support your answer.

c. Doctors said something to the parents. Were those words of hope or words of despair(para.6)

d. 'They did not voice their fears'. Who does the word 'they stand for?

i) doctors ii) friends

iii) family members,

(choose the right answer). (Para.6)

Ans(a) They had come with hopes in the miracles of modern science. They hoped that An ant would be cured in the hospital and bounce back to normal life, and even take part in the tabletennis tournament.

b) If we were to go by the medical records, we have to say that their hopes wouldn't be fulfilled because doctors had given up their hope of curing the boy. They had asked the parents to take the boy home as they were under the impression that no treatment would help the boy. However, we cannot rule out the possibilities of a miraculous recovery which might fulfill the hopes of the parents.

c) The doctors told the parents to take the boy home and give him all that he liked. These are certainly words of despair because the doctors will come up with such advice only when they know that the patient cannot be cured and it is better to indulge him and make him happy rather than follow a strict regimen.

d) iii) family members.

5.'Her eyes filled with tears'. Were they tears of happiness or sorrow ? Give reasons.

Ans: They are definitely tears of sorrow. When her brother says that the opportunity of hearing Pandit Ravi Shankar is the chance of a lifetime it's ironic because the boy is not left with much of his life time. The sister who knows that the days of her brother are numbered can not overcome her sorrow and her eyes are filled with tears.

6.'Suddenly a daring thought came to her'. Can you guess what thought Smita had?

Ans: The daring thought must be to fulfill the desire of her brother of listening to Pandit Ravi Shankar. The sister must have decided to give her brother what the brother thought was the chance of a life time. How exactly she planned to do it is not known to the readers at this point in time.

Share your Responses

1.The word 'gasp', according to the dictionary, suggests – surprise or pain. Which meaning isirelevant in this context? (Para.10)

Ans: The meaning of the 'gasp' in this context is a pain.

1. As Smita sat listening to the music, she was spellbound. But all the while, her mind was echoing something else. What was that?

Ans: As Smita sat listening to the music, she was spellbound. But all the while, her mind was echoing the plan she had decided on the evening remained firmly in her mind.

2. Why does the writer use the word 'wriggled' to describe Smita's movement?

Ans: There was a great crowd and she was more anxious. Her heart beat was loud and she felt her knees were weak. So she cannot walk straight but she moved in a wriggled way.

3. Smita's nervousness is suggested by the phrase 'her heart beating loudly' in paragraph 12. Identify two more phrases that describe a similar state in the next paragraph

Ans: The two more phrases that describe Smita's nervousness are(i) her knees felt weak(ii) her tongue dried.

4. Did Smita tell what she had in her mind to the musicians? Who responded to her request immediately. What was the response?

Ans: Yes, Smita told completely what she had in her mind to the musicians were Immediately Ustad Allah Rakha responded to her request. The response was the next morning they would perform for the boy (her brother).

5. Do you think the response of the artists was unusual? If not, why?

Ans: Yes, the response of the artists was unusual. Generally, great artists are always busy and they had no time to listen or attend these types of requests. But his was a special case and these artists were very generous, they showed their humanity. Really it was appreciable.

6.The neighbours could not believe their eyes. Why do you think they felt like this?

Ans: The neighbours could not believe their eyes, because Pandit Ravi Shankar was very famous artist and very busy. It was very difficult to take his call-sheet. How can they believe such agreat person could come to this poor dwelling and gave a concert.

(Contd…..)

PRINCIPLES OF INHERITANCE AND VARIATION

11. Write a note on autosomal disorders.

Ans:- (b) Thalassemia – (……..Contd) minor. Thalassemia originated in Mediterranean region. It is more prevalent in Mediterranean, middle east, Indian subcontinent and south-east Africa. Thalassemia is of three types-α, β and δ.

(i) Alpha Thalassemia - It is caused by defective alpha globin genes present on chromosome 16. Deletion in p-segment of chromosome also produces the same effect. There is decreased synthesis of alpha globin resulting in excess of beta globin in adults and excess of gamma chain in new borns. As a result haemoglobin tetramers are unstable and there is abnormal oxygen dissociation curve. There are two pairs of alleles (HBA1, HBA2). Persons with one defective allele are silent carriers. Ones with two defective alleles have α-thalassemia minor with mild anaemia. Persons having three defective alleles are likely to have haemoglobin H (HbH) disease.

It is characterized by anaemia, hepatosplenomegaly, yellowing of eyes and skin (jaundice). Bone changes occur like overgrowth of upper jaw and prominent forehead.

In case all the four genes are defective, the foetus develops **hydrops foetalis** or excessive fluid build up in the body. There is anemia, enlarged liver and spleen, heart defects, abnormalities in urinary system and genitalia. The mother often develops dangerously high blood pressure with swelling. Delivery is generally premature with abnormal blood loss. There is either still birth or death soon after delivery.

(ii) Beta Thalassemia - It develops due to decreased synthesis of β-globin of haemoglobin because of the defect in a pair of alleles (HBB) present on chromosome 11. Depending on the nature of mutation and involvement of one or both the alleles, there are three forms of β-thalassemia-minor, intermadia and major. In β-thalassemia minor, there is one defective allele, i.e., the individual is heterozygous. RBCs are higher in number but microcytic with 15% less haemoglobin.

Thalassemia intermedia (B^+) has moderate anaemia with splenomegaly. The condition is intermediate between homozygous and heterozygous forms.

Thalassemia major (B^0) – is severe form of anaemia that appears due to homozygous state or both the alleles being defective. It is also known as Cooley's anaemia (β+). Due to excess of α-chains, tetramer formation is prevented. The globins tend to bind to RBC membrane, cause damage to it resulting in severe anaemia. The manifestation of the disease begins 4-6 months after birth. There is severe haemolytic, hypochromic microcytic anaemia with hepatosplenomeglay, skeletal deformation, mongoloid face and cardiac enlargement.

(iii) Delta Thalassemia - The defect is of minor nature as delta globin occurs in only 3% of adult haemoglobin as alpha and delta tetramers. The gene controlling the synthesis of delta globin is HBD situated on chromosome 11.

Thalassemia differs from sickle cell anaemia. It is a quantitative problem of synthesizing too few globin molecules. Sickle cell anaemia is a qualitative problem of synthesizing an incorrectly functioning globin.

(c) Cystic Fibrosis - It is due to an autosomal recessive gene present on chromosome 7 that controls the synthesis of a unique glycoprotein. It results in the production of very high viscosity mucus and excessive excretion of sodium in sweat. The disease affects many exocrine glands-skin glands, lungs, liver, pancreas. Mucus collects in lungs and makes breathing difficult. Susceptibility to infections is high. Bile production is impaired. Liver may undergo cirrhosis. Pancreas does not produce sufficient pancreatic juice. Digestion is impaired. Fat content of stool is high. Cardiac failure is common. Persons with cystic fibrosis die early.

(d) Alzheimer's Disease - It is a degenerative disease of brain which is caused by two autosomal defective alleles, one on chromosome 21 and other on chromosome 19. The defective allele on 21 is dominant and produces the disorder very early. It is associated with Down's syndrome which is due to trisomy of 21.

The most common type of alzeimer's diseases is one which sets late (after the age of 40). This is caused by the E4 allele of chromosome 19. There are deposition of senile plaques in the nervous system due to non-metabolism of amyloid b – peptide. This results in degeneration of neurons. Choline acetyl transferase activity is reduced. There are changes in personality, disturbance in memory and trembling of hands. Dementia or loss of memory increases progressively.

(e) Myotonic Dystrophy – It is a rare, slow progressing autosomal dominant disorder which is characterised by the increased muscular irritability and contractility with decreasing relaxation *(Contd)*

ಗೆಲ್ಲಲು ಅಡ್ಡದಾರಿ, ಅವಘಡಕ್ಕೆ ಹಾದಿ

ಶಿಕಾರಿಪುರ: ದೀಪಾವಳಿ ನಂತರ ಗರಿಗೆದರಿದ ಹೋರಿ ಹಿಡಿಯುವ ಸ್ಪರ್ಧೆ

• ಚಂದ್ರಶೇಖರ ಮಠದ

ಶಿಕಾರಿಪುರ: ದೀಪಾವಳಿ ಹಬ್ಬದ ಹಿಂದೆಯೇ ತಾಲ್ಲೂಕಿನಲ್ಲಿ ಹೋರಿ ಹಿಡಿಯುವ ಸ್ಪರ್ಧೆಯ ಗೌಜು ಗರಿಗೆದರಿದೆ. ಆದರೆ, ಬಹುಮಾನ ಗೆಲ್ಲಲು ಕೆಲವರು ಹೋರಿಗಳಿಗೆ ಗಾಂಜಾ ಸೊಪ್ಪು ತಿನ್ನಿಸಿ, ಮದ್ಯ ಕುಡಿಸಿ ಅಡ್ಡದಾರಿ ತುಳಿಯುತ್ತಿದ್ದಾರೆ. ಇದು ಅವಘಡಗಳಿಗೆ ದಾರಿಯಾಗುತ್ತಿದೆ.

ಹೋರಿ ಹಿಡಿಯುವವರು, ಸಭಿಕರು ಗಾಯಗೊಳ್ಳುತ್ತಿದ್ದಾರೆ. ಸಾವುಗಳು ಸಂಭವಿಸಿವೆ. ವಾರದ ಹಿಂದಷ್ಟೇ ಬಳ್ಳಿಗಾವಿಯಲ್ಲಿ ಮಾಜಿ ಶಾಸಕ ಬಿ.ಎನ್. ಮಹಾಲಿಂಗಪ್ಪ ಹೋರಿ ತಿವಿತಕ್ಕೆ ಒಳಗಾಗಿದ್ದರು. ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಸ್ಪರ್ಧೆಗಾಗಿ ವರ್ಷದ ಮೊದಲೇ ಸಿದ್ಧತೆ ನಡೆಯುತ್ತದೆ. ಲಕ್ಷಾಂತರ ರೂಪಾಯಿ ವ್ಯಯಿಸಿ ಹೊರ ಜಿಲ್ಲೆ, ಹೊರ ರಾಜ್ಯಗಳಿಂದ ಹೋರಿಗಳನ್ನು ಖರೀದಿಸಿ ತಂದು ತರಬೇತಿ ನೀಡುತ್ತಾರೆ. ಉತ್ತಮ ಆಹಾರ, ಆರೈಕೆಯ ಮೂಲಕ ಸ್ಪರ್ಧೆಗೆ ಸಜ್ಜುಗೊಳಿಸುತ್ತಾರೆ.

ಅವಘಡ ಏಕೆ?: 'ಹೋರಿ ಮದವೇರಿ ಮುನ್ನುಗ್ಗಿ ಜಯಗಳಿಸಲಿ ಎಂದು ಕೆಲವರು ಅದಕ್ಕೆ ಗಾಂಜಾ ಸೊಪ್ಪು ತಿನ್ನಿಸಿ ಉದ್ರೇಕಿಸುತ್ತಾರೆ. ಶಕ್ತಿ ವರ್ಧಕ ಪೇಯ, ಮದ್ಯ ಕೂಡ ಕುಡಿಸುತ್ತಾರೆ. ಅಖಾಡಕ್ಕಿಳಿಸುವ ಮುನ್ನ ಬ್ಯಾಟರಿ ಬಳಸಿ ಹೋರಿಗೆ ವಿದ್ಯುತ್ ಶಾಕ್ ಕೊಡಲಾಗುತ್ತಿದೆ. ಇದರಿಂದ ಅವು ನಿಯಂತ್ರಣ ತಪ್ಪಿ ಓಡುತ್ತವೆ. ಜನರ ಗುಂಪಿನತ್ತಲೂ ನುಗ್ಗುತ್ತವೆ' ಎಂದು ಹೋರಿ ಮಾಲೀಕರೂ ಆದ ದಂತ ವೈದ್ಯ, ಶಿಕಾರಿಪುರದ ಪ್ರಶಾಂತ್ ಹೇಳುತ್ತಾರೆ.

'ಹೋರಿ ಹಿಡಿಯುವ ಯುವಕರಲ್ಲೂ ಕೆಲವರು ಮದ್ಯದ ನಶೆಯಲ್ಲಿರುತ್ತಾರೆ. ಗೆದ್ದ ಹೋರಿಗೆ ದೊಡ್ಡ ಮೊತ್ತದ ಬಹುಮಾನ, ಸಾಮಾಜಿಕ ಜಾಲತಾಣದಲ್ಲಿ ಭರ್ಜರಿ ಪ್ರಚಾರ ಸಿಗುತ್ತದೆ. ಹೀಗಾಗಿ ಕೆಲವರು ಅಡ್ಡ ದಾರಿ ಹಿಡಿಯುತ್ತಿದ್ದಾರೆ' ಎನ್ನುತ್ತಾರೆ.

ಅಖಾಡದ ಅಗಲ ಹೆಚ್ಚಬೇಕು: 'ಸಣ್ಣ ರಸ್ತೆಯಲ್ಲಿ ಹೋರಿಗಳನ್ನು ಓಡಿಸಲಾಗುತ್ತದೆ. ಬ್ಯಾರಿಕೇಡ್ ಹಾಕಿರುವುದಿಲ್ಲ. ಇದರಿಂದ ಹೋರಿಗಳು ಜನರತ್ತ ನುಗ್ಗುತ್ತವೆ. ಓಟದ ಅಖಾಡ ವಿಶಾಲವಾಗಿದ್ದರೆ ಯಾರಿಗೂ ತೊಂದರೆ ಆಗುವುದಿಲ್ಲ' ಎಂದು ಶಿಕಾರಿಪುರದ ಅರುಣ್ ದೂದಿಹಳ್ಳಿ ಹೇಳುತ್ತಾರೆ.

ಹೆಚ್ಚುತ್ತಿದೆ ಕ್ರೇಜ್: 'ಸಾಮಾಜಿಕ ಜಾಲತಾಣದಲ್ಲಿ ಹಬ್ಬದ ಬಗ್ಗೆ ವ್ಯಾಪಕ ಪ್ರಚಾರದಿಂದ ವರ್ಷದಿಂದ ವರ್ಷಕ್ಕೆ ವೀಕ್ಷಕರ ಸಂಖ್ಯೆ ಹೆಚ್ಚುತ್ತಿದೆ. ಇದರಿಂದ ಜನದಟ್ಟಣೆ ನಿಯಂತ್ರಣ ತಲೆನೋವಾಗುತ್ತಿದೆ' ಎಂದು ಪೊಲೀಸರು ಹೇಳುತ್ತಾರೆ.

ಶಿಕಾರಿಪುರದಲ್ಲಿ ಹೋರಿ ಓಟದ ಸ್ಪರ್ಧೆಯ ನೋಟ (ಸಂಗ್ರಹ ಚಿತ್ರ)

ಹೋರಿ ಹಬ್ಬದತ್ತ ಯುವ ರೈತರ ಆಕರ್ಷಣೆ ಹೆಚ್ಚಾಗಿದೆ. ತೊಡಕುಗಳನ್ನು ನಿವಾರಿಸಿ ಅಚ್ಚುಕಟ್ಟಾಗಿ ರೂಪಿಸಲು ಆಯೋಜಕರು ನಿಯಮಗಳನ್ನು ಪಾಲಿಸಬೇಕು
ಮಧು ಹೋತನಕಟ್ಟೆ, ಹೋರಿ ಹಬ್ಬದ ಅಭಿಮಾನಿ

ಗಾಂಜಾ ಸೊಪ್ಪು ತಿನ್ನಿಸಿ, ಮದ್ಯ ಕುಡಿಸುವ ಕ್ರೌರ್ಯ ತಡೆಯಲು ಹೋರಿಗಳ ನಿಯಮಿತ ಪರೀಕ್ಷೆಗೆ ನಿಯಮ ರೂಪಿಸಿದೆ. ಜಿಲ್ಲಾಡಳಿತದ ಅನುಮತಿ ಪಡೆಯಬೇಕು
ಜಿ.ಕೆ.ಮಿಥುನ್‌ಕುಮಾರ್, ಪೊಲೀಸ್ ವರಿಷ್ಠಾಧಿಕಾರಿ, ಶಿವಮೊಗ್ಗ

'ವಂದೇ ಮಾತರಂ' ಗೀತೆಗೂ ಪ್ರಾಮುಖ್ಯ ಸಿಗಬೇಕು: ಕಾಗೇರಿ

ಕಾರವಾರ: 'ವಂದೇ ಮಾತರಂ' ರಾಷ್ಟ್ರಗೀತೆಗೆ ಸರಿಸಮನಾಗಿದೆ. ಈ ಗೀತೆಗೆ ದೇಶದಲ್ಲಿ ಪ್ರಾಮುಖ್ಯ ನೀಡಬೇಕು' ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ವಿಶ್ವೇಶ್ವರ ಹೆಗಡೆ ಕಾಗೇರಿ

ಹೊನ್ನಾವರದಲ್ಲಿ ಬುಧವಾರ 'ಏಕತೆಗಾಗಿ ನಡಿಗೆ' ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಅವರು, 'ಸ್ವಾತಂತ್ರ್ಯ ಹೋರಾಟಕ್ಕೆ 'ವಂದೇ ಮಾತರಂ' ಪ್ರೇರಣೆ ನೀಡಿತ್ತು' ಎಂದು ಹೇಳಿದರು.

'ಜನಗಣಮನ ಬ್ರಿಟಿಷ್ ಅಧಿಕಾರಿಯ ಸ್ವಾಗತಕ್ಕೆ ರಚಿಸಿದ್ದ ಗೀತೆ. ವಂದೇ ಮಾತರಂ ಗೀತೆಯೇ ರಾಷ್ಟ್ರಗೀತೆ ಆಗಬೇಕು ಎಂಬ ಕೂಗೂ ಆಗ ಬಲವಾಗಿತ್ತು. ಆದರೆ, ಪೂರ್ವಜರು ಜನಗಣ ಮನವನ್ನು ರಾಷ್ಟ್ರಗೀತೆ ಎಂದು ಒಪ್ಪಿಕೊಂಡರು' ಎಂದು ತಿಳಿಸಿದರು.

ನ್ಯಾಯಾಂಗದಲ್ಲಿ 'ಎ.ಐ' ಅಳವಡಿಕೆ

ಕಾನೂನು ವಿ.ವಿ. ಘಟಿಕೋತ್ಸವದಲ್ಲಿ ಸಚಿವ ಎಚ್‌.ಕೆ.ಪಾಟೀಲ

ಪ್ರಜಾವಾಣಿ ವಾರ್ತೆ

ಧಾರವಾಡ: 'ನ್ಯಾಯಾಂಗ ವ್ಯವಸ್ಥೆಯಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಅಳವಡಿಸಲಾಗುವುದು. ನ್ಯಾಯಾಂಗ ಕಾರ್ಯಕ್ಷಮತೆಯನ್ನು ವೃದ್ಧಿಸಲು ಕ್ರಮ ವಹಿಸಲಾಗುವುದು' ಎಂದು ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ಹೇಳಿದರು.

ಕೃಷಿ ವಿಶ್ವವಿದ್ಯಾಲಯದ ರೈತರ ಜ್ಞಾನಾಭಿವೃದ್ಧಿ ಕೇಂದ್ರದ ಸಭಾಂಗಣದಲ್ಲಿ ಬುಧವಾರ ನಡೆದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಏಳನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

'ಎ.ಐ ತಂತ್ರಜ್ಞಾನ ಅಳವಡಿಕೆಯಲ್ಲಿ ಎದುರಾಗುವ ಸಮಸ್ಯೆಗಳನ್ನು ಅವಕಾಶಗಳಾಗಿ ಪರಿವರ್ತಿಸಿಕೊಳ್ಳಬೇಕು. ಅದನ್ನು ವ್ಯವಸ್ಥಿತವಾಗಿ ಅಳವಡಿಸಬೇಕು' ಎಂದು ಹೇಳಿದರು.

'ಕಾನೂನು ಶಿಕ್ಷಣ ನಿರ್ದೇಶನಾಲಯ ಸ್ಥಾಪನೆ, ಉತ್ತರ ಕರ್ನಾಟಕ ವಕೀಲರ ತರಬೇತಿ ಅಕಾಡೆಮಿಗಳು ಕಾನೂನು ಶಿಕ್ಷಣ ಅಭಿವೃದ್ಧಿ ಮತ್ತು ಕಿರಿಯ ವಕೀಲರ ಪ್ರಗತಿಗೆ ಸಹಕಾರಿಯಾಗಿವೆ' ಎಂದು ಹೇಳಿದರು.

ರಾಜ್ಯ ಗಡಿ ಮತ್ತು ನದಿ ಸಂರಕ್ಷಣಾ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಶಿವರಾಜ ವಿ.ಪಾಟೀಲ ಮಾತನಾಡಿ, 'ತ್ವರಿತ ನ್ಯಾಯ ವ್ಯವಸ್ಥೆಗೆ 'ಎ.ಐ' ತಂತ್ರಜ್ಞಾನ ಸುದ್ದಿ 'ಪ್ರಜಾವಾಣಿ'ಯಲ್ಲಿ ಓದಿದೆ. ಸರ್ಕಾರ 'ಎ.ಐ ಸಂಯೋಜನೆ' ಸಂಬಂಧಿಸಿದಂತೆ ಕಾಯ್ದೆ ರೂಪಿಸಲು ಮುಂದಾಗಿರುವುದು ಒಳ್ಳೆಯ ನಿರ್ಧಾರ' ಎಂದು ಹೇಳಿದರು.

'ಕೋರ್ಟ್‌ಗಳಲ್ಲಿ ಬಹಳಷ್ಟು ಪ್ರಕರಣಗಳು ದೀರ್ಘಕಾಲದಿಂದ ಬಾಕಿ ಇವೆ. ಎ.ಐ ಅಳವಡಿಕೆಯಿಂದ ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ಅನುಕೂಲವಾಗಲಿದೆ' ಎಂದು ಅಭಿಪ್ರಾಯಪಟ್ಟರು.

ರಾಜ್ಯ ಕಾನೂನು ವಿಶ್ವವಿದ್ಯಾಲಯದ ಏಳನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಆಂಧ್ರಪ್ರದೇಶದ ರಾಜ್ಯಪಾಲ ನ್ಯಾಯಮೂರ್ತಿ ಎಸ್‌.ಅಬ್ದುಲ್ ನಜೀರ್ ಹಾಗೂ ಬೆಂಗಳೂರಿನ ಹಿರಿಯ ವಕೀಲ ವಿ.ಸುದೇಶ ಪೈ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. ಆಡಳಿತಾಂಗ ಕುಲಸಚಿವೆ ಗೀತಾ ಕೌಲಗಿ, ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ, ಕಾನೂನು ಸಚಿವ ಎಚ್‌.ಕೆ.ಪಾಟೀಲ, ಪರೀಕ್ಷಾಂಗ ಕುಲಸಚಿವ ಪ್ರೊ.ರತ್ನಾ ಆರ್‌.ಭರಮಗೌಡರ್, ಕುಲಪತಿ ಪ್ರೊ.ಸಿ.ಬಸವರಾಜು ಪಾಲ್ಗೊಂಡಿದ್ದರು

ಮುಖ್ಯಾಂಶಗಳು
- ಕೃಷಿ ವಿ.ವಿಯ ರೈತರ ಜ್ಞಾನಾಭಿವೃದ್ಧಿ ಕೇಂದ್ರದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮ

ಆತ್ಮಹತ್ಯೆಗೆ ಯತ್ನಿಸಿದ್ದ ರೈತ ಸಾವು

ಮಂಡ್ಯ: ಜಿಲ್ಲಾಧಿಕಾರಿ ಕಚೇರಿ ಮುಂಭಾಗದ ಉದ್ಯಾನದಲ್ಲಿ ಮಂಗಳವಾರ ಬೆಂಕಿ ಹಚ್ಚಿಕೊಂಡಿದ್ದ ಕೆ.ಆರ್.ಪೇಟೆ ತಾಲ್ಲೂಕು ಮೂಡನಹಳ್ಳಿಯ ರೈತ ಮಂಜೇಗೌಡ ಎಂ.ಡಿ. (55) ಬುಧವಾರ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೃತಪಟ್ಟರು.

'ಭೂ ಸ್ವಾಧೀನಗೊಂಡಿದ್ದ ಜಮೀನಿಗೆ ಪರಿಹಾರ ಸಿಕ್ಕಿಲ್ಲ. ಅಧಿಕಾರಿಗಳು ಸ್ಪಂದಿಸುತ್ತಿಲ್ಲ' ಎಂದು ಆರೋಪಿಸಿ ಅವರು ಆತ್ಮಹತ್ಯೆಗೆ ಯತ್ನಿಸಿದ್ದರು. ಪ್ರಾಥಮಿಕ ಚಿಕಿತ್ಸೆ ಬಳಿಕ ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ದೇಹ ಶೇ 80ರಷ್ಟು ಸುಟ್ಟಿತ್ತು.

₹5 ಲಕ್ಷ ಪರಿಹಾರ– ಸಚಿವ: ಮಂಜೇಗೌಡರ ಕುಟುಂಬಕ್ಕೆ ₹5 ಲಕ್ಷ ಪರಿಹಾರ ನೀಡಲಾಗುವುದು ಎಂದು ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಭರವಸೆ ನೀಡಿದರು. ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ಅವರು, ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಹೆಚ್ಚುವರಿ ಪರಿಹಾರ ನೀಡುವುದಾಗಿಯೂ ತಿಳಿಸಿದರು.

ನರಗುಂದ: ಆತ್ಮಹತ್ಯೆಗೆ ರೈತ ಯತ್ನ

ನರಗುಂದ (ಗದಗ ಜಿಲ್ಲೆ): ಬೆಳೆಹಾನಿ ಪರಿಹಾರದ ಪಟ್ಟಿಯಲ್ಲಿ ಹೆಸರಿಲ್ಲ ಎಂದು ನೊಂದು ತಾಲ್ಲೂಕಿನ ಬೆಳ್ಳೇರಿ ಗ್ರಾಮದ ರೈತ ಸಿದ್ದನಗೌಡ ಹಿರೇಗೌಡ್ರ ಕೊಣ್ಣೂರಿನ ನಾಡಕಚೇರಿಯ ಕಂದಾಯ ನಿರೀಕ್ಷಕರೇ ಎದುರೇ ವಿಷ ಸೇವಿಸಿ ಆತ್ಮಹತ್ಯೆಗೆ ಬುಧವಾರ ಪ್ರಯತ್ನಿಸಿದರು. ಅಧಿಕಾರಿಗಳೇ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸಿದ್ದಾರೆ. ಸದ್ಯ, ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕಿಮ್ಸ್ ದಾಖಲಿಸಲಾಗಿದೆ.

ಎಸ್‌ಎಸ್‌ಎಲ್‌ಸಿ, ಪಿಯು ಪರೀಕ್ಷೆ ವೇಳಾಪಟ್ಟಿ

ಒಂದನೇ ಪುಟದಿಂದ...

ದ್ವಿತೀಯ ಪಿಯು ವೇಳಾಪಟ್ಟಿ: ಫೆ.28–ಕನ್ನಡ, ಅರೇಬಿಕ್, ಮಾರ್ಚ್ 2–ಭೂಗೋಳ ಶಾಸ್ತ್ರ, ಸಂಖ್ಯಾಶಾಸ್ತ್ರ, ಮನಃಶಾಸ್ತ್ರ, 3–ಇಂಗ್ಲಿಷ್, 4–ತೆಲುಗು, ತಮಿಳು, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, ಮಲಯಾಳಂ, 5–ಇತಿಹಾಸ, 6–ಭೌತ ವಿಜ್ಞಾನ, 7–ಐಚ್ಛಿಕ ಕನ್ನಡ, ಭೂಗರ್ಭಶಾಸ್ತ್ರ, ವ್ಯವಹಾರ ಅಧ್ಯಯನ, 9–ರಸಾಯನ ವಿಜ್ಞಾನ, ಶಿಕ್ಷಣಶಾಸ್ತ್ರ, ಮೂಲಗಣಿತ, 10–ಅರ್ಥಶಾಸ್ತ್ರ, 11–ತರ್ಕಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗೃಹ ವಿಜ್ಞಾನ, 12–ಹಿಂದಿ, 13–ರಾಜ್ಯಶಾಸ್ತ್ರ, 14–ಲೆಕ್ಕಶಾಸ್ತ್ರ, ಗಣಿತ, 16–ಸಮಾಜ ಶಾಸ್ತ್ರ, ಜೀವ ವಿಜ್ಞಾನ, ಗಣಕ ವಿಜ್ಞಾನ, 17–ಹಿಂದೂಸ್ತಾನಿ ಸಂಗೀತ, ಮಾಹಿತಿ ತಂತ್ರಜ್ಞಾನ, ರೀಟೇಲ್, ಆಟೊಮೊಬೈಲ್, ಹೆಲ್ತ್‌ಕೇರ್, ಬ್ಯೂಟಿ ಆ್ಯಂಡ್ ವೆಲ್‌ನೆಸ್.

ಎಸ್‌ಎಸ್‌ಎಲ್‌ಸಿ ವೇಳಾಪಟ್ಟಿ: ಮಾರ್ಚ್ 18–ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ (ಎನ್‌ಸಿಇಆರ್‌ಟಿ), ಸಂಸ್ಕೃತ, 23–ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ತಾನಿ, ಕರ್ನಾಟಕ ಸಂಗೀತ, 25–ದ್ವಿತೀಯ ಭಾಷೆಗಳಾದ ಇಂಗ್ಲಿಷ್, ಕನ್ನಡ, 28–ಗಣಿತ, ಸಮಾಜ ಶಾಸ್ತ್ರ, 30–ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು, ಎನ್‌ಎಸ್‌ಕ್ಯೂಎಫ್ ವಿಷಯಗಳು, ಏ.1–ಅರ್ಥಶಾಸ್ತ್ರ, ಎಂಜಿನಿಯರಿಂಗ್ ವಿಷಯಗಳು, ಏ.2–ಸಮಾಜ ವಿಜ್ಞಾನ

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ)
(ಕರ್ನಾಟಕ ಸರ್ಕಾರದ ನೋಂದಾಯಿತ ಸಂಸ್ಥೆ)
ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ಯಲಹಂಕ–ಅಟ್ಟೂರು ಲೇಔಟ್ ಹತ್ತಿರ, ಬೆಂಗಳೂರು–560 064. ದೂ.: 080–67355000
ಸಂಖ್ಯೆ: ಕರಾನೈವಿಉಕೇ/ಎಸಿಟಿ/13/2020 ದಿನಾಂಕ: 05.11.2025

ಇ–ಟೆಂಡರ್ ಪ್ರಕಟಣೆ

ಫೈಯರ್‌ವಾಲ್ ಯಂತ್ರದ ಮತ್ತು ಬ್ಯಾಕ್‌ಅಪ್ ಸಾಫ್ಟ್‌ವೇರ್‌ನ ಸಮಗ್ರ ವಾರ್ಷಿಕ ನಿರ್ವಹಣೆಗಾಗಿ ಈ ಕಚೇರಿಯು ಇ–ಸಂಗ್ರಹಣಾ ವೇದಿಕೆ **"https://kppp.karnataka.gov.in"** ಮುಖಾಂತರ ಟೆಂಡರ್ ಸಂಖ್ಯೆ: KSNDMC/2025-26/SE0017 ಅನ್ನು ಆಹ್ವಾನಿಸುತ್ತಿದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 20.11.2025.** ಪ್ರಿ ಬಿಡ್ ಸಭೆ ದಿನಾಂಕ: **11.11.2025, 3.00P.M. ಸ್ಥಳ: KSNDMC ಕಛೇರಿ, ಯಲಹಂಕ.** ಈ ಟೆಂಡರ್ ಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಿಂದ ಪಡೆಯಬಹುದು.

ಸಹಿ/– ನಿರ್ದೇಶಕರು

ಅಡ್ವೊಕೇಟ್ ಜನರಲ್‌ರವರ ಕಚೇರಿ
ಉಚ್ಚ ನ್ಯಾಯಾಲಯ ಕಟ್ಟಡ, ಡಾ|| ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು–560001,
ದೂ: 080–22865200, Email: advgenest@gmail.com
ಸಂಖ್ಯೆ:ADVGEN/2025-26/SE0002 ದಿನಾಂಕ: 03.11.2025

ಟೆಂಡರ್ ಅಧಿಸೂಚನೆ
(ಇ–ಸಂಗ್ರಹಣೆ ಪೋರ್ಟಲ್ ಮೂಲಕ)

ಅಡ್ವೊಕೇಟ್ ಜನರಲ್‌ರವರ ಕಚೇರಿ, ಕೇಂದ್ರ ಕಚೇರಿ ಹಾಗೂ ಘಟಕ ಕಚೇರಿಗಳಾದ ಬೆಂಗಳೂರು, ಧಾರವಾಡ ಮತ್ತು ಕಲಬುರ್ಗಿ ಘಟಕಗಳಿಗೆ ಅಗತ್ಯವಿರುವ ಸಾಫ್ಟ್‌ವೇರ್ ತಂತ್ರಜ್ಞ, ಹಾರ್ಡ್‌ವೇರ್ ತಂತ್ರಜ್ಞ, ದತ್ತಾಂಶ ನಮೂದಕರು, ಅನುಚರರು, ವಾಹನ ಚಾಲಕರು, ಸ್ವಚ್ಛತೆಗಾರರನ್ನು ಹೊರಗುತ್ತಿಗೆ ಆಧಾರದ ಮೇಲೆ ನಿಯೋಜಿಸಲು ಆನ್‌ಲೈನ್ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಈ ಟೆಂಡರಿನ ಅಂದಾಜು ಮೌಲ್ಯ **ರೂ. 3.37 ಕೋಟಿಗಳು.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 03.12.2025, ಸಂಜೆ 4.30 ಗಂಟೆ.**
ಇತರೆ ಮಾಹಿತಿಯನ್ನು ಇ–ಸಂಗ್ರಹಣಾ ಪೋರ್ಟಲ್ **https://kppp.karnataka.gov.in** ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಮೇಲ್ಕಂಡ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಆಡಳಿತಾಧಿಕಾರಿಗಳು,
ಅಡ್ವೊಕೇಟ್ ಜನರಲ್‌ರವರ ಕಚೇರಿ,
ಉಚ್ಚ ನ್ಯಾಯಾಲಯ ಕಟ್ಟಡ, ಬೆಂಗಳೂರು.

ವಾಸಾಸಂಇ/ಉನಿ–ಸಿ.ಪಿ./3580/ಕೆಎಸ್‌ಎಂಸಿಎ/2025–26

ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ
ನಿರ್ದೇಶಕರ ಕಾರ್ಯಾಲಯ, ಕಲ್ಯಾಣ–ಸುರಕ್ಷಾ ಭವನ, ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ,
ಬೆಂಗಳೂರು–560 029, ದೂರವಾಣಿ:080–26531200
ಇ–ಮೇಲ್:directorfbish@gmail.com
ಸಂಖ್ಯೆ:ಇಎಸ್‌ಟಿ–1/ಇತರೆ/ಸಿಆರ್–131/2025–26 ದಿನಾಂಕ:05.11.2025

ಇ–ಟೆಂಡರ್ ಕಾಲಾವಧಿ ವಿಸ್ತರಣೆ ಸೂಚನೆ
(ಕೆಪಿಪಿ ಪೋರ್ಟಲ್ ಮೂಲಕ)

ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಕಾಯ್ದೆ 1999 ಮತ್ತು ಕಾಯಿದೆ 2000ರ ಪ್ರಕಾರ ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯು ಸಾರ್ವಜನಿಕರಿಗೆ ಆನ್‌ಲೈನ್ ಮುಖೇನ ಒದಗಿಸುತ್ತಿರುವ ಸೇವೆಗಳಿಗೆ ಸಂಬಂಧಿಸಿದಂತೆ ತಂತ್ರಾಂಶವನ್ನು ಅಭಿವೃದ್ಧಿಗೊಳಿಸಲು ಅರ್ಹ ಸಂಸ್ಥೆಗಳು ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಸಲ್ಲಿಸುವ ಕಾಲಾವಧಿಯನ್ನು **ದಿನಾಂಕ: 05.11.2025** ರಿಂದ ಅನ್ವಯವಾಗುವಂತೆ ಏಳು ದಿನಗಳಿಗೆ ವಿಸ್ತರಿಸಿ **ದಿನಾಂಕ: 12.11.2025** ರ **ಸಂಜೆ 05:00 ಗಂಟೆಯವರೆಗೆ** ಅವಕಾಶ ಕಲ್ಪಿಸಲಾಗಿದೆ. **(ಟೆಂಡರ್ ಅಂದಾಜು ಮೊತ್ತ ರೂ. 1.70 ಕೋಟಿ ಹಾಗೂ ಇಎಂಡಿ ಮೊತ್ತ 2.55 ಲಕ್ಷ /–)**
ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್:**https://kppp.karnataka.gov.in** ನಿಂದ ಅಥವಾ ಈ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/–
ನಿರ್ದೇಶಕರು.

ವಾಸಾಸಂಇ/ವಾಪ್ರ/ಜಿಎ/3616/2025–26

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.ಜ್ಞಾನಸಾಗರ ಆವರಣ, ವಿನಾಯಕನಗರ, ಕಂಟೋನ್ಮೆಂಟ್, ಬಳ್ಳಾರಿ–583105.
ಸಂಖ್ಯೆ:ವಿಶ್ರೀಕೃವಿಬ/ಕ.ವಿ/ಟೆಂಡರ್–64/ಡಿ.ಸಿ/2025–26/669/670,
ದಿನಾಂಕ:4–11–2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯವು ಕ್ರ.ಸಂ: 01) ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣಕ್ಕೆ ಡೆಸ್ಕ್ ಟಾಪ್ ಕಂಪ್ಯೂಟರ್ ಗಳನ್ನು ಪೂರೈಸುವ ಕೆಲಸ : **ರೂ.1,83,75,196/–** (ಜಿ.ಎಸ್.ಟಿ. ಸೇರಿದಂತೆ) & ಕ್ರ.ಸಂ: 02) ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಮುಖ್ಯ ಆವರಣಕ್ಕೆ ಅಗತ್ಯವಾದ ಕಂಪ್ಯೂಟರ್ ಲ್ಯಾಬ್ ಟೇಬಲ್ ಹಾಗೂ ರಿವಾಲ್ವಿಂಗ್ ಚೇರ್ ಗಳನ್ನು ಪೂರೈಸುವ ಕೆಲಸ. : **ರೂ.19,11,000/–** (ಜಿ.ಎಸ್.ಟಿ. ಸೇರಿದಂತೆ) ಕೆಲಸಗಳಿಗೆ ನಿಯಮಾನುಸಾರ ಅರ್ಹ ಏಜೆನ್ಸಿಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಟೆಂಡರನ್ನು ಸ್ವೀಕರಿಸಲಾಗುವುದು. ವಿವರಗಳಿಗೆ ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ **kppp.karnataka.gov.in.** ಮುಖಾಂತರ **ದಿನಾಂಕ:15–11–2025 ಮಧ್ಯಾಹ್ನ 05.00** ಘಂಟೆಯವರೆಗೆ ಪಡೆದು ಟೆಂಡರ್‌ಗಳನ್ನು ಸಲ್ಲಿಸಬಹುದು. ಸಂಪೂರ್ಣ ವಿವರಗಳನ್ನು ಈ ಕೆಳಕಂಡ ಅಧಿಕಾರಿಯ ಕಛೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/–ಕುಲಸಚಿವರು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/626/ಕೆಎಸ್‌ಎಂಸಿಎ/2025–26

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ನಂ: ಕವಿನಿಆ/ಉ.ನಿ(ಆ)/ಇ–ಕೋರ್ಟ್/2024–25/1117 ದಿನಾಂಕ: 04.11.2025

ದರಖಾಸ್ತು ಪ್ರಕಟಣೆ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು ರವರು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಆಯೋಗದಲ್ಲಿ **ಡಿಜಿಟಲ್ / ಇ–ಕೋರ್ಟ್ ಯೋಜನೆಗಾಗಿ ಐಟಿ ಸೇರಿದಂತೆ ಹಾರ್ಡ್‌ವೇರ್‌ನ ಪೂರೈಕೆ, ಸ್ಥಾಪನೆ, ಸಂರಚನೆ ಮತ್ತು ಕಾರ್ಯಾರಂಭಕ್ಕಾಗಿ** ಅರ್ಹ ಬಿಡ್ಡರ್‌ಗಳು / ಏಜೆನ್ಸಿಗಳಿಂದ ಸ್ಪರ್ಧಾತ್ಮಕ ಬಿಡ್ಡಿಂಗ್ ಅಡಿಯಲ್ಲಿ ಎಲೆಕ್ಟ್ರಾನಿಕ್ ಬಿಡ್‌ಗಳನ್ನು ಕೆಲಸದ ವ್ಯಾಪ್ತಿ ಮತ್ತು ಟೆಂಡರ್ ದಾಖಲೆಯಲ್ಲಿ ಸೂಚಿಸಲಾದ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಟೆಂಡರ್ ಆಹ್ವಾನಿಸಲಾಗಿದೆ.
ಒಪ್ಪಂದದ ನಿಯಮ ಮತ್ತು ಷರತ್ತುಗಳು, ಬಿಡ್ಡರ್‌ಗಳ ಅರ್ಹತಾ ಅವಶ್ಯಕತೆ, ಮಾನದಂಡಗಳು ಮತ್ತು ವ್ಯಾಪ್ತಿ ಒಳಗೊಂಡ ಬಿಡ್ ಡಾಕ್ಯುಮೆಂಟ್‌ಗಳ ವಿದ್ಯುನ್ಮಾನ ಪ್ರತಿಗಳ ವಿವರಗಳನ್ನು **ದಿನಾಂಕ: 04.11.2025ರಂದು** ಅಂತರ್ಜಾಲ ತಾಣದಲ್ಲಿ **https://kppp.karnataka.gov.in** ಲಭ್ಯವಿರಿಸಲಾಗಿರುತ್ತದೆ. ಈ ಟೆಂಡರ್‌ನಲ್ಲಿ ಭಾಗವಹಿಸಲು ದಿನಾಂಕ: **24.11.2025ರ ಮಧ್ಯಾಹ್ನ 11.00 ಘಂಟೆಯವರೆಗೆ** ಸಮಯವಿರುತ್ತದೆ.
ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ಸಹಾಯವಾಣಿಯ ಕವಿನಿಆ ದೂರವಾಣಿ ಸಂಖ್ಯೆ: 080–22268677/78/79–ವಿಸ್ತರಣೆ ಸಂಖ್ಯೆ 214/215 ಸಂಪರ್ಕಿಸಿ ಕೆಲಸದ ದಿನಗಳಲ್ಲಿ ಬೆಳಿಗ್ಗೆ 10.00 ರಿಂದ ಸಂಜೆ 6.00 ರವರೆಗೆ.

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

DIPR/CP/3605/2025-26

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ: ಬೆಂಗಳೂರು
ಸಂ: ಕರಾಸಾ/ಕೆಂಬನಿ/ವಾ–4/697/2025–26 ದಿನಾಂಕ: 05.11.2025

ತಿದ್ದುಪಡಿ ಆದೇಶ

ಕೆಂಪೇಗೌಡ ಬಸ್ ನಿಲ್ದಾಣದ ವಿಭಾಗದ ವ್ಯಾಪ್ತಿಗೆ ಬರುವ ಮೈಸೂರು ರಸ್ತೆ ಬಸ್ ನಿಲ್ದಾಣಗಳ ಆವರಣ / ಶೌಚಾಲಯಗಳ /ಮೂತ್ರಾಲಯಗಳ ನಿರ್ವಹಣೆ ಹಾಗೂ ಯಾಂತ್ರಿಕ / ಯಾಂತ್ರಿಕ ರಹಿತ ಸ್ವಚ್ಛತಾ ಕಾರ್ಯಕ್ಕಾಗಿ ಸ್ವಚ್ಛತಾ ಪರವಾನಗಿದಾರರನ್ನು, ಮೂರು ವರ್ಷಗಳ ಅವಧಿಗೆ ಹಾಗೂ ಅತೀ ಹೆಚ್ಚಿನ ಬಿಡ್ ನಿರೀಕ್ಷಿಸಿ, ಪರವಾನಗಿದಾರರನ್ನು ಆಯ್ಕೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ (ಕೆ.ಪಿ.ಪಿ ಪೋರ್ಟಲ್) ಅಂತರ್ಜಾಲದ ಮೂಲಕ ಟೆಂಡರ್ ಪ್ರಕಟಣೆ ಸಂಖ್ಯೆ 08/625/2025–26 ದಿನಾಂಕ:13.10.2025 ರನ್ವಯ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಇ–ಟೆಂಡರ್ ಪ್ರಕ್ರಿಯೆ (Tender Reference No KSRTC/2025-26/SE2056) ದಿನಾಂಕಗಳನ್ನು ಆಡಳಿತಾತ್ಮಕ ಕಾರಣಗಳಿಂದಾಗಿ ಮುಂದೂಡಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ/ವಿವರಗಳಿಗಾಗಿ https://kppp.karnataka.gov.in ನಿಂದ ಹಾಗೂ ನಿಗಮದ ವೆಬ್ ಸೈಟ್ ksrtc.karntaka.gov.in ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು ಹಾಗೂ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು 560009 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. 7760990550, 7760990557 ಮತ್ತು ಕೆಪಿಪಿ ಪೋರ್ಟಲ್ ಸಹಾಯವಾಣಿ ಸಂಖ್ಯೆ: 9240214000/9240214001/8068948777/8046010000, support@eprochelpdesk.com.

ಸಹಿ/–
ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ
ಕೆಂಬನಿ ವಿಭಾಗ, ಬೆಂಗಳೂರು

ವಾಸಾಸಂಇ/ವಾ.ಪ್ರ/3593/ಎಂಎಎ/2025–26

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು
ಸಂ. ಕರಾಸಾ/ಕೆಂಬನಿ/ವಾ–4/696/2025–26 ದಿನಾಂಕ: 05/11/2025

ತಿದ್ದುಪಡಿ ಆದೇಶ

ಕೆಂಪೇಗೌಡ ಬಸ್ ನಿಲ್ದಾಣ, ದೇವನಹಳ್ಳಿ ಟ್ರಂಪೆಟ್ ಬಸ್ ನಿಲ್ದಾಣ ಮತ್ತು ಶಾಂತಿನಗರದಲ್ಲಿರುವ ಕ್ರೀಡಾ ಸಂಕೀರ್ಣ ಸೇರಿದಂತೆ ಬಸ್ ನಿಲ್ದಾಣಗಳ ಆವರಣ / ಶೌಚಾಲಯಗಳ / ಮೂತ್ರಾಲಯಗಳ ನಿರ್ವಹಣೆ ಹಾಗೂ ಯಾಂತ್ರಿಕ / ಯಾಂತ್ರಿಕ ರಹಿತ ಸ್ವಚ್ಛತಾ ಕಾರ್ಯಕ್ಕಾಗಿ ಸ್ವಚ್ಛತಾ ಪರವಾನಗಿದಾರರನ್ನು, ಮೂರು ವರ್ಷಗಳ ಅವಧಿಗೆ ಹಾಗೂ ಅತೀ ಹೆಚ್ಚಿನ ಬಿಡ್ ನಿರೀಕ್ಷಿಸಿ, ಪರವಾನಗಿದಾರರನ್ನು ಆಯ್ಕೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ (ಕೆ.ಪಿ.ಪಿ ಪೋರ್ಟಲ್) ಅಂತರ್ಜಾಲದ ಮೂಲಕ ಟೆಂಡರ್ ಪ್ರಕಟಣೆ ಸಂಖ್ಯೆ 07/623/2025–26 ದಿನಾಂಕ: 13.10.2025 ರನ್ವಯ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಇ–ಟೆಂಡರ್ ಪ್ರಕ್ರಿಯೆ (Tender Reference No KSRTC/2025-26/SE2055) ದಿನಾಂಕಗಳನ್ನು ಆಡಳಿತಾತ್ಮಕ ಕಾರಣಗಳಿಂದಾಗಿ ಮುಂದೂಡಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ / ವಿವರಗಳಿಗಾಗಿ https://kppp.karnataka.gov.in ನಿಂದ ಹಾಗೂ ನಿಗಮದ ವೆಬ್‌ಸೈಟ್ ksrtc.karntaka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು 560009 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. 7760990550, 7760990557 ಮತ್ತು ಕೆಪಿಪಿ ಪೋರ್ಟಲ್ ಸಹಾಯವಾಣಿ ಸಂಖ್ಯೆ 9240214000 / 9240214001 / 8068948777 / 8046010000, support@eprochelpdesk.com.

ಸಹಿ/–
ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ,
ಕೆಂ.ಬ.ನಿ ವಿಭಾಗ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/3594/ಆಕಾರ್/2025–26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ
ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–1/ಟೆಂಡರ–19/2025–26/3072 ದಿನಾಂಕ: 05–11–2025

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲ್ಯೂ–4) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.
(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 18–11–2025 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 19–11–2025 16.30 ಗಂಟೆವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 20–11–2025 17.00 ಗಂಟೆವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 24–11–2025 17.00 ಗಂಟೆವರೆಗೆ
ಕಾಮಗಾರಿಯ ಹೆಸರು: ಲೆಕ್ಕಶೀರ್ಷಿಕೆ **5054–MDR Improvements During 2025-26** ವರ್ಕ ಇಂಡೆಂಟ್: **(1) PWD/2025-26/RD/WORK_INDENT24359**
(ಕೆಡಬ್ಲ್ಯೂ–4) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ **e-proc** ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ **"https://kppp.karnataka.gov.in"** ನೋಡಬಹುದು. ಹೆಚ್ಚಿನ ಮಾಹಿತಿಗಾಗಿ **help desk Bangalore (Phone No. 918025501216 & 918025501227)** ಇವರನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/ADK/KSMCA/676/25-26 dt. 05.11.2025

ನಗರಸಭಾ ಕಾರ್ಯಾಲಯ
ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ
ಸಂಖ್ಯೆ: ನ.ಸ.ಗೌ/ತಾ.ಶಾ/ಸಿ.ಆರ್/124/2025–26 ದಿನಾಂಕ:31.10.2025

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಪೌರಾಯುಕ್ತರು ನಗರಸಭೆ ಗೌರಿಬಿದನೂರು ಚಿಕ್ಕಬಳ್ಳಾಪುರ ಜಿಲ್ಲೆ. ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ಎಸ್.ಎಫ್.ಸಿ ಮುಕ್ತನಿಧಿ ಯೋಜನೆಯಡಿ 2019–20ನೇ ಸಾಲಿನಿಂದ 2024–25ನೇ ಸಾಲಿನವರೆಗೆ, 15ನೇ ಹಣಕಾಸು ಯೋಜನೆಯ ಘನತ್ಯಾಜ್ಯ ವಸ್ತು ನಿರ್ವಹಣೆ ಘಟಕದಡಿ 2021–22ನೇ ಸಾಲಿನಿಂದ 2023–24ನೇ ಸಾಲಿನವರೆಗೆ ಹಾಗೂ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಲ್ಲಿ ಅನುಮೋದನೆಗೊಂಡ ಕ್ರಿಯಾ ಯೋಜನೆಯನ್ವಯ ಕೆಲಸ ನಿರ್ವಹಿಸಿ ಉಳಿಕೆಯಾಗಿರುವ ಅನುದಾನದಲ್ಲಿ ಐಟಂವಾರು ಟೆಂಡರ್‌ಗಳನ್ನು standard bidding documents KW-1/ KW-2 ಟೆಂಡರ್ ದಸ್ತಾವೇಜಿನಲ್ಲಿ DMA/2025-26/WS/WORK INDENT 51099, DMA/2025-26/RD/WORK INDENT 51106, DMA/2025-26/RD/WORK INDENT 51124, DMA/2025-26/OW/WORK INDENT 51146, DMA/2025-26/OW/WORK INDENT 51153 ಇ– ಪ್ರಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. (1) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 10.11.2025 ರ ಸಂಜೆ 5.30 ಘಂಟೆ** (2) ಟೆಂಡರ್ ತೆರೆಯುವ **ದಿನಾಂಕ: 12.11.2025 ರ ಬೆಳಿಗ್ಗೆ 11.00 ಘಂಟೆ** (3) ಹೆಚ್ಚಿನ ಮಾಹಿತಿಗಾಗಿ ವಿವರಗಳನ್ನು **www.eproc.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ. ಹಾಗೂ ಕಛೇರಿಯ ಸಮಯದಲ್ಲಿ ನಗರಸಭೆಯ ಪೌರಾಯುಕ್ತರು/ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಪೌರಾಯುಕ್ತರು, ನಗರಸಭೆ, ಗೌರಿಬಿದನೂರು
ಸಹಿ/– ಅಧ್ಯಕ್ಷರು, ನಗರಸಭೆ, ಗೌರಿಬಿದನೂರು

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:251/ಕೆಎಸ್‌ಎಂಸಿಎ/2025–26

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001.

ಸ್ಥಿರಾಸ್ತಿಯ ಇ–ಹರಾಜಿಗೆ ಆಹ್ವಾನ /ಸೂಚನೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004 ರ ಅಡಿಯಲ್ಲಿ ಸರ್ಕಾರವು ಸ್ಥಿರಾಸ್ತಿ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮಾನ್ಯ ವಿಶೇಷ ನ್ಯಾಯಾಲಯವು ಕೆಪಿಐಡಿಎಫ್ಇ ಕಾಯ್ದೆ ಅಡಿಯಲ್ಲಿ ಸ್ಥಿರೀಕರಿಸಿದ ಆದೇಶದ ಅನುಸಾರವಾಗಿ, ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ವತಿಯಿಂದ ಸ್ಥಿರಾಸ್ತಿ ಸ್ವತ್ತುಗಳನ್ನು ಇ–ಹರಾಜಿನ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. (ಎಲ್ಲಿದೇಯೋ, ಹೇಗಿದೇಯೋ, ಯಾವ ಸ್ಥಿತಿಯಲ್ಲಿದೇಯೋ ಅದೇ ಆಧಾರದ ಮೇಲೆ) **(as is where is and whatever there is basis')** ಆಸಕ್ತ ಬಿಡ್‌ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ **(EMD)** ಅನ್ನು ಒದಗಿಸಬೇಕಾಗುತ್ತದೆ (ಸೇವಾ ಪೂರೈಕೆದಾರರು/ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಒದಗಿಸಿದ ಇ–ಪೋರ್ಟಲ್‌ನಲ್ಲಿ ಮಾತ್ರ)

Short description of the Immovable Property (SPLOCA/AUC(2)/CR/14/2025-26)

Properties are free of all encumbrances and are in the name of Competent Authority appointed by Government and confirmed by the Special Court under KPIDFE Act, 2004. (Khata stands in the name of Competent Authority and Auctioning Authority)

Sl. No.	DETAILS OF THE SCHEDULE PROPERTY (Clear Title by Court in order No. MISC No. 716/2019)	Minimum Bid Price (Rs)	EMD (Rs)	Bid Increase Value (Rs)
1.	No 01, PID No: 62-81-1,3rd Cross, Jayanagar, Chengaiah Compound, Krishnanagar, Ward No: 153(62), Hombegowda Nagara, Bengaluru. East to West 40 ft. North to South 24 ft Aggregating to 960 Sq.ft Google Map link: https://maps.app.goo.gl/LAW5AnYQz1Q9mGLB8 Latitude and Longitude: 12°55'44.7"N 77°35'53.4"E			
(a)	Ground Floor, Flat No.GF-01, UDS-102.58, SBA-402 sq.ft	28,87,050/-	2,88,705/-	28,900/-
(b)	First Floor, Flat No. FF-01, UDS-214.35, SBA-840	60,42,000/-	6,04,200/-	61,000/-
(c)	Second Floor, Flat No.SF-01, UDS-214.35, SBA-840 sq.ft	60,99,950/-	6,09,995/-	61,000/-
(d)	Third Floor, Flat No.TF-01, UDS-214.35, SBA-840 sq.ft	60,09,700/-	6,00,970/-	60,100/-
(e)	Fourth Floor, Flat No.FF-01, UDS-214.35, SBA-840 sq.ft	60,09,700/-	6,00,970/-	60,100/-

ಪೂರ್ವ ಭಾವಿ ಬಿಡ್ ಸಭೆ ದಿನಾಂಕ ಮತ್ತು ಸಮಯ	ಸ್ಥಳ ಪರಿಶೀಲನೆ ದಿನಾಂಕ ಮತ್ತು ಸಮಯ	ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ	ಇ–ಹರಾಜಿನ ದಿನಾಂಕ ಮತ್ತು ಸಮಯ
19ನೇ ನವೆಂಬರ್ 2025 ಮಧ್ಯಾಹ್ನ 3 ರಿಂದ 4 ಗಂಟೆ ಸ್ಥಳ: O/o SPLOCA, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು–01	02ನೇ ಡಿಸೆಂಬರ್ 2025 ಬೆಳಗ್ಗೆ 11 ರಿಂದ ಸಂಜೆ 5 ಗಂಟೆಯವರೆಗೆ	04ನೇ ಡಿಸೆಂಬರ್ 2025 ಸಂಜೆ 5 ಗಂಟೆಯವರೆಗೆ	05ನೇ ಡಿಸೆಂಬರ್ 2025 ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ

ಆಸಕ್ತ ಬಿಡ್‌ದಾರರು ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ **https://kppp.karnataka.gov.in** ಇಲ್ಲಿಗೆ ಲಾಗಿನ್ ಮಾಡಬಹುದು (ಸಹಾಯವಾಣಿ ಸಂಖ್ಯೆ: 080–46010000, 080–68948777) ಮತ್ತು ಇ–ಹರಾಜಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯ ಬಗ್ಗೆ ಸಹಾಯಕ ಆಯುಕ್ತರು, ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು–560001 ಇವರನ್ನು ಸಂಪರ್ಕಿಸಬಹುದು. ಇ–ಮೇಲ್ ಐಡಿ: **splocaeauction@gmail.com** ಅಥವಾ ಮೊಬೈಲ್ ಸಂಖ್ಯೆ 6364403715 ಅನ್ನು ಸಂಪರ್ಕಿಸಬಹುದು.

ಸ್ಥಳ: ಬೆಂಗಳೂರು
ದಿನಾಂಕ: 29.10.2025
DIPR/CP/3598/Zen/2025-26
ಸಹಿ/– ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ
(ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಗಾಂಧಿನಗರ ವಿಭಾಗ,
2ನೇ ಮಹಡಿ, ಬೃ.ಬೆಂ.ಮ.ಪಾಲಿಕೆ ಸಂಕೀರ್ಣ, ಧನವಂತ್ರಿ ರಸ್ತೆ,
ಬೆಂಗಳೂರು–560 009.
ಸಂಖ್ಯೆ:ಕಾಪಾಅ/ಗಾಂಧಿನಗರ/ಟೆಂಡರ್/ಕೆಪಿಪಿಪಿ/006/2025–26 ದಿನಾಂಕ: 05.11.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)(ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ **https://kppp.karnataka.gov.in** ಮೂಲಕ ಮಾತ್ರ)

ಈ ಕೆಳಗಿನ ಸಹಿದಾರರು ಬೆಂಗಳೂರು ಕೇಂದ್ರ ನಗರ ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1.	**ವಾರ್ಡ್ ಸಂಖ್ಯೆ–122, ದತ್ತಾತ್ರೇಯ ದೇವಸ್ಥಾನ** ಮತ್ತು **ವಾರ್ಡ್ ಸಂಖ್ಯೆ–128, ಚಿಕ್ಕಪೇಟೆ** ವಾರ್ಡ್ ವ್ಯಾಪ್ತಿಗಳಲ್ಲಿ ಡಾಂಬರು ರಸ್ತೆಗಳ ಸಮಗ್ರ ಅಭಿವೃದ್ಧಿ ಮತ್ತು ಕಾಂಕ್ರೀಟ್ ರಸ್ತೆಗಳು, ಪ್ರಮುಖ ಸಂಪರ್ಕಿತ ವಾರ್ಡ್ ರಸ್ತೆಗಳ ದುರಸ್ಥಿಗಳು ಹಾಗೂ ರಸ್ತೆ ಬದಿಯ ಚರಂಡಿಗಳು, ಪಾದಚಾರಿ ಮಾರ್ಗಗಳನ್ನು ಸುಧಾರಣೆ ಮಾಡುವುದು ಮತ್ತು ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಅಂದಾಜು ಮೊತ್ತ: ₹.1000.00 ಲಕ್ಷಗಳು ಇಎಂಡಿ ಮೊತ್ತ: ₹.10,00,000/–**
2.	**ವಾರ್ಡ್ ಸಂಖ್ಯೆ–124, ಸುಭಾಷ್‌ನಗರ** ಮತ್ತು **ವಾರ್ಡ್ ಸಂಖ್ಯೆ–125, ಓಕಳಿಪುರಂ** ವಾರ್ಡ್ ವ್ಯಾಪ್ತಿಗಳಲ್ಲಿ ಡಾಂಬರು ರಸ್ತೆಗಳ ಸಮಗ್ರ ಅಭಿವೃದ್ಧಿ ಮತ್ತು ಕಾಂಕ್ರೀಟ್ ರಸ್ತೆಗಳು, ಪ್ರಮುಖ ಸಂಪರ್ಕಿತ ವಾರ್ಡ್ ರಸ್ತೆಗಳ ದುರಸ್ಥಿಗಳು ಹಾಗೂ ರಸ್ತೆ ಬದಿಯ ಚರಂಡಿಗಳು, ಪಾದಚಾರಿ ಮಾರ್ಗಗಳನ್ನು ಸುಧಾರಣೆ ಮಾಡುವುದು ಮತ್ತು ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಅಂದಾಜು ಮೊತ್ತ: ₹.1000.00 ಲಕ್ಷಗಳು ಇಎಂಡಿ ಮೊತ್ತ: ₹.10,00,000/–**
3.	**ವಾರ್ಡ್ ಸಂಖ್ಯೆ–126, ಬಿನ್ನಿಪೇಟೆ** ಮತ್ತು **ವಾರ್ಡ್ ಸಂಖ್ಯೆ–127, ಕಾಟನ್‌ಪೇಟೆ** ವಾರ್ಡ್ ವ್ಯಾಪ್ತಿಗಳಲ್ಲಿ ಡಾಂಬರು ರಸ್ತೆಗಳ ಸಮಗ್ರ ಅಭಿವೃದ್ಧಿ ಮತ್ತು ಕಾಂಕ್ರೀಟ್ ರಸ್ತೆಗಳು, ಪ್ರಮುಖ ಸಂಪರ್ಕಿತ ವಾರ್ಡ್ ರಸ್ತೆಗಳ ದುರಸ್ಥಿಗಳು ಹಾಗೂ ರಸ್ತೆ ಬದಿಯ ಚರಂಡಿಗಳು, ಪಾದಚಾರಿ ಮಾರ್ಗಗಳನ್ನು ಸುಧಾರಣೆ ಮಾಡುವುದು ಮತ್ತು ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಅಂದಾಜು ಮೊತ್ತ: ₹.1000.00 ಲಕ್ಷಗಳು ಇಎಂಡಿ ಮೊತ್ತ: ₹.10,00,000/–**

ಗುತ್ತಿಗೆದಾರರ ಅರ್ಹತೆ ಮತ್ತು ವರ್ಗ: ಕೆಪಿಪಿ ಪೋರ್ಟಲ್ ಪ್ರಕಾರ
ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **21.11.2025**ರ ಸಂಜೆ **4:00** ಗಂಟೆಯವರೆಗೆ. (2) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **24.11.2025**ರ ಮಧ್ಯಾಹ್ನ **12:30** ಗಂಟೆಗೆ ತೆರೆಯಲಾಗುವುದು. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ (ಕೆಪಿಪಿಪಿ ಮೂಲಕ ತಿಳಿಸಲಾಗುವುದು).

ಸಹಿ/– ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ

₹70 ಕೋಟಿ ದುರ್ಬಳಕೆ: ಇಬ್ಬರ ಸೆರೆ

ಭವಿಷ್ಯ ನಿಧಿ ಸಹಕಾರ ಸಂಘದಲ್ಲಿ ವಂಚನೆ • ಐಷಾರಾಮಿ ಕಾರುಗಳ ಖರೀದಿ • ಚಿನ್ನಾಭರಣ, ಆಸ್ತಿ ದಾಖಲೆ ಜಪ್ತಿ

• ಪ್ರಜಾವಾಣಿ ವಾರ್ತೆ

ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಗೆ ಕಳೆದ ಶುಕ್ರವಾರ ದೂರು ನೀಡಲು ಬಂದಿದ್ದ ಹೂಡಿಕೆದಾರರು

ಬೆಂಗಳೂರು: ರಾಜಾರಾಮ್ ಮೋಹನರಾಯ್ ರಸ್ತೆಯಲ್ಲಿ ಇರುವ ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆಯ (ಇಪಿಎಫ್‌ಒ) ಸ್ಟಾಫ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯಲ್ಲಿ ನಡೆದಿರುವ ₹70 ಕೋಟಿ ದುರ್ಬಳಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಕಬ್ಬನ್‌ಪಾರ್ಕ್ ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಸೊಸೈಟಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಗೋಪಿನಾಥ್ ಹಾಗೂ ಸಿಬ್ಬಂದಿ ಲಕ್ಷ್ಮೀ ಬಂಧಿತರು. ಲೆಕ್ಕಾಧಿಕಾರಿ ಬಿ.ಎಲ್.ಜಗದೀಶ್ ಸೇರಿ ಇತರೆ ಆರೋಪಿಗಳು ತಲೆಮರೆಸಿಕೊಂಡಿದ್ದು ಅವರ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಸೊಸೈಟಿಯ ಅಧ್ಯಕ್ಷ ಸಿ.ಜೆ. ಮುರುಳೀಧರ್ ಅವರು ನೀಡಿದ ದೂರಿನ ಮೇರೆಗೆ ಅಕ್ಟೋಬರ್ 31ರಂದು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಯಿತು. ತನಿಖೆ ವೇಳೆ ವಂಚನೆ ನಡೆಸಿರುವುದಕ್ಕೆ ಸಂಬಂಧಿಸಿದಂತೆ ಕೆಲವು ಪೂರಕ ದಾಖಲೆಗಳು ಲಭಿಸಿದ್ದವು. ಆ ಬಳಿಕ ಆರೋಪಿಗಳನ್ನು ಬಂಧಿಸಲಾಯಿತು ಎಂದು ಹೇಳಿದರು.

ಮನೆಯಲ್ಲಿ ಪರಿಶೀಲನೆ: ನ್ಯಾಯಾಲಯದಿಂದ ಶೋಧನಾ ವಾರಂಟ್ ಪಡೆದು ಆರೋಪಿಗಳ ಮನೆಗಳಲ್ಲಿ ಬುಧವಾರ ಮಧ್ಯಾಹ್ನ ಪೊಲೀಸರು ಶೋಧ ನಡೆಸಿದರು.

'ಆರೋಪಿಗಳಾದ ಗೋಪಿನಾಥ್, ಜಗದೀಶ್, ಲಕ್ಷ್ಮೀ, ಲಿಂಗೇಗೌಡ, ರಾಮಾನುಜ ಅವರಿಗೆ ಸೇರಿದ ಆರ್.ಆರ್.ನಗರ, ಜೆ.ಪಿ.ನಗರ, ಅಂಜನಾಪುರದಲ್ಲಿರುವ ಮನೆಗಳಲ್ಲಿ ಪರಿಶೀಲನೆ ನಡೆಸಲಾಯಿತು. ಪರಿಶೀಲನೆ ವೇಳೆ ಏಳು ಐಷಾರಾಮಿ ಕಾರುಗಳು, 12 ದ್ವಿಚಕ್ರ ವಾಹನಗಳು, ಅಂದಾಜು ಒಂದು ಕೆ.ಜಿಯಷ್ಟು ಚಿನ್ನಾಭರಣ ಪತ್ತೆಯಾಗಿದ್ದು ಜಪ್ತಿ ಮಾಡಲಾಗಿದೆ. ಮನೆಯಲ್ಲಿ ಆಸ್ತಿ-ಪತ್ರಗಳು, ಹೂಡಿಕೆಗೆ ಸಂಬಂಧಿಸಿದ ದಾಖಲೆಗಳು ಸಿಕ್ಕಿವೆ. ಆ ಪತ್ರಗಳನ್ನೂ ವಶಕ್ಕೆ ಪಡೆದುಕೊಂಡು ಪರಿಶೀಲನೆ ನಡೆ-ಸಲಾಗುತ್ತಿದೆ' ಎಂದು ತಿಳಿಸಿದರು.

ಲಕ್ಷ್ಮೀ

ಗೋಪಿನಾಥ್

'ವಂಚನೆಯಿಂದ ಬಂದಿರುವ ಹಣದಲ್ಲೇ ಆರೋಪಿಗಳು ಕಾರು, ಬೈಕ್ ಹಾಗೂ ಆಸ್ತಿ ಖರೀದಿಸಿರುವ ಮಾಹಿತಿಯಿದೆ. ಪರಿಶೀಲನೆ ನಡೆಸಲಾ-ಗುತ್ತಿದೆ' ಎಂದು ಮೂಲಗಳು ಹೇಳಿವೆ.

'ಸೊಸೈಟಿಯ ಲೆಕ್ಕಾಧಿಕಾರಿ ಜಗದೀಶ್‌ಗೆ ಅವರಿಗೆ ತಿಂಗಳಿಗೆ ₹21 ಸಾವಿರ ಸಂಬಳವಿದೆ. ಅವರ ಮನೆಯಲ್ಲಿ ಐಷಾರಾಮಿ ಕಾರುಗಳು ಹಾಗೂ ಅವರ ಬ್ಯಾಂಕ್ ಖಾತೆಯಲ್ಲಿ ಕೋಟಿಗಟ್ಟಲೆ ವಹಿವಾಟು ನಡೆದಿರುವುದು ಪತ್ತೆಯಾಗಿದೆ. ಸೊಸೈಟಿಯ ಖಾತೆಯಿಂದಲೇ ಲಕ್ಷ್ಮೀ ಅವರ ಖಾತೆಗೆ ಹಣ ವರ್ಗಾವಣೆ ಆಗಿರುವುದಕ್ಕೆ ಕೆಲವು ದಾಖಲೆಗಳು ಸಿಕ್ಕಿವೆ. ಪರಿಶೀಲನಾ ಕಾರ್ಯ ಮುಂದುವರಿದಿದೆ' ಎಂದು ಹೇಳಿದರು.

ಉಳಿದಿದ್ದು ₹3 ಕೋಟಿ ಮಾತ್ರ

ಭವಿಷ್ಯಕ್ಕೆ ಸಹಾಯ ಆಗುತ್ತದೆ ಎಂದು ಉಳಿತಾಯದ ಹಣವನ್ನು ತಾವೇ ಮಾಡಿಕೊಂಡಿದ್ದ ಇಪಿಎಫ್‌ಒ ಸ್ಟಾಫ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯಲ್ಲಿ ಅನೇಕರು ಹೂಡಿಕೆ ಮಾಡಿದ್ದರು. 61 ವರ್ಷದ ಹಿಂದೆ ಸೊಸೈಟಿ ಅಸ್ತಿತ್ವಕ್ಕೆ ಬಂದಿತ್ತು. ಅವಶ್ಯ ಇರುವ ಸಿಬ್ಬಂದಿಗೆ ಈ ಸೊಸೈಟಿ ಸಾಲ ನೀಡುತ್ತಿತ್ತು. ಇತ್ತೀಚೆಗೆ ಖಾತೆ ಪರಿಶೀಲನೆ ವೇಳೆ ಸೊಸೈಟಿಯ ಖಾತೆಯಲ್ಲಿದ್ದ ₹73 ಕೋಟಿ ಪೈಕಿ, ₹70 ಕೋಟಿ ಬೇರೆ ಬೇರೆ ಖಾತೆಗಳಿಗೆ ವರ್ಗಾವಣೆ ಆಗಿರುವುದು ಪತ್ತೆಯಾಗಿತ್ತು. ₹3 ಕೋಟಿ ಮಾತ್ರ ಸೊಸೈಟಿಯ ಖಾತೆಯಲ್ಲಿತ್ತು. ಆತಂಕಗೊಂಡಿದ್ದ 300ಕ್ಕೂ ಹೆಚ್ಚು ಹೂಡಿಕೆದಾರರು ಸೊಸೈಟಿ ಅಧ್ಯಕ್ಷ ಮುರುಳೀಧರ್ ಅವರ ಬಳಿ ಅಳಲು ತೋಡಿಕೊಂಡಿದ್ದರು. ಅಧ್ಯಕ್ಷರು ಪೊಲೀಸರಿಗೆ ದೂರು ನೀಡಿದ್ದರು.

ಆದಾಯ ಮೂಲಕ್ಕೂ ಆರ್ಥಿಕ ಸ್ಥಿತಿಗೂ ತಾಳೆ ಇಲ್ಲ

ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಲಾಗಿದೆ. ಆರೋಪಿಗಳಿಗೆ ಸಂಬಂಧಿಸಿದ ನಾಲ್ಕು ಸ್ಥಳಗಳಲ್ಲಿ ದಾಳಿ ನಡೆಸಿದಾಗ ಕೆಲವು ದಾಖಲೆಗಳು ಸಿಕ್ಕಿವೆ. ಆರೋಪಿಗಳ ಈಗಿನ ಆರ್ಥಿಕ ಸ್ಥಿತಿ ಹಾಗೂ ಆದಾಯ ಮೂಲ ಪರಿಶೀಲಿಸಿದಾಗ ಒಂದಕ್ಕೊಂದು ಹೊಂದಾಣಿಕೆ ಆಗುತ್ತಿಲ್ಲ. ಆರೋಪಿತರು ಹೊಂದಿರುವ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಸಹ ವಶಪಡಿಸಿಕೊಂಡು ಪರಿಶೀಲನೆ ಮಾಡಲಾಗುತ್ತಿದೆ. ಎಷ್ಟು ಹಣ ವಂಚನೆಯಾಗಿದೆ. ಸೊಸೈಟಿ ಹಣವನ್ನು ಯಾವ ರೀತಿ ದುರ್ಬಳಕೆ ಮಾಡಿ-ಕೊಳ್ಳಲಾಗಿದೆ ಎಂಬುದು ತನಿಖೆ ಪೂರ್ಣವಾದ ಮೇಲೆ ಗೊತ್ತಾಗಲಿದೆ.

ಅಕ್ಷಯ್ ಎಂ. ಹಾಕೆ, ಡಿಸಿಪಿ, ಕೇಂದ್ರ ವಿಭಾಗ

ಸುದ್ದಿ 2 ನಿಮಿಷ

'ಕನ್ನಡ ಸಿನಿಮಾಗಳಿಗೆ ಸರ್ಕಾರದಿಂದಲೇ ಒಟಿಟಿ'

ಬೀದರ್: 'ಜಾಗತಿಕ ಮಟ್ಟದಲ್ಲಿ ಕನ್ನಡ ಸಿನಿಮಾಗಳಿಗೆ ವೇದಿಕೆ ಕಲ್ಪಿಸಲು ಮುಂದಿನ ವರ್ಷ ಸರ್ಕಾರದಿಂದಲೇ ಒಟಿಟಿ ಪ್ರಾರಂಭಿಸಲು ನಿರ್ಧರಿಸಲಾಗಿದೆ' ಎಂದು ಕಂಠೀರವ ಸ್ಟುಡಿಯೋಸ್ ನಿಯಮಿತ ಅಧ್ಯಕ್ಷ ಮಹಬೂಬ್ ಪಾಷಾ ತಿಳಿಸಿದರು.

'ಈ ಬಗ್ಗೆ ಚರ್ಚಿಸಲು ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ. ನಿರ್ಮಾಕರು, ಕಲಾವಿದರು, ತಂತ್ರಜ್ಞರು ಸಂಕಷ್ಟದಲ್ಲಿ ಇದ್ದಾರೆ. ಕನ್ನಡದ ಎಲ್ಲ ಸಿನಿಮಾಗಳಿಗೆ ವೇದಿಕೆ ಕಲ್ಪಿಸಲು ಒತ್ತು ನೀಡಲಾಗುವುದು' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ಹಂಚಿಕೊಂಡರು.

ಅಮೆಜಾನ್, ಜೀ5, ಜಿಯೋ ಹಾಟ್‌ಸ್ಟಾರ್, ನೆಟ್‌ಫ್ಲಿಕ್ಸ್ ಇತರೆ ಒಟಿಟಿಗಳಲ್ಲಿ ಕನ್ನಡದ ಆಯ್ದ ಚಲನಚಿತ್ರಗಳಿಗಷ್ಟೇ ವೇದಿಕೆ ಸಿಗುತ್ತಿದೆ. ಇದರಿಂದ 4 ಸಾವಿರಕ್ಕೂ ಅಧಿಕ ಕನ್ನಡ ಚಿತ್ರಗಳು ಬಿಡುಗಡೆಗೊಂಡಿಲ್ಲ. ವಿತರಕರು, ಚಿತ್ರಮಂದಿರಗಳ ಸಮಸ್ಯೆಯೂ ಕಾಡುತ್ತಿದೆ' ಎಂದರು.

'ಒಟಿಟಿ ಸ್ಥಾಪನೆಗೆ ತಾಂತ್ರಿಕ ಸಿದ್ಧತೆ ಆಗಿದೆ. ಈ ಕ್ರಮದಿಂದ ಹೊಸ ಪ್ರತಿಭೆಗಳಿಗೂ ಹೆಚ್ಚಿನ ಅವಕಾಶ ದೊರಕಲಿದೆ. ವೀಕ್ಷಣೆ ಆಧಾರದಲ್ಲಿ ನಿರ್ಮಾಪಕರ ಜೊತೆಗೆ ಲಾಭಾಂಶವನ್ನು ಹಂಚಿಕೊಳ್ಳಲಾಗುವುದು' ಎಂದು ವಿವರಿಸಿದರು.



'ಒಟಿಟಿ ಸ್ಥಾಪನೆಯಿಂದ ಕನ್ನಡ ಸಿನಿಮಾಗಳ ಜೊತೆಗೆ ಧಾರಾವಾಹಿ, ಜಾನಪದ ಕಲೆ, ಸ್ಥಳೀಯ ಮತ್ತು ಬುಡಕಟ್ಟು ಸಂಸ್ಕೃತಿಗೆ ಜಾಗತಿಕ ಮಟ್ಟದಲ್ಲಿ ವೇದಿಕೆ ದೊರಕಲಿದೆ. ವಿವಿಧ ಡಿಜಿಟಲ್ ವೇದಿಕೆಗಳಲ್ಲಿ ಚಲನಚಿತ್ರಗಳ ವೀಕ್ಷಣೆಗೆ ಹೆಚ್ಚಿನ ದರ ವಿಧಿಸಿದರೆ, ರಾಜ್ಯ ಸರ್ಕಾರ ಪ್ರಾರಂಭಿಸುವ ಒಟಿಟಿ ವೇದಿಕೆಯಲ್ಲಿ ಅಲ್ಪ ಮೊತ್ತ ನಿಗದಿಪಡಿಸಲಾಗುವುದು' ಎಂದರು.

'ಹುಲಿಗಳ ದಾಳಿ: ಸಫಾರಿ ಟ್ರಿಪ್ ಹೆಚ್ಚಳ, ರೆಸಾರ್ಟ್ ಕಾರಣವಲ್ಲ'

ಮೈಸೂರು: 'ಕಾಡಂಚಿನ ಗ್ರಾಮಗಳ ವ್ಯಾಪ್ತಿಯಲ್ಲಿ ಹುಲಿಗಳ ದಾಳಿ ಘಟನೆಗಳು ಹೆಚ್ಚಲು ಸಫಾರಿ ಟ್ರಿಪ್‌ಗಳ ಹೆಚ್ಚಳ ಅಥವಾ ರೆಸಾರ್ಟ್‌ಗಳ ನಿರ್ಮಾಣ ಕಾರಣವಲ್ಲ' ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇಲ್ಲಿ ಪ್ರತಿಪಾದಿಸಿದರು.

ಬುಧವಾರ ಪತ್ರಕರ್ತರೊಂದಿಗೆ ಮಾತನಾಡಿ, 'ಜಿಲ್ಲೆಯಲ್ಲಿ ಕಾಡಂಚಿನ ಗ್ರಾಮಗಳಲ್ಲಿ ಹುಲಿಗಳ ದಾಳಿ ಹೆಚ್ಚುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಸ್ಪಂದಿಸಬೇಕು. ಈ ಬಗ್ಗೆ ಸಮಗ್ರ ಅಧ್ಯಯನ ಆಗಬೇಕು. ದತ್ತಾಂಶಗಳನ್ನು ಪರಿಶೀಲಿಸಬೇಕು. ಅರಣ್ಯದಲ್ಲಿ ಹುಲಿಗಳ ಸಂಖ್ಯೆ ಎಷ್ಟಿದೆ ಎಂದು ನೋಡಬೇಕು' ಎಂದು ಒತ್ತಾಯಿಸಿದರು.

'ಅರಣ್ಯ ಪ್ರದೇಶದಕಲ್ಲಿ ಹೆಚ್ಚಾಗಿ ಲಂಟಾನ ಬೆಳೆದಿದೆ. ಜಿಂಕೆ, ಸಾರಂಗ ಇತರೆ ಸಸ್ಯಾಹಾರಿ ಪ್ರಾಣಿಗಳು ಆಹಾರ ಅರಸಿ ಹೊರಬರುತ್ತಿವೆ. ಅವುಗಳ ಬೇಟೆಗೆ ಹುಲಿಗಳೂ ಬರುತ್ತಿವೆ. ಅದನ್ನು ತಡೆಯಲು ಶಾಶ್ವತ ಪರಿಹಾರ ಕಂಡುಕೊಳ್ಳಬೇಕಾಗಿದೆ' ಎಂದರು.

'ಪ್ರಕೃತಿಯೇ ತನ್ನ ತಾನು ಕಾಪಾಡಿಕೊಳ್ಳುತ್ತದೆ. ಮನುಷ್ಯ ಕೈ ಹಾಕುವುದು ಬೇಡ ಕಾಡಂಚಿನಲ್ಲಿ ಮಾನವನ ಅತಿಯಾದ ಹಸ್ತಕ್ಷೇಪ ತಪ್ಪಬೇಕು' ಎಂದು ಪ್ರತಿಕ್ರಿಯಿಸಿದರು.

ಚಿಟಿಕೆ ಸುದ್ದಿ

20 ಎಕರೆ ಕಬ್ಬು ಬೆಂಕಿಗಾಹುತಿ

ಕಾಗವಾಡ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಉಗಾರ ಬಿಕೆ ಗ್ರಾಮದಲ್ಲಿ ಬುಧವಾರ ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದ ಆರು ಮಂದಿ ರೈತರಿಗೆ ಸೇರಿದ 20 ಎಕರೆಯಷ್ಟು ಕಬ್ಬು ಸುಟ್ಟಿದ್ದು, ₹25 ಲಕ್ಷದಷ್ಟು ನಷ್ಟವಾಗಿದೆ ಎಂದು ರೈತರು ಅಂದಾಜಿಸಿದ್ದಾರೆ.

ಭರತೇಶ ಖಂಡೇರಾಜುರೆ ಅವರ 5 ಎಕರೆ, ಚಂದ್ರಕಾಂತ ಅಕಿವಾಟೆ, ಧರೆಪ್ಪ ಕುಸನಾಳೆ ಅವರ ತಲಾ 3 ಎಕರೆ, ಮಲ್ಲು ಕುರುಬರ, ಅಣ್ಣು ಕುರಬರ, ಮಹಾದೇವ ಕುರುಬರ ಅವರಿಗೆ ಸೇರಿದ 9 ಎಕರೆ ಬೆಂಕಿಗೆ ಆಹುತಿಯಾಗಿದೆ.

ಉರಿಬಿಸಿಲು ಇದ್ದ ಕಾರಣ, ಕಬ್ಬಿನ ರವದಿ ಒಣಗಿತ್ತು. ಹೊಲದಲ್ಲಿ ನೇತಾಡುವ ವಿದ್ಯುತ್ ತಂತಿಗಳು ಒಂದಕ್ಕೊಂದು ತಾಗಿ ಬೆಂಕಿ ಕಿಡಿ ಹೊತ್ತಿಕೊಂಡಿದೆ. ಕಾಗವಾಡದಿಂದ ಅಗ್ನಿ ಶಾಮಕ ದಳದ ವಾಹನ ಬರುವಷ್ಟರಲ್ಲಿ ಕಬ್ಬು ಸುಟ್ಟು ಹೋಯಿತು ಎಂದು ರೈತರು ದೂರಿನಲ್ಲಿ ತಿಳಿಸಿದ್ದಾರೆ.

ಅನ್ನಭಾಗ್ಯದಿಂದ ಜನ ಹಸಿವಿನಿಂದ ಕಂಗೆಡುವುದು ತಪ್ಪಿದೆ • ಸೌಮ್ಯಾ ಸ್ವಾಮಿನಾಥನ್ ಅಭಿಪ್ರಾಯ

ಮಹಿಳಾ ಸ್ವಾವಲಂಬನೆಗೆ 'ಗ್ಯಾರಂಟಿ' ನೆರವು

ಎಂ.ಎಸ್ ಸ್ವಾಮಿನಾಥನ್ ಸಂಶೋಧನಾ ಸಂಸ್ಥೆಯ ಅಧ್ಯಕ್ಷೆ ಸೌಮ್ಯಾ ಸ್ವಾಮಿನಾಥನ್ ಅವರನ್ನು ಶಾಲಿನಿ ರಜನೀಶ್ ಸನ್ಮಾನಿಸಿದರು. ಉಮಾ ಮಹಾದೇವನ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ಯಾರಂಟಿ ಯೋಜನೆಗಳಿಂದ ಬಡವರಿಗೆ, ಅದರಲ್ಲಿಯೂ ಮಹಿಳೆಯರಿಗೆ ಹೆಚ್ಚು ಅನುಕೂಲವಾಗಿದೆ. ನಿತ್ಯದ ವೆಚ್ಚ ಕಡಿತ, ಖಾತೆಗೆ ಹಣ ಬರುತ್ತಿರುವು-ದರಿಂದ ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ' ಎಂದು ಎಂ.ಎಸ್ ಸ್ವಾಮಿನಾಥನ್ ಸಂಶೋಧನಾ ಸಂಸ್ಥೆಯ ಅಧ್ಯಕ್ಷೆ ಸೌಮ್ಯಾ ಸ್ವಾಮಿನಾಥನ್ ಹೇಳಿದರು.

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮದ ಕುರಿತು ವಿತ್ತೀಯ ಕಾರ್ಯನೀತಿ ಸಂಸ್ಥೆಯು ಐದು ಪ್ರತಿಷ್ಠಿತ ಸಂಶೋಧನಾ ಸಂಸ್ಥೆಗಳ ಸಹಭಾಗಿತ್ವದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಕ್ತಿ ಯೋಜನೆಯಿಂದಾಗಿ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಪ್ರಯಾಣಿಸುವ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ. ನಿಗಮಗಳ ಬಸ್‌ಗಳಲ್ಲಿ ಪ್ರಯಾಣಿಸು-ವವರಲ್ಲಿ ಶೇ 60ರಷ್ಟು ಮಹಿಳೆಯರೇ ಆಗಿದ್ದಾರೆ. ಇದು ಯೋಜನೆ ಜಾರಿಯಾಗುವುದಕ್ಕಿಂತ ಹಿಂದಿನ ಸಂಖ್ಯೆಗೆ ಹೋಲಿಸಿದರೆ ಎರಡು ಪಟ್ಟು ಆಗಿದೆ. ಮಹಿಳೆಯರಿಗೆ ಪ್ರಯಾಣ ವೆಚ್ಚ ಉಳಿತಾಯವಾಗಿದೆ ಎಂದು ಹೇಳಿದರು.

ಗೃಹಲಕ್ಷ್ಮೀ ಯೋಜನೆಯಿಂದಾಗಿ ಪ್ರತಿ ಮನೆಯ ಮಹಿಳೆಗೆ ತಿಂಗಳಿಗೆ ₹2,000 ಬರುತ್ತಿರುವುದು ಮಹಿಳೆಯರ ಕೈಯಲ್ಲಿ ದುಡ್ಡು ಓಡಾಡುವಂತಾಗಿದೆ. ಅನ್ನಭಾಗ್ಯದಿಂದಾಗಿ ಜನ ಹಸಿವಿನಿಂದ ಕಂಗೆಡುವುದು ತಪ್ಪಿದೆ. ಉಳಿದ ಗೃಹಜ್ಯೋತಿ, ಯುವನಿಧಿ ಯೋಜನೆಗಳು ಜನರಿಗೆ ಅನುಕೂಲ ಮಾಡಿಕೊಟ್ಟಿವೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, 'ವಿಶ್ವ ಸಂಸ್ಥೆಯು ಗೊತ್ತು ಮಾಡಿರುವ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ಗ್ಯಾರಂಟಿ ಯೋಜನೆಗಳು ನೆರವಾಗಿವೆ' ಎಂದು ಹೇಳಿದರು.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹಾದೇವನ್, ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಕಾರ್ಯದರ್ಶಿ ವಿಶಾಲ್ ಆರ್., ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾ-ಧ್ಯಕ್ಷರಾದ ಸೂರಜ್ ಎಂ.ಎನ್. ಹೆಗ್ಡೆ, ದಿನೇಶ್ ಗೂಳಿಗೌಡ, ಪುಷ್ಪಾ ಅಮರನಾಥ್, ಎಸ್.ಆರ್. ಮೆಹರೋಜ್ ಖಾನ್ ಉಪಸ್ಥಿತರಿದ್ದರು.

ತಲಾದಾಯ ಹೆಚ್ಚಳ: ಸಿ.ಎಂ

'ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಆರ್ಥಿಕತೆಗೆ ವೇಗ ಸಿಕ್ಕಿದ್ದು, ತಲಾದಾಯದಲ್ಲಿ ದೇಶದಲ್ಲೇ ಕರ್ನಾಟಕ ಮೊದಲ ಸ್ಥಾನದಲ್ಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದ್ದಾರೆ.

ಅವರ ಲಿಖಿತ ಭಾಷಣವನ್ನು ಹಣಕಾಸು ಇಲಾಖೆಯ ಕಾರ್ಯದರ್ಶಿ ವಿಶಾಲ್ ಆರ್. ಓದಿದರು.

'ಮತದಾರರಿಗೆ ಕೊಟ್ಟಿದ್ದ ಭರವಸೆ ಈಡೇರಿಸಲು ನಾವು ಅಧಿಕಾರ ವಹಿಸಿಕೊಂಡ ತಕ್ಷಣವೇ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಇವುಗಳ ಅನು-ಷ್ಠಾನಕ್ಕಾಗಿ ₹ 96 ಸಾವಿರ ಕೋಟಿ ಹಂಚಿಕೆ ಮಾಡಿದ್ದೇವೆ. 2025-26ರ ಬಜೆಟ್‌ನಲ್ಲಿ ₹51,034 ಕೋಟಿ ಮೀಸಲಿಟ್ಟಿ-ದ್ದೇವೆ' ಎಂದು ಅವರು ಹೇಳಿದ್ದಾರೆ.

'4 ಸದಸ್ಯರು ಇರುವ ಕುಟುಂಬ ತಿಂಗಳಿಗೆ ಸರಾಸರಿ ₹ 10 ಸಾವಿರ ಪ್ರಯೋಜನ ಪಡೆಯುತ್ತಿದೆ. ಇದರಿಂದಾಗಿ ಆರ್ಥಿಕ ಸ್ಥಿರತೆ ಸಿಕ್ಕಿದೆ. ಸಾಲದ ಅವಲಂಬನೆ ತಗ್ಗಿದೆ. ಬಡತನ, ಅಸಮಾನತೆ ಹೋಗಲಾಡಿಸಿದೆ. ಮಹಿಳಾ ಸಬಲೀಕರಣ ಮಾತ್ರವಲ್ಲದೆ ಸಾಮಾಜಿಕ ನ್ಯಾಯವೂ ಸಿಕ್ಕಿದೆ. ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ವಿಶ್ವಸಂಸ್ಥೆ ಕೂಡಾ ಶ್ಲಾಘಿಸಿದೆ' ಎಂದರು.

ವರದಿಗಳಲ್ಲಿ ಉಲ್ಲೇಖ

ಲಂಡನ್‌ನ ಕಿಂಗ್ಸ್ ಕಾಲೇಜು, ಲೋಕನೀತಿ–ಸಿಎಸ್‌ಡಿಎಸ್ ಮತ್ತು ಇಂಡಸ್ ಆ್ಯಕ್ಷನ್, ಎಕ್ಸ್ ಕೆಡಿಆರ್ ವೇದಿಕೆ, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಜಸ್ಟ್‌ಜಾಬ್ ನೆಟ್‌ವರ್ಕ್‌ಗಳು ಗ್ಯಾರಂಟಿಯ ವಿವಿಧ ಯೋಜನೆಗಳ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡಿವೆ.

ಗ್ಯಾರಂಟಿಯಿಂದ ಉಂಟಾಗಿರುವ ಬದಲಾವಣೆಗಳು, ಯೋಜನೆಗಳಿಂದ ಉಳಿತಾಯವಾದ ಹಣವನ್ನು ಹೇಗೆ? ಯಾವುದಕ್ಕೆ ಉಪಯೋಗಿಸುತ್ತಾರೆ. 'ಶಕ್ತಿ'ಯಲ್ಲಿ ಸಂಚರಿಸುವ ಮಹಿಳೆಯರಲ್ಲಿ ಉದ್ಯೋಗಕ್ಕಾಗಿ ಹೋಗುವವರ ಪ್ರಮಾಣ, ಇತರ ಕಾರಣಕ್ಕೆ ಸಂಚರಿಸುವವರು.. ಹೀಗೆ ವಿವಿಧ ವಿಚಾರಗಳ ಬಗ್ಗೆ ವರದಿಗಳು ಬೆಳಕು ಚೆಲ್ಲಿವೆ.

ಇ–ಸ್ವತ್ತು: ಪಿಡಿಒ 'ಲೋಕಾ' ಬಲೆಗೆ

ಅನಿತಾ

ಔರಾದ್ (ಬೀದರ್ ಜಿಲ್ಲೆ): ಇ–ಸ್ವತ್ತು ಮಾಡಿಕೊಡಲು ₹ 12 ಸಾವಿರ ಲಂಚ ಪಡೆಯುತ್ತಿದ್ದ ಧುಪತಮಹಗಾಂವ್ ಗ್ರಾಮ ಪಂಚಾಯಿತಿ ಪಿಡಿಒ ಅನಿತಾ ರಾಠೋಡ್ ಅವರು ಬುಧವಾರ ಲೋಕಾಯುಕ್ತರ ಬಲೆಗೆ ಬಿದ್ದಿದ್ದಾರೆ. ಪತಿ ದಯಾನಂದ ರಾಠೋಡ್ ಮೂಲಕ ಪಿಡಿಒ ಹಣಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಜೀರ್ಗಾ (ಬಿ) ಗ್ರಾಮದ ರಾಜಕುಮಾರ ಪಾಟೀಲ ಲೋಕಾಯುಕ್ತ ಠಾಣೆಗೆ ದೂರು ನೀಡಿದ್ದರು. ದೂರು ಆಧರಿಸಿ ಪಿಡಿಒ ಕಚೇರಿ ಮೇಲೆ ಲೋಕಾಯುಕ್ತ ಡಿವೈಎಸ್ಪಿ ಹಣಮಂತರಾಯಪ್ಪ ಹಾಗೂ ಸಿಬ್ಬಂದಿ ದಾಳಿ ನಡೆಸಿದ್ದರು.

ಸರ್ಕಾರದ ಆಹ್ವಾನಕ್ಕೆ ತಿರಸ್ಕಾರ

ಒಂದನೇ ಪುಟದಿಂದ...

ಮಾತು ಮುಂದುವರಿಸಿದ ಸಚಿವ, 'ಸಿದ್ದರಾಮಯ್ಯ ಅವರೇ ನನ್ನನ್ನು ಕಳುಹಿಸಿದ್ದಾರೆ. ಸರ್ಕಾರ ನಿಮ್ಮ ಸಮಸ್ಯೆಗೆ ಸ್ಪಂದಿಸುತ್ತದೆ. ಆದರೆ, ನಾನೊಬ್ಬ ಅಥವಾ ಮುಖ್ಯಮಂತ್ರಿ ಒಬ್ಬರೇ ಸಮಸ್ಯೆ ಬಗೆಹರಿಸಲು ಆಗುವುದಿಲ್ಲ. ರೈತ ಮುಖಂಡರ ಸಮಸ್ಯೆ, ಕಾರ್ಖಾನೆಗಳ ಮಾಲೀಕರ ಹೇಳಿಕೆ, ಎಫ್‌ಆರ್‌ಪಿ, ಎಂಎಸ್‌ಪಿ ಮುಂತಾದ ಆಯಾಮಗಳಲ್ಲೂ ಚರ್ಚೆ ಮಾಡಬೇಕು. ಇದಕ್ಕೆ ರೈತರನ್ನು ಆಹ್ವಾನಿಸುತ್ತೇನೆ' ಎಂದರು.

'ರಾಜ್ಯದಲ್ಲಿ ತೂಕದ ಯಂತ್ರ ಅಳವಡಿಸುವುದಾಗಿ ಸರ್ಕಾರ ಹೇಳಿದೆ. ಇದನ್ನು ಸರ್ಕಾರ ಮಾಡುತ್ತದೆ. ಸಕ್ಕರೆ ರಿಕವರಿ ದರ ನಿಗದಿ ಇಳಿಸಬೇಕು, ಪಾರದರ್ಶಕವಾಗಿ ರಿಕವರಿ ದರ ರೈತರಿಗೂ ಗೊತ್ತಾಗಬೇಕು ಎಂದು ಕೇಳಿದ್ದಾರೆ. ಇದಕ್ಕೆ ನನ್ನ ಸಂಪೂರ್ಣ ಒಪ್ಪಿಗೆ ಇದೆ' ಎಂದರು.

'ಕಬ್ಬು ಪೂರೈಸಿದ 15 ದಿನಗಳಲ್ಲಿ ಬಿಲ್ ನೀಡಬೇಕು. ಹೆಚ್ಚು ದಿನವಾದರೆ ಬಿಲ್ಲಿಗೆ ಬಡ್ಡಿ ಸೇರಿಸಿ ಕೊಡಬೇಕು. ಸಕ್ಕರೆ ಆಯುಕ್ತರನ್ನು ಕಾರ್ಖಾನೆಯವರೇ ಒತ್ತಡ ಹೇರಿ ವರ್ಗ ಮಾಡಿದ್ದು, ಹಿಂದಿನ ಆಯುಕ್ತರನ್ನೇ ಕರೆಸಬೇಕು. ಸಕ್ಕರೆ ಆಯುಕ್ತಾಲಯ ಮರು ಸ್ಥಾಪನೆ ಮಾಡಬೇಕು. 12 ತಾಸು ನಿರಂತರ ವಿದ್ಯುತ್ ನೀಡಬೇಕು. ಎಚ್‌ಎಂಟಿ (ಕಬ್ಬು ಸಾಗಣೆ ವೆಚ್ಚ)ಯಲ್ಲಿ ಮೋಸವಾಗುತ್ತಿದೆ. ಇದನ್ನು ಸರಿಪಡಿಸಬೇಕು. ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಕಾಯ್ದೆ ಆಶಯಗಳನ್ನು ಅನುಷ್ಠಾನ ಮಾಡಬೇಕು ಎಂದೂ ಕೋರಿದ್ದಾರೆ. ಎಲ್ಲದಕ್ಕೂ ನಾನು ಸಕಾರಾತ್ಮಕ ಸ್ಪಂದಿಸುತ್ತೇನೆ. ಇವು ನಿಂತ ಜಾಗದಲ್ಲೇ ಆಗುವ ಮಾತುಗಳಲ್ಲ. ಬೆಂಗಳೂರಿಗೆ ಬನ್ನಿ' ಎಂದೂ ಆಹ್ವಾನಿಸಿದರು.

ಅರೆಬೆತ್ತಲೆ ಮೆರವಣಿಗೆ, ಧರಣಿ: ಮೂಡಲಗಿ ಸೇರಿದಂತೆ ಎಲ್ಲ 15 ತಾಲ್ಲೂಕುಗಳಲ್ಲಿ ಬುಧವಾರವೂ ರೈತರು ಪ್ರತಿಭಟನೆ ಮುಂದುವರಿಸಿದರು. ಹಗಲಿನಲ್ಲಿ ರಾಜ್ಯ ಹೆದ್ದಾರಿಗಳ ಮೇಲೆ ಅರೆಬೆತ್ತಲೆ ಮೆರವಣಿಗೆ ಮಾಡಿದರು. ರಾತ್ರಿಯಿಡೀ ಅಲ್ಲಿಯೇ ಭಜನೆಗಳನ್ನು ಮಾಡಿ ವಿನೂತನ ಪ್ರತಿಭಟನೆ ಮಾಡಿದರು.

ರಾಯಬಾಗ ಪಟ್ಟಣದ ವರ್ತಕರು ಸ್ವಯಂ ಪ್ರೇರಿತರಾಗಿ ಸಂಪೂರ್ಣ ಬಂದ್ ಮಾಡಿದರು. ಬೆಳಗಾವಿ, ಗೋಕಾಕ, ಬೈಲಹೊಂಗಲ, ಕಾಗವಾಡ ಮುಂತಾದ ಪಟ್ಟಣಗಳಲ್ಲೂ ವಾಹನ ಸಂಚಾರ ವಿರಳವಾಗಿತ್ತು. ಶಾಲೆ, ಕಾಲೇಜು, ಸಿನಿಮಾ ಥೇಟರ್‌ಗಳಲ್ಲಿಯೂ ಹಾಜರಿ ಕೊರತೆ ಕಂಡಿತು.

ಹೆದ್ದಾರಿಯಲ್ಲಿ ಮಲಗಿದ ವಿಜಯೇಂದ್ರ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಬುಧವಾರ ರಾತ್ರಿಯಿಡೀ ಗುರ್ಲಾಪುರ ರಾಜ್ಯ ಹೆದ್ದಾರಿಯಲ್ಲೇ ರೈತರೊಂದಿಗೆ ಮಲಗಿದರು. ಬುಧವಾರ (ನ.5) ಅವರು ಧರಣಿ ಸ್ಥಳದಲ್ಲೇ ಕಬ್ಬು, ಬೆಲ್ಲ ತಿಂದು ತಮ್ಮ ಜನ್ಮದಿನ ಆಚರಿಸಿಕೊಂಡರು.

'ರೈತರು ಕಷ್ಟದಲ್ಲಿರುವಾಗ ನಾನು ಜನ್ಮದಿನದ ಸಂಭ್ರಮ ಪಡುವುದಿಲ್ಲ. ನಿಮ್ಮಲ್ಲೇ ಇರಲು ಬಯಸಿದ್ದೇನೆ. ಸಚಿವ ಎಚ್.ಕೆ.ಪಾಟೀಲರು ಭೇಟಿ ನೀಡುವ ಕಾರಣ ನಾನು ಇಲ್ಲಿರಬಾರದು. ಪ್ರತಿಭಟನೆ ವಿನಾಕಾರಣ ರಾಜಕೀಯ ಸ್ವರೂಪ ಪಡೆಯುವುದು ನನಗೆ ಇಷ್ಟವಿಲ್ಲ' ಎಂದು ಸ್ಥಳದಿಂದ ಹೊರಟರು.

ಕಾರ್ಖಾನೆಗಳ 'ರೇಟ್‌ವಾರ್'

ಒಂದನೇ ಪುಟದಿಂದ...

ದಾಲ್ಮಿಯಾ ಸಕ್ಕರೆ ಕಾರ್ಖಾನೆ ₹3,550, ಜವಾಹರ ಸಹಕಾರ ಸಕ್ಕರೆ ಕಾರ್ಖಾನೆ ₹3,500, ದತ್ತ ಸಕ್ಕರೆ ಕಾರ್ಖಾನೆ ₹3,450, ಸದಾಶಿವ ಮಾಂಡಲೀಕ ಕಾರ್ಖಾನೆ ಹಾಗೂ ಘೋರ್ಪಡೆ ಕಾರ್ಖಾನೆಗಳು ₹3,400 ದರ ಘೋಷಿಸಿವೆ. ಬೆಳಗಾವಿ ಜಿಲ್ಲೆಯ ಗಡಿ ಭಾಗದ ಹಲವು ರೈತರು ಈಗಾಗಲೇ ಮಹಾರಾಷ್ಟ್ರಕ್ಕೆ ಕಬ್ಬು ಸಾಗಣೆ ಮಾಡುತ್ತಿದ್ದಾರೆ.

ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಗುರ್ಲಾಪುರದಲ್ಲಿ ರೈತರು ಬುಧವಾರ ರಾತ್ರಿಯೂ ಧರಣಿ ಮುಂದುವರಿಸಿದರು ಚಿತ್ರ: ಬಾಲಶೇಖರ ಬಂದಿ

ಕಬ್ಬಿಗೆ ದರ ನಿಗದಿ: ಸರ್ಕಾರಕ್ಕೆ ಬೊಮ್ಮಾಯಿ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ಟನ್ ಕಬ್ಬಿಗೆ ₹3,500 ದರ ಸಿಗುವಂತೆ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಲೇ ಮಧ್ಯ ಪ್ರವೇಶಿಸಬೇಕು. ಸಕ್ಕರೆ ಕಾರ್ಖಾನೆ ಮಾಲೀಕರು ಪ್ರತಿ ಟನ್ ಕಬ್ಬಿಗೆ ₹3,300 ಹಾಗೂ ರಾಜ್ಯ ಸರ್ಕಾರ ₹200 ನೀಡಬೇಕು ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಸಲಹೆ ನೀಡಿದ್ದಾರೆ.



ಬಸವರಾಜ ಬೊಮ್ಮಾಯಿ

ಈ ಕುರಿತು ಹೇಳಿಕೆ ನೀಡಿರುವ ಅವರು, ಕಬ್ಬು ಬೆಳೆಗಾರರು ನ್ಯಾಯ ಸಮ್ಮತ ಬೆಲೆ ನಿಗದಿ ಆಗಬೇಕೆಂದು ನಡೆಸುತ್ತಿರುವ ಹೋರಾಟ ಏಳನೇ ದಿನಕ್ಕೆ ಕಾಲಿಟ್ಟಿದೆ. ಸಿದ್ದರಾಮಯ್ಯ ಅವರು ತಮ್ಮ ಹುದ್ದೆಯನ್ನು ಉಳಿಸಿಕೊಳ್ಳಲು ರಾಜಕಾರಣ ಮಾಡುತ್ತಿದ್ದಾರೆ. ರೈತರ ಸಮಸ್ಯೆ ಬಗೆಹರಿಸಲು ಅವರಿಗೆ ಪುರುಸೊತ್ತಿಲ್ಲ ಎಂದು ಹೇಳಿದ್ದಾರೆ.

ಸಕ್ಕರೆ ಮತ್ತು ಇತರ ಉಪ ಉತ್ಪನ್ನಗಳ ಮೂಲಕ ಸರ್ಕಾರಕ್ಕೆ ₹27,000 ಕೋಟಿ ಆದಾಯ ಬರುತ್ತದೆ. ಇದರಲ್ಲಿ ಪ್ರತಿ ಟನ್‌ಗೆ ₹200 ನೀಡಬಹುದು. ಸಕ್ಕರೆ ಕಾರ್ಖಾನೆ ಮಾಲೀಕರು ₹3,300 ನೀಡಬೇಕು. ಇದರಿಂದ ಪ್ರತಿ ಟನ್‌ಗೆ ₹3,500 ದರ ನೀಡಲು ಸಾಧ್ಯವಾಗುತ್ತದೆ ಎಂದು ತಿಳಿಸಿದ್ದಾರೆ.

ಕಾರ್ಖಾನೆಗಳು ಸಕ್ಕರೆ ಜೊತೆಗೆ ವಿದ್ಯುತ್ ಉತ್ಪಾದನೆ ಕೂಡ ಮಾಡುತ್ತಿವೆ. ಮಹಾರಾಷ್ಟ್ರದಲ್ಲಿ ಸಕ್ಕರೆ ಕಾರ್ಖಾನೆ ಮಾಲೀಕರೊಂದಿಗೆ ಪಿಪಿಎ ಒಪ್ಪಂದ ಆಗಿದೆ. ಅಲ್ಲಿ ಕಾರ್ಖಾನೆ ಮಾಲೀಕರಿಗೆ ಪ್ರತಿ ಯುನಿಟ್‌ಗೆ ₹5.5 ಸಿಗುತ್ತದೆ. ಅದೇ ರೀತಿ ರಾಜ್ಯದಲ್ಲಿ ಒಪ್ಪಂದ ಮಾಡಿಕೊಂಡರೆ ಈಗ ನೀಡುತ್ತಿರುವ ಪ್ರತಿ ಯುನಿಟ್‌ಗೆ ₹3 ರ ಬದಲು ₹5.5 ದೊರೆಯುತ್ತದೆ. ಇದರಿಂದ ಕಬ್ಬಿಗೆ ಹೆಚ್ಚಿಗೆ ದರ ಕೊಡಲು ಸಾಧ್ಯವಿದೆ. ಆದ್ದರಿಂದ ಸರ್ಕಾರ ತನಗಿರುವ ಅಧಿಕಾರ ಚಲಾವಣೆ ಮಾಡಿ, ಕಬ್ಬಿನ ಕಾರ್ಖಾನೆ ಮಾಲೀಕರ ಜೊತೆ ಸಭೆ ನಡೆಸಿ, ದರ ಪಟ್ಟಿಯನ್ನು ರೈತರ ನ್ಯಾಯ ಸಮ್ಮತ ಬೇಡಿಕೆಯಂತೆ ₹3,500ಕ್ಕೆ ನಿಗದಿ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಅರಣ್ಯ: ಕಾಮಗಾರಿಗಳಿಗೆ ಷರತ್ತುಬದ್ಧ ಒಪ್ಪಿಗೆ

ವನ್ಯಜೀವಿ ಮಂಡಳಿ ಸ್ಥಾಯಿ ಸಮಿತಿ ಸಭೆ • ಚಿತ್ತಾಪುರದಲ್ಲಿ ಚಿರತೆ ಸಂರಕ್ಷಣಾ ಮೀಸಲು ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶರಾವತಿ ಸಿಂಗಳೀಕ ವನ್ಯಜೀವಿಧಾಮ, ರಂಗನತಿಟ್ಟು ಪಕ್ಷಿಧಾಮ ಪರಿಸರ ಸೂಕ್ಷ್ಮ ವಲಯ ಹಾಗೂ ಸೋಮೇಶ್ವರ ವನ್ಯಜೀವಿಧಾಮದಲ್ಲಿ ರಸ್ತೆ ನಿರ್ಮಾಣ ಮತ್ತು ರಸ್ತೆ ಅಗಲೀಕರಣದ ಯೋಜನೆಗಳಿಗೆ ಬುಧವಾರ ನಡೆದ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ಸಭೆ ಷರತ್ತುಬದ್ಧ ಒಪ್ಪಿಗೆ ನೀಡಿದೆ.

ವನ್ಯಜೀವಿಗಳಿಗೆ ಯಾವುದೇ ರೀತಿಯಲ್ಲಿ ತೊಂದರೆ ಆಗದಂತೆ ಯೋಜನೆಯನ್ನು ರೂಪಿಸಬೇಕು ಎಂಬ ಕರಾರು ವಿಧಿಸಿ ಸಭೆ ಅನುಮೋದನೆ ನೀಡಿತು. ಚಿತ್ತಾಪುರದಲ್ಲಿ ಚಿರತೆ ಸಂರಕ್ಷಣಾ ಮೀಸಲು ಸ್ಥಾಪಿಸುವ ಕುರಿತು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದರು.

ಸಿಂಗಳೀಕ ವನ್ಯಜೀವಿಧಾಮದ ವ್ಯಾಪ್ತಿಯ ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಹಿರೇಬೈಲ್ ಗ್ರಾಮದ ಅಂದಬಳ್ಳಿ ಮತ್ತು ಇತರ 5 ಗ್ರಾಮಗಳ 325 ಮನೆಗಳಿಗೆ, ಹೊನ್ನಾವರ ಪಟ್ಟಣ ಮತ್ತು ಮಾರ್ಗದಲ್ಲಿರುವ 9 ಗ್ರಾಮ ಪಂಚಾಯಿತಿಗಳಿಗೆ ಕುಡಿಯುವ ನೀರಿನ ಪೈಪ್‌ಲೈನ್ ಯೋಜನೆಗೆ 0.976 ಹೆಕ್ಟೇರ್ ಅರಣ್ಯ ಪ್ರದೇಶವನ್ನು ನೀಡುವ ಯೋಜನೆಗೆ ಅನುಮೋದನೆ ಪಡೆಯಲು ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ ಪ್ರಸ್ತಾವ ಕಳುಹಿಸಲು ಸಭೆ ತೀರ್ಮಾನಿಸಿದೆ.

ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 291 ಜನವಸತಿ ಪ್ರದೇಶಗಳಿಗೆ (ಯೋಜನೆ ಹಂತ–2ರಲ್ಲಿ 193 ಜನವಸತಿ ಪ್ರದೇಶಗಳಿಗೆ) ಕುಡಿಯುವ ನೀರಿನ ಸಂಪರ್ಕ ನೀಡುವ ಪ್ರಸ್ತಾವದ ಬಗ್ಗೆ ಚರ್ಚಿಸಿದ ಮಂಡಳಿ, ಇದಕ್ಕಾಗಿ 4.4 ಹೆಕ್ಟೇರ್ ಅರಣ್ಯ ಭೂಮಿ ನೀಡುವ ಪ್ರಸ್ತಾವಕ್ಕೆ ಒಪ್ಪಿಗೆ ಪಡೆಯಲು ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅನುಮೋದನೆಗೆ ಕಳುಹಿಸಲು ತೀರ್ಮಾನಿಸಲಾಗಿದೆ.

ಅತ್ತಿವೇರಿ ಪಕ್ಷಿಧಾಮ, ಶರಾವತಿ ಸಿಂಗಳೀಕ ವನ್ಯಜೀವಿಧಾಮ ಹಾಗೂ ಸೋಮೇಶ್ವರ ವನ್ಯಜೀವಿ-ಧಾಮದಲ್ಲಿ ಸಂವಹನ ಕಂಬಗಳನ್ನು ಅಳವಡಿಸುವ ಕುರಿತಾದ ಬಿಎಸ್‌ಎನ್‌ಎಲ್ ಪ್ರಸ್ತಾವವನ್ನು ಮುಂದೂಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ಸಂವಹನ ಕಂಬಗಳಿಂದ ಪರಿಸರಕ್ಕೆ, ಪಶುಪಕ್ಷಿಗಳಿಗೆ ಆಗುವ ತೊಂದರೆ ಕುರಿತು ವಿವರ ಮಂಡಿಸಲು ಸೂಚಿಸಲಾಯಿತು.

ಪಶ್ಚಿಮಘಟ್ಟದಲ್ಲಿ ಕಾರ್ಯಗತವಾಗಿರುವ ರಸ್ತೆ ಮತ್ತಿತರ ಅಭಿವೃದ್ಧಿ ಯೋಜನೆಗಳಲ್ಲಿ ಷರತ್ತುಗಳ ಪಾಲನೆ ಆಗಿದೆಯೇ ಇಲ್ಲವೇ ಎಂಬ ಬಗ್ಗೆ ಪರಾಮರ್ಶೆ ನಡೆಸುವಂತೆ ಈಶ್ವರ ಖಂಡ್ರೆ ಸೂಚಿಸಿದರು.

ಅರಣ್ಯ ಮತ್ತು ವನ್ಯಜೀವಿಧಾಮಗಳಲ್ಲಿ ಯಾವುದೇ ಯೋಜನೆಗೆ ಅನುಮತಿ ನೀಡುವಾಗ ವನ್ಯಜೀವಿಗಳಿಗೆ ತೊಂದರೆ ಆಗದಂತೆ ಅಪಾಯ ತಗ್ಗಿಸುವ ಪರಿಹಾರಗಳೊಂದಿಗೆ ಪ್ರಸ್ತಾವನೆ ಮಂಡಿಸುವುದನ್ನು ಕಡ್ಡಾಯಗೊಳಿಸುವಂತೆ ಅವರು ನಿರ್ದೇಶನ ನೀಡಿದರು.

'ರೇಡಿಯೊ ಕಾಲರ್ ಹಾಕಿ ಕಾಡಿಗೆ ಬಿಡಿ'

ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ಬಳಿಯ ಕೆರೆಕಟ್ಟೆ ಸಮೀಪ ಸೆರೆ ಹಿಡಿಯಲಾಗಿರುವ ಆನೆಗೆ ರೇಡಿಯೊ ಕಾಲರ್ ಅಳವಡಿಸಿ ಕಾಡಿಗೆ ಬಿಡುವುದು ಸೂಕ್ತ ಎಂದು ಸಚಿವ ಈಶ್ವರ ಖಂಡ್ರೆ ಸಭೆಯಲ್ಲಿ ಸೂಚಿಸಿದರು. ಇತ್ತೀಚೆಗೆ ಇಬ್ಬರ ಸಾವಿಗೆ ಕಾರಣವಾದ ಆನೆಯನ್ನು ಸೆರೆ ಹಿಡಿಯಲಾಗಿದ್ದು, ಆನೆ ಈಗ ಶಿಬಿರದಲ್ಲಿದೆ. ಆನೆಯ ಸ್ವಭಾವದ ಪರಾಮರ್ಶೆ ನಡೆಸಿ, ಉನ್ನತಾಧಿಕಾರಿಗಳು ಮತ್ತು ತಜ್ಞರು ಸಭೆ ನಡೆಸಿ, ಅಂತಿಮ ತೀರ್ಮಾನ ತೆಗೆದುಕೊಳ್ಳುವಂತೆ ಅವರು ಸೂಚಿಸಿದರು.

ಕುಂಬ್ಳೆ ಕರೆಯಲು ಸೂಚನೆ

ಅರಣ್ಯ ಮತ್ತು ವನ್ಯಜೀವಿ ರಾಯಭಾರಿಯಾಗಿ ನೇಮಕಗೊಂಡಿರುವ ಅನಿಲ್ ಕುಂಬ್ಳೆ ಅವರನ್ನು ಮುಂದಿನ ಸಭೆಗಳಿಗೆ ಆಹ್ವಾನಿಸುವಂತೆ ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಖಂಡ್ರೆ ಸೂಚನೆ ನೀಡಿದರು.

ರಾಜ್ಯ ಸಂಗೀತ ಸಮ್ಮೇಳನ: ವಿದ್ವಾಂಸ ಪ್ರೊ.ಸಿ.ಎ.ಶ್ರೀಧರ ಒತ್ತಾಯ

'ಸಂಗೀತ ಶಿಕ್ಷಕರನ್ನು ನೇಮಕ ಮಾಡಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ವೃತ್ತಿನಿರತ ಸಂಗೀತ ಕಲಾವಿದರನ್ನು ಶಾಲಾ ಕಾಲೇಜುಗಳಲ್ಲಿ ಸಂಗೀತ ಶಿಕ್ಷಕರಾಗಿ ನೇಮಿಸಬೇಕು' ಎಂದು ಸಂಗೀತ ವಿದ್ವಾಂಸ ಪ್ರೊ.ಸಿ.ಎ.ಶ್ರೀಧರ ಒತ್ತಾಯಿಸಿದರು.

ಕರ್ನಾಟಕ ಗಾನಕಲಾ ಪರಿಷತ್ತು ನಗರದಲ್ಲಿ ಬುಧವಾರದಿಂದ ಆಯೋಜಿಸಿರುವ ರಾಜ್ಯ ಸಂಗೀತ ಸಮ್ಮೇಳನದ ಅಧ್ಯಕ್ಷೀಯ ಭಾಷಣ ಮಾಡಿದ ಅವರು, 'ಕರ್ನಾಟಕ ಶಾಸ್ತ್ರೀಯ ಸಂಗೀತ ಬೆಳವಣಿಗೆಗೆ ಸರ್ಕಾರ ಪ್ರಾಧಿಕಾರ ರಚಿಸಬೇಕು' ಎಂದು ಪ್ರತಿಪಾದಿಸಿದರು.

'ಮುಜರಾಯಿ ಇಲಾಖೆಯ ದೇಗುಲಗಳು ಹಾಗೂ ಪ್ರವಾಸಿ ತಾಣಗಳಲ್ಲಿ ಸಂಗೀತ ಕಛೇರಿ ಆಯೋಜಿಸಬೇಕು. ಕಲಾವಿದರ ಗೌರವಧನ ಹೆಚ್ಚಿಸಬೇಕು. ಆಕಾಶವಾಣಿಯಲ್ಲಿ ನಿಲಯ ಕಲಾವಿದರ ನೇಮಕ ಮಾಡಬೇಕು. ಸಾಂಪ್ರದಾಯಿಕ ಮೈಸೂರು ವೀಣೆ, ತಂಬೂರಿ ತಯಾರಕರನ್ನು ಪ್ರೋ-ತ್ಸಾಹಿಸಬೇಕು' ಎಂದು ಅವರು ಒತ್ತಾಯಿಸಿದರು.

'ಸರ್ಕಾರದ ಸಾಂಸ್ಕೃತಿಕ ಉತ್ಸವಗಳಲ್ಲಿ ಹೊರರಾಜ್ಯ ಹಾಗೂ ನಾಡಿನ ಸಂಗೀತಗಾರರ ನಡುವೆ ತಾರತಮ್ಯ ಮಾಡದೇ ಸಮಾನ ವೇದಿಕೆ ನೀಡಬೇಕು' ಎಂದರು.

ಮುಖ್ಯಾಂಶಗಳು

- ಕಲಾವಿದರ ಗೌರವಧನ ಹೆಚ್ಚಿಸಬೇಕು
- ಶಾಸ್ತ್ರೀಯ ಸಂಗೀತ ಪ್ರಾಧಿಕಾರ ರಚಿಸಬೇಕು
- ದೇಗುಲಗಳಲ್ಲಿ ಸಂಗೀತ ಕಛೇರಿ ಆಯೋಜಿಸಬೇಕು

ಮೈಸೂರಿನಲ್ಲಿ ಕರ್ನಾಟಕ ಗಾನಕಲಾ ಪರಿಷತ್ತು ಬುಧವಾರದಿಂದ ಆಯೋಜಿಸಿರುವ ರಾಜ್ಯ ಸಂಗೀತ ಸಮ್ಮೇಳನವನ್ನು ಲೇಖಕ ಕಬ್ಬಿನಾಲೆ ವಸಂತ ಭಾರದ್ವಾಜ್ ಉದ್ಘಾಟಿಸಿದರು. ಉದ್ಯಮಿ ಜಗನ್ನಾಥ ಶೆಣೈ, ಪರಿಷತ್ತಿನ ಅಧ್ಯಕ್ಷ ಆರ್.ಕೆ.ಪದ್ಮನಾಭ, ಸಮ್ಮೇಳನಾಧ್ಯಕ್ಷ ಪ್ರೊ.ಸಿ.ಎ.ಶ್ರೀಧರ, ವಿದ್ವಾನ್ ಮತ್ತೂರು ಆರ್.ಶ್ರೀನಿಧಿ, ವಿ.ನಳಿನಾ ಮೋಹನ್, ನೀರಜಾ ಅಚ್ಚುತರಾವ್ ಪಾಲ್ಗೊಂಡಿದ್ದರು

'ಪ್ರಶಸ್ತಿಗೆ ಪರಿಗಣಿಸಿಲ್ಲ'

ಪರಿಷತ್ತಿನ ಕಾರ್ಯಕಾರಿ ಸಮಿತಿ ಅಧ್ಯಕ್ಷ ಆರ್. ಕೆ.ಪದ್ಮನಾಭ, 'ಶಾಸ್ತ್ರೀಯ ಸಂಗೀತ ಕ್ಷೇತ್ರದ ಒಬ್ಬರನ್ನು ಈ ಬಾರಿ ರಾಜ್ಯೋತ್ಸವ ಪ್ರಶಸ್ತಿಗೆ ಪರಿಗಣಿಸಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಕನ್ನಡ ಸಂಸ್ಕೃತಿಯ ಅವಿಭಾಜ್ಯ ಅಂಗವಾದ ಕರ್ನಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರವೊಂದು ಇದೆಯೊ, ಇಲ್ಲವೊ ಎಂಬುದೇ ಆಯ್ಕೆ ಸಮಿತಿಗೆ ಗೊತ್ತಿಲ್ಲ' ಎಂದರು. 'ಪರಿಷತ್ತಿನ ಸಮ್ಮೇಳನಕ್ಕೆ ಅನುದಾನ ನೀಡಬೇಕು' ಎಂದೂ ಒತ್ತಾಯಿಸಿದರು.

ಚಿಟಿಕೆ ಸುದ್ದಿ

ಮಿದುಳು ಸೋಂಕು ನಾಲ್ವರ ಸಾವು

ತಿರುವನಂತಪುರ: 'ಮಿದುಳು ತಿನ್ನುವ ಅಮೀಬಾ' (ಅಮೀಬಿಕ್ ಮೆನಿಂಗೊ ಎನ್ಸೆಫಲೈಟಿಸ್) ಸೋಂಕಿಗೆ ತುತ್ತಾಗಿ ಕೇರಳದಲ್ಲಿ ಕಳೆದ ಐದು ದಿನಗಳಲ್ಲೇ ನಾಲ್ಕು ಮಂದಿ ಮೃತಪಟ್ಟಿದ್ದಾರೆ.

'ಅಮೀಬಿಕ್ ಮೆನಿಂಗೊ ಎನ್ಸೆಫಲೈಟಿಸ್' ಅಪರೂಪದ ಸೋಂಕು ಆಗಿದ್ದು, ಇದು ಕಲುಷಿತ ನೀರಿನಿಂದ ಹರಡುತ್ತದೆ.

ಆದರೆ, ಇತ್ತೀಚೆಗೆ ಸೋಂಕಿಗೆ ತುತ್ತಾದವರ ಪೈಕಿ ಹಲವರು ಕಲುಷಿತ ನೀರಿನ ಸೇವಿಸಿಲ್ಲ. ಹಾಗಿದ್ದರೂ ಸೋಂಕಿಗೆ ತುತ್ತಾಗಿರುವುದು ಹಾಗೂ ಮೃತರಲ್ಲಿ ಬಹುತೇಕರು ವಯಸ್ಸಾದ ವ್ಯಕ್ತಿಗಳೇ ಆಗಿರುವುದು ಮತ್ತಷ್ಟು ಆತಂಕ ಹೆಚ್ಚಿಸಿದೆ.

₹26 ಲಕ್ಷ ಮೌಲ್ಯದ 22 ಡ್ರೋನ್‌ಗಳು ವಶಕ್ಕೆ

ಹೈದರಾಬಾದ್ (ಪಿಟಿಐ): ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ₹26.7 ಲಕ್ಷ ಮೌಲ್ಯದ 22 ಅತ್ಯಾಧುನಿಕ ಡ್ರೋನ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯು (ಸಿಐಎಸ್‌ಎಫ್) ತಿಳಿಸಿದೆ.

ಸಿಐಎಸ್‌ಎಫ್‌ನ ಅಪರಾಧ ಮತ್ತು ಗುಪ್ತಚರ ವಿಭಾಗವು, ಸಿಂಗಪುರದಿಂದ ಬಂದ ಪ್ರಯಾಣಿಕರೊಬ್ಬರು ಎರಡು ಬ್ಯಾಗ್‌ಗಳನ್ನು ಅನುಮಾನಾಸ್ಪದ ರೀತಿಯಲ್ಲಿ ಬದಲಾಯಿಸಿಕೊಳ್ಳುತ್ತಿದ್ದುದನ್ನು ನೋಡಿ ಪರಿಶೀಲನೆ ನಡೆಸಿತು. ಈ ವೇಳೆ ಡ್ರೋನ್‌ಗಳು ಪತ್ತೆಯಾಗಿವೆ ಎಂದು ಅದು 'ಎಕ್ಸ್'ನಲ್ಲಿ ಮಂಗಳವಾರ ತಿಳಿಸಿದೆ.

ವಶಕ್ಕೆ ಪಡೆಯಲಾದ ಡ್ರೋನ್‌ಗಳನ್ನು ಕಸ್ಟಮ್ಸ್ ಇಲಾಖೆಗೆ ಹಸ್ತಾಂತರಿಸಲಾಗಿದೆ ಎಂದು ಮಾಹಿತಿ ನೀಡಿದೆ.

ಪಾಕ್ ಪರ ಘೋಷಣೆ 9 ಮಂದಿ ಬಂಧನ

ಪಣಜಿ (ಪಿಟಿಐ): ಗೋವಾದ ಎರಡು ಅಂಗಡಿಗಳ ಫಲಕಗಳಲ್ಲಿ ಪಾಕಿಸ್ತಾನದ ಪರ ಘೋಷಣೆಗಳನ್ನು ಪ್ರದರ್ಶಿಸಿದ್ದ ಘಟನೆಗೆ ಸಂಬಂಧಿಸಿದಂತೆ ಒಂಬತ್ತು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಉತ್ತರ ಗೋವಾ ಜಿಲ್ಲೆಯ ಬಾಗಾ ಹಾಗೂ ಅರ್ಪೋರ ಗ್ರಾಮಗಳಲ್ಲಿರುವ ಅಂಗಡಿಗಳ ಎಲ್‌ಇಡಿ ಫಲಕಗಳಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಘೋಷಣೆಯನ್ನು ಪ್ರದರ್ಶಿಸಲಾಗುತ್ತಿದೆ ಎಂದು ಕೆಲ ಸ್ಥಳೀಯರು ಮಂಗಳವಾರ ಸಂಜೆ ದೂರು ನೀಡಿದ್ದರು ಎಂದು ಪೊಲೀಸರು ತಿಳಿಸಿದರು.

ಈ ಕುರಿತು ಪ್ರಕರಣ ದಾಖಲಿಸಿಕೊಂಡು, ಎರಡೂ ಅಂಗಡಿಗಳಿಗೆ ಸಂಬಂಧಿಸಿದ ಒಂಬತ್ತು ಮಂದಿಯನ್ನು ಬಂಧಿಸಲಾಗಿದೆ. ಎಲ್‌ಇಡಿ ಫಲಕಗಳನ್ನು ತೆರವುಗೊಳಿಸಲಾಗಿದೆ ಎಂದರು.

ಮುಂಬೈ ಸಾಹಿತ್ಯ ಉತ್ಸವ ನಾಳೆಯಿಂದ

ಮುಂಬೈ (ಪಿಟಿಐ): 16ನೇ ಮುಂಬೈ ಸಾಹಿತ್ಯ ಉತ್ಸವದಲ್ಲಿ ಕಾಂಗ್ರೆಸ್ ಸಂಸದ ಶಶಿ ತರೂರ್, ಲೇಖಕ ವಿನೋದ್ ಕುಮಾರ್ ಶುಕ್ಲಾ, ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಸೇರಿದಂತೆ 100ಕ್ಕೂ ಹೆಚ್ಚು ಪ್ರಮುಖ ಲೇಖಕರು, ಚಿಂತಕರು ಭಾಗಿಯಾಗಲಿದ್ದಾರೆ.

ರಾಷ್ಟ್ರೀಯ ಪ್ರದರ್ಶನ ಕಲಾ ಕೇಂದ್ರದಲ್ಲಿ (ಎನ್‌ಸಿಪಿಎ) ನ. 7ರಂದು ಉತ್ಸವ ಆರಂಭವಾಗಲಿದೆ. ಗೋದ್ರೆಜ್ ಇಂಡಸ್ಟ್ರೀಸ್ ಗ್ರೂಪ್ ಸಹಯೋಗದಲ್ಲಿ ಆಯೋಜಿಸಿರುವ ಈ ಸಾಹಿತ್ಯ ಉತ್ಸವವು, 10ಕ್ಕೂ ಹೆಚ್ಚು ದೇಶಗಳ ವಿಭಿನ್ನ ಸಾಹಿತ್ಯಿಕ ಧ್ವನಿ, ನೋಟಗಳು ಮತ್ತು ವಿಚಾರಧಾರೆಗಳಿಗೆ ವೇದಿಕೆ ಆಗಲಿದೆ.

3 ದಿನ ನಡೆಯುವ ಉತ್ಸವದಲ್ಲಿ ಕಾದಂಬರಿ, ಕವಿತೆ, ಆರೋಗ್ಯ, ಇತಿಹಾಸ, ವ್ಯವಹಾರ, ವಿಜ್ಞಾನ, ತತ್ವಶಾಸ್ತ್ರ ಮತ್ತು ಮುಂಬೈ ನಗರದ ಕುರಿತು ವಿಚಾರಗೋಷ್ಠಿಗಳು ನಡೆಯಲಿವೆ.

'ನಾಲ್ಕು ಅಂಗಗಳಿಗೂ ಪರಸ್ಪರ ಸಂಬಂಧ'



ಗವಾಯಿ

ಮುಂಬೈ (ಪಿಟಿಐ): ಪ್ರಜಾಪ್ರಭುತ್ವದ ನಾಲ್ಕು ಅಂಗಗಳಾದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಮಾಧ್ಯಮವು ಜನರ ಕಲ್ಯಾಣಕ್ಕಾಗಿ ಅಸ್ತಿತ್ವದಲ್ಲಿವೆ. ಇವು ಒಂದನ್ನು ಬಿಟ್ಟು ಇನ್ನೊಂದು ಕೆಲಸ ಮಾಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಅಭಿಪ್ರಾಯಪಟ್ಟರು.

ಮುಂಬೈನ ಮಹಾರಾಷ್ಟ್ರ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬುಧವಾರ ಮಾತನಾಡಿದ ಅವರು, ಕಾನೂನು ಶಿಕ್ಷಣವು ಹೆಚ್ಚು ಹೆಚ್ಚು ಪ್ರಾಯೋಗಿಕ ತರಬೇತಿಗಳೊಂದಿಗೆ ಅಭಿವೃದ್ಧಿ ಹೊಂದುತ್ತಿದೆ. ಆದಾಗ್ಯೂ ಮೂಲಸೌಕರ್ಯಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದರು.

3.75 ಕೋಟಿ ಒಟ್ಟು ಮತದಾರರು | **10.72 ಲಕ್ಷ** ಹೊಸ ಮತದಾರರು | **7.38 ಲಕ್ಷ** 18–19 ವಯೋಮಾನದ ಮತದಾರರ ಸಂಖ್ಯೆ | **121** ಮೊದಲ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳ ಸಂಖ್ಯೆ | **20** ಕುರಹನಿ ಮತ್ತು ಮುಜಾಫರಪುರ ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಸಂಖ್ಯೆ (ಮೊದಲ ಹಂತದ ಚುನಾವಣೆ ನಡೆಯುತ್ತಿರುವ ಕ್ಷೇತ್ರಗಳ ಪೈಕಿ ಇಲ್ಲಿಯೇ ಅತಿ ಹೆಚ್ಚಿನ ಸ್ಪರ್ಧಿಗಳು ಕಣದಲ್ಲಿ ಇದ್ದಾರೆ)

1,314 ಅಭ್ಯರ್ಥಿಗಳ ಸಂಖ್ಯೆ | **45,341** ಒಟ್ಟು ಮತದಾನ ಕೇಂದ್ರಗಳ ಸಂಖ್ಯೆ | **36,733** ಗ್ರಾಮೀಣ ಭಾಗದಲ್ಲಿರುವ ಮತದಾನದ ಕೇಂದ್ರಗಳ ಸಂಖ್ಯೆ

ಬೆಳಿಗ್ಗೆ 7–ಸಂಜೆ 6, ಮತದಾನದ ನಡೆಯುವ ಅವಧಿ

ಬೆಳಿಗ್ಗೆ 7– ಸಂಜೆ 5, ನಕ್ಸಲ್ ಬಾಧಿತ ಪ್ರದೇಶಗಳಲ್ಲಿ ಮತದಾನ ನಡೆಯುವ ಅವಧಿ

ಮೊದಲ ಹಂತದ ಮತದಾನ ಇಂದು

ಪಟ್ನಾ: ಬಿಹಾರದ ವಿಧಾನಸಭಾ ಚುನಾವಣೆಯ ಮೊದಲ ಹಂತದ ಮತದಾನವು ಗುರುವಾರ ನಡೆಯಲಿದೆ. 'ಇಂಡಿಯಾ' ಕೂಟದ ಮುಖ್ಯಮಂತ್ರಿ ಅಭ್ಯರ್ಥಿ ತೇಜಸ್ವಿ ಯಾದವ್, ಉಪ ಮುಖ್ಯಮಂತ್ರಿ ಬಿಜೆಪಿಯ ಸಾಮ್ರಾಟ್ ಚೌಧರಿ ಅವರು ಈ ಹಂತದಲ್ಲಿ ಕಣದಲ್ಲಿರುವ ಪ್ರಮುಖರು. ಬಿಹಾರ ಸರ್ಕಾರದ ಪ್ರಮುಖವಾಗಿ ಬಿಜೆಪಿ ಪಕ್ಷದ ಅರ್ಧಕ್ಕೂ ಹೆಚ್ಚು ಸಚಿವರು ಮೊದಲ ಹಂತದ ಕಣದಲ್ಲಿ ಸ್ಪರ್ಧಿಸಿದ್ದಾರೆ.

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ಚುನಾವಣಾ ಕರ್ತವ್ಯ ನಿರ್ವಹಿಸಲು ಚುನಾವಣಾ ಅಧಿಕಾರಿಗಳು ಮತ್ತು ಭದ್ರತಾ ಪಡೆಗಳ ಸಿಬ್ಬಂದಿ ಪಟ್ನಾದಲ್ಲಿ ಲಾಂಚ್‌ನಿಂದ ಬುಧವಾರ ಕೆಳಗಿಳಿದರು —ಪಿಟಿಐ ಚಿತ್ರ

ಗಮನ ಸೆಳೆದಿರುವ ಕ್ಷೇತ್ರಗಳು

- ರಘೋಪುರ ವಿಧಾನಸಭಾ ಕ್ಷೇತ್ರದಿಂದ ಆರ್‌ಜೆಡಿ ಪಕ್ಷದ ತೇಜಸ್ವಿ ಯಾದವ್ ಅವರು ಸ್ಪರ್ಧಿಸಿದ್ದಾರೆ. ತಂದೆ ಲಾಲೂ ಪ್ರಸಾದ್ ಎರಡು ಬಾರಿ, ತಾಯಿ ರಾಬ್ಡಿ ದೇವಿ ಅವರು ಮೂರು ಬಾರಿ ಇದೇ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ವಿಶೇಷವೆಂದರೆ, ಈ ಕ್ಷೇತ್ರದಿಂದ ಗೆದ್ದ ಬಳಿಕ ಈ ಇಬ್ಬರೂ ಮುಖ್ಯಮಂತ್ರಿಯಾಗಿದ್ದರು. ಈಗ ತೇಜಸ್ವಿ ಅವರು ಮುಖ್ಯಮಂತ್ರಿ ಅಭ್ಯರ್ಥಿಯಾಗಿದ್ದಾರೆ
- ಮಹುವಾ ಕ್ಷೇತ್ರದಲ್ಲಿ ಆರ್‌ಜೆಡಿ ಮುಖ್ಯಸ್ಥ ಲಾಲೂ ಪ್ರಸಾದ್ ಅವರ ಮತ್ತೊಬ್ಬ ಮಗ ತೇಜ್ ಪ್ರತಾಪ್ ಅವರು ಸ್ಪರ್ಧಿಸಿದ್ದಾರೆ. ಕೌಟುಂಬಿಕ ಕಾರಣಗಳಿಂದ ಲಾಲೂ ಪ್ರಸಾದ್ ಅವರು ತೇಜ್ ಪ್ರತಾಪ್ ಅವರನ್ನು ಪಕ್ಷದಿಂದ ಹೊರಹಾಕಿದ್ದರು. ಬಳಿಕ ಇವರು 'ಜನಶಕ್ತಿ ಜನತಾದಳ' ಪಕ್ಷ ಕಟ್ಟಿದರು
- ಸಾಮ್ರಾಟ್ ಚೌಧರಿ ಅವರು ತಾರಾಪುರ ವಿಧಾನಸಭಾ ಕ್ಷೇತ್ರದಿಂದ ಕಣದಲ್ಲಿದ್ದಾರೆ. ಎರಡು ಬಾರಿ ಇವರು ವಿಧಾನ ಪರಿಷತ್ ಸದಸ್ಯರಾಗಿದ್ದರು. ಸುಮಾರು 10 ವರ್ಷಗಳ ಬಳಿಕ ಇವರು ಚುನಾವಣೆಯಲ್ಲಿ ಸ್ಪರ್ಧಿಸಿದ್ದಾರೆ
- ರಘುನಾಥಪುರ ಕ್ಷೇತ್ರದಿಂದ 31 ವರ್ಷದ ಒಸಾಮಾ ಶಹಬ್ ಅವರು ಆರ್‌ಜೆಡಿ ಟಿಕೆಟ್‌ನಲ್ಲಿ ಸ್ಪರ್ಧಿಸಿದ್ದಾರೆ. ಗ್ಯಾಂಗ್‌ಸ್ಟರ್ ಆಗಿದ್ದು, ಬಳಿಕ ರಾಜಕಾರಣಿಯಾದ ಮೊಹಮ್ಮದ್ ಶಹಾಬುದ್ದೀನ್ ಅವರ ಮಗ. ಆರ್‌ಜೆಡಿ ಅಧಿಕಾರಕ್ಕೆ ಬಂದರೆ 'ಜಂಗಲ್ ರಾಜ್' ಮರಳುತ್ತದೆ ಎಂಬ ಆರೋಪಕ್ಕೆ ಈ ಕ್ಷೇತ್ರವನ್ನೇ ಕೇಂದ್ರವಾಗಿಸಿಕೊಂಡು ಪ್ರಚಾರ ನಡೆಸಿದ್ದರು
- ಜನಪದ ಗಾಯಕಿ 25 ವರ್ಷ ಮಿಥಾಲಿ ಠಾಕೂರ್ ಅವರು ಅಲಿನಗರ ಕ್ಷೇತ್ರದಿಂದ ಬಿಜೆಪಿ ಟಿಕೆಟ್‌ನಲ್ಲಿ ಸ್ಪರ್ಧಿಸಿದ್ದಾರೆ. ಅಲಿನಗರಕ್ಕೆ 'ಸೀತಾನಗರ' ಎಂದು ಮರುನಾಮಕರಣ ಮಾಡುವುದಾಗಿ ಇತ್ತೀಚೆಗೆ ಮಿಥಾಲಿ ಹೇಳಿದ್ದರು. ಸೀತಾ ಮಾತೆಗೆ ಗೌರವ ಸೂಚಿಸಲು ನಗರದ ಹೆಸರು ಬದಲಾಯಿಸಲಾಗುವುದ ಎಂದಿದ್ದರು
- ಮೊಕಾಮ್ ಕ್ಷೇತ್ರವು ಈ ಬಾರಿ ಎಲ್ಲರ ಗಮನ ಸೆಳೆದಿದೆ. ಜೆಡಿಯು ಟಿಕೆಟ್‌ನಿಂದ 'ಡಾನ್' ಅನಂತ್ ಸಿಂಗ್ ಅವರು ಸ್ಪರ್ಧಿಸಿದ್ದಾರೆ. ಜನ ಸುರಾಜ್ ಪಕ್ಷದ ಬೆಂಬಲಿಗ ದುಲರ್‌ಚಂದ್ ಯಾದವ್ ಅವರನ್ನು ಹತ್ಯೆ ಮಾಡಿದ್ದಕ್ಕಾಗಿ ಅನಂತ್ ಸಿಂಗ್ ಅವರನ್ನು ಭಾನುವಾರಷ್ಟೇ ಬಂಧಿಸಲಾಗಿದೆ

ಆಧಾರ: ಪಿಟಿಐ

ಬಿಜೆಪಿ ಸೇರಿದ ಜನಸುರಾಜ್ ಅಭ್ಯರ್ಥಿ

ಬಿಹಾರ ವಿಧಾನಸಭಾ ಮೊದಲ ಹಂತದ ಚುನಾವಣೆಗೆ ಒಂದು ದಿನ ಬಾಕಿ ಇರುವಾಗಲೇ, ಮುಂಗೇರ್ ವಿಧಾನಸಭಾ ಕ್ಷೇತ್ರದ ಜನ್ ಸುರಾಜ್ ಪಕ್ಷದ ಅಭ್ಯರ್ಥಿ ಸಂಜಯ್ ಸಿಂಗ್ ಬಿಜೆಪಿ ಸೇರಿದ್ದಾರೆ.

ಮುಂಗೇರ್ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ ಎನ್‌ಡಿಎ ಅಭ್ಯರ್ಥಿ ಕುಮಾರ್ ಅವರಿಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಸಂಜಯ್ ಸಿಂಗ್ ಹೇಳಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ನಾಯಕತ್ವ ಒಪ್ಪಿಕೊಂಡು ಬಿಜೆಪಿ ಸೇರಿದ್ದೇನೆ. ಎನ್‌ಡಿಎ ಆಡಳಿತದಲ್ಲಿ ಬಿಹಾರವು ಮತ್ತಷ್ಟು ಅಭಿವೃದ್ಧಿ ಕಾಣಲಿದೆ' ಎಂದು ಅವರು ಹೇಳಿದ್ದಾರೆ. ಪಕ್ಷವು ಟಿಕೆಟ್ ನಿರಾಕರಿಸಿದ ಬೆನ್ನಲ್ಲೇ, ಬಿಜೆಪಿ ಶಾಸಕ ಲಾಲನ್ ಪಾಸ್ವಾನ್ ಆರ್‌ಜೆಡಿ ಸೇರಿದ್ದಾರೆ.

ಎಸ್‌ಐಆರ್: ಕೇರಳದಿಂದಲೂ ಕಾನೂನು ಹೋರಾಟ

ಪ್ರಜಾವಾಣಿ ವಾರ್ತೆ

ಪಿಣರಾಯಿ ವಿಜಯನ್

ತಿರುವನಂತಪುರಂ: ತಮಿಳುನಾಡು ಬೆನ್ನಲ್ಲೇ ಕೇರಳ ಸರ್ಕಾರವೂ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ವಿರೋಧಿಸಿ ಕಾನೂನು ಹೋರಾಟಕ್ಕೆ ನಿರ್ಧಾರ ಕೈಗೊಂಡಿದೆ.

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ನೇತೃತ್ವದಲ್ಲಿ ಬುಧವಾರ ನಡೆದ ಸರ್ವಪಕ್ಷಗಳ ಸಭೆಯಲ್ಲಿ ಎಸ್‌ಐಆರ್ ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗುವ ನಿರ್ಣಯ ತೆಗೆದುಕೊಳ್ಳಲಾಯಿತು. ಸಭೆಯಲ್ಲಿ ಬಿಜೆಪಿ ಪಾಲ್ಗೊಂಡಿರಲಿಲ್ಲ. ಎಲ್‌ಡಿಎಫ್ ಸರ್ಕಾರದ ನಿರ್ಧಾರಕ್ಕೆ ಕಾಂಗ್ರೆಸ್ ಸೇರಿ ಎಲ್ಲ ಪಕ್ಷಗಳೂ ಬೆಂಬಲ ವ್ಯಕ್ತಪಡಿಸಿದವು.

ಈಗಾಗಲೇ ತಮಿಳುನಾಡು ಸರ್ಕಾರ ಎಸ್‌ಐಆರ್ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

'ಸ್ಥಳೀಯ ಸಂಸ್ಥೆಗಳ ಚುನಾವಣೆ ಸಮೀಪದಲ್ಲಿರುವಾಗಲೇ ಕೇಂದ್ರ ಚುನಾವಣಾ ಆಯೋಗ ಕೇರಳದಲ್ಲಿ ಎಸ್‌ಐಆರ್ ನಡೆಸುತ್ತಿದೆ. ಇದರ ವಿರುದ್ಧ ಕಾನೂನು ಹೋರಾಟಕ್ಕೆ ಕಾನೂನು ತಜ್ಞರ ಅಭಿಪ್ರಾಯ ಪಡೆಯಲಾಗುವುದು. 2002ರ ಮತದಾರರ ಪಟ್ಟಿಯನ್ನು ಆಧಾರವಾಗಿಟ್ಟುಕೊಂಡು ವಿಶೇಷ ಪರಿಷ್ಕರಣೆ ಮಾಡುವುದು ಗಂಭೀರ ಪರಿಣಾಮ ಉಂಟುಮಾಡುತ್ತದೆ' ಎಂದು ಪಿಣರಾಯಿ ವಿಜಯನ್ ಸಭೆಗೆ ತಿಳಿಸಿದರು ಎಂದು ಅವರ ಕಚೇರಿ ತಿಳಿಸಿದೆ.

'ಟಿವಿಕೆ– ಡಿಎಂಕೆ ನಡುವೆ ಹಣಾಹಣಿ'

ವಿಜಯ್

ಮಹಾಬಲಿಪುರಂ (ಪಿಟಿಐ): ಮುಂಬರುವ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಡಿಎಂಕೆ– ಟಿವಿಕೆ ನಡುವೆ ಹಣಾಹಣಿ ನಡೆಯಲಿದೆ ಎಂದು ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಅಧ್ಯಕ್ಷ, ಚಿತ್ರನಟ ವಿಜಯ್ ಬುಧವಾರ ಇಲ್ಲಿ ಹೇಳಿದರು.

ನಗರದ ಹೋಟೆಲ್‌ವೊಂದರಲ್ಲಿ ನಡೆದ ಪಕ್ಷದ ವಿಶೇಷ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, 'ತಮಿಳುನಾಡಿನಲ್ಲಿ ಆಡಳಿತಾರೂಢ ಡಿಎಂಕೆಗೆ, ಟಿವಿಕೆ ಪ್ರಬಲ ಪರ್ಯಾಯ ಶಕ್ತಿಯಾಗಿದೆ ಎಂದರು.

ಕರೂರಿನಲ್ಲಿ ನಡೆದ ಕಾಲ್ತುಳಿತ ದುರಂತವನ್ನು ಪ್ರಸ್ತಾಪಿಸಿದ ವಿಜಯ್, 'ವಿಚಾರಣೆಗಾಗಿ ಆತುರಾತುರವಾಗಿ ಏಕ ಸದಸ್ಯ ಆಯೋಗವನ್ನು ರಚಿಸಿರುವ ಸರ್ಕಾರದ ಕ್ರಮವನ್ನು ಜನರೇ ಪ್ರಶ್ನಿಸುತ್ತಿದ್ದಾರೆ' ಎಂದು ಹೇಳಿದರು.

'ರಾಜ್ಯ ಸರ್ಕಾರದ ಉನ್ನತ ಅಧಿಕಾರಿಗಳು ಸಹ ದುರಂತದ ಕುರಿತು ಪತ್ರಿಕಾಗೋಷ್ಠಿ ನಡೆಸಿ ವಿವರಿಸಿದರು' ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ವಿರುದ್ಧವಾಗ್ದಾಳಿ ನಡೆಸಿದರು.

'ಕಾಲ್ತುಳಿತದಲ್ಲಿ ಮೃತಪಟ್ಟ ಆತ್ಮೀಯರ ಸಾವಿನ ನೋವನ್ನು ಹೇಳಿಕೊಳ್ಳಲಾಗಲ್ಲ. ಆಡಳಿತಾರೂಢರು ತೀವ್ರ ತೊಂದರೆ ನೀಡುತ್ತಿದ್ದಾರೆ. ಆದರೆ ಈ ಎಲ್ಲ ಅಡೆತಡೆಗಳನ್ನು ದಾಟಿ 2026ರ ಚುನಾವಣೆಯಲ್ಲಿ ವಿಜಯ ಪತಾಕೆ ಹಾರಿಸಲಿದ್ದೇವೆ' ಎಂದು ಪುನರುಚ್ಚರಿಸಿದರು.

ವಿಜಯ್ ಮುಖ್ಯಮಂತ್ರಿ ಅಭ್ಯರ್ಥಿ: ಟಿವಿಕೆಯ ವಿಶೇಷ ಸಾಮಾನ್ಯ ಸಭೆಯಲ್ಲಿ ಪಕ್ಷದ ಸಂಸ್ಥಾಪಕ ಹಾಗೂ ಅಧ್ಯಕ್ಷ ವಿಜಯ್ ಅವರನ್ನೇ 'ಮುಖ್ಯಮಂತ್ರಿ ಅಭ್ಯರ್ಥಿ' ಎಂದು ಘೋಷಿಸಲಾಯಿತು.

ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಗೆ ವಿವಿಧ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವ ಅಧಿಕಾರವನ್ನು ಅಧ್ಯಕ್ಷರಿಗೆ ನೀಡಲಾಯಿತು.

ಬೀದಿನಾಯಿ ಹಾವಳಿ ನಿಯಂತ್ರಣ 'ಸುಪ್ರೀಂ'ಗೆ ರಾಜ್ಯ ಪ್ರಮಾಣಪತ್ರ

ನವದೆಹಲಿ: ಕರ್ನಾಟಕದಲ್ಲಿ ಬೀದಿನಾಯಿ ಹಾವಳಿ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳ ಕುರಿತು ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ.

ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶದಲ್ಲಿನ (ದೆಹಲಿ–ಎನ್‌ಸಿಆರ್) ಬೀದಿನಾಯಿಗಳ ಸ್ಥಳಾಂತರಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಎಲ್ಲ ರಾಜ್ಯಗಳನ್ನು ಪ್ರತಿವಾದಿಗಳನ್ನಾಗಿ ಮಾಡಿತ್ತು. ಬೀದಿನಾಯಿ ಹಾವಳಿ ನಿಯಂತ್ರಣದ ಕ್ರಮಗಳ ಕುರಿತು ಎಂಟು ವಾರಗಳಲ್ಲಿ ವರದಿ ಸಲ್ಲಿಸಬೇಕು ಎಂದು ಎಲ್ಲ ರಾಜ್ಯ ಸರ್ಕಾರಗಳಿಗೆ ಆಗಸ್ಟ್‌ನಲ್ಲಿ ನಿರ್ದೇಶನ ನೀಡಿತ್ತು. ಕರ್ನಾಟಕ ಸರ್ಕಾರ ಸೇರಿದಂತೆ ಹಲವು ರಾಜ್ಯಗಳು ಪ್ರಮಾಣಪತ್ರ ಸಲ್ಲಿಸಿರಲಿಲ್ಲ.

ಮುಂದಿನ ವಿಚಾರಣೆ ವೇಳೆ ರಾಜ್ಯ ಸರ್ಕಾರಗಳ ಮುಖ್ಯ ಕಾರ್ಯದರ್ಶಿಗಳು ಹಾಜರಿರಬೇಕು ಎಂದು ಪೀಠ ತಾಕೀತು ಮಾಡಿತ್ತು. ಪ್ರಮಾಣಪತ್ರ ಸಲ್ಲಿಸಿರುವ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, 'ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ 316 ನಗರಗಳ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮಾಹಿತಿ ಸಂಗ್ರಹ ಪ್ರಕ್ರಿಯೆ ಆರಂಭಿಸಲಾಗಿತ್ತು. ಅದೇ ಹೊತ್ತಿಗೆ, ರಾಜ್ಯದಲ್ಲಿ ಜಾತಿವಾರು ಸಮೀಕ್ಷೆ ಆರಂಭವಾಗಿತ್ತು. ಈ ಕಾರ್ಯಕ್ಕೆ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಹೀಗಾಗಿ, ಪ್ರಮಾಣಪತ್ರ ಸಲ್ಲಿಕೆ ವಿಳಂಬವಾಗಿದೆ' ಎಂದು ಅರುಹಿದ್ದಾರೆ.

ಬೀದಿನಾಯಿ ಹಾವಳಿ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ ಹಾಗೂ ಪಶುಸಂಗೋಪನಾ ಇಲಾಖೆಯ ಕಾರ್ಯದರ್ಶಿ ಪ್ರತ್ಯೇಕವಾಗಿ ಪ್ರಮಾಣಪತ್ರ ಸಲ್ಲಿಸಿದ್ದಾರೆ.

13 ಅಥವಾ 16ರಂದು ಅನುಮತಿ ಕೊಡುವಂತೆ ಪ್ರಸ್ತಾವ • ಎ.ಜಿ. ಸಮ್ಮುಖದಲ್ಲಿ ಸಭೆ

ಚಿತ್ತಾಪುರ: ಆರ್‌ಎಸ್‌ಎಸ್ ಹೊಸ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ಇದೇ 13 ಅಥವಾ 16ರಂದು ಪಥ ಸಂಚಲನಕ್ಕೆ ಅನುಮತಿ ನೀಡುವಂತೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಸರ್ಕಾರಕ್ಕೆ ಹೊಸ ಪ್ರಸ್ತಾವ ಸಲ್ಲಿಸಿದೆ.

ಪಥ ಸಂಚನಲಕ್ಕೆ ಅನುಮತಿ ನೀಡುವ ಬಗ್ಗೆ ಹೈಕೋರ್ಟ್ ಸಲಹೆಯಂತೆ ಅಡ್ವೊಕೇಟ್ ಜನರಲ್ ಕಚೇರಿಯಲ್ಲಿ ಬುಧವಾರ ಸಭೆ ನಡೆಯಿತು.

ಈ ಸಭೆಯಲ್ಲಿ ಅರ್ಜಿದಾರರೂ ಆಗಿರುವ ಆರ್‌ಎಸ್‌ಎಸ್‌ನ ಕಲಬುರಗಿ ಜಿಲ್ಲಾ ಸಮನ್ವಯಕಾರ ಅಶೋಕ್ ಪಾಟೀಲ್ ಅವರ ಪರ ಪದಾಂಕಿತ ಹಿರಿಯ ವಕೀಲ ಎಂ. ಅರುಣ್ ಶ್ಯಾಮ್ ಸಮ್ಮುಖದಲ್ಲಿ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ ಶೆಟ್ಟಿ ಅವರಿಗೆ ಈ ಪ್ರಸ್ತಾವ ಸಲ್ಲಿಸಿದರು.

ಸಭೆಯಲ್ಲಿ ಕೈಗೊಂಡ ತೀರ್ಮಾನದ ಬಗ್ಗೆ ಅಡ್ವೊಕೇಟ್ ಜನರಲ್ ಇದೇ 7ರಂದು ಹೈಕೋರ್ಟ್‌ಗೆ ವರದಿ ಸಲ್ಲಿಸಲಿದ್ದಾರೆ.

ಪ್ರಸ್ತಾವದಲ್ಲಿ ಏನಿದೆ?: 'ಇದೇ 13 ಅಥವಾ 16ರಂದು ಪಥ ಸಂಚಲನ ನಡೆಸಲು ಉದ್ದೇಶಿಸಲಾಗಿದೆ. ಇದಕ್ಕೆ ಅನುಮತಿ ನೀಡಬೇಕು. ಅಂದು ಬೇರೆ ಯಾವುದೇ ಸಂಘಟನೆಗಳಿಗೆ ಅನುಮತಿ ನೀಡಬಾರದು. ಒಂದು ವೇಳೆ ಬೇರೆ ಸಂಘಟನೆಗಳು ಅನುಮತಿ ಕೋರಿದ್ದರೆ ಅವುಗಳಿಗೆ ಬೇರೊಂದು ದಿನ ನಿಗದಿಪಡಿಸಬೇಕು. ಕಾನೂನು ಸುವ್ಯವಸ್ಥೆ ಮತ್ತು ಸಾರ್ವಜನಿಕ ಶಾಂತಿ ಕಾಪಾಡುವ ಉದ್ದೇಶದಿಂದ ಪಥ ಸಂಚಲನದಲ್ಲಿ ಚಿತ್ತಾಪುರ ತಾಲ್ಲೂಕಿನ ಆರ್‌ಎಸ್‌ಎಸ್ ಸ್ವಯಂ ಸೇವಕರು ಮಾತ್ರವೇ ಭಾಗವಹಿಸುತ್ತಾರೆ. ನೆರೆಯ ತಾಲ್ಲೂಕಿನವರು ಭಾಗವಹಿಸಬಾರದು ಎಂದು ಸೂಚಿಸಲಾಗಿದೆ. ಪಥ ಸಂಚಲನದಲ್ಲಿ 600ರಿಂದ 850 ಸ್ವಯಂ ಸೇವಕರು ಗಣವೇಷದಲ್ಲಿ ಇರುತ್ತಾರೆ. ಸಾಮಾನ್ಯವಾಗಿ ನಡೆಸುವ ನಾಲ್ಕು ಸಾಲಿನ ಪಥಸಂಚಲನದ ಬದಲಿಗೆ 3 ಸಾಲಿನಲ್ಲಿಯೇ ಮೂರು ಕಿ.ಮೀ ಪಥ ಸಂಚಲನ ನಡೆಸಲಾಗುತ್ತದೆ. ಅದು ಸುಮಾರು 37ರಿಂದ 45 ನಿಮಿಷದಲ್ಲಿ ಪೂರ್ಣಗೊಳ್ಳಲಿದೆ. ಈ ವೇಳೆ ಸಂಚಾರ ದಟ್ಟಣೆ ತಪ್ಪಿಸಲು ಪೊಲೀಸರಿಗೆ ಸ್ವಯಂ ಸೇವಕರು ಸಹಕಾರ ನೀಡಲಿದ್ದಾರೆ' ಎಂದು ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ.

'ಪಥ ಸಂಚಲನದ ವೇಳೆ ಯಾವುದೇ ಘೋಷಣೆ ಕೂಗುವುದಿಲ್ಲ. ಕೇವಲ ಘೋಷ್ (ಬ್ಯಾಂಡ್) ವಾದ್ಯ ನುಡಿಸಲಾಗುತ್ತದೆ. ಆರ್‌ಎಸ್‌ಎಸ್ ಯಾರ ಭಾವನೆಗಳಿಗೂ ಧಕ್ಕೆ ತರುವುದಿಲ್ಲ. ಯಾರನ್ನೂ ಅಪಹಾಸ್ಯ ಮಾಡುವುದಿಲ್ಲ. ಸಂಪೂರ್ಣ ಪಥ ಸಂಚಲನವನ್ನು ಡ್ರೋನ್ ಕ್ಯಾಮೆರಾ ಮೂಲಕ ಚಿತ್ರೀಕರಣ ನಡೆಸಲಾಗುತ್ತದೆ. ಗೂಗಲ್ ಮ್ಯಾಪ್ ಮೂಲಕ ಫೋಟೊಗಳನ್ನು ತೆಗೆಯಲಾಗುತ್ತದೆ. ಪಥ ಸಂಚಲನಕ್ಕೆ ಪರವಾನಗಿ ನೀಡಲು ಜಿಲ್ಲಾಡಳಿತ ವಿಧಿಸುವ ಎಲ್ಲಾ ಷರತ್ತುಗಳನ್ನೂ ಪಾಲಿಸಲಾಗುವುದು. ಪಥ ಸಂಚಲನದ ಕೊನೆಯಲ್ಲಿ ಬಜಾಜ್ ಕಲ್ಯಾಣ ಮಂಟಪದೊಳಗೆ ಸ್ವಯಂ ಸೇವಕರ ಸಭೆ ನಡೆಸಲಿದ್ದು, ಅದಕ್ಕಾಗಿ ಅಗತ್ಯ ಅನುಮತಿಯನ್ನು ಈಗಾಗಲೇ ಪಡೆಯಲಾಗಿದೆ' ಎಂದು ಪ್ರಸ್ತಾವದಲ್ಲಿ ವಿವರಿಸಲಾಗಿದೆ.

ಸಭೆಯಲ್ಲಿ ಕಲಬುರಗಿ ಜಿಲ್ಲಾಡಳಿತದ ಅಧಿಕಾರಿಗಳಿದ್ದರು. ಆರ್‌ಎಸ್‌ಎಸ್ ಪರ ಕಾಡ್ಲೂರ್ ಸತ್ಯನಾರಾಯಣಾಚಾರ್ಯ ಭಾಗವಹಿಸಿದ್ದರು.

2025ರ ಪ್ರಕಾಶಮಾನ ಚಂದಿರ ಗೋಚರ

ಬೆಂಗಳೂರು: ಪ್ರಸಕ್ತ ವರ್ಷದ ಅತಿದೊಡ್ಡ ಹಾಗೂ ಅತ್ಯಂತ ಪ್ರಕಾಶಮಾನವಾದ ಚಂದ್ರ (ಸೂಪರ್ ಮೂನ್) ಬುಧವಾರ ಗೋಚರಿಸಿದೆ. 'ನವೆಂಬರ್ ಸೂಪರ್ ಮೂನ್' ಎಂದು ಕರೆಯಲಾಗುವ ಈ ಚಂದ್ರ, ಸಾಮಾನ್ಯ ಹುಣ್ಣಿಮೆಯ ಚಂದ್ರನಿಗಿಂತಲೂ ಭೂಮಿಗೆ ಬರೋಬ್ಬರಿ 17,000 ಮೈಲಿಗಳಷ್ಟು ಸಮೀಪದಲ್ಲಿದ್ದದ್ದು ವಿಶೇಷ.

2025ನೇ ಸಾಲಿನಲ್ಲಿ ಕಾಣಿಸಿಕೊಳ್ಳುವ ಮೂರು ಸೂಪರ್ ಮೂನ್‌ಗಳ ಪೈಕಿ ಇದು ಎರಡನೆಯದ್ದಾಗಿದ್ದು, ಸಾಮಾನ್ಯ ಹುಣ್ಣಿಮೆ ಚಂದ್ರನಿಗಿಂತ ಈ ಸೂಪರ್ ಮೂನ್ ಶೇಕಡ 14ರಷ್ಟು ದೊಡ್ಡದಾಗಿ ಹಾಗೂ ಶೇ 30ರಷ್ಟು ಹೆಚ್ಚು ಪ್ರಕಾಶಮಾನವಾಗಿ ಕಾಣಿಸಿಕೊಂಡಿದೆ.

ಭೂಮಿಯಿಂದ 3,57,000 ಕಿ.ಮೀ.ದೂರದಲ್ಲಿ ಅಂದರೆ ಅತ್ಯಂತ ಸಮೀಪದಲ್ಲಿ ಚಂದ್ರ ಗೋಚರಿಸಿರುವ ಕಾರಣ, ಇದು ಅತ್ಯಂತ ದೊಡ್ಡದಾಗಿ ಹಾಗೂ ಪ್ರಕಾಶಮಾನವಾಗಿ ಕಾಣಿಸಿಕೊಂಡಿದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಸಂಜೆ 6.49ರ ಸುಮಾರಿಗೆ ದೇಶದ ವಿವಿಧ ಭಾಗಗಳಲ್ಲಿ ಜನರು ಸೂಪರ್ ಮೂನ್ ವೀಕ್ಷಿಸಲು ಸಾಧ್ಯವಾಗಿದ್ದು, ಹಲವರು 'ಅತ್ಯಂತ ಪ್ರಕಾಶಮಾನವಾದ ಸೂಪರ್ ಮೂನ್' ಎಂಬ ಶೀರ್ಷಿಕೆಗಳೊಂದಿಗೆ ಫೋಟೊಗಳನ್ನು ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ಮಂಗಳೂರಿನಲ್ಲಿ ಬುಧವಾರ ಗೋಚರಿಸಿದ ಸೂಪರ್‌ಮೂನ್
ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ರೈಲು ಡಿಕ್ಕಿ: ಆರು ಸಾವು

ಲಖನೌ: ರೈಲು ಹರಿದು 6 ಮಹಿಳೆಯರು ಮೃತಪಟ್ಟಿರುವ ಘಟನೆ ಉತ್ತರಪ್ರದೇಶದ ಮಿರ್ಜಾಪುರ ಜಿಲ್ಲೆಯಲ್ಲಿ ಬುಧವಾರ ಮುಂಜಾನೆ ನಡೆದಿದೆ.

'ಕಾರ್ತಿಕ ಪೌರ್ಣಿಮೆ ಅಂಗವಾಗಿ ಗಂಗಾ ಸ್ನಾನ ಮಾಡಲು ತೆರಳುತ್ತಿದ್ದ ಮಹಿಳೆಯರು ಛುನಾರ್ ರೈಲು ನಿಲ್ದಾಣದಲ್ಲಿ ಹಳಿ ದಾಟುತ್ತಿದ್ದ ವೇಳೆ ಅವರ ಮೇಲೆ ರೈಲು ಹರಿದಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಾವಿನ ಸಂಖ್ಯೆ 11ಕ್ಕೇರಿಕೆ

ಬಿಲಾಸ್‌ಪುರ (ಛತ್ತೀಸಗಢ) (ಪಿಟಿಐ): ಮಂಗಳವಾರ ಸಂಭವಿಸಿದ ರೈಲು ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ 11ಕ್ಕೇರಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಮೃತಪಟ್ಟವರಲ್ಲಿ 6 ಮಹಿಳೆಯರು ಸೇರಿದ್ದಾರೆ ಎಂದು ಅವರು ಹೇಳಿದ್ದು, 2 ವರ್ಷದ ಬಾಲಕ, 9 ಮಹಿಳೆಯರು ಸೇರಿದಂತೆ 20 ಜನರು ಗಾಯಗೊಂಡಿದ್ದಾರೆ ಎಂದಿದ್ದಾರೆ.

'ಹರಿಯಾಣ: 25 ಲಕ್ಷ ಮತಗಳ ಕಳವು'

ಒಂದನೇ ಪುಟದಿಂದ...

'ಬಿಜೆಪಿ ಮತ್ತು ಚುನಾವಣಾ ಆಯೋಗ ಜತೆಗೂಡಿ ಭಾರತದ ಪ್ರಜಾಪ್ರಭುತ್ವವನ್ನು ಕೊಲ್ಲಲು ವ್ಯವಸ್ಥಿತ ಮತ ಕಳವು ವಿಧಾನವನ್ನು ಅಭಿವೃದ್ಧಿಪಡಿಸಿವೆ. ಇದೀಗ ಬಿಹಾರ ಚುನಾವಣೆಯಲ್ಲೂ ಆಯೋಗ ಇದೇ ಕಾರ್ಯತಂತ್ರ ಅನುಸರಿಸುತ್ತಿದೆ' ಎಂದು ಅವರು ಆರೋಪ ಮಾಡಿದರು.

ಬಿಹಾರ ವಿಧಾನಸಭಾ ಚುನಾವಣೆಯ ಮೊದಲ ಹಂತದ ಮತದಾನದ ಹಿಂದಿನ ದಿನವಾದ ಬುಧವಾರ 'ಇಂದಿರಾ ಭವನ'ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಾನು ಶೇ 100ರಷ್ಟು ಪುರಾವೆಗಳೊಂದಿಗೆ ಆಯೋಗ ಮತ್ತು ದೇಶದ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಪ್ರಶ್ನಿಸುತ್ತಿದ್ದೇನೆ' ಎಂದರು. ಅದಕ್ಕೆ ಪೂರಕವಾಗಿ ಹಲವು ಅಂಕಿಅಂಶಗಳು, ದಾಖಲೆಗಳು ಮತ್ತು ಚಿತ್ರಗಳನ್ನು ಅವರು ಪರದೆ ಮೇಲೆ ಪ್ರದರ್ಶಿಸಿದರು.

'ಕಳೆದ ವರ್ಷ ನಡೆದ ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಈ ವ್ಯವಸ್ಥಿತ ವಿಧಾನಗಳ ಮೂಲಕವೇ ಫಲಿತಾಂಶವನ್ನು ಕದಿಯಲಾಗಿದೆ. ಇದಕ್ಕೆ ಮುಖ್ಯ ಚುನಾವಣಾ ಆಯುಕ್ತ ಮತ್ತು ಇಬ್ಬರು ಚುನಾವಣಾ ಆಯುಕ್ತರು ಕಾರಣ. ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ಪಾಲುದಾರರಾಗಿದ್ದು, ದೇಶದ ಪ್ರಜಾಪ್ರಭುತ್ವದ ಅಡಿಪಾಯವನ್ನು ನಾಶ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

'ಹರಿಯಾಣದಲ್ಲಿ 5.21 ಲಕ್ಷ ನಕಲಿ ಮತದಾರರು, 93,174 ಅಮಾನ್ಯ ಮತದಾರರು ಮತ್ತು 19.26 ಲಕ್ಷ 'ಬಲ್ಕ್' ಮತದಾರರ ಮೂಲಕ 25 ಲಕ್ಷಕ್ಕೂ ಹೆಚ್ಚು ಮತಗಳನ್ನು ಕಳವು ಮಾಡಲಾಗಿದೆ' ಎಂದು ಅವರು ಅಂಕಿಅಂಶ ಸಹಿತ ವಿವರಿಸಿದರು.

ರಾಹುಲ್ ಗಾಂಧಿ ಮಾಡಿದ ಆರೋಪಗಳೇನು?

- ಹರಿಯಾಣದಲ್ಲಿ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸುತ್ತಿತ್ತು. ಅದನ್ನು ಸೋಲಾಗಿ ಪರಿವರ್ತಿಸಲು 'ಆಪರೇಷನ್ ಸರ್ಕಾರ್ ಚೋರಿ' ಪ್ರಾರಂಭವಾಯಿತು. ಬಿಜೆಪಿಯ ಗೆಲುವನ್ನು ಖಚಿತಪಡಿಸಲು ಮುಖ್ಯ ಚುನಾವಣಾ ಆಯುಕ್ತ (ಸಿಇಸಿ), ಇಬ್ಬರು ಚುನಾವಣಾ ಆಯುಕ್ತರು ಅದರ ಜತೆಗೆ ಕೈಜೋಡಿಸಿದ್ದರು
- ಹರಿಯಾಣ ರಾಜ್ಯದಲ್ಲಿ ಮತ ಕಳವಿಗಾಗಿ 25,41,144 ನಕಲಿ ನೋಂದಣಿಗಳನ್ನು ಮಾಡಲಾಗಿತ್ತು. ಅಂದರೆ ಪ್ರತಿ ಎಂಟು ಮತದಾರರಲ್ಲಿ ಒಬ್ಬರು ನಕಲಿ ಆಗಿದ್ದರು. ಇದರ ಪರಿಣಾಮ ಕಾಂಗ್ರೆಸ್ ಎಂಟು ಕ್ಷೇತ್ರಗಳಲ್ಲಿ ಒಟ್ಟು 22,779 ಮತಗಳಿಂದ ಸೋತಿದೆ
- ಮಹಿಳೆಯೊಬ್ಬರ ಭಾವಚಿತ್ರ ಎರಡು ಮತಗಟ್ಟೆಗಳ ಮತದಾರರ ಪಟ್ಟಿಯಲ್ಲಿ 223 ಬಾರಿ ಹಾಗೂ ಮತ್ತೊಬ್ಬ ಮಹಿಳೆಯ ಫೋಟೊ 10 ಮತಗಟ್ಟೆಗಳ ಮತದಾರರ ಪಟ್ಟಿಯಲ್ಲಿ 100 ಬಾರಿ ಕಂಡು ಬಂದಿದೆ. ಬಿಜೆಪಿಯ ಜಿಲ್ಲಾ ಘಟಕದ ಉಪಾಧ್ಯಕ್ಷರೊಬ್ಬರ ಮನೆ ವಿಳಾಸದಲ್ಲಿ 66 ಮಂದಿ, ಗುರುತುಸಿಗದ ಮನೆಯ ವಿಳಾಸದಲ್ಲಿ 501 ಮತದಾರರು ನೋಂದಾಯಿಸಿದ್ದಾರೆ
- ಬಿಜೆಪಿ ಜತೆ ಗುರುತಿಸಿಕೊಂಡಿರುವ ಸಹಸ್ರಾರು ಜನರು ಉತ್ತರ ಪ್ರದೇಶ ಮತ್ತು ಹರಿಯಾಣ ಎರಡೂ ರಾಜ್ಯಗಳಲ್ಲೂ ಮತಚಲಾಯಿಸಿದ್ದಾರೆ
- ಈ ಮತಕಳವಿನ ದತ್ತಾಂಶ ಕಂಡು ನನಗೆ ಆಘಾತವಾಯಿತು. ಮೊದಲಿಗೆ ನಂಬಲು ಆಗಲಿಲ್ಲ. ಹೀಗಾಗಿ ಪುನಃ ಪರಿಶೀಲಿಸಲು ತಂಡಕ್ಕೆ ಸೂಚಿಸಿದ್ದೆ. ಹರಿಯಾಣದಲ್ಲಿ ಕಾಂಗ್ರೆಸ್‌ನ ಗೆಲುವನ್ನು ಸೋಲಾಗಿ ಪರಿವರ್ತಿಸುವ ಯೋಜನೆ ಜಾರಿಯಲ್ಲಿತ್ತು ಎಂಬುದು ಈಗ ಸ್ಪಷ್ಟವಾಗಿದೆ. 'ಜೆನ್–ಝಿ'ಗಳ ಭವಿಷ್ಯವನ್ನು ಕದಿಯಲಾಗುತ್ತಿದೆ. ಇದನ್ನು ಯುವಜನರು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು
- ಹರಿಯಾಣದ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಅವರು ಮತ ಎಣಿಕೆಗೂ ಎರಡು ದಿನ ಮೊದಲು ಬಿಜೆಪಿ ಗೆಲ್ಲುತ್ತದೆ ಮತ್ತು ನಮ್ಮಲ್ಲಿ ಒಂದು ವ್ಯವಸ್ಥೆ ಜಾರಿಯಲ್ಲಿದೆ ಎಂದು ಹೇಳಿದ್ದರು (ಈ ಕುರಿತು ವಿಡಿಯೊವನ್ನು ಸುದ್ದಿಗೋಷ್ಠಿಯಲ್ಲಿ ಪ್ರದರ್ಶಿಸಲಾಯಿತು). ಹಾಗಾದರೆ ಅದು ಯಾವ ವ್ಯವಸ್ಥೆ? ಮತಕಳವು ಮಾಡುವ ವ್ಯವಸ್ಥೆಯೇ?
- ಕರ್ನಾಟಕದ ಮಹದೇವಪುರ, ಆಳಂದದಲ್ಲಿ ನಡೆದ ಮತಕಳವನ್ನು ಗಮನಿಸಿದ್ದೇವೆ. ಅದು ಈ ಎರಡು ಕ್ಷೇತ್ರಗಳಿಗಷ್ಟೇ ಸೀಮಿತವಾಗಿಲ್ಲ. ವಿವಿಧ ರಾಜ್ಯಗಳು ಮತ್ತು ರಾಷ್ಟ್ರ ಮಟ್ಟದಲ್ಲಿ ವ್ಯಾಪಿಸಿದೆ ಎಂಬ ಶಂಕೆಯಿತ್ತು. ಅದಕ್ಕೀಗ ದೊರೆತಿರುವ ನಿದರ್ಶನ ಪುಷ್ಟಿ ನೀಡುತ್ತವೆ

> **ಜನ ಬೆಂಬಲ ದೊರೆಯುವುದಿಲ್ಲ ಎಂಬುದು ಖಚಿತವಾಗುತ್ತಿದ್ದಂತೆ ಮೋದಿ– ಅಮಿತ್ ಶಾ ಜೋಡಿ ಮತದಾರರ ಪಟ್ಟಿಯನ್ನೇ ಬದಲಿಸುತ್ತದೆ**
> **ಜೈರಾಮ್ ರಮೇಶ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ)

> **ಎನ್‌ಡಿಎ ಎಲ್ಲವನ್ನೂ ನಾಶ ಮಾಡುತ್ತಿದೆ. ಭವಿಷ್ಯದಲ್ಲಿ ಚುನಾವಣೆ ಇರುತ್ತದೆಯೋ ಇಲ್ಲವೋ ಗೊತ್ತಿಲ್ಲ. ನೀವೆಲ್ಲ ಏಕೆ ಮೌನವಾಗಿದ್ದೀರಿ. ಅವರನ್ನು ಅಧಿಕಾರದಿಂದ ಕಿತ್ತೆಸೆಯಿರಿ**
> **ಪ್ರಿಯಾಂಕಾ ಗಾಂಧಿ ವಾದ್ರಾ,** ಸಂಸದೆ

ಚುನಾವಣಾ ಆಯೋಗವು ಈ ನಕಲಿ ಮತದಾರರನ್ನು ಪಟ್ಟಿಯಿಂದ ಏಕೆ ತೆಗೆದುಹಾಕುತ್ತಿಲ್ಲ ಎಂದು ಪ್ರಶ್ನಿಸಿದ ಅವರು, 'ಅವರಿಗೆ ನ್ಯಾಯಯುತ ಚುನಾವಣೆಯೇ ಬೇಕಿಲ್ಲ' ಎಂದು ಕಿಡಿಕಾರಿದರು.

ಮತದಾರರ ಪಟ್ಟಿಯು ಕೊನೆ ಗಳಿಗೆಯಲ್ಲಿ ರಾಜಕೀಯ ಪಕ್ಷಗಳಿಗೆ ದೊರೆಯುತ್ತದೆ. ಆ ಸಂದರ್ಭದಲ್ಲಿ ಮತಕಳವನ್ನು ಪತ್ತೆ ಹಚ್ಚುತ್ತಾ ಸಮಯ ವ್ಯಯ ಮಾಡುವ ಕಾರ್ಯವನ್ನು ಯಾವ ಪಕ್ಷಗಳೂ ಮಾಡುವುದಿಲ್ಲ ಎಂದು ಅವರು ಪ್ರತಿಕ್ರಿಯಿಸಿದರು.

'ಹರಿಯಾಣ ಚುನಾವಣೆಗೆ ಸಂಬಂಧಿಸಿದಂತೆ ನಡೆದ ಎಲ್ಲ ಸಮೀಕ್ಷೆಗಳು ಕಾಂಗ್ರೆಸ್ ಗೆಲುವು ಸಾಧಿಸುತ್ತದೆ ಎಂದು ಹೇಳಿದ್ದವು. ಅದಕ್ಕೆ ಪೂರಕವಾಗಿ ಹರಿಯಾಣದಲ್ಲಿ ಮೊದಲ ಬಾರಿಗೆ ಅಂಚೆ ಮತಗಳು ಕಾಂಗ್ರೆಸ್‌ಗೆ ಹೆಚ್ಚಾಗಿ ಚಲಾವಣೆ ಆಗಿದ್ದವು. ಅಂಚೆ ಮತಪತ್ರಗಳ ವಿಚಾರದಲ್ಲಿ ಕಾಂಗ್ರೆಸ್ 73 ಕ್ಷೇತ್ರಗಳಲ್ಲಿ ಹೆಚ್ಚು ಮತಗಳನ್ನು ಪಡೆದಿದ್ದರೆ, ಬಿಜೆಪಿ 17 ಸ್ಥಾನಗಳಲ್ಲಿ ಹೆಚ್ಚು ಮತಗಳನ್ನು ಪಡೆದುಕೊಂಡಿತ್ತು' ಎಂದು ಅವರು ವಿವರಿಸಿದರು.

ಹರಿಯಾಣ ವಿಧಾನಸಭೆಯ 90 ಕ್ಷೇತ್ರಗಳಿಗೆ 2024ರಲ್ಲಿ ಚುನಾವಣೆ ನಡೆದಿತ್ತು. ಬಿಜೆಪಿ 48 ಕ್ಷೇತ್ರಗಳಲ್ಲಿ, ಕಾಂಗ್ರೆಸ್ 37ರಲ್ಲಿ, ಐಎನ್‌ಎಲ್‌ಡಿ ಎರಡರಲ್ಲಿ ಗೆದ್ದಿದ್ದವು. ಮೂವರು ಪಕ್ಷೇತರರು ಜಯಸಾಧಿಸಿದ್ದರು.

ಆಧಾರರಹಿತ ಆರೋಪ: ಆಯೋಗ

ನವದೆಹಲಿ(ಪಿಟಿಐ): 'ಮತ ಕಳವಿಗೆ ಸಂಬಂಧಿಸಿದಂತೆ ರಾಹುಲ್ ಗಾಂಧಿ ಮಾಡಿರುವ ಆರೋಪಗಳು ಆಧಾರ ರಹಿತ. ಹರಿಯಾಣದಲ್ಲಿ ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣಾ ಅರ್ಜಿಗಳು ಸಲ್ಲಿಕೆಯಾಗಿಲ್ಲ' ಎಂದು ಚುನಾವಣಾ ಆಯೋಗದ ಮೂಲಗಳು ಬುಧವಾರ ತಿಳಿಸಿವೆ.

'ಮತದಾರರ ಪಟ್ಟಿಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಹೆಸರುಗಳು ಸೇರ್ಪಡೆಯಾಗಿದ್ದರೆ, ಪಟ್ಟಿ ಪರಿಷ್ಕರಣೆ ವೇಳೆ ಕಾಂಗ್ರೆಸ್‌ನ ಬೂತ್ ಮಟ್ಟದ ಏಜೆಂಟರು ಏಕೆ ಆಕ್ಷೇಪಣೆಗಳನ್ನು ಸಲ್ಲಿಸಲಿಲ್ಲ' ಎಂದು ಆಯೋಗದ ಹಿರಿಯ ಅಧಿಕಾರಿಯೊಬ್ಬರು ಪ್ರಶ್ನಿಸಿದ್ದಾರೆ.

ಮತದಾನದ ಮೇಲ್ವಿಚಾರಣೆಗೆ ಮತ್ತು ಅಕ್ರಮಗಳನ್ನು ಗುರುತಿಸಲು ರಾಜಕೀಯ ಪಕ್ಷಗಳು ಬೂತ್ ಮಟ್ಟದ ಏಜೆಂಟ್‌ಗಳನ್ನು ನಿಯೋಜಿಸುತ್ತವೆ.

ಆರೋಪದಲ್ಲಿ ಹುರುಳಿಲ್ಲ: ಕಿರಣ್ ರಿಜಿಜು

ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಮತಕಳವು ಆಗಿದೆ ಎಂಬುದಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಾಡಿರುವ ಆರೋಪದಲ್ಲಿ ಹುರುಳಿಲ್ಲ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಪ್ರತಿಕ್ರಿಯಿಸಿದರು.

'ರಾಹುಲ್ ಅವರು ತನ್ನ ವೈಫಲ್ಯಗಳನ್ನು ಮರೆ ಮಾಚಲು ಚುನಾವಣಾ ಆಯೋಗದ ಮೇಲೆ ಸುಳ್ಳು ಆರೋಪಗಳನ್ನು ಮಾಡುವ ಮೂಲಕ ದೇಶವನ್ನೇ ಅವಮಾನಿಸುತ್ತಿದ್ದಾರೆ' ಎಂದು ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಭಾರತ ವಿರೋಧಿ ಶಕ್ತಿಗಳ ಜತೆ ಸೇರಿಕೊಂಡಿರುವ ಅವರು, ದೇಶಕ್ಕೆ ಕಳಂಕ ತರಲು ಯತ್ನಿಸುತ್ತಿದ್ದಾರೆ' ಎಂದು ದೂರಿದರು.

'ಚುನಾವಣಾ ಸಮಯದಲ್ಲಿ ಜನರನ್ನು ಭೇಟಿ ಮಾಡದೆ, ವಿದೇಶಕ್ಕೆ ಹಾರುವ ರಾಹುಲ್, ಪಕ್ಷ ಸೋತ ಬಳಿಕ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಾರೆ' ಎಂದು ಸಚಿವರು ಹೇಳಿದರು.

'ಮತದಾನದಲ್ಲಿ ಯಾವುದೇ ಅಕ್ರಮ ಕಂಡುಬಂದರೆ, ಅದನ್ನು ಚುನಾವಣಾ ಆಯೋಗ ಅಥವಾ ನ್ಯಾಯಾಲಯದಲ್ಲಿ ಪ್ರಶ್ನಿಸಬೇಕು. ಅದನ್ನು ಅವರು ಎಂದಿಗೂ ಮಾಡಿಲ್ಲ' ಎಂದು ಅವರು ದೂರಿದರು.

'ಪ್ರಜಾತಂತ್ರದ ಕತ್ತು ಹಿಸುಕುವ ಆಯೋಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹರಿಯಾಣ ರಾಜ್ಯದ ಚುನಾವಣಾ ಫಲಿತಾಂಶವನ್ನು ಹೇಗೆ ಬುಡಮೇಲು ಮಾಡಿದ್ದಾರೆ ಎಂಬ ಬಗ್ಗೆ ಲೋಕಸಭೆ ವಿಪಕ್ಷದ ನಾಯಕ ರಾಹುಲ್ ಗಾಂಧಿ ದಾಖಲೆ ಸಹಿತ ಜನರ ಮುಂದಿಟ್ಟಿದ್ದಾರೆ. ಪ್ರಜಾತಂತ್ರದ ರಕ್ಷಣೆ ಮಾಡಬೇಕಿರುವ ಚುನಾವಣಾ ಆಯೋಗವೇ ಕೇಂದ್ರ ಸರ್ಕಾರದ ಜತೆಗೂಡಿ ಪ್ರಜಾತಂತ್ರದ ಕತ್ತು ಹಿಸುಕುತ್ತಿದೆ ಎಂಬುದಕ್ಕೆ ಈ ದಾಖಲೆಗಳು ಸಾಕ್ಷಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ದೇಶದ ಚುನಾವಣಾ ವ್ಯವಸ್ಥೆಯಲ್ಲಿ ನಡೆಯುತ್ತಿರುವ ವ್ಯವಸ್ಥಿತ ಅಕ್ರಮಗಳ ಕರಾಳ ಮುಖವನ್ನು ರಾಹುಲ್ ಮತ್ತೊಮ್ಮೆ ಬಹಿರಂಗಪಡಿಸಿದ್ದಾರೆ. ಕರ್ನಾಟಕದ ಮಹದೇವಪುರ, ನಂತರ ಆಳಂದ ವಿಧಾನಸಭಾ ಮತ ಕಳವು ಪ್ರಕರಣಗಳನ್ನು ಬಯಲು ಮಾಡಿದ್ದರು. ಮಹಾರಾಷ್ಟ್ರ ಮತ್ತು ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಭಾರತೀಯರ ಹೆಸರುಗಳನ್ನಷ್ಟೇ ಬಳಸಿ ನಕಲಿ ಮತದಾರರನ್ನು ಸೃಷ್ಟಿಸುತ್ತಿದ್ದ ಬಿಜೆಪಿ ಮತ್ತು ಚುನಾವಣಾ ಆಯೋಗ, ಹರಿಯಾಣದಲ್ಲಿ ಮತ್ತೊಂದು ಹೆಜ್ಜೆ ಮುಂದೆ ಹೋಗಿ ಬ್ರೆಜಿಲ್‌ನ ರೂಪದರ್ಶಿಯ ಗುರುತನ್ನೂ ತನ್ನ ಮತ ಕಳವಿಗೆ ಬಳಕೆ ಮಾಡಿಕೊಂಡಿದೆ. ಈ ಬಾರಿ ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ಮಾನ ತೆಗೆದಿದ್ದಾರೆ. 25 ಲಕ್ಷಕ್ಕೂ ಅಧಿಕ ಮತ ಕಳವು ನಡೆದಿದೆ. ಮತ ಚಲಾಯಿಸಿದ ಪ್ರತಿ ಎಂಟು ಜನರಲ್ಲಿ ಒಂದು ನಕಲಿ ಮತ ಎನ್ನುವುದು ಸ್ಪಷ್ಟವಾಗಿದೆ' ಎಂದು ದೂರಿದ್ದಾರೆ.

'ದೇಶದ ಬಹುತೇಕ ಚುನಾವಣಾ ಸಮೀಕ್ಷೆಗಳು ಹರಿಯಾಣದಲ್ಲಿ ಬಿಜೆಪಿ ಭಾರಿ ಸೋಲು ಅನುಭವಿಸಲಿದೆ ಎಂದು ಹೇಳಿದ್ದವು. ಈ ಬಾರಿ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಲೇಬೇಕು ಎಂಬ ದೃಢ ಸಂಕಲ್ಪವನ್ನು ಜನರೂ ಮಾಡಿದ್ದರು. ಆದರೂ, ಬಿಜೆಪಿ ಹೇಗೆ ಬಹುಮತ ಪಡೆದು ಸರ್ಕಾರ ರಚಿಸಿತು ಎನ್ನುವ ಅನುಮಾನಕ್ಕೆ ರಾಹುಲ್ ಗಾಂಧಿ ಉತ್ತರ ನೀಡಿದ್ದಾರೆ. ತಮ್ಮ ಮೇಲಿನ ಆರೋಪಗಳಿಗೆ ಹಾರಿಕೆ ಉತ್ತರ ನೀಡಿ ಪಲಾಯನ ಮಾಡುತ್ತಿದ್ದ, ಆರೋಪ ಮಾಡಿದವರನ್ನೇ ಪ್ರಮಾಣ ಮಾಡಿ ಎಂದು ಅಸಂಬದ್ಧವಾಗಿ ಮಾತನಾಡುತ್ತಿದ್ದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಈ ಬಾರಿಯಾದರೂ ತಮ್ಮ ಮಾಲೀಕರ ರಕ್ಷಣೆಯ ದುಸ್ಸಾಹಸಕ್ಕೆ ಕೈಹಾಕದೆ ಸತ್ಯ ಒಪ್ಪಿಕೊಂಡು, ಮಾಡಿದ ಪಾಪಗಳಿಗೆ ಕಾನೂನಿನ ಮೂಲಕ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು' ಎಂದಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಜ್ಞಾನದ ಏಕೈಕ ಉದ್ದೇಶ, ಮನಸ್ಸಿಗೆ ಶಕ್ತಿ ನೀಡುವುದು ಮತ್ತು ಮನಸ್ಸನ್ನು ಶಿಸ್ತಿಗೆ ಒಳಪಡಿಸುವುದು.

–ಸ್ವಾಮಿ ವಿವೇಕಾನಂದ

ಸಂಪಾದಕೀಯ

ಕಬ್ಬಿನ ದರ ಹೆಚ್ಚಳಕ್ಕೆ ರೈತರ ಪಟ್ಟು ಸರ್ಕಾರದ ಕಾಳಜಿ–ಸ್ಪಂದನ ಅಗತ್ಯ

ಕಬ್ಬಿನ ದರ ಹೆಚ್ಚಳಕ್ಕೆ ಆಗ್ರಹಿಸಿ ಬೆಳಗಾವಿಯಲ್ಲಿ ರೈತರು ನಡೆಸುತ್ತಿರುವ ಪ್ರತಿಭಟನೆ ಎರಡನೇ ವಾರಕ್ಕೆ ಕಾಲಿಟ್ಟಿದೆ. ರೈತರ ಪ್ರತಿಭಟನೆಗೆ ಸ್ಪಂದಿಸುವಲ್ಲಿ ಸರ್ಕಾರಗಳು ಅನುಸರಿಸುವ ವಿಳಂಬ ಧೋರಣೆ ಈ ಬಾರಿಯೂ ಮುಂದುವರಿದಿರುವುದು ಜನಪ್ರತಿನಿಧಿಗಳ ರೈತಕಾಳಜಿ ಮಾತುಗಳಿಗಷ್ಟೇ ಸೀಮಿತ ಎನ್ನುವುದಕ್ಕೆ ನಿದರ್ಶನದಂತಿದೆ. ಟನ್ ಕಬ್ಬಿಗೆ ₹3,500 ದರ ನೀಡಬೇಕೆನ್ನುವುದು ರೈತರ ಆಗ್ರಹ. ಇಂಧನ, ರಸಗೊಬ್ಬರ, ಕೃಷಿ ಕಾರ್ಮಿಕರ ವೆಚ್ಚ ಸೇರಿದಂತೆ ಕಬ್ಬು ಬೆಳೆಗೆ ಆಗುತ್ತಿರುವ ವೆಚ್ಚ ಹೆಚ್ಚಾಗಿರುವುದರಿಂದ, ಸರ್ಕಾರವು ಕಬ್ಬಿಗೆ ಘೋಷಿಸಿರುವ ನ್ಯಾಯಸಮ್ಮತ ಮತ್ತು ಲಾಭದಾಯಕ ದರ (ಎಫ್‌ಆರ್‌ಪಿ) ಹೆಚ್ಚಾಗಬೇಕೆನ್ನುವುದು ಸಾಮಾನ್ಯ ಜ್ಞಾನ. ಜೀವನವಶ್ಯಕ ವಸ್ತುಗಳ ಬೆಲೆ ನಿಯಂತ್ರಣದ ಬಗ್ಗೆ ಸಾಮಾನ್ಯವಾಗಿ ತಲೆ ಕೆಡಿಸಿಕೊಳ್ಳದ ಸರ್ಕಾರಗಳು, ರೈತರಿಗೆ ಸಂಬಂಧಿಸಿದ ನಿರ್ಣಯಗಳನ್ನು ಕೈಗೊಳ್ಳುವಲ್ಲಿ ಚೌಕಾಸಿಗಿಳಿಯುತ್ತವೆ. ಈ ಚೌಕಾಸಿಗೆ ಜಗ್ಗದೆ ರೈತರು ತಮ್ಮ ಪ್ರತಿಭಟನೆಯನ್ನು ತೀವ್ರಗೊಳಿಸುತ್ತಿದ್ದಾರೆ. ವಿಜಯಪುರ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ, ರಾಯಚೂರು, ಗದಗ, ಹಾವೇರಿ, ರಾಯಚೂರು, ಕಲಬುರಗಿ, ಶಿವಮೊಗ್ಗ, ದಾವಣಗೆರೆ, ಮಂಡ್ಯ ಜಿಲ್ಲೆಗಳ ರೈತರೂ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದಾರೆ. ರೈತರ ಆಂದೋಲನಕ್ಕೆ ಜನಬೆಂಬಲವೂ ದೊರೆಯುತ್ತಿದೆ; ರಸ್ತೆ ತಡೆ, ಪಾದಯಾತ್ರೆ, ಉಪವಾಸ, ನಿರಶನ, ಬಂದ್, ಅರೆಬೆತ್ತಲೆ ಪ್ರತಿಭಟನೆ ಸೇರಿದಂತೆ ವಿವಿಧ ರೀತಿಯಲ್ಲಿ ರೈತರ ಆಂದೋಲನ ತೀವ್ರಗೊಳ್ಳುತ್ತಿದೆ. ಬೆಳಗಾವಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸ್ವಯಂಪ್ರೇರಿತ ಬಂದ್ ವಾತಾವರಣ ರೂಪುಗೊಂಡಿದೆ.

ಕಬ್ಬಿನ ದರ ಹೆಚ್ಚಿಸುವಂತೆ ಪ್ರತಿಭಟನೆ ನಡೆಸುತ್ತಿರುವ ರೈತರನ್ನು ಸರ್ಕಾರ ಸಹಾನುಭೂತಿಯಿಂದ ನಡೆಸಿಕೊಳ್ಳಬೇಕು; ಬೇಡಿಕೆ ಈಡೇರಿಕೆಗೆ ಪ್ರಾಮಾಣಿಕ ಪ್ರಯತ್ನ ನಡೆಸಬೇಕು.

ಟನ್‌ಗೆ ₹3,500ಕ್ಕಿಂತಲೂ ಒಂದು ರೂಪಾಯಿ ಕಡಿಮೆಯಾದರೂ ಒಪ್ಪುವುದಿಲ್ಲ ಎಂದು ಪಟ್ಟು ಹಿಡಿದಿರುವ ರೈತರು, ತಮ್ಮ ಒತ್ತಾಯ ಈಡೇರದೆ ಹೋದರೆ ಈ ವರ್ಷದ ಕಬ್ಬು ನುರಿಯುವ ಹಂಗಾಮು ಆರಂಭವಾಗಲು ಬಿಡುವುದಿಲ್ಲ ಎಂದು ಹೇಳಿದ್ದಾರೆ. ರೈತರ ಬೇಡಿಕೆ ನ್ಯಾಯಯುತವಾದುದು. ಮಹಾರಾಷ್ಟ್ರದಲ್ಲಿ ಕಬ್ಬಿಗೆ ₹3,410 ದರ ನೀಡಲಾಗುತ್ತಿದೆ. ಮಹಾರಾಷ್ಟ್ರದ ಬಿದ್ರಿಯ ದೂಧಗಂಗಾ– ವೇದಗಂಗಾ ಸಹಕಾರ ಸಕ್ಕರೆ ಕಾರ್ಖಾನೆಯು ಪ್ರಸಕ್ತ ಸಾಲಿನಲ್ಲಿ ಟನ್ ಕಬ್ಬಿಗೆ ₹3,614 ಕೊಡುವುದಾಗಿ ಹೇಳಿದೆ. ನೆರೆಯ ರಾಜ್ಯದ ಕಾರ್ಖಾನೆಗಳು ಹೆಚ್ಚಿನ ದರ ನೀಡುತ್ತಿರುವಾಗ ಇಲ್ಲಿನ ಕಾರ್ಖಾನೆಗಳು ₹3,010 ದರ ನೀಡುವುದನ್ನು ಒಪ್ಪಿಕೊಳ್ಳುವುದು ಹೇಗೆ? ಉಪ ಉತ್ಪನ್ನಗಳಲ್ಲಿ ಕಾರ್ಖಾನೆಗಳು ಹೆಚ್ಚಿನ ಲಾಭ ಗಳಿಸಿದರೆ, ರೈತರಿಗೆ ಹೆಚ್ಚಿನ ದರ ದೊರಕಿಸಿಕೊಡಲು ಸರ್ಕಾರ ಬದ್ಧವಾಗಿದೆ ಎಂದು ಸಕ್ಕರೆ, ಕಬ್ಬು ಅಭಿವೃದ್ಧಿ ಸಚಿವ ಶಿವಾನಂದ ಪಾಟೀಲ ಅವರು ಹೇಳಿದ್ದಾರೆ. ಬೆಲೆ ನಿರ್ಧಾರ ನಾಲ್ಕು ಗೋಡೆಗಳ ನಡುವೆ ನಡೆಯಬೇಕಾದ ಪ್ರಕ್ರಿಯೆಯಾಗಿದ್ದು, ರಸ್ತೆಯಲ್ಲಿ ಈ ಬಗ್ಗೆ ಚರ್ಚೆ ಬೇಡ ಎಂದೂ ಸಚಿವರು ಹೇಳಿದ್ದಾರೆ. ರೈತರು ಬೀದಿಗಿಳಿಯುವ ಸ್ಥಿತಿಯನ್ನು ಸರ್ಕಾರವೇ ತಂದಿದೆ ಎನ್ನುವುದನ್ನು ಸಚಿವರು ಮರೆಯಬಾರದು. ಪ್ರತಿಭಟನೆ ಆರಂಭವಾಗಿ ವಾರದ ನಂತರ ಸ್ಥಳಕ್ಕೆ ಭೇಟಿ ನೀಡಿರುವ ಕಾನೂನು ಸಚಿವ ಎಚ್‌.ಕೆ. ಪಾಟೀಲ ಬೆಳೆಗಾರರ ಅಹವಾಲು ಆಲಿಸಿರುವುದು ಬಿಟ್ಟರೆ, ಸರ್ಕಾರದ ಕಡೆಯಿಂದ ರೈತರಿಗೆ ಯಾವ ಸ್ಪಂದನವೂ ದೊರೆತಿಲ್ಲ. ರೈತರಿಗೆ ನ್ಯಾಯ ದೊರಕಿಸಿಕೊಡುವ ವಿಷಯವೂ ರಾಜಕೀಯ ಕೆಸರೆರಚಾಟದ ಸಂಗತಿಯಾಗಿರುವುದು ದುರದೃಷ್ಟಕರ. ರಾಜ್ಯ ಸರ್ಕಾರ ರೈತರ ಹಿತಾಸಕ್ತಿ ರಕ್ಷಿಸುತ್ತಿಲ್ಲ ಎಂದು ಬಿಜೆಪಿ ಆರೋಪಿಸುತ್ತಿದೆ. ಕಬ್ಬಿಗೆ ಬೆಲೆ ನಿಗದಿಪಡಿಸುವುದು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ವಿಚಾರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಸರ್ಕಾರ ಹಾಗೂ ವಿಪಕ್ಷಗಳ ಮಾತುಗಳು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ತರ್ಕದಂತೆ ಇವೆಯೇ ಹೊರತು, ರೈತರ ಹಿತಾಸಕ್ತಿ ಇಬ್ಬರಿಗೂ ಮುಖ್ಯವಾದಂತಿಲ್ಲ. 2013–14ರಲ್ಲಿ ಕಬ್ಬಿನ ಬೆಳೆಗಾರರು ಬೆಳಗಾವಿಯಲ್ಲಿ ಇದೇ ರೀತಿ ಪ್ರತಿಭಟನೆ ನಡೆಸಿದ್ದರು, ಓರ್ವ ರೈತ ವಿಷ ಸೇವಿಸಿ ಸಾವನ್ನಪ್ಪಿದ್ದರು. ಆಗ ಸಿದ್ದರಾಮಯ್ಯನವರೇ ಮುಖ್ಯಮಂತ್ರಿ ಆಗಿದ್ದರು. ಈಗಲೂ ಪ್ರತಿಭಟನಾನಿರತ ರೈತರೊಬ್ಬರು ವಿಷ ಸೇವಿಸಿ ಆಸ್ಪತ್ರೆ ಸೇರಿದ್ದಾರೆ. ದುರಂತ ಮರುಕಳಿಸದಂತೆ ನೋಡಿಕೊಳ್ಳಬೇಕಾದ ವಿವೇಕವನ್ನು ಸರ್ಕಾರ ಪ್ರದರ್ಶಿಸಬೇಕಾಗಿದೆ.

ಸಕ್ಕರೆ ಕಾರ್ಖಾನೆಗಳ ಮಾಲೀಕರಲ್ಲಿ ಬಹುತೇಕರು ರಾಜಕೀಯ ಪಕ್ಷಗಳ ಮುಖಂಡರೇ ಆಗಿದ್ದಾರೆ. ಆ ರಾಜಕೀಯ ಒತ್ತಡವನ್ನು ಮೀರಿ, ಸರ್ಕಾರ ತನ್ನ ರೈತಕಾಳಜಿಯನ್ನು ಸಾಬೀತುಪಡಿಸಬೇಕಾಗಿದೆ. ರೈತರ ಪ್ರತಿಭಟನೆಯನ್ನು ಕಬ್ಬಿನ ಬೆಲೆ ಏರಿಕೆಯ ರೂಪದಲ್ಲಷ್ಟೇ ಸರ್ಕಾರ ಲಘುವಾಗಿ ನೋಡಬಾರದು. ಕಬ್ಬು ಬೆಳೆಯುವ ಪ್ರದೇಶಗಳ ಆರ್ಥಿಕತೆಗೆ ಸಂಬಂಧಿಸಿದ ವಿಚಾರ ಇದಾಗಿದೆ. ರೈತರು ಸಬಲರಾಗದೆ ಹಾಗೂ ಗ್ರಾಮೀಣ ಆರ್ಥಿಕತೆ ಉತ್ತಮಗೊಳ್ಳದೆ ರಾಜ್ಯ ನೆಮ್ಮದಿಯಿಂದಿರುವುದು ಸಾಧ್ಯವಿಲ್ಲ. ಹಾಗಾಗಿ, ಕಬ್ಬು ಬೆಳೆಗಾರರಿಗೆ ಉತ್ತಮ ಬೆಲೆ ದೊರಕಿಸಿಕೊಡಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ನಡೆಸಬೇಕು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆಯ ಏರಿಳಿತ ಕಬ್ಬಿನ ದರದ ಮೇಲೆ ಪರಿಣಾಮ ಬೀರುತ್ತದೆ. ಆದರೆ, ಕಬ್ಬು ಅರೆಯುವ ಸಂದರ್ಭದಲ್ಲಿ ದೊರೆಯುವ ಉಪ ಉತ್ಪನ್ನಗಳೂ ಆದಾಯದ ಮೂಲವಾಗಿವೆ. ಈ ಆದಾಯದಲ್ಲಿ ಬೆಳೆಗಾರರಿಗೂ ಪಾಲು ದೊರಕಿಸುವ ದಿಸೆಯಲ್ಲಿ ಸರ್ಕಾರ ಪ್ರಯತ್ನ ನಡೆಸಬೇಕಾಗಿದೆ. ಪ್ರತಿಭಟನೆ ಮತ್ತಷ್ಟು ತೀವ್ರಗೊಳ್ಳುವ ಮೊದಲೇ, ಕಬ್ಬು ಬೆಳೆಗಾರರ ಬೇಡಿಕೆಯನ್ನು ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸಿ, ರೈತರ ಹಿತಾಸಕ್ತಿ ರಕ್ಷಣೆಗೆ ಸಾಧ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು; ರೈತರಿಗೆ ಸಕಾಲದಲ್ಲಿ ಹಣ ದೊರೆಯುವಂತೆ, ತೂಕದಲ್ಲಿ ಮೋಸ ಆಗದಂತೆ ನೋಡಿಕೊಳ್ಳಬೇಕು.

ತಕೈಚಿ: ಜಪಾನ್ ಶಕ್ತಿದೇವತೆ ಆದಾರೆ?

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಸನೇ ತಕೈಚಿ ಪ್ರಧಾನಿ ಆಗುವ ಮೂಲಕ ಜಪಾನ್‌ನಲ್ಲಿ ಮಹಿಳೆಯೊಬ್ಬರು ಮೊದಲ ಬಾರಿಗೆ ಉನ್ನತ ಅಧಿಕಾರ ಪಡೆದಂತಾಗಿದೆ. ತಕೈಚಿ ಅವಧಿಯಲ್ಲಿ ಭಾರತ ಹಾಗೂ ಅಮೆರಿಕದೊಂದಿಗಿನ ಜಪಾನ್ ಸಂಬಂಧ ಹೇಗಿರಲಿದೆ ಎನ್ನುವುದರ ಜೊತೆಗೆ, ಮಹಿಳೆಯರ ಹಿತಾಸಕ್ತಿ ದೃಷ್ಟಿಯಿಂದ ಅವರು ಕೈಗೊಳ್ಳುವ ನಿರ್ಧಾರಗಳು ಕುತೂಹಲ ಮೂಡಿಸಿವೆ

ಜಪಾನ್‌ನ ಮೊದಲ ಮಹಿಳಾ ಪ್ರಧಾನಿಯಾಗಿ ಸನೇ ತಕೈಚಿ ಅಧಿಕಾರ ವಹಿಸಿಕೊಂಡಿದ್ದಾರೆ. ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯ ಕಡಿಮೆ ಇರುವ ಜಪಾನ್‌ನಲ್ಲಿ ಪ್ರಧಾನಿಯಾಗಿ ತಕೈಚಿ ಅವರ ಆಯ್ಕೆ ಒಂದು ಮೈಲಿಗಲ್ಲು. ಪ್ರಧಾನಿಯಾದ ಬಳಿಕ ತಕೈಚಿ, 'ಎಲ್ಲರ ಭಾಗವಹಿಸುವಿಕೆ ಹಾಗೂ ಕೆಲಸದಿಂದ ಮಾತ್ರ ಆರ್ಥಿಕ ಪುನಶ್ಚೇತನ ಸಾಧ್ಯ. ಶಿಸ್ತು-ಕಠಿಣ ಪರಿಶ್ರಮದ ಮೂಲಕ ಪ್ರಗತಿ ಸಾಧ್ಯ' ಎಂದು ದೇಶದ ಜನರನ್ನು ಹುರಿದುಂಬಿಸುವ ಮಾತನ್ನಾಡಿದ್ದಾರೆ.

ಜಪಾನ್ ಎಂದಕೂಡಲೇ ಅಲ್ಲಿನ ವಿಶಿಷ್ಟ ಸಂಪ್ರದಾಯ, ಎರಡನೇ ಮಹಾಯುದ್ಧ, ಹಿರೋಶಿಮಾ ಮತ್ತು ನಾಗಸಾಕಿ ನಗರಗಳು, ಆ ಬಳಿಕದ ರಾಷ್ಟ್ರ ನಿರ್ಮಾಣ, ಆಧುನಿಕ ತಂತ್ರಜ್ಞಾನಗಳ ಆವಿಷ್ಕಾರ, ಪ್ರಕೃತಿ ವಿಕೋಪ, ಜನರನ್ನು ಕಾಡುತ್ತಿರುವ ಒಂಟಿತನ, ಹೀಗೆ ಹಲವು ಸಂಗತಿಗಳ ಜೊತೆಗೆ ಅಲ್ಲಿನ ಜನರ ದಣಿವರಿಯದ ದುಡಿಮೆ ನೆನಪಿಗೆ ಬರುತ್ತದೆ. ಎಲ್ಲ ದೃಷ್ಟಿಯಿಂದಲೂ ಹೊರಳು ದಾರಿ ಕ್ರಮಿಸಿ ಬಂದ ಜಪಾನ್, ಇದೀಗ ಮತ್ತೊಂದು ಮಹತ್ವದ ತಿರುವಿಗೆ ಬಂದು ನಿಂತಿದೆ.

ಜಗತ್ತಿನ ಐದು ಬಲಿಷ್ಠ ಆರ್ಥಿಕ ಶಕ್ತಿಗಳಲ್ಲಿ ಒಂದಾಗಿರುವ ಜಪಾನ್‌ನ ಆರ್ಥಿಕತೆ ಪ್ರಸ್ತುತ ಮಂದಗತಿಯಲ್ಲಿದೆ. ಹಣದುಬ್ಬರ, ವೃದ್ಧರ ಸಂಖ್ಯೆಯಲ್ಲಿ ಏರಿಕೆ, ದುಡಿಯುವ ವರ್ಗದ ಸಂಖ್ಯೆಯ ಇಳಿಕೆ, ಅತಿಯಾದ ದುಡಿಮೆ ಹಾಗೂ ಒಂಟಿತನ, ಅಲ್ಲಿನ ಜನರ ಮಾನಸಿಕತೆಯ ಮೇಲೆ ಪರಿಣಾಮ ಬೀರುತ್ತಿದೆ. ಕೆಲಸ ಹಾಗೂ ಜೀವನದ ನಡುವೆ ಸಮತೋಲನ ಸಾಧಿಸಲು ಜಪಾನೀಯರು ಹೆಣಗುತ್ತಿದ್ದಾರೆ. ವಿದೇಶಿ ಪ್ರವಾಸಿಗರು ಹಾಗೂ ಕಾರ್ಮಿಕರು ಹೆಚ್ಚುತ್ತಿರುವ ಕುರಿತು ಕಳವಳಗೊಂಡಿದ್ದಾರೆ. ರಾಷ್ಟ್ರದ ಆರ್ಥಿಕತೆಗೆ ಚೈತನ್ಯ ತುಂಬಬಲ್ಲ, ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲ ಗಟ್ಟಿಯಾದ ನಾಯಕತ್ವಕ್ಕೆ ಎದುರು ನೋಡುತ್ತಿದ್ದಾರೆ.

ಕಳೆದ 70 ವರ್ಷಗಳಲ್ಲಿ, ಹೆಚ್ಚಿನ ಅವಧಿಗೆ ಅಧಿಕಾರವನ್ನು ನಡೆಸಿದ್ದ ಲಿಬರಲ್ ಡೆಮಾಕ್ರಟಿಕ್ ಪಕ್ಷ ಇತ್ತೀಚಿನ ಚುನಾವಣೆಗಳಲ್ಲಿ ಸೋಲು ಕಂಡಿದೆ. ಶಿಗೇರು ಇಶಿಬಾ ಅವರು ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. ಕಳೆದ ಐದು ವರ್ಷಗಳಲ್ಲಿ ಜಪಾನ್ ನಾಲ್ಕು ಪ್ರಧಾನಿಗಳನ್ನು ಕಂಡಿದೆ. ಬಹುಮತವಿಲ್ಲದ ಸರ್ಕಾರವನ್ನು ನಿಭಾಯಿಸುತ್ತಲೇ, ಜಪಾನ್ ಎದುರಿಸುತ್ತಿರುವ ಸವಾಲುಗಳಿಗೆ ತಕೈಚಿ ಪರಿಹಾರ ಹುಡುಕಬೇಕಿದೆ.

ಸಂಪ್ರದಾಯವಾದಿ ನಿಲುವಿನ 64 ವರ್ಷದ ತಕೈಚಿ, 1993ರಲ್ಲಿ ಮೊದಲ ಬಾರಿಗೆ ಸಂಸತ್ತಿಗೆ ಆಯ್ಕೆಯಾದರು. ನಂತರದ ದಶಕದಲ್ಲಿ ಶಿಂಜೊ ಅಬೆ ಅವರ ಆಪ್ತವಲಯದಲ್ಲಿ ಗುರುತಿಸಿಕೊಂಡರು. 2011ರ ಭೀಕರ ಸುನಾಮಿ ಹಾಗೂ ಭೂಕಂಪದ ನಂತರ ಜಪಾನ್ ಆರ್ಥಿಕತೆ ಕಂಪನವನ್ನು ಕಂಡಿತು. 2012ರಲ್ಲಿ ಜಪಾನ್ ಪ್ರಧಾನಿಯಾದ ಶಿಂಜೊ ಅಬೆ, ಜಪಾನ್ ಆರ್ಥಿಕತೆಗೆ ಕಸುವು ತುಂಬಲು ಹಲವು ಯೋಜನೆಗಳನ್ನು ರೂಪಿಸಿದರು. ಅಮೆರಿಕ ಹಾಗೂ ಪಾಶ್ಚಿಮಾತ್ಯ ರಾಷ್ಟ್ರಗಳೊಂದಿಗೆ ಜಪಾನ್‌ನ ಸಂಬಂಧ ಬಲಪಡಿಸುವತ್ತ ಹೆಜ್ಜೆ ಇಟ್ಟರು. ಅಬೆ ಅವರು ರೂಪಿಸಿದ ಆರ್ಥಿಕತೆಯ ಮಾದರಿಯನ್ನು 'ಅಬೆನಾಮಿಕ್ಸ್' ಎಂದು ವಿಶ್ಲೇಷಿಸಲಾಯಿತು. ಆ ಯೋಜನೆಗಳಿಂದ ಕೊಂಚ ಮಟ್ಟಿಗೆ ಜಪಾನ್ ಆರ್ಥಿಕತೆಗೆ ಬಲಬಂತು.

2016ರಲ್ಲಿ ಡೊನಾಲ್ಡ್ ಟ್ರಂಪ್ ಅವರು ಮೊದಲ ಬಾರಿಗೆ ಅಮೆರಿಕದ ಅಧ್ಯಕ್ಷರಾದಾಗ, ಅವರಿಗೆ ಜಾಗತಿಕ ವೇದಿಕೆಯಲ್ಲಿ ಹೆಚ್ಚಿನ ಬೆಂಬಲವಿರಲಿಲ್ಲ. ಶಿಂಜೊ ಅಬೆ, ಅಮೆರಿಕ ಹಾಗೂ ಜಪಾನ್ ಬಾಂಧವ್ಯವನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಹೆಜ್ಜೆ ಇರಿಸಿದರು. ಟ್ರಂಪ್ ಅಧ್ಯಕ್ಷರಾಗಿದ್ದಲ್ಲಿ ಒಪ್ಪಿದರು. ಹೂಡಿಕೆಯನ್ನು ಆಕರ್ಷಿಸಲು ಅಮೆರಿಕದೊಂದಿಗೆ ಒಪ್ಪಂದ ಮಾಡಿಕೊಂಡರು. ಚೀನಾದ ಆಕ್ರಮಣಶೀಲತೆಗೆ ಗುರಿಯಾದ ಹಿಂದೆಯೇ ರಕ್ಷಣಾ ಒಪ್ಪಂದಕ್ಕೆ ಸಹಿ ಹಾಕಿದರು. ಚೀನಾದ ಓಟಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ರಚನೆಯಾದ ಅಮೆರಿಕ, ಜಪಾನ್, ಭಾರತ ಹಾಗೂ ಆಸ್ಟ್ರೇಲಿಯಾ ಒಳಗೊಂಡ 'ಕ್ವಾಡ್' ಸ್ಥಾಪನೆಯ ಹಿಂದೆಯೂ ಶಿಂಜೊ ಅವರ ಒತ್ತಾಸೆಯಿತ್ತು.

2012ರಿಂದ 2020ರವರೆಗೆ ಜಪಾನ್ ಪ್ರಧಾನಿಯಾಗಿ ಕಾರ್ಯ ನಿರ್ವಹಿಸಿದ ಶಿಂಜೊ ಅಬೆ, ಇತ್ತೀಚಿನ ವರ್ಷಗಳಲ್ಲಿ ಅತಿಹೆಚ್ಚಿನ ಅವಧಿಗೆ ಜಪಾನ್ ಪ್ರಧಾನಿ ಸ್ಥಾನ ಅಲಂಕರಿಸಿದ್ದ ನಾಯಕ ಎನಿಸಿಕೊಂಡರು. 2020ರಲ್ಲಿ ಅನಾರೋಗ್ಯದ ಕಾರಣದಿಂದ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. 2022ರಲ್ಲಿ ಚುನಾವಣಾ ಪ್ರಚಾರ ಸಂದರ್ಭದಲ್ಲಿ ಅವರನ್ನು ಹತ್ಯೆ ಮಾಡಲಾಯಿತು. ನಿರ್ದಿಷ್ಟ ಧಾರ್ಮಿಕ ಗುಂಪಿನೊಂದಿಗೆ ಗುರುತಿಸಿಕೊಂಡಿದ್ದ ಕಾರಣಕ್ಕೆ ಅವರ ಕೊಲೆ ನಡೆದಿದೆ ಎನ್ನಲಾಗಿದೆ.

ತಕೈಚಿ ಅವರ ರಾಜಕೀಯ ಮಾರ್ಗದರ್ಶಕರಾಗಿದ್ದ ಅಬೆ, ತಮ್ಮ ಅವಧಿಯಲ್ಲಿ ತಕೈಚಿ ಅವರನ್ನು ಪ್ರಮುಖ ಸಚಿವ ಸ್ಥಾನಗಳಿಗೆ ನೇಮಿಸಿದ್ದರು. ಆಂತರಿಕ ವ್ಯವಹಾರ ಮತ್ತು ಸಂವಹನ, ಲಿಂಗ ಸಮಾನತೆ ಹಾಗೂ ಸಾಮಾಜಿಕ ವ್ಯವಹಾರಗಳ ಖಾತೆ, ವಿಜ್ಞಾನ ಹಾಗೂ ತಂತ್ರಜ್ಞಾನದ ರಾಜ್ಯ ಸಚಿವ ಸ್ಥಾನ, ಹೀಗೆ ಕೆಲವು ನಿರ್ಣಾಯಕ ಜವಾಬ್ದಾರಿಗಳನ್ನು ತಕೈಚಿ ನಿರ್ವಹಿಸಿದ್ದರು. 2021ರಲ್ಲಿ ಲಿಬರಲ್ ಡೆಮಾಕ್ರಟಿಕ್ ಪಕ್ಷದ (ಎಲ್‌ಡಿಪಿ) ಅಧ್ಯಕ್ಷ ಸ್ಥಾನಕ್ಕೆ ತಕೈಚಿ ಸ್ಪರ್ಧಿಸಿದಾಗ, ಅಬೆ ಬೆಂಬಲಿಸಿದ್ದರು. ಹಾಗಾಗಿ ಎರಡನೆಯ ಸಾಲಿನ ನಾಯಕರಾಗಿದ್ದ ತಕೈಚಿ, ಅಬೆ ಅವರ ಬೆಂಬಲದಿಂದಾಗಿ ಪ್ರಮುಖ ಸ್ಪರ್ಧಿಯಾಗಿ ಮಾರ್ಪಟ್ಟರು.

ಸೈದ್ಧಾಂತಿಕ ಬದ್ಧತೆ, ಸೇನೆ, ಆರ್ಥಿಕತೆ ಹಾಗೂ ವಿದೇಶಾಂಗ ನೀತಿ ಕುರಿತ ಧೋರಣೆಯಲ್ಲಿ ಅಬೆ ಹಾಗೂ ತಕೈಚಿ ಅವರ ನಡುವೆ ಹೆಚ್ಚು ವ್ಯತ್ಯಾಸಗಳಿಲ್ಲ. ಅಬೆ ಅವರಂತೆಯೇ ತಕೈಚಿ ಕೂಡ ಎರಡನೇ ಮಹಾಯುದ್ಧದ ಸಮಯದಲ್ಲಿ ಜಪಾನಿನ ದೌರ್ಜನ್ಯಗಳನ್ನು ಉತ್ಪ್ರೇಕ್ಷಿಸಲಾಗಿದೆ ಎಂದು ಪ್ರತಿಪಾದಿಸುತ್ತಾ ಬಂದಿದ್ದಾರೆ. ಎರಡನೇ ಮಹಾಯುದ್ಧದಲ್ಲಿ ಭಾಗಿಯಾಗಿ ಮಡಿದವರ ಗೌರವಾರ್ಥ ಟೋಕಿಯೊದಲ್ಲಿ ಸ್ಥಾಪಿಸಿರುವ 'ಯಾಸುಕುನಿ' ಸ್ಮಾರಕಕ್ಕೆ ಅವರು ನಿಯಮಿತವಾಗಿ ಭೇಟಿ ನೀಡುತ್ತಾರೆ. ಚೀನಾದ ಆಕ್ರಮಣಶೀಲತೆಯನ್ನು ವಿರೋಧಿಸುವ, ತೈವಾನ್ ಕುರಿತು ಸಹಾನುಭೂತಿ ಹೊಂದಿರುವ ತಕೈಚಿ, ಜಪಾನ್ ಸಶಕ್ತ ಸೇನೆಯನ್ನು ಹೊಂದಬೇಕು ಎಂಬ ನಿಲುವು ಹೊಂದಿದ್ದಾರೆ.

ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ಹಾಗೂ ಆರೋಗ್ಯ ಭದ್ರತೆ ವಿಸ್ತರಿಸುವ ನಿಟ್ಟಿನಲ್ಲಿ ತಕೈಚಿ ಒಂದು ಹೆಜ್ಜೆ ಮುಂದಿರಿಸಬಹುದು ಎನ್ನಲಾಗುತ್ತಿದೆ. ಮಹಿಳೆಯೊಬ್ಬರು ಉನ್ನತ ಹುದ್ದೆಗೆ ಏರಿದಾಗ, ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಮಹಿಳೆಯರಿಗಾಗಿ ಅವರು ಏನೆಲ್ಲಾ ಯೋಜನೆ ರೂಪಿಸಬಹುದು ಎಂಬ ಕುತೂಹಲ ಸಾಮಾನ್ಯವಾಗಿ ಇರುತ್ತದೆ.

ತಕೈಚಿ ಅವರ ಅವಧಿಯಲ್ಲಿ ಅಮೆರಿಕದೊಂದಿಗಿನ ಜಪಾನ್ ಸಂಬಂಧ ಹೇಗಿರಲಿದೆ ಎಂಬ ಚರ್ಚೆಗಳು ನಡೆಯುತ್ತಿವೆ. ಟ್ರಂಪ್ ಅವರ ತೆರಿಗೆ ನೀತಿ, 'ಅಮೆರಿಕ ಮೊದಲು' ಧೋರಣೆಯಿಂದಾಗಿ, ಹಲವು ದೇಶಗಳ ಜೊತೆಗಿನ ಅಮೆರಿಕದ ದ್ವಿಪಕ್ಷೀಯ ಸಂಬಂಧದಲ್ಲಿ ವ್ಯತ್ಯಾಸ ಉಂಟಾಗಿದೆ. ಕಳೆದ ವಾರ ಆಸಿಯಾನ್ ಶೃಂಗಸಭೆಯಲ್ಲಿ ಭಾಗವಹಿಸಿದ್ದ ಟ್ರಂಪ್, ಜಪಾನಿಗೆ ಕೂಡ ಭೇಟಿಯಿತ್ತಿದ್ದಾರೆ. ಆ ಭೇಟಿಯ ವೇಳೆ ತಕೈಚಿ ಅವರ ಕುರಿತು ಪ್ರಶಂಸೆಯ ಮಾತುಗಳನ್ನಾಡಿರುವ ಟ್ರಂಪ್, ಉಭಯ ದೇಶಗಳ ನಡುವಿನ ಸಂಬಂಧ ಮುಂದಿನ ಹಂತಕ್ಕೆ ಹೋಗಲಿದೆ ಎಂದಿದ್ದಾರೆ. ಆಧುನಿಕ ತಂತ್ರಜ್ಞಾನಕ್ಕೆ ನಿರ್ಣಾಯಕ ಎನಿಸಿರುವ, ಕಾಂತೀಯ ಹಾಗೂ ವೇಗವರ್ಧಕ ಗುಣವುಳ್ಳ ವಿರಳ ಖನಿಜಗಳ ಮೇಲಿನ ಚೀನಾದ ಏಕಸ್ವಾಮ್ಯವನ್ನು ತಪ್ಪಿಸುವ ನಿಟ್ಟಿನಲ್ಲಿ ಜಪಾನ್ ಹಾಗೂ ಅಮೆರಿಕ ಒಪ್ಪಂದಕ್ಕೆ ಸಹಿ ಹಾಕಿವೆ. ಜಪಾನ್ ಹಿತಾಸಕ್ತಿಯ ದೃಷ್ಟಿಯಿಂದ ಇದೊಂದು ಪ್ರಮುಖ ಹೆಜ್ಜೆ.

ಟ್ರಂಪ್ ಅವರ ಇತ್ತೀಚಿನ ಏಷ್ಯಾ ಪ್ರವಾಸದ ವೇಳೆ ಮಲೇಷ್ಯಾ, ಬ್ರೆಜಿಲ್, ಥಾಯ್ಲೆಂಡ್, ಕಾಂಬೋಡಿಯಾ ಮತ್ತು ವಿಯೆಟ್ನಾಂ ದೇಶಗಳ ಜೊತೆಗೆ ಅಮೆರಿಕ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡಿದೆ. ಪರಮಾಣು ಚಾಲಿತ ಜಲಾಂತರ್ಗಾಮಿ ನೌಕೆಯನ್ನು ನಿರ್ಮಿಸಲು ದಕ್ಷಿಣ ಕೊರಿಯಾಕ್ಕೆ ಅಮೆರಿಕ ಅನುಮತಿ ನೀಡಿದೆ. ದಕ್ಷಿಣ ಕೊರಿಯಾದಲ್ಲಿ ಷಿ ಜಿನ್‌ಪಿಂಗ್ ಅವರನ್ನು ಮುಖಾಮುಖಿಯಾದ ಟ್ರಂಪ್, ಅಮೆರಿಕದಲ್ಲಿ ಸಂಶ್ಲೇಷಿತ ಒಪಿಯಾಯ್ಡ್ ಫೆಂಟನಿಲ್ ಕಳ್ಳಸಾಗಣೆಯನ್ನು ತಡೆಯಲು ಕ್ರಮ ಕೈಗೊಳ್ಳುವುದಾಗಿ ಚೀನಾ ಹೇಳಿರುವುದರಿಂದ, ಚೀನಾದ ಸರಕುಗಳ ಮೇಲಿನ ತೆರಿಗೆಯನ್ನು ಕಡಿತಗೊಳಿಸುವ ಮಾತನ್ನಾಡಿದ್ದಾರೆ. ಈ ಎಲ್ಲ ಒಪ್ಪಂದಗಳು ಅಮೆರಿಕದಲ್ಲಿ ಹೆಚ್ಚಿನ ಹೂಡಿಕೆ, ಅಮೆರಿಕದ ಸರಕುಗಳ ಬಳಕೆಯ ಷರತ್ತುಗಳ ಮೇಲೆ ನಡೆದಿವೆ.

ಅಮೆರಿಕ, ಭಾರತ ಹಾಗೂ ಜಪಾನ್ ನಡುವಿನ ತ್ರಿಕೋನ ಸಂಬಂಧ 'ಚೀನಾ ಸಮಾನ ಶತ್ರು' ಎಂಬ ಅಂಶದ ಮೇಲೆ ನಿಂತಿದೆ. ಟ್ರಂಪ್ ಅವರ ನೀತಿಯಿಂದಾಗಿ ಚೀನಾ ಕುರಿತ ಅಮೆರಿಕದ ಧೋರಣೆ ಬದಲಾದರೆ, ಈ ತ್ರಿಕೋನ ಸಂಬಂಧದಲ್ಲಿ ವ್ಯತ್ಯಾಸವಾಗಬಹುದು. ಕ್ವಾಡ್ ಕೆಲಸಕ್ಕೆ ಬಾರದೇ ಉಳಿಯಬಹುದು. ಈ ತ್ರಿಕೋನ ಸಂಬಂಧವನ್ನು ಗಟ್ಟಿಯಾಗಿ ಉಳಿಸಿಕೊಳ್ಳುವುದು ಜಪಾನ್‌ಗೆ ಅನಿವಾರ್ಯ. ಅಧಿಕಾರ ವಹಿಸಿಕೊಂಡ ಬಳಿಕ ಪ್ರಧಾನಿ ಮೋದಿ ಅವರ ಜೊತೆಗೆ ದೂರವಾಣಿ ಮಾತುಕತೆ ನಡೆಸಿರುವ ತಕೈಚಿ, ದ್ವಿಪಕ್ಷೀಯ ಸಂಬಂಧದ ಸುವರ್ಣ ಅಧ್ಯಾಯ ಆರಂಭವಾಗಿದೆ ಎಂದಿದ್ದಾರೆ. ಮೋದಿ ಹಾಗೂ ಟ್ರಂಪ್ ಅವರ ನಡುವೆ ತಕೈಚಿ ಸೇತುವೆಯಾಗಬಹುದೇ? ಅಬೆ ಅವರ ಛಾಯೆಯನ್ನು ಮೀರಿ ತಕೈಚಿ, ಜಪಾನ್‌ಗೆ ಕಸುವು ತುಂಬುವರೇ?

ವಾಚಕರ ವಾಣಿ

ತಾತ್ಕಾಲಿಕ ಸಿಬ್ಬಂದಿಗೆ ಸಂಬಳ ಬೇಡವೆ?

ಹಂಪಿ ಕನ್ನಡ ವಿ.ವಿಗೆ ₹2 ಕೋಟಿ ಬಿಡುಗಡೆಯಾಗಿದ್ದು, ಅಭಿವೃದ್ಧಿ ಕಾರ್ಯಗಳಿಗಷ್ಟೇ ಈ ಅನುದಾನ ಬಳಸಲು ಸೂಚಿಸಲಾಗಿದೆಯೆಂಬ ಸುದ್ದಿ ಓದಿ ಆಘಾತವಾಯಿತು. 17 ತಿಂಗಳಿನಿಂದ ತಾತ್ಕಾಲಿಕ ಸಿಬ್ಬಂದಿಗೆ ಸಂಬಳ ನೀಡಿಲ್ಲ. ತಾತ್ಕಾಲಿಕ ಹುದ್ದೆಗಳಲ್ಲಿ ದುಡಿಯುವವರಿಗೆ ಅನ್ನ, ನೀರು, ಬಟ್ಟೆಯ ಅವಶ್ಯಕತೆ ಇಲ್ಲವೇ? ಅವರು ಮನುಷ್ಯರಲ್ಲವೇ? ವಿಶ್ವವಿದ್ಯಾಲಯದ ಕುಲಪತಿ ಹಾಗೂ ಸಿಂಡಿಕೇಟ್ ಸದಸ್ಯರು, ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ತಾತ್ಕಾಲಿಕ ಸಿಬ್ಬಂದಿಗೆ ನಿಯಮಿತವಾಗಿ ಸಂಬಳ ಕೊಡಿಸುವ ಪ್ರಯತ್ನ ಮಾಡಬೇಕಿದೆ.

ಯಲ್ಲಪ್ಪ ಟಿ. ಗಲಗ್ಕರ್, ದೇವದುರ್ಗ

ಸಕ್ಕರೆ ಲಾಬಿಗೆ ಸರ್ಕಾರ ಮಣಿಯದಿರಲಿ

ಕಬ್ಬಿಗೆ ವೈಜ್ಞಾನಿಕ ಬೆಲೆ ಮತ್ತು ಕಾರ್ಖಾನೆಗಳಿಂದ ಬರಬೇಕಿದ್ದ ಬಾಕಿ ಹಣಕ್ಕೆ ಒತ್ತಾಯಿಸಿ 1984ರಲ್ಲಿ ಮೊದಲ ಬಾರಿಗೆ ಸರ್ಕಾರದ ಜೊತೆಗೆ, ಅಂದಿನ ರೈತ ಸಂಘದ ನಾಯಕರು ಮಾತುಕತೆ ನಡೆಸಿದ್ದರು. ಮಾತುಕತೆ ವಿಫಲಗೊಂಡಾಗ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ 14 ದಿನ ಚಳವಳಿ ನಡೆಸಿದರು. ಕಬ್ಬಿನ ಉತ್ಪನ್ನ ಸಕ್ಕರೆ ಮಾತ್ರವಲ್ಲದೆ, ಉಪ ಉತ್ಪನ್ನಗಳಲ್ಲಿ ಇರುವ ಲಾಭದ ಕುರಿತು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಾಗಿತ್ತು. ಈಗ ಆ ಉತ್ಪನ್ನಗಳಲ್ಲಿ ವಿದ್ಯುತ್ ಉತ್ಪಾದನೆಯೂ ಸೇರಿದೆ. ಆಗ ರಾಜಕಾರಣಿಗಳಲ್ಲಿ ಸಕ್ಕರೆ ಕಾರ್ಖಾನೆ ಮಾಲೀಕರು ಇರಲಿಲ್ಲ. ಈಗ ಎಲ್ಲಾ ಪಕ್ಷದಲ್ಲೂ ಕಾರ್ಖಾನೆಗಳ ಮಾಲೀಕರಿದ್ದಾರೆ. ಹಾಗಾಗಿ, ಅಷ್ಟು ಸುಲಭವಾಗಿ ರೈತರ ಪರವಾಗಿ ಸರ್ಕಾರ ತೀರ್ಮಾನ ಕೈಗೊಳ್ಳುವ ಸಾಧ್ಯತೆ ಕಡಿಮೆ. ಚಳವಳಿ ಅಹಿಂಸಾತ್ಮಕವಾಗಿರಲಿ. ಶಿಸ್ತು, ಸಂಯಮ ಇಲ್ಲದಿದ್ದರೆ ಚಳವಳಿಯನ್ನು ಸರ್ಕಾರ ಸುಲಭವಾಗಿ ಹತ್ತಿಕ್ಕುತ್ತದೆ.

ಅತ್ತಿಹಳ್ಳಿ ದೇವರಾಜ್, ಬೆಂಗಳೂರು

ಜಾತಿ ಪ್ರಮಾಣಪತ್ರ ವಿತರಣೆಯ ಕಗ್ಗಂಟು

ಸಮಾಜ ಕಲ್ಯಾಣ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಹಾಗೂ ಕಂದಾಯ ಇಲಾಖೆ ನಡುವೆ ಸಮನ್ವಯ ಇಲ್ಲ. ಇದರಿಂದ ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಅನ್ವಯ 'ಪ್ರವರ್ಗವಾರು' ಜಾತಿ ಪ್ರಮಾಣಪತ್ರ ವಿತರಣೆಯು ಕಗ್ಗಂಟಾಗಿದೆ. ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರು ಒಬ್ಬರ ಮೇಲೊಬ್ಬರು ಜವಾಬ್ದಾರಿ ಹೊತ್ತುಹಾಕುತ್ತಾ, ತಂತ್ರಾಂಶ ಇನ್ನೂ ರೂಪಿಸಿಲ್ಲ ಎಂಬ ಸಬೂಬು ಹೇಳಿಕೊಂಡು ಕಾಲಹರಣ ಮಾಡುತ್ತಿದ್ದಾರೆ. ಇದರಿಂದ ಪರಿಶಿಷ್ಟ ಜಾತಿಯ ಲಕ್ಷಾಂತರ ಬಡ ವಿದ್ಯಾರ್ಥಿಗಳ ಭವಿಷ್ಯ ಡೋಲಾಯಮಾನವಾಗಿದೆ. ಇದು ಸರ್ಕಾರದ ಅಸಡ್ಡೆ ಮತ್ತು ಇಚ್ಛಾಶಕ್ತಿ ಕೊರತೆಗೆ ಕನ್ನಡಿ ಹಿಡಿದಿದೆ. ಈ ಮೂರೂ ಇಲಾಖೆಗಳಲ್ಲಿ ತಂತ್ರಾಂಶ ಅಭಿವೃದ್ಧಿ ಆಗುವವರೆಗೆ ನೇಮಕಾತಿ, ಉನ್ನತ ಶಿಕ್ಷಣ ಪ್ರವೇಶಾತಿ ಪರೀಕ್ಷೆಗಳನ್ನು ತಾತ್ಕಾಲಿಕವಾಗಿ ಮುಂದೂಡುವುದು ಸಮಂಜಸ.

ಡಿ. ಪ್ರಸನ್ನಕುಮಾರ್, ಬೆಂಗಳೂರು

ದಿಲ್ಲಿ–ಹಳ್ಳಿ

ಬರಬೇಡಿ ದಿಲ್ಲಿಗೆ
ಎಂದರೂ ಬಿಡಲೊಲ್ಲರು
ರಾಜ್ಯದ 'ಕೈ' ನಾಯಕರು!
ಬನ್ನಿ ಬನ್ನಿ ಸ್ವಲ್ಪ ಕೇಳಿ
ನಮ್ಮ ಹಳ್ಳಿಗಳ
ಕಷ್ಟ–ಸುಖ ಎಂದರೂ
ಇತ್ತ ಮುಖ ಹಾಕರು
ನಮ್ಮ ಈ ನಾಯಕರು!

ಮ.ಗು. ಬಸವಣ್ಣ, ಮೈಸೂರು

ಕ್ರಿಕೆಟ್ ಸಾಧಕಿಯರಿಗೆ ಪ್ರೀತಿಯ ಸಲಾಂ

'ಛಲಗಾತಿಯರು' ಈ ಬಾರಿ ತಮ್ಮ ಛಲದಿಂದ ಏಕದಿನ ಮಹಿಳಾ ಕ್ರಿಕೆಟ್ ವಿಶ್ವಕಪ್ ಭಾರತದ ಮಡಿಲು ಸೇರುವಂತೆ ಮಾಡಿದ್ದಾರೆ. ದೇಶದ ಎಲ್ಲಾ ಮೂಲೆಗಳನ್ನು ಪ್ರತಿನಿಧಿಸುವ ಈ ಪ್ರತಿಭೆಗಳಿಗೆ ಸೂಕ್ತ ಗೌರವ ಸಲ್ಲಿಸುವುದು ನಮ್ಮ ಕರ್ತವ್ಯ. ಈ ಪಟ್ಟಿಯಲ್ಲಿ ಕರ್ನಾಟಕದ ಒಬ್ಬರೂ ಇಲ್ಲದಿರುವುದು ಬೇಸರದ ಸಂಗತಿ. ಈ ಬಗ್ಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ನಿಗಾವಹಿಸಬೇಕು. ಗ್ರಾಮೀಣ ಪ್ರದೇಶದಲ್ಲಿ ಮಹಿಳಾ ಕ್ರಿಕೆಟ್‌ಗೆ ಸೂಕ್ತ ಪರಿಸರ ಕಲ್ಪಿಸಿ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸಬೇಕಿದೆ.

ವಾಸಣ್ಣ, ಧಾರವಾಡ

ಶಿಕ್ಷಣದ ರಾಷ್ಟ್ರೀಕರಣಕ್ಕೆ ಆದ್ಯತೆ ನೀಡಿ

ರಾಜ್ಯದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜುಗಳಿಗಿಂತ ಖಾಸಗಿ ಕಾಲೇಜುಗಳು ಅಧಿಕವಾಗಿರುವುದು ಆಘಾತಕಾರಿ. ಇದರಿಂದ ಸರ್ಕಾರಿ ಕಾಲೇಜುಗಳು ವಿದ್ಯಾರ್ಥಿಗಳ ಕೊರತೆ ಎದುರಿಸುವಂತಾಗಿದೆ. ಇದು ಶಿಕ್ಷಣ ಕ್ಷೇತ್ರ ಒಳಗೊಂಡಂತೆ ಎಲ್ಲಾ ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣದ ಮುನ್ಸೂಚನೆಯಂತಿದೆ. ಪ್ರಭಾವಿಗಳು ಮತ್ತು ರಾಜಕಾರಣಿಗಳ ಒಡೆತನದಲ್ಲಿ ಖಾಸಗಿ ಕಾಲೇಜುಗಳಿವೆ. ಗುಣಮಟ್ಟದ ಶಿಕ್ಷಣ ಮತ್ತು ಉತ್ತಮ ವ್ಯವಸ್ಥೆ ಇಲ್ಲದೇ ಇರುವುದರಿಂದ ವಿದ್ಯಾರ್ಥಿಗಳ ಕೊರತೆಯ ನೆಪವೊಡ್ಡಿ ಸರ್ಕಾರಿ ಕಾಲೇಜುಗಳನ್ನು ಮುಚ್ಚಲಾಗುತ್ತಿದೆ. ಈ ಬೆಳವಣಿಗೆಯು ಭವಿಷ್ಯದಲ್ಲಿ ಬಡಮಕ್ಕಳು ಶಿಕ್ಷಣದಿಂದ ವಂಚಿತರಾಗಿ, ಶಿಕ್ಷಣ ಉಳ್ಳವರು ಸ್ವತ್ತಾಗುವ ಅಪಾಯವಿದೆ. ಶಿಕ್ಷಣವನ್ನು ರಾಷ್ಟ್ರೀಕರಣಗೊಳಿಸುವುದೇ ಇದಕ್ಕಿರುವ ಪರಿಹಾರ.

ಮಹೇಶ್ ಕೂದುವಳ್ಳಿ, ಚಿಕ್ಕಮಗಳೂರು

ಸಾರ್ವಜನಿಕ ಆಸ್ತಿ ರಕ್ಷಣೆ ಎಲ್ಲರ ಹೊಣೆ

ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಅನುಮೋದನೆ ಇಲ್ಲದ ಕಟ್ಟಡಗಳ ನಿರ್ಮಾಣ ಹೆಚ್ಚುತ್ತಿದೆ. ಸರ್ಕಾರಿ ಆಸ್ತಿಗಳ ಒತ್ತುವರಿ ಉಲ್ಬಣಿಸಿದೆ. ಸರ್ಕಾರಿ ಶಾಲೆಗಳ ಆವರಣ ಮತ್ತು ಕಟ್ಟಡಗಳು ಪುಂಡರ ಅಡ್ಡೆಯಾಗಿವೆ. ಈ ಸಮಸ್ಯೆಗಳ ಬಗ್ಗೆ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರು ಕಂಡೂಕಾಣದಂತೆ ಇರುತ್ತಾರೆ. ಅವರು ಮತದಾರರ ಮರ್ಜಿಗೆ ಒಳಪಟ್ಟಿರುವುದೇ ಇದಕ್ಕೆ ಕಾರಣ. ಸಾರ್ವಜನಿಕ ಆಸ್ತಿ ರಕ್ಷಣೆ ವಿಷಯದಲ್ಲಿ ಪಿಡಿಒಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕು. ಆಸ್ತಿ ರಕ್ಷಣೆಯು ಎಲ್ಲರ ಹೊಣೆಯಾಗಬೇಕಿದೆ.

ಮಲ್ಲಿಕಾರ್ಜುನ, ಸುರಧೇನುಪುರ

ಚಾಟಿ

ಕಾನನ ಆಪೋಶನ

ಕಡಿಯಿರಿ ಸ್ವಾಮಿ ಕಡಿಯಿರಿ... ನಿಮಗೆ ಇಷ್ಟ ಬಂದಷ್ಟು ಕಡಿದುಬಿಡಿ... ಮರ-ಗಿಡಗಳಿಂದ ನಿಮಗೆ ಓಟು ಸಿಗುವುದಿಲ್ಲ. ಬದಲಾಗಿ ನೋಟು ಸಿಗುತ್ತದೆ, ಚುನಾವಣೆಗೆ ಸೀಟು ಸಿಗುತ್ತದೆ. ಪರಿಸರ ಸಂರಕ್ಷಣೆ ಎಂದು ಹೇಳುವವರೂ ನೀವೇ, ಪರಿಸರವನ್ನು ಮುಕ್ಕಿ, ತಿಂದು ತೇಗುವವರೂ ನೀವೇ!

ದಿನೇಶ್ ಹೊಳ್ಳ, ಕಲಾವಿದ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಕಬ್ಬಿಗೆ ದರ ನಿಗದಿ ವಿಷಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕೇಂದ್ರದ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ. ಕೇಂದ್ರವನ್ನು ದೂರುವ ಧೋರಣೆ ಕೈಬಿಟ್ಟು, ರೈತರ ಸಮಸ್ಯೆಯನ್ನು ಪ್ರಾಮಾಣಿಕವಾಗಿ ಬಗೆಹರಿಸಬೇಕಿದೆ.

ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಬಿಜೆಪಿ ಸಂಸದ

ಚುರುಮುರಿ

ಕ್ರಿಕೆಟರ್ ಸಿಎಂ!

• ಗುರು ಪಿ.ಎಸ್.

ಹೆಲ್ಮೆಟ್ ಹಾಕಿಕೊಂಡು, ಕೈಯಲ್ಲಿ ಬ್ಯಾಟ್ ಹಿಡಿದು ಹೊರಡಲು ರೆಡಿಯಾಗುತ್ತಿದ್ದಳು ಹೆಂಡತಿ.

'ಎಲ್ಲಿಗೆ ಹೊರಟದ್ದೀಯಾ? ಇದೇನು ನಿನ್ನ ಅವತಾರ?' ಕುತೂಹಲದಿಂದ ಕೇಳಿದೆ.

'ಇದು ನವೆಂಬರ್ ಕ್ರಾಂತಿ' ಎಂದಳು ಒಗಟಾಗಿ.

'ನವೆಂಬರ್ ಕ್ರಾಂತಿ ಪೋಸ್ಟ್‌ಪೋನ್ ಆಗಿ, ಡಿಸೆಂಬರ್–ಜನವರಿಗೆ ಹೋಗಿದೆ. ಈಗ ಬ್ಯಾಟ್ ಹಿಡ್ಕೊಂಡು ನೀನೇನ್ ಕ್ರಾಂತಿ ಮಾಡ್ತೀಯ' ಎಂದೆ.

'ನಮ್ ದೇಶದ ಹೆಣ್ಮಕ್ಕಳು ಕ್ರಿಕೆಟ್ ವಿಶ್ವಕಪ್ ಗೆದ್ದಿರೋದೇ ನಿಜವಾದ ನವೆಂಬರ್ ಕ್ರಾಂತಿ. ಮುಂದೆ ನಾನೂ ಕ್ರಿಕೆಟರ್ ಆಗಿ ದೇಶಕ್ಕೆ ಕಪ್ ತಂದುಕೊಡ್ತೀನಿ' ಎನ್ನುತ್ತಾ ಗ್ಲೌಸ್ ಹಾಕಿಕೊಳ್ಳತೊಡಗಿದಳು.

'ಕ್ರಿಕೆಟ್ ಆಟಗಾರ್ತಿಯರಿಗೆ ಈಗ ಸಿಗ್ತಿರೋ ಕೀರ್ತಿ, ದುಡ್ಡು ನೋಡಿ ಕ್ರಿಕೆಟ್‌ಗೆ ಧುಮುಕೋದಲ್ಲ. ಅಲ್ಲದೆ, ನಿನ್ನ ಕಾಲ ಮುಗೀತು... ಬೇಕಾದರೆ ಮಗಳನ್ನ ಕ್ರಿಕೆಟರ್ ಮಾಡೋಣ ಬಿಡು. ನಿನ್ನ ವಯಸ್ಸಿಗೆ ಪಾಲಿಟಿಕ್ಸ್ ಬೆಸ್ಟ್. ಏಕೆಂದರೆ, 50 ವರ್ಷಗಳಾದರೂ ರಾಜಕೀಯದಲ್ಲಿ ಯಂಗ್ ಲೀಡರ್ ಅಂತಾರೆ' ಎಂದೆ ವ್ಯಂಗ್ಯವಾಗಿ.

'ಹೆಣ್ಮಕ್ಕಳಿಗೆ ರಾಜಕೀಯದಲ್ಲಿ ಬೆಳೆಯೋಕೆ ಎಲ್ರೀ ಬಿಡ್ತೀರಿ. ಈಗ ನೋಡಿ, ಕರ್ನಾಟಕದ ಸಿಎಂ ಸ್ಥಾನಕ್ಕೆ ಒಬ್ಬರದಾದರೂ ಹೆಣ್ಮಕ್ಕಳ ಹೆಸರು ಕೇಳಿ ಬರ್ತಿದೆಯಾ?'

'ರಾಜಕೀಯಕ್ಕೆ ಹೋಗಿ ಕರ್ನಾಟಕದ ಮೊದಲ ಮಹಿಳಾ ಮುಖ್ಯಮಂತ್ರಿ ನೀನೇ ಆಗು' ಎಂದೆ ನಗುತ್ತಾ.

'ಡೆಪ್ಯುಟಿ ಆದವರೇ ಒಂದೇ ಒಂದು ಮೆಟ್ಟಿಲು ಮೇಲೆ ಹತ್ತೋಕೆ ಹರಸಾಹಸ ಮಾಡ್ತಿದ್ದಾರೆ, ಇನ್ನು ನನ್ನನ್ನ ಸಿಎಂ ಮಾಡಿಬಿಡ್ತಾರಾ' ಎಂದಳು.

'ಎಮ್ಮೆಲ್ಲೆ ಆದವರು ಮಿನಿಸ್ಟರ್ ಆಗೋಕೆ ಹಲವು ಕಲೆಗಳು ಗೊತ್ತಿರಬೇಕು. ಇನ್ನು, ಸಿಎಂ ಆಗೋದು ಸುಲಭವೇನಲ್ಲ ಬಿಡು'.

'ಯಾವ ಕಲೆ ಗೊತ್ತಿರಬೇಕು?'

'ಮೊದಲು ದುಡ್ಡು ಚೆಲ್ಲಿ, ಜಾತಿ ಮುಂದು ಮಾಡಿ ಗೆಲ್ಲಬೇಕು, ಹೈಕಮಾಂಡ್ ಒಲಿಸಿಕೊಳ್ಳಬೇಕು, ಶಾಸಕರನ್ನ ಖರೀದಿಸಬೇಕು, ಎದುರಾಳಿಯನ್ನ ಕುಗ್ಗಿಸಬೇಕು... ಇನ್ನೂ ಅನೇಕ ಕೌಶಲಗಳಿರಬೇಕು'.

'ಹಾಗಾದರೆ, ನನ್ನನ್ನ ಏನು ಮಾಡ್ತೀರಿ?'

'ನನ್ನ ಎದೆಯ ರಾಜ್ಯದಲ್ಲಿ ನೀನು ರಾಣಿಯಾಗುವೆ... ಪುಟ್ಟ ಗುಡಿಸಲಲ್ಲಿ ನಿನ್ನ ಪಟ್ಟದರಸಿ ಮಾಡುವೆ...' ಎಂದು ಹಾಡತೊಡಗಿದೆ. ಗ್ಲೌಸ್ ಮುಖಕ್ಕೆಸೆದು ಒಳಹೋದಳು.

ಸಂಗತ

ರಾಜಕೀಯ ಪ್ರಜ್ಞೆ ನಮಗೆ ಯಾಕಾಗಿ ಬೇಕು?

ರಾಜಕೀಯ ಪ್ರಜ್ಞೆ, ಪಕ್ಷ ರಾಜಕಾರಣಕ್ಕಿಂತಲೂ ಭಿನ್ನವಾದುದು. ನಿರಂತರವಾಗಿ ಪ್ರಶ್ನಿಸುವ ಮೂಲಕ ರಾಜಕಾರಣಿಗಳನ್ನು ಹದ್ದುಬಸ್ತಿನಲ್ಲಿಡಲು ಪ್ರಜ್ಞೆ ನೆರವಾಗುತ್ತದೆ.

• ನಡಹಳ್ಳಿ ವಸಂತ್

ನಮಗೆ ರಾಜಕೀಯದಲ್ಲಿ ಆಸಕ್ತಿ ಇಲ್ಲ ಎಂದು ಸಾಕಷ್ಟು ಜನ ವಿದ್ಯಾವಂತರು, ಸಭ್ಯರು ಮತ್ತು ಸುಸಂಸ್ಕೃತರು ಹೇಳುತ್ತಿದ್ದಾರೆ. ಇವರು ಹೇಳುವ ಮಾತುಗಳಲ್ಲಿ ಕೂಡ ಒಂದು ಸಂದೇಶವಿದೆ. 'ರಾಜಕೀಯ ಲಫಂಗರ ಕೊನೆಯ ತಾಣ' ಎಂದು ಅಮೆರಿಕದ ಬರಹಗಾರ ಮತ್ತು ಹೋರಾಟಗಾರ ಬ್ಲೇಸ್ ಬಾನ್‌ಪೇನ್ ಬಹಳ ಹಿಂದೆಯೇ ಹೇಳಿದ್ದ. ಇವತ್ತು ಲಫಂಗರ ಜೊತೆ ಭ್ರಷ್ಟರು, ಕ್ರಿಮಿನಲ್‌ಗಳು ಸೇರಿದಂತೆ ಎಲ್ಲಾ ರೀತಿಯ ಸಮಾಜಘಾತುಕ ವ್ಯಕ್ತಿಗಳು ರಾಜಕೀಯದಲ್ಲಿ ಕಾಣಿಸಿಕೊಂಡಿದ್ದಾರೆ. ಇವರು ಬಳಸುವ ಭಾಷೆಯಂತೂ ದಿನದಿನಕ್ಕೆ ಕ್ರೂರವಾಗುತ್ತಿದೆ ಮತ್ತು ಅಸಭ್ಯವಾಗುತ್ತಿದೆ. ಹಾಗಾಗಿ, ಆತ್ಮಗೌರವವಿರುವ ಯಾರೂ ಕಾಲಿಡಲು ಹಿಂಜರಿಯುವಷ್ಟು ರಾಜಕೀಯ ಹೊಲಸೆದ್ದಿದೆ.

ರಾಜಕೀಯದ ಕುರಿತು ನಾವು ಎಷ್ಟೇ ಅನಾದರ ತೋರಿಸಿದರೂ ರಾಜಕೀಯದವರಿಗೆ ನಮ್ಮೆಲ್ಲರ ಬಗೆಗೆ (ಅಂದರೆ ನಮ್ಮ ಓಟಿನ ಬಗೆಗೆ) ಆಸಕ್ತಿಯಿರುತ್ತದೆ! ಪ್ರಜಾಪ್ರಭುತ್ವದ ಹಣೆಪಟ್ಟಿಯಲ್ಲಿಯೇ ಆಧುನಿಕ ಸರ್ಕಾರಗಳು ದಿನೇ ದಿನೇ ಕಾನೂನುಬದ್ಧವಾಗಿ ಹೆಚ್ಚು ಹೆಚ್ಚು ಅಧಿಕಾರವನ್ನು ಪಡೆದುಕೊಳ್ಳುತ್ತಿವೆ. ಜೊತೆಗೆ, ತಮ್ಮ ಜವಾಬ್ದಾರಿಗಳನ್ನೆಲ್ಲ ಕಳಚಿಕೊಂಡು ಖಾಸಗಿಯವರಿಗೆ ವಹಿಸಿಕೊಡುತ್ತಿವೆ. ಸರ್ಕಾರಗಳು ತೆಗೆದುಕೊಳ್ಳುವ ನಿರ್ಧಾರಗಳು ನಮ್ಮ ನಿತ್ಯಜೀವನದ ಮೇಲೆ ಪ್ರಭಾವ ಬೀರದೆ ಇರಲು ಸಾಧ್ಯವೇ ಇಲ್ಲ. ರಾಜಕೀಯದಿಂದ ನಾವು ದೂರವಿದ್ದರೂ ಅದು ನಮ್ಮನ್ನು ಆವರಿಸಿಕೊಳ್ಳುತ್ತದೆ. ನಮ್ಮ ನಿರಾಸಕ್ತಿ ಕೂಡ ಆಳುವ ವರ್ಗಕ್ಕೆ ಮೌನಸಮ್ಮತಿಯೇ ಆಗಿರುತ್ತದೆ.



ರಾಜಕೀಯದಲ್ಲಿ ಭಾಗವಹಿಸುವುದು ಎಂದರೆ, ಪಕ್ಷ ರಾಜಕೀಯದ ಭಾಗವಾಗಿ ಯಾವುದಾದರೂ ಒಂದು ರಾಜಕೀಯ ಪಕ್ಷಕ್ಕೆ ಬೆಂಬಲ ನೀಡುವುದೆನ್ನುವುದು ಸಾಮಾನ್ಯ ತಿಳಿವಳಿಕೆ. ಇದನ್ನು ಸಾಕಷ್ಟು ವಿದ್ಯಾವಂತರೂ ನಂಬುತ್ತಾರೆ. ಈ ರೀತಿಯಲ್ಲಿ ರಾಜಕೀಯವನ್ನು ಅರ್ಥೈಸುವುದು ನಮ್ಮನ್ನು ದಿಕ್ಕುತಪ್ಪಿಸಬಹುದು. ಉದಾಹರಣೆಗೆ, ಕಳೆದ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಕೋಮುದ್ವೇಷವನ್ನೇ ಉಸಿರಾಡುತ್ತಿದ್ದ ಬಿಜೆಪಿಯನ್ನು ವಿರೋಧಿಸುವ ಸದುದ್ದೇಶದಿಂದ ನಾಡಿನ ಹೆಚ್ಚಿನ ಸಾಹಿತಿಗಳು, ಚಿಂತಕರು ಪ್ರತ್ಯಕ್ಷವಾಗಿಯೋ ಅಥವಾ ಅಪ್ರತ್ಯಕ್ಷವಾಗಿಯೋ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದರು. ಆದರೆ, ಕಳೆದ ಎರಡೂವರೆ ವರ್ಷಗಳಲ್ಲಿ ಕಾಂಗ್ರೆಸ್ ಸರ್ಕಾರದ ಅವಾಂತರಗಳನ್ನು ನೋಡಿದರೆ ಇವರು ಬಿಜೆಪಿಗಿಂತ ಗುಣಾತ್ಮಕವಾಗಿ ಹೇಗೆ ಭಿನ್ನವಾಗಿದ್ದಾರೆ ಎನ್ನುವುದು ಅರ್ಥವಾಗುತ್ತಿಲ್ಲ. ಸಾಹಿತಿಗಳು ವಿರೋಧಪಕ್ಷದಂತೆ ಕೆಲಸ ಮಾಡಬೇಕು ಎಂದು ಕನ್ನಡದ ಒಬ್ಬ ಸುಪ್ರಸಿದ್ಧ ವಿಮರ್ಶಕರು ಹೇಳಿದ್ದರು. ಆದರೆ, ವಿರೋಧಪಕ್ಷದಂತೆ ಕೆಲಸ ಮಾಡಬೇಕಾಗಿರುವುದು ಸದ್ಯದ ಕೇಂದ್ರ ಸರ್ಕಾರಕ್ಕೋ ಅಥವಾ ರಾಜ್ಯ ಸರ್ಕಾರಕ್ಕೋ ಎಂದು ಅವರು ಹೇಳಲಿಲ್ಲ!

ಇದ್ದವರಲ್ಲಿಯೇ ಒಳ್ಳೆಯವರು ಅಥವಾ ಕಡಿಮೆ ಅಪಾಯಕಾರಿ ಎಂದು ಕಾಂಗ್ರೆಸ್‌ಗೆ ನೀಡಿದ ಬೆಂಬಲವನ್ನು ಇನ್ನೂ ಕೆಲವರು ಸಮರ್ಥಿಸಿಕೊಂಡರು. ಇದು ಮೇಲ್ನೋಟಕ್ಕೆ ಒಪ್ಪುವಂತಹ ವಾದ. ಆದರೆ, ನಾವು ಎಚ್ಚರ ತಪ್ಪಿದರೆ ಕಡಿಮೆ ಅಪಾಯಕಾರಿ ಕೂಡ ಹೆಚ್ಚು ಅಪಾಯಕಾರಿಯಾಗಲು ಬಹಳ ಸಮಯ ಬೇಕಾಗುವುದಿಲ್ಲ. ಇದರ ಅರ್ಥವೇನೆಂದರೆ, ರಾಜಕೀಯ ಪ್ರಜ್ಞೆ ಎಂದರೆ ಕೇವಲ ಪಕ್ಷಗಳ ಪರ–ವಿರೋಧದ ಕುರಿತಾದ ಅರಿವಲ್ಲ. ಬದಲಾಗಿ, ರಾಜಕೀಯ ಪ್ರಜ್ಞೆ ಎನ್ನುವುದು ನಮ್ಮೊಳಗೆ ನಿರಂತರವಾದ ರಾಜಕೀಯ ಎಚ್ಚರವನ್ನು ಉಳಿಸಿಕೊಳ್ಳುವುದು ಎಂದಾಗಬೇಕಲ್ಲವೇ? ಹೀಗೆ ನಾವು ಎಚ್ಚರವಾಗಿದ್ದೇವೆ ಎನ್ನುವ ಸಂದೇಶವನ್ನು ಜನಸಾಮಾನ್ಯರು ರಾಜಕಾರಣಿಗಳಿಗೆ ನಿರಂತರವಾಗಿ ತಲುಪಿಸಬೇಕಾಗುತ್ತದೆ.

ಸೂಕ್ತವಾದ ಪ್ರಶ್ನೆಗಳ ಮೂಲಕ ಮಾತ್ರ ನಮ್ಮೊಳಗಿನ ಎಚ್ಚರವನ್ನು ಪ್ರಭುತ್ವಗಳ ಮತ್ತು ವಿರೋಧ ಪಕ್ಷಗಳ ಗಮನಕ್ಕೆ ತರುವುದು ಸಾಧ್ಯ. ಪ್ರಶ್ನೆಗಳನ್ನು ಎತ್ತಿದ ಕೂಡಲೇ ಎಲ್ಲಾ ರಾಜಕೀಯ ಪಕ್ಷಗಳು ಇತರ ಪಕ್ಷಗಳ ಕಡೆ ಬೆರಳು ತೋರಿಸುತ್ತವೆ. ಇದಕ್ಕೆ ಅವಕಾಶ ಕೊಡಬಾರದು. ಎಲ್ಲರನ್ನೂ ನಾವು ಪ್ರಶ್ನಿಸುತ್ತೇವೆ, ಈಗ ನಿಮಗೆ ಕೇಳಿದ ಪ್ರಶ್ನೆಗಳಿಗೆ ಉತ್ತರ ಬೇಕಾಗಿದೆ ಎನ್ನುವ ಸ್ಪಷ್ಟ ಸಂದೇಶ ತಲುಪಬೇಕು. ರಾಜಕೀಯ ಪ್ರಜ್ಞೆ ಎಂದರೆ, ಚುನಾವಣೆಯ ಸಮಯದಲ್ಲಿ ಯಾವ ಪಕ್ಷವನ್ನು ಬೆಂಬಲಿಸಬೇಕು ಎನ್ನುವ ತಿಳಿವಳಿಕೆಯಲ್ಲ. ಚುನಾವಣೆಯ ಸಂದರ್ಭದಲ್ಲಿ ಯಾವುದೇ ಪಕ್ಷವನ್ನು ಬೆಂಬಲಿಸಿದರೂ ಪ್ರಶ್ನೆಗಳನ್ನು ಎಲ್ಲಾ ಪಕ್ಷಗಳಿಗೂ ಕೇಳಲೇಬೇಕು. ಹಾಗೆ ನೋಡಿದರೆ ನಾವು ಚುನಾವಣೆಯಲ್ಲಿ ಬೆಂಬಲಿಸಿದ ಪಕ್ಷವನ್ನು ಹೆಚ್ಚು ತೀವ್ರವಾದ ಪ್ರಶ್ನೆಗಳಿಂದ ಎಚ್ಚರಿಸದಿದ್ದರೆ ಅದು ನಾವು ವಿರೋಧಿಸಿದ ಪಕ್ಷಕ್ಕಿಂತ ಹೆಚ್ಚು ಅಪಾಯಕಾರಿಯಾಗುತ್ತದೆ.

ಎಲ್ಲರನ್ನೂ ಪ್ರಶ್ನಿಸದಿದ್ದರೆ ಪ್ರಜಾಪ್ರಭುತ್ವಕ್ಕೆ ಉಳಿಗಾಲವಿಲ್ಲ. ಪ್ರಶ್ನೆಗಳನ್ನು ಹತ್ತಿಕ್ಕುವುದು ಸರ್ವಾಧಿಕಾರದತ್ತ ಹೋಗುವುದರ ಸೂಚನೆ ಮಾತ್ರ. ಈ ದೃಷ್ಟಿಯಿಂದ ನೋಡಿದರೆ, ಪ್ರಪಂಚದ ಹೆಚ್ಚಿನ ಸರ್ಕಾರಗಳು ಚುನಾಯಿತ ಸರ್ವಾಧಿಕಾರದಂತೆ ಇವತ್ತು ವರ್ತಿಸುತ್ತಿವೆ. ಪ್ರಶ್ನಿಸುವುದು ಎಂದರೆ ಟೀಕಿಸುವುದು ಎಂದಲ್ಲ. ಘನತೆ, ಗೌರವದಿಂದ ಸಭ್ಯಭಾಷೆಯಲ್ಲಿಯೇ ಸೂಕ್ತ ಪ್ರಶ್ನೆಗಳನ್ನು ಎತ್ತುವುದು ಕೂಡ ಅಷ್ಟೇ ಪ್ರಭಾವಕಾರಿ. ಬಾಬಾಸಾಹೇಬ್ ಅಂಬೇಡ್ಕರ್ ಇದನ್ನೇ ಮಾಡಿದ್ದರು ಎನ್ನುವುದನ್ನು ನೆನಪಿಸಿಕೊಂಡರೆ ಪ್ರಶ್ನೆಗಳ ಮಹತ್ವ ಅರ್ಥವಾಗುತ್ತದೆ. ಅಂಬೇಡ್ಕರ್ ಕೇಳುತ್ತಿದ್ದ ಪ್ರಶ್ನೆಗಳಿಗೆ ಇವತ್ತಿಗೂ ಯಾವ ರಾಜಕೀಯ ಪಕ್ಷಕ್ಕೂ ಉತ್ತರಿಸಲಾಗುತ್ತಿಲ್ಲ.

25 ವರ್ಷಗಳ ಹಿಂದೆ

ಸೋಮವಾರ, 6-11-2000

• **ಸಾವಿರ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ: ಮುಂದಿನ ತಿಂಗಳಲ್ಲಿ ಜಾರಿ**

ಬೆಂಗಳೂರು, ನ. 5– ರಾಜ್ಯದ ಒಂದು ಸಾವಿರ ಸರ್ಕಾರಿ ಪ್ರೌಢಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಮಾಹಿತಿ ತಂತ್ರಜ್ಞಾನ (ಐಟಿ) ಶಿಕ್ಷಣ ನೀಡುವ ಸರ್ಕಾರದ ಯೋಜನೆ ಅನುಷ್ಠಾನ ಹಂತದಲ್ಲಿದ್ದು, ಇನ್ನೊಂದು ತಿಂಗಳಲ್ಲಿ ಆರಂಭಗೊಳ್ಳುವ ಸಾಧ್ಯತೆಯಿದೆ ಎಂದು ಮಾಹಿತಿ ತಂತ್ರಜ್ಞಾನ ಇಲಾಖೆಯ ನಿರ್ದೇಶಕ ಇ.ವಿ. ರಮಣರೆಡ್ಡಿ ಇಂದು ಇಲ್ಲಿ ತಿಳಿಸಿದರು.

ಐಟಿ ಡಾಟ್ ಕಾಮ್ ಪ್ರದರ್ಶನದ ಅಂಗವಾಗಿ ಇಲ್ಲಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ, 'ವಿದ್ಯಾರ್ಥಿಗಳ ಅಂತರ್ಜಾಲ ಲೋಕ'ದ ಕೊನೆ ದಿನವಾದ ಇಂದು ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದರು.

75 ವರ್ಷಗಳ ಹಿಂದೆ

• **ಬಿಡುವು**

1950ರ ನವೆಂಬರ್ 5ರಂದು ಮೈಸೂರಿನಲ್ಲಿ ಸಂಸ್ಥಾನ ಪತ್ರಿಕಾ ಉದ್ಯೋಗಿಗಳ ಸಮ್ಮೇಳನವಿತ್ತು. ಆ ಸಮ್ಮೇಳನದ ಪ್ರಯುಕ್ತ ಕಚೇರಿಗೆ ಬಿಡುವು ನೀಡಿದ್ದರಿಂದ ನವೆಂಬರ್ 6ರ ಸಂಚಿಕೆ ಪ್ರಕಟವಾಗಿಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದಶಕ ಕಳೆದರೂ ಸಿಗದ ನ್ಯಾಯಬೆಲೆ

ಕಬ್ಬಿಗೆ ಉತ್ತಮ ದರ ನಿಗದಿಗೆ ಆಗ್ರಹಿಸಿ ರೈತರ ಪ್ರತಿಭಟನೆ ತೀವ್ರ; ಆಂದೋಲನ ರೂಪ ಪಡೆಯುತ್ತಿರುವ ಹೋರಾಟ

● ಸಂತೋಷ ಈ. ಚಿನಗುಡಿ

ರಾಜ್ಯದ ಕಬ್ಬು ಬೆಳೆಗಾರರು, ಸಕ್ಕರೆ ಕಾರ್ಖಾನೆಗಳು ಹಾಗೂ ಸರ್ಕಾರದ ನಡುವಿನ ತ್ರಿಕೋನ ಸಂಘರ್ಷಕ್ಕೆ ದಶಕಗಳ ಇತಿಹಾಸವಿದೆ. ಬೆಳಗಾವಿಯಲ್ಲಿ ರೈತರು ಪ್ರಾಣ ಪಣಕ್ಕಿಟ್ಟು 'ನ್ಯಾಯ ಸಮ್ಮತ' ಬೆಲೆಗಾಗಿ ಹೋರಾಡುವ ದಿನಗಳು ಮತ್ತೆ ಮರುಕಳಿಸಿದಂತೆ ಕಾಣಿಸುತ್ತಿವೆ. ಇಲ್ಲಿ ವಾರದಿಂದ ನಡೆಯುತ್ತಿರುವ ಚಳವಳಿ ಇನ್ನಷ್ಟು ತೀವ್ರಗೊಳ್ಳುತ್ತಿದ್ದರೆ, ಕಬ್ಬು ಬೆಳೆಯುವ ಇತರ ಜಿಲ್ಲೆಗಳಲ್ಲೂ ಉತ್ತಮ ದರಕ್ಕಾಗಿ ಆಗ್ರಹಿಸಿ ರೈತರು ಹೋರಾಟ ನಡೆಸುತ್ತಿದ್ದಾರೆ.

2013–14ರ ಸಾಲಿನಲ್ಲಿ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಮೊದಲ ಬೆಳಗಾವಿ ಅಧಿವೇಶನ ನಡೆದಿತ್ತು. ಸಿದ್ದರಾಮಯ್ಯ ಆಗಲೂ ಮುಖ್ಯಮಂತ್ರಿ. ಕಬ್ಬು ದರ ಹೆಚ್ಚಳಕ್ಕಾಗಿ ರೈತರು ಸೌಧದ ಮುಂದೆ ಬೃಹತ್ ಹೋರಾಟ ಆರಂಭಿಸಿದ್ದರು. ರಾಯಬಾಗ ತಾಲ್ಲೂಕಿನ ಕಂಕಣವಾಡಿ ಗ್ರಾಮದ ರೈತ ವಿಠ್ಠಲ ಭೀಮಪ್ಪ ಅರಬಾವಿ ಅವರು ಕೀಟನಾಶಕ ಕುಡಿದು ಸೌಧದ ಎದುರೇ ಪ್ರಾಣ ಬಿಟ್ಟರು. ಬಳಿಕ ಅನ್ನದಾತರು ಉಗ್ರಸ್ವರೂಪ ತಾಳಿದರು. ಎಚ್ಚೆತ್ತುಕೊಂಡ ಆಗಿನ ಸರ್ಕಾರ ಪ್ರತಿ ಟನ್ ಕಬ್ಬಿಗೆ ₹165 ಪ್ರೋತ್ಸಾಹ ಧನ ಘೋಷಣೆ ಮಾಡಿತು. ಆಗ ಸಕ್ಕರೆ ಸಚಿವರಾಗಿದ್ದ ಪ್ರಕಾಶ ಹುಕ್ಕೇರಿ ₹300 ಕೋಟಿ ನೆರವು ನಿಧಿ ಬಿಡುಗಡೆ ಮಾಡಿದ್ದರು.

ಕಾಲ ಉರುಳಿದೆ. ಆದರೆ, ರೈತರ ಬದುಕು ಅಲ್ಲೇ ನಿಂತಿದೆ. ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿ ಆಗಿದ್ದಾರೆ. ಅದೇ ಕಬ್ಬಿಗಾಗಿ, ಅದೇ ರೈತರು ಆಂದೋಲನ ಮಾಡುತ್ತಿದ್ದಾರೆ. ದಶಕ ಕಳೆದರೂ ಕಬ್ಬು ಬೆಳೆಗಾರರ ಬದುಕು 'ಸಿಹಿ' ಆಗಲೇ ಇಲ್ಲ. ಆಗ ಒಂದು ಕಾರ್ಖಾನೆ ಹೊಂದಿದ್ದ ಮಾಲೀಕರು ಈಗ ಎರಡು–ಮೂರು ಕಾರ್ಖಾನೆ ಕಟ್ಟಿಕೊಂಡಿದ್ದಾರೆ.

ಅಂದಿನ ದಿನಗಳು ಈಗ ಮರುಕಳಿಸಿವೆ. ಅದೇ ರಾಯಬಾಗ ತಾಲ್ಲೂಕಿನ ಅಲಕನೂರ ಗ್ರಾಮದ ಅಕ್ಷಯ ಗುಣದಾಳ (30) ಎಂಬ ರೈತ ಸೋಮವಾರ (ನ.3) ಹೋರಾಟದ ಸ್ಥಳದಲ್ಲೇ ವಿಷ ಕುಡಿದಿದ್ದಾರೆ. ಸಾವು–ಬದುಕಿನ ಮಧ್ಯೆ ಹೋರಾಡುತ್ತಿರುವ ಅವರನ್ನು ಬೆಳಗಾವಿಯ ಕಿಮ್ಸ್‌ ಆಸ್ಪತ್ರೆಗೆ ದಾಖಲಿಸಲಾಗಿದೆ. ಅಂದಿನಿಂದ ರೈತರ ಹೋರಾಟ ತೀವ್ರ ಸ್ವರೂಪ ಪಡೆದಿದೆ. ಬುಧವಾರ ಬೆಳಗಾವಿ, ಹುಕ್ಕೇರಿ, ರಾಯಬಾಗ ಮುಂತಾದ ಕಡೆಗಳಲ್ಲಿ ಜನ ಸ್ವಯಂಪ್ರೇರಣೆಯಿಂದ ಬಂದ್ ಆಚರಿಸಿದರು. ಬೆಳಿಗ್ಗೆ ಬಸ್‌ ಸಂಚಾರ ವಿರಳವಾಗಿತ್ತು, ಶಾಲೆ, ಕಾಲೇಜು, ಚಿತ್ರಮಂದಿರಗಳಲ್ಲಿ ಜನ ವಿರಳವಾಗಿದ್ದರು. ರಾಯಬಾಗ ಪಟ್ಟಣವನ್ನು ಸಂಪೂರ್ಣ ಬಂದ್ ಮಾಡಲಾಯಿತು. ಔಷಧ ಮಳಿಗೆ, ಸರ್ಕಾರಿ ಕಚೇರಿಗಳನ್ನು ಬಿಟ್ಟರೆ ಉಳಿದೆಲ್ಲವನ್ನೂ ಜನ ತಾವಾಗಿಯೇ ಬಂದ್ ಮಾಡಿದರು.

ಮೂಡಲಗಿ ತಾಲ್ಲೂಕಿನ ಗುರ್ಲಾಪುರದಲ್ಲಿ ರಾಷ್ಟ್ರ ಹೆದ್ದಾರಿ ಬಂದ್ ಮಾಡಿರುವ ರೈತರ ಹೋರಾಟ ಏಳು ದಿನ ಪೂರೈಸಿದೆ. [illegible]

ರೈತರಿಗೆ ಮೋಸ ಹೇಗೆ?: ಕೇಂದ್ರ ಸರ್ಕಾರ ವರ್ಷದಿಂದ ವರ್ಷಕ್ಕೆ ನ್ಯಾಯಸಮ್ಮತ ಹಾಗೂ ಲಾಭದಾಯಕ (ಎಫ್‌ಆರ್‌ಪಿ) ಬೆಲೆ ಹೆಚ್ಚಿಸುತ್ತದೆ. ಪರೋಕ್ಷವಾಗಿ ಸಕ್ಕರೆ ಕಾರ್ಖಾನೆಗಳು ಇಳುವರಿ ಪ್ರಮಾಣದ ಮಿತಿಯನ್ನು ಏರಿಸುವ ಮೂಲಕ ರೈತರಿಗೆ ಲಾಭ ಸಿಗದಂತೆ ಮಾಡುತ್ತಿವೆ. ಹೀಗಾಗಿ, ಈ ಬಾರಿ ರೈತರು ನಿರ್ಣಾಯಕ ಹೋರಾಟಕ್ಕೆ ನಿಂತಿದ್ದಾರೆ. ಪ್ರತಿ ಟನ್‌ಗೆ ₹3,500 ದರ ನೀಡಬೇಕು, ಇಳುವರಿ ಪ್ರಮಾಣ (ರಿಕವರಿ ರೇಟ್‌) ಮಿತಿಯನ್ನು ಶೇ 9.5ಕ್ಕೆ ಇಳಿಸಬೇಕು ಎಂದು ಪಟ್ಟು ಹಿಡಿದಿದ್ದಾರೆ.

ಕಾರ್ಖಾನೆಗಳಿಗೆ ಲಾಭ: 'ಕಬ್ಬು ಅರೆಯುವ ಕಾರ್ಖಾನೆಗಳು ಸಕ್ಕರೆಯನ್ನಷ್ಟೇ ಉತ್ಪಾದಿಸುವುದಿಲ್ಲ. ಮೊಲಾಸಿಸ್, ಎಥೆನಾಲ್, ವಿದ್ಯುತ್ ಅನ್ನು ಉತ್ಪಾದಿಸುತ್ತವೆ. ಇವುಗಳಿಂದಲೂ ಕಾರ್ಖಾನೆಗಳ ಮಾಲೀಕರು ಲಾಭ ಗಳಿಸುತ್ತಾರೆ. ಹೆಚ್ಚು ಲಾಭ ಬರುವಾಗ ನಮಗೆ ಉತ್ತಮ ದರ ನೀಡಲು ಅವರಿಗೆ ಯಾಕೆ ಸಾಧ್ಯವಿಲ್ಲ' ಎಂಬುದು ಬೆಳೆಗಾರರ ಪ್ರಶ್ನೆ.

ಗೋಕಾಕದಲ್ಲಿ ಬುಧವಾರ ರಸ್ತೆ ತಡೆ ನಡೆಸಿದ ರೈತರು ಹೆದ್ದಾರಿಯಲ್ಲೇ ಕುಳಿತು ಊಟ ಮಾಡಿದರು ಪ್ರಜಾವಾಣಿ ಚಿತ್ರ: ರಾಮೇಶ್ವರ ಕಲ್ಯಾಣಶೆಟ್ಟಿ

ಅಫಜಲಪುರ: ಇಂದು ಬಂದ್

ಕಲಬುರಗಿ ಜಿಲ್ಲೆಯಲ್ಲೂ ಕಬ್ಬು ದರ ನಿಗದಿ ಕಗ್ಗಂಟು ಮುಂದುವರಿದಿದೆ. ರೈತರ ಪರವಾಗಿ ಜಿಲ್ಲಾಡಳಿತ ಹಾಗೂ ಸಕ್ಕರೆ ಕಾರ್ಖಾನೆಗಳ ನಡುವೆ ಹಲವು ಸುತ್ತಿನ ಮಾತುಕತೆ, ಸಭೆಯ ಹೊರತಾಗಿಯೂ ಹಗ್ಗಜಗ್ಗಾಟ ಮುಂದುವರಿದಿದೆ. 'ಜಿಲ್ಲೆಯಲ್ಲಿ ಕಬ್ಬಿನ ಇಳುವರಿ ಕಡಿಮೆಯಿದ್ದು, ಎಫ್‌ಆರ್‌ಪಿ ದರ ನೀಡುವುದಾಗಿ ಕಾರ್ಖಾನೆಗಳು ಹೇಳುತ್ತಿವೆ. ಆದರೆ, ಪ್ರತಿ ಟನ್ ಕಬ್ಬಿಗೆ ಕಟಾವು ಮತ್ತು ಸಾಗಣೆ ವೆಚ್ಚ ಹೊರತುಪಡಿಸಿ ₹3,500 ದರಕ್ಕೆ ಬೆಳೆಗಾರರು ಆಗ್ರಹಿಸಿದ್ದಾರೆ. ಏಕರೂಪ ದರ ನಿಗದಿಗೆ ಜಿಲ್ಲಾಡಳಿತ ಪ್ರಯತ್ನಿಸುತ್ತಿದೆ. ಕಬ್ಬು ದರ ನಿಗದಿಗೆ ಸಂಬಂಧಿಸಿದಂತೆ ಕಬ್ಬು ಬೆಳೆಗಾರರ ಸಂಘದಿಂದ ಗುರುವಾರ (ನ.6) ಅಫಜಲಪುರ ಬಂದ್‌ಗೆ ಕರೆ ನೀಡಲಾಗಿದೆ.

ದಶಕಗಳ 'ಮೋಸ'

- 2012–13ರಲ್ಲಿ ಟನ್ ಕಬ್ಬಿಗೆ ₹1,700 ದರವಿತ್ತು, ಆಗಿದ್ದ ಇಳುವರಿ ಪ್ರಮಾಣ ಶೇ 9 ಮಾತ್ರ. 2013–14ರಲ್ಲಿ ₹3,000 ಕೇಳಿ ರೈತರು ಹೋರಾಡಿದರು. ₹2,100ಕ್ಕೆ ಏರಿಸಲಾಯಿತು. ಸಕ್ಕರೆ ಇಳುವರಿ ಪ್ರಮಾಣವನ್ನೂ ಶೇ 9.5ಕ್ಕೆ ಏರಿಸಲಾಯಿತು
- 2018ರಲ್ಲಿ ರೈತರು ಕಬ್ಬು ತುಂಬಿದ 18 ಲಾರಿಗಳನ್ನು ಸುವರ್ಣ ವಿಧಾನಸೌಧದ ಆವರಣಕ್ಕೆ ನುಗ್ಗಿಸಿ ಪ್ರತಿಭಟನೆ ಮಾಡಿದರು. ಅದಕ್ಕೆ ಮಣಿದ ಸರ್ಕಾರ ಎಫ್‌ಆರ್‌ಪಿಯನ್ನು ₹2,750ಕ್ಕೆ ಏರಿಸಿತು. ಆದರೆ, ಕಾರ್ಖಾನೆಗಳು ಒತ್ತಡ ಹೇರಿ ಇಳುವರಿ ಪ್ರಮಾಣದ ಮಿತಿಯನ್ನೂ ಶೇ 10ಕ್ಕೆ ಏರಿಸಿದವು
- 2023–24ರಲ್ಲಿ ಕಬ್ಬಿಗೆ ₹3,005 ದರ ನೀಡಲಾಯಿತು. ಕೇಂದ್ರ ಸರ್ಕಾರ ಎಫ್‌ಆರ್‌ಪಿಯನ್ನು ₹3,150ಕ್ಕೆ ಏರಿಸಿತು. ರಂಗೋಲಿ ಕೆಳಗೆ ನುಸುಳಿದ ಕಾರ್ಖಾನೆಗಳ ಮಾಲೀಕರು ಇಳುವರಿ ಮಿತಿಯನ್ನು ಶೇ 10.25ಕ್ಕೆ ನಿಗದಿಯಾಗುವಂತೆ ನೋಡಿಕೊಂಡರು
- ಈ ವರ್ಷವೂ ಎಫ್‌ಆರ್‌ಪಿ ₹3,550ಕ್ಕೆ ನಿಗದಿಯಾಗಿದೆ. ಆದರೆ, ಇಳುವರಿ ಪ್ರಮಾಣವನ್ನು ಶೇ 10.25ಕ್ಕೆ ಮಿತಿಗೊಳಿಸಲಾಗಿದೆ. ಕಾರ್ಖಾನೆಗಳು ₹3,010ಕ್ಕೆ ಬಂದು ನಿಂತಿವೆ
- ಶೇ 9.5 ಇಳುವರಿ ಆಧರಿಸಿಯೇ ₹3,500 ದರ ನೀಡಬೇಕು ಎಂಬ ರೈತರ ಆಗ್ರಹ ಈಗ ಆಂದೋಲನದ ಸ್ವರೂಪ ತಾಳಿದೆ

ವಾರದಿಂದ ರಸ್ತೆ ತಡೆ, ಬಂದ್, ಉರುಳುಸೇವೆ, ಅರೆಬೆತ್ತಲೆ ಮೆರವಣಿಗೆ ಮಾಡಿದ ರೈತರು, ಶುಕ್ರವಾರದ (ನ. 7) ಒಳಗೆ ಬೇಡಿಕೆ ಈಡೇರದಿದ್ದರೆ ಅಂದಿನಿಂದ ಸಾಮೂಹಿಕ ಆಮರಣ ಉಪವಾಸ ಕೈಗೊಳ್ಳಲು ನಿರ್ಧರಿಸಿದ್ದಾರೆ.

ಇಳುವರಿ ಪ್ರಮಾಣ ಎಂದರೆ...

ನಿರ್ದಿಷ್ಟ ತೂಕದ ಕಬ್ಬಿನ ಅರೆಯುವಿಕೆಯಿಂದ ಉತ್ಪಾದನೆಯಾದ ಸಕ್ಕರೆಯ ಶೇಕಡವಾರು ಪ್ರಮಾಣವೇ ಇಳುವರಿ ಪ್ರಮಾಣ.

ಉದಾಹರಣೆಗೆ, ಒಂದು ವೇಳೆ 100 ಕೆಜಿ ಕಬ್ಬು ಅರೆದಾಗ 10 ಕೆಜಿ ಸಕ್ಕರೆ ಸಿಕ್ಕಿದರೆ, ಆಗ ಕಬ್ಬಿನ ಇಳುವರಿ ಪ್ರಮಾಣ ಶೇ 10 ಆಗುತ್ತದೆ

ಕೇಂದ್ರ ಸರ್ಕಾರವು 2025–26ನೇ ಸಾಲಿಗೆ ಟನ್ ಕಬ್ಬಿಗೆ ಎಫ್‌ಆರ್‌ಪಿ (₹3,550) ನಿಗದಿಪಡಿಸುವಾಗ ಇಳುವರಿ ಪ್ರಮಾಣದ ಮಿತಿ ಶೇ 10.25 ಇರಬೇಕು ಎಂದು ಹೇಳಿದೆ. ಅಂದರೆ, 1,000 ಕೆಜಿ ಕಬ್ಬು ಅರೆದರೆ 102.5 ಕೆಜಿ ಸಕ್ಕರೆ ಉತ್ಪಾದನೆಯಾಗಬೇಕು. ಅದಕ್ಕಿಂತ ಕಡಿಮೆ ಸಕ್ಕರೆ ಉತ್ಪಾದನೆಯಾದರೆ ಟನ್ ಕಬ್ಬಿಗೆ ₹3,555 ಸಿಗುವುದಿಲ್ಲ

ರಾಜಕೀಯಗೊಳಿಸುವ ಯತ್ನ

ಹೋರಾಟವನ್ನು ರಾಜಕೀಯಗೊಳಿಸುವ ಯತ್ನವೂ ನಡೆಯುತ್ತಿದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ರೈತರ ಹೋರಾಟ ಬೆಂಬಲಿಸಿ, ಬುಧವಾರ ತಮ್ಮ ಜನ್ಮದಿನವನ್ನೂ ಹೋರಾಟದ ಸ್ಥಳದಲ್ಲಿ ಆಚರಿಸಿಕೊಂಡರು. ಮಂಗಳವಾರ ರಾತ್ರಿ ರೈತರೊಂದಿಗೆ ಹೆದ್ದಾರಿಯಲ್ಲಿ ಮಲಗಿದರು.

ಆದರೆ, ನಮಗೆ ಬೇಕಾದುದು ಬೆಂಬಲವಲ್ಲ; ದರ ಎಂದು ರೈತರು ಮಾರುತ್ತರಿಸಿದರು.

'ವಿಜಯೇಂದ್ರ ಬೆಂಬಲ ಕೊಡುವುದಕ್ಕಿಂತ, ಬಿಜೆಪಿಯವರ ಕೈಯಲ್ಲಿರುವ ಕಾರ್ಖಾನೆಗಳಲ್ಲಿ ಉತ್ತಮ ದರ ಕೊಡಿಸಿದರೆ ಸಾಕು. ನೀವು ಕಬ್ಬು ತಿಂದು ಜನ್ಮದಿನ ಆಚರಿಸಿಕೊಂಡು ರೈತರನ್ನು ಸಮಾಧಾನ ಮಾಡಬಹುದು. ಆದರೆ, ಮರುಳು ಮಾಡಲು ಆಗುವುದಿಲ್ಲ. ಬೆಂಬಲದ ಬದಲು ನಿಮ್ಮವರಿಂದಲೇ 'ಬೆಲೆ' ಕೊಡಿಸಿ' ಎಂದು ಭಾರತೀಯ ಕೃಷಿಕ ಸಮಾಜದ (ಸಂಯುಕ್ತ) ಅಧ್ಯಕ್ಷ ಸಿದಗೌಡ ಮೋದಗಿ ಸವಾಲು ಹಾಕಿದ್ದಾರೆ.

ದರ ನಿಗದಿಗೆ ತಿಕ್ಕಾಟ

ಬೆಳಗಾವಿ ಮಾತ್ರವಲ್ಲದೆ, ಗದಗ, ವಿಜಯಪುರ, ಬಾಗಲಕೋಟೆ, ಉತ್ತರ ಕನ್ನಡ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಕಬ್ಬಿಗೆ ಬೆಲೆ ನಿಗದಿ ವಿಚಾರದಲ್ಲಿ ಕಾರ್ಖಾನೆಗಳು ಮತ್ತು ಬೆಳೆಗಾರರ ನಡುವೆ ತಿಕ್ಕಾಟ ನಡೆಯುತ್ತಿದೆ.

ಗದಗ ಜಿಲ್ಲೆಯ ಮುಂಡರಗಿಯ ರೈತರು ಸಾವಿರಾರು ಎಕರೆಯಲ್ಲಿ ಕಬ್ಬು ಬೆಳೆದಿದ್ದು, ತಾಲ್ಲೂಕಿನ ಗಂಗಾಪುರ ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಜಯನಗರ ಶುಗರ್ಸ್ ಕಾರ್ಖಾನೆಯವರು ಈಗಾಗಲೇ ಕಬ್ಬು ಅರೆಯಲು ಆರಂಭಿಸಿದ್ದಾರೆ. ಆದರೆ, ಕಬ್ಬಿನ ದರ ನಿಗದಿ ಕುರಿತಂತೆ ಸಕ್ಕರೆ ಕಾರ್ಖಾನೆಯವರು ಹಾಗೂ ಕಬ್ಬು ಬೆಳೆಗಾರರ ನಡುವೆ ಹಗ್ಗಜಗ್ಗಾಟ ಮುಂದುವರಿದಿದೆ.

ಕೇಂದ್ರ ಸರ್ಕಾರ ಟನ್ ಕಬ್ಬಿಗೆ ₹3,550 ಎಫ್‌ಆರ್‌ಪಿ ನಿಗದಿಗೊಳಿಸಿದ್ದು, ಅದೇ ದರದಲ್ಲಿ ಕಬ್ಬು ಖರೀದಿಸಬೇಕು ಎಂದು ಇಲ್ಲಿಯ ರೈತರು ಒತ್ತಾಯಿಸಿದ್ದಾರೆ. ಜಿಲ್ಲಾಧಿಕಾರಿ ಅವರು ಈ ಕುರಿತು ಈಗಾಗಲೇ ರೈತರು ಹಾಗೂ ಸಕ್ಕರೆ ಕಾರ್ಖಾನೆಯವರ ಸಭೆ ನಡೆಸಿದ್ದು, ಎಫ್‌ಆರ್‌ಪಿ ದರದಂತೆ ರೈತರ ಕಬ್ಬು ಖರೀದಿಸಬೇಕು ಎಂದು ಜಿಲ್ಲಾಧಿಕಾರಿ ಸಕ್ಕರೆ ಕಾರ್ಖಾನೆಯವರಿಗೆ ಸೂಚಿಸಿದ್ದಾರೆ. ಪ್ರಸ್ತುತ ಸಕ್ಕರೆ ಕಾರ್ಖಾನೆಯವರು ಟನ್ ಕಬ್ಬಿಗೆ ₹2,630 ನೀಡಿ ಖರೀದಿಸುತ್ತಿದ್ದು, ಟನ್ ಕಬ್ಬಿಗೆ ಹೆಚ್ಚುವರಿಯಾಗಿ ₹500 ನೀಡಬೇಕು ಎಂದು ರೈತರು ಪಟ್ಟು ಹಿಡಿದಿದ್ದಾರೆ.

ದರ ಕುಸಿತದ ಬರೆ

ಪ್ರಜಾವಾಣಿ ವಾರ್ತೆ

ಕಬ್ಬಿನ ದರಕ್ಕೆ ಆಗ್ರಹಿಸಿ ನಡೆಯುತ್ತಿರುವ ಪ್ರತಿಭಟನೆ ಒಂದೆಡೆಯಾದರೆ, ಮೆಕ್ಕೆಜೋಳ, ಈರುಳ್ಳಿ ಸೇರಿದಂತೆ ವಿವಿಧ ಬೆಳೆಗಳ ದರವೂ ಕುಸಿತವಾಗಿದ್ದು, ರೈತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಇದರ ನಡುವೆಯೇ, ದೀಪಾವಳಿ ಬಳಿಕ ಅಕ್ಕಿ ದರ ಕಡಿಮೆಯಾಗಿರುವುದು ಭತ್ತ ಬೆಳೆಗಾರರಲ್ಲಿ ಆತಂಕ ಮೂಡಿಸಿದೆ.

ರಾಜ್ಯದ ಹಲವು ಜಿಲ್ಲೆಗಳಲ್ಲಿ ಮೆಕ್ಕೆಜೋಳದ ಬೆಲೆ ಕುಸಿದಿದೆ. ಕೇಂದ್ರ ಸರ್ಕಾರ ಕ್ವಿಂಟಲ್ ಮೆಕ್ಕೆಜೋಳಕ್ಕೆ ₹2,400 ಕನಿಷ್ಠ ಬೆಂಬಲ ಬೆಲೆ ಘೋಷಿಸಿದ್ದರೂ ರಾಜ್ಯದಲ್ಲಿ ಎಲ್ಲೂ ಖರೀದಿ ಕೇಂದ್ರಗಳು ಇನ್ನೂ ಆರಂಭವಾಗಿಲ್ಲ. ಹೀಗಾಗಿ ರೈತರು ಕಡಿಮೆ ಬೆಲೆಗೆ ಮಾರುವಂತಾಗಿದೆ.

ದಾವಣಗೆರೆ ಸೇರಿದಂತೆ ಹಲವೆಡೆ ಭಾರಿ ಮಳೆಗೆ ಮೆಕ್ಕೆಜೋಳಕ್ಕೆ ಹಾನಿಯಾಗಿದ್ದು, ಇಳುವರಿ ಕುಸಿತ ಕಂಡಿದೆ. ಕೈಗೆ ಸಿಕ್ಕ ಅಲ್ಪ ಬೆಳೆಗೂ ಉತ್ತಮ ಬೆಲೆ ಸಿಗದಿರುವುದು ರೈತರನ್ನು ಕಂಗಾಲಾಗಿಸಿದೆ.

ದಾವಣಗೆರೆ ಜಿಲ್ಲೆ ವ್ಯಾಪ್ತಿಯ ಮುಕ್ತ ಮಾರುಕಟ್ಟೆಯಲ್ಲಿ ₹1,650 ರಿಂದ ₹1,700ರಂತೆ ಕ್ವಿಂಟಲ್ ಮೆಕ್ಕೆಜೋಳ ಖರೀದಿಸಲಾಗುತ್ತಿದೆ. ಇಲ್ಲಿನ ದಾವಣಗೆರೆಯ ಎಪಿಎಂಸಿಯಲ್ಲಿ ಬುಧವಾರ ಕ್ವಿಂಟಲ್‌ಗೆ ಕನಿಷ್ಠ ₹1,400ರಿಂದ ಗರಿಷ್ಠ ₹1,949ರಂತೆ ವಹಿವಾಟು ನಡೆದಿದೆ.

ಮಳೆಯ ಹೊಡೆತ: ಕೊಪ್ಪಳ ಜಿಲ್ಲೆಯಲ್ಲಿ ಬೆಳೆದ ಮೆಕ್ಕೆಜೋಳಕ್ಕೆ ಒಂದೆಡೆ ಬೆಲೆ ಕುಸಿತವಾಗಿದ್ದರೆ, ಇನ್ನೊಂದೆಡೆ ಫಸಲು ಬಂದ ಸಮಯದಲ್ಲಿಯೇ ಸುರಿದ ಮಳೆ ರೈತರಿಗೆ ಹೊಡೆತ ನೀಡಿದೆ. ಮೆಕ್ಕೆಜೋಳ ಸದ್ಯಕ್ಕೆ ಮಾರುಕಟ್ಟೆಗೆ ವ್ಯಾಪಕವಾಗಿ ಆವಕವಾಗುತ್ತಿದ್ದು, ಬೆಂಬಲ ಬೆಲೆ ನೀಡಿ ಖರೀದಿ ಮಾಡಬೇಕು ಎಂದು ರೈತರು ಒತ್ತಾಯಿಸುತ್ತಿದ್ದಾರೆ. ಪ್ರಸ್ತುತ ಮಾರುಕಟ್ಟೆ ದರ ಪ್ರತಿ ಕ್ವಿಂಟಲ್‌ಗೆ ₹1,800ರಿಂದ 1,850 ಆಗಿದೆ.

ವಿಜಯನಗರ ಜಿಲ್ಲೆಯಲ್ಲಿ ಮೆಕ್ಕೆಜೋಳ ಖರೀದಿ ಕೇಂದ್ರಗಳನ್ನು ತೆರೆದಿಲ್ಲ. ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ₹2,100ರಷ್ಟು ದರ ಸಿಗಬೇಕಿತ್ತು, ಸದ್ಯ ₹1,700ರಿಂದ ₹1,800ರಷ್ಟು ದರ ಇದೆ.

ಹಾವೇರಿ ಜಿಲ್ಲೆಯಲ್ಲಿ ಮೆಕ್ಕೆಜೋಳ ಒಣಗಿಸಲು ಸಹ ರೈತರು ಪರದಾಡುತ್ತಿದ್ದು, ಇತ್ತೀಚಿನ ದಿನಗಳಲ್ಲಿ ಬಿಡುವು ನೀಡದೆಯೇ ಸುರಿಯುತ್ತಿರುವ ಮಳೆಯಿಂದ ಕಾಳುಗಳು ಹಸಿಯಾಗಿ ಕೊಳೆಯುತ್ತಿವೆ. ಬೆಲೆ ಹೆಚ್ಚಳಕ್ಕೆ ಆಗ್ರಹಿಸಿ ರೈತ ಸಂಘಟನೆಗಳು ಜಿಲ್ಲಾಧಿಕಾರಿ ಕಚೇರಿ ಹಾಗೂ ತಾಲ್ಲೂಕು ಕಚೇರಿಗಳ ಎದುರು ಪ್ರತಿಭಟನೆ ನಡೆಸುತ್ತಿವೆ. ಅಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೂ ಮನವಿ ಸಲ್ಲಿಸುತ್ತಿವೆ. ಆದರೆ, ಸೂಕ್ತ ಬೆಲೆ ಸಿಗುತ್ತಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಮೆಕ್ಕೆಜೋಳ ಬೆಳೆ ಖರೀದಿ ಕೇಂದ್ರ ತೆರೆಯದ ಕಾರಣದಿಂದ ಹಳಿಯಾಳ, ಮುಂಡಗೋಡ ಭಾಗದ ರೈತರು ಕಡಿಮೆ ದರಕ್ಕೆ ವ್ಯಾಪಾರಿಗಳಿಗೆ ಮೆಕ್ಕೆಜೋಳ ಮಾರಾಟ ಮಾಡುವ ಅನಿವಾರ್ಯ ಎದುರಾಗಿದೆ.

ದಕ್ಷಿಣದ ಜಿಲ್ಲೆಗಳಲ್ಲೂ ಪರಿಸ್ಥಿತಿ ಭಿನ್ನವಾಗೇನೂ ಇಲ್ಲ.

ಭತ್ತದ ಬೆಲೆ ಕುಸಿಯುವ ಆತಂಕ

ಈ ಬಾರಿಯ ಮುಂಗಾರಿನಲ್ಲಿ ಉತ್ತಮ ಇಳುವರಿ ಬಂದಿರುವ ಕಾರಣಕ್ಕೆ ದೀಪಾವಳಿ ನಂತರದಲ್ಲಿ ದೇಶದಾದ್ಯಂತ ವಿವಿಧ ತಳಿಯ ಅಕ್ಕಿಯ ಬೆಲೆಯಲ್ಲಿ ಇಳಿಕೆ ಕಂಡು ಬಂದಿದೆ. ಇದರಿಂದ ಭತ್ತದ ಬೆಲೆ ಇಳಿಯುವ ಆತಂಕ ವ್ಯಕ್ತವಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ 90 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬಿತ್ತನೆಯಾಗಿದ್ದು, ಕಟಾವು, ಒಕ್ಕಣೆ ಕಾರ್ಯ ಭರದಿಂದ ನಡೆಯುತ್ತಿದೆ. ಸದ್ಯ ಕ್ವಿಂಟಲ್ ಸೋನಾಮಸೂರಿ ಭತ್ತಕ್ಕೆ ₹2,100ರಿಂದ 2,200 ಇದೆ. ಆರ್‌ಎನ್‌ಆರ್ ತಳಿ ಕ್ವಿಂಟಾಲ್ ₹2,150 ಇದೆ. ಕಳೆದ ವರ್ಷದ ನವೆಂಬರ್‌ನಲ್ಲಿ ಆರ್‌ಎನ್‌ಆರ್ ಭತ್ತಕ್ಕೆ ₹3,000 ಹಾಗೂ ಸೋನಾ ಮಸೂರಿಗೆ ₹2,800 ಸಿಗುತ್ತಿತ್ತು. ಕೃಷ್ಣಾನದಿ ಪಾತ್ರದ ಸುರಪುರ, ಶಹಾಪುರ ಅಲ್ಲದೆ ನೆರೆಯ ಆಂಧ್ರಪ್ರದೇಶ, ತೆಲಂಗಾಣಗಳಲ್ಲಿಯೂ ಭತ್ತ ಬೆಳೆಯಲಾಗಿದ್ದು, ಮಾರುಕಟ್ಟೆಗೆ ಭಾರಿ ಪ್ರಮಾಣದ ದಾಸ್ತಾನು ಬರುತ್ತಿದೆ. ಹೀಗಾಗಿ ಬೆಲೆ ಕುಸಿಯುತ್ತಲೇ ಇದೆ.

ಭತ್ತದ ಕಣಜ ಎಂದು ಹೆಸರಾದ ಕೊಪ್ಪಳ ಜಿಲ್ಲೆಯಲ್ಲಿ ಭತ್ತಕ್ಕೆ ಸದ್ಯ ಮಾರುಕಟ್ಟೆಯಲ್ಲಿ ಕನಿಷ್ಠ ಬೆಂಬಲ ಬೆಲೆಗಿಂತಲೂ ಹೆಚ್ಚು ಬೆಲೆ ಇದೆ. ಹೀಗಾಗಿ ರೈತರು ಖರೀದಿ ಕೇಂದ್ರಗಳತ್ತ ಮುಖಮಾಡುತ್ತಿಲ್ಲ. ಬೆಂಬಲ ಬೆಲೆ ಯೋಜನೆಯಡಿ ಭತ್ತ ಸಾಮಾನ್ಯ ₹2,369 ಹಾಗೂ ಭತ್ತ ಗ್ರೇಡ್–ಎ ₹2,389 ದರ ನಿಗದಿಪಡಿಸಲಾಗಿದೆ. ಆದರೆ, ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಲ್ ಭತ್ತಕ್ಕೆ ₹2100ರಿಂದ ₹2200 ಬೆಲೆ ಸಿಗುತ್ತಿದೆ. ಆದರೆ, ಇದೆಷ್ಟು ದಿನ ಎಂಬುದು ತಿಳಿದಿಲ್ಲ.

'ಈ ಸಲದ ಮುಂಗಾರು ಹಂಗಾಮಿನಲ್ಲಿ ಉತ್ತಮ ಫಸಲು ಬಂದಿರುವ ಕಾರಣ ಅಕ್ಕಿ ಬೆಲೆ ಇಳಿಯುವ ಸಾಧ್ಯತೆಯಿದೆ. ಆದರೆ ಸೋನಾಮಸೂರಿ, ಆರ್‌ಎನ್‌ಆರ್ ಹೀಗೆ ನಿರ್ದಿಷ್ಟ ತಳಿಗಳಿಗೆ ಹೆಚ್ಚು ಬೇಡಿಕೆ ಇರುವ ಕಾರಣ ಆ ತಳಿಯ ಅಕ್ಕಿಗಳಿಗೆ ಯಾವಾಗಲೂ ಬೇಡಿಕೆ ಮತ್ತು ಬೆಲೆ ಇದ್ದೇ ಇರುತ್ತದೆ' ಎಂದು ಅಕ್ಕಿ ಗಿರಣಿ ಮಾಲೀಕರ ಸಂಘದ ರಾಜ್ಯಾಧ್ಯಕ್ಷ ಸಾವಿತ್ರಿ ಪುರುಷೋತ್ತಮ ಹೇಳಿದರು.

ಸದ್ಯಕ್ಕೆ ಸ್ಥಿರ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕುಚ್ಚಲಕ್ಕಿ ಬಳಕೆ ಹೆಚ್ಚು ಪ್ರಚಲಿತದಲ್ಲಿದೆ. ಇಲ್ಲಿನ ರೈತರು ಹೆಚ್ಚಾಗಿ ಕುಚ್ಚಲಕ್ಕಿಯನ್ನೇ ಬೆಳೆಯುತ್ತಾರೆ. ಇಲ್ಲಿ ಬೆಳೆದಿರುವ ಅಕ್ಕಿಯನ್ನು ಸ್ಥಳೀಯ ಗಿರಣಿಗಳೇ ಖರೀದಿಸುತ್ತವೆ. ಹೀಗಾಗಿ ಭತ್ತದ ಕೊಯ್ಲಿನ ವೇಳೆ ಅಕ್ಕಿ ದರ ಒಮ್ಮೆ ಕುಸಿತವಾಗುತ್ತದೆ. ಆ ನಂತರ ಮತ್ತೆ ಏರಿಕೆಯಾಗುತ್ತದೆ. ಸದ್ಯಕ್ಕೆ ಬೆಲೆ ಸ್ಥಿರವಾಗಿದೆ.

ಈರುಳ್ಳಿ ತಂದ ಕಷ್ಟ

ರಾಜ್ಯದಾದ್ಯಂತ ಈರುಳ್ಳಿ ಬೆಲೆಯೂ ಕುಸಿತ ಕಂಡಿದೆ. ಮಳೆಯಿಂದಾಗಿ ಇಳುವರಿ ಕಡಿಮೆಯಾಗಿದೆ. ಅದರೊಂದಿಗೆ ಈಗ ಬೆಲೆಯೂ ಇಳಿದು ರೈತರ ಸಂಕಷ್ಟವನ್ನು ಇನ್ನಷ್ಟು ಹೆಚ್ಚಿಸಿದೆ.

'ಚಿತ್ರದುರ್ಗ ಜಿಲ್ಲೆಯಲ್ಲಿ 60 ಕೆ.ಜಿ.ಯ ಚೀಲವನ್ನು ₹200ಕ್ಕೆ ಕೇಳುತ್ತಿದ್ದಾರೆ. ಇದರಿಂದ ಹಾಕಿದ ಬಂಡವಾಳವಿರಲಿ ಕೂಲಿ ಖರ್ಚು ಕೂಡಾ ಸಿಗುತ್ತಿಲ್ಲ. ದರ ಕುಸಿತದಿಂದ ಈರುಳ್ಳಿಯನ್ನು ಬೆಂಗಳೂರು ಮಾರುಕಟ್ಟೆಗೆ ಸಾಗಿಸಲು ಆಗುತ್ತಿಲ್ಲ. ಹೆಚ್ಚು ದಿನ ಇಟ್ಟುಕೊಳ್ಳಲೂ ಸಾಧ್ಯವಾಗುತ್ತಿಲ್ಲ' ಎಂದು ಹಂಪಯ್ಯನಮಾಳಿಗೆ ಗೊಲ್ಲರಹಟ್ಟಿಯ ಈರುಳ್ಳಿ ಬೆಳೆಗಾರ ಟಿ.ಸಂಪತ್ ಕುಮಾರ್ ಹೇಳಿದರು.

ಧಾರವಾಡ ಜಿಲ್ಲೆಯಲ್ಲಿ ಈರುಳ್ಳಿಯನ್ನು ಕಡಿಮೆ ಬೆಲೆಗೆ ಮಾರಾಟ ಮಾಡಲು ಮನಸ್ಸಿಲ್ಲದೆ, ಶೇಖರಿಸಿಡಲೂ ಆಗದೆ ಬೆಳೆಗಾರರು ಸಂಕಷ್ಟಕ್ಕೀಡಾಗಿದ್ದಾರೆ. ವಿಜಯನಗರ ಜಿಲ್ಲೆಯಲ್ಲಿ ಈರುಳ್ಳಿ ಕೆ.ಜಿ.ಗೆ ಕನಿಷ್ಠ ₹20 ಇರಬೇಕಿತ್ತು, ಸದ್ಯ ₹6ರಿಂದ ₹7ರಷ್ಟಿದೆ. ಹಾಕಿದ ದುಡ್ಡೂ ಬರುವುದಿಲ್ಲ ಎಂದು ಖಚಿತವಾಗಿದ್ದರಿಂದ ಕೆಲವು ರೈತರು ಈರುಳ್ಳಿ ಕಟಾವು ಮಾಡಿಯೇ ಇಲ್ಲ.

'ಕಟಾವು ಮಾಡಿ ಮಾರುಕಟ್ಟೆಗೆ ಸಾಗಿಸಲು ಮಾಡುವ ವೆಚ್ಚ ಸಿಗದಷ್ಟು ಈರುಳ್ಳಿ ದರ ಕುಸಿದಿದೆ. ಬೆಂಬಲ ಬೆಲೆ ಅಡಿ ಖರೀದಿಸಲು ಸರ್ಕಾರ ಕ್ರಮ ವಹಿಸಿಲ್ಲ. ಬೆಳೆಗಾರರಿಗೆ ದಿಕ್ಕುತೋಚದಂತಾಗಿದೆ' ಎಂದು ರೈತ ಮುಖಂಡ ಶಂಕರಪ್ಪ ಅಂಬಲಿ 'ಪ್ರಜಾವಾಣಿ'ಗೆ ತಿಳಿಸಿದರು.

ದಕ್ಷಿಣದಲ್ಲೂ ಅಸಂತೃಪ್ತಿ

ಕಬ್ಬು ಬೆಳೆಯುವ ದಕ್ಷಿಣದ ಜಿಲ್ಲೆಗಳಾದ ಮಂಡ್ಯ, ಮೈಸೂರು, ಚಾಮರಾಜನಗರ ವ್ಯಾಪ್ತಿಯ ಬೆಳೆಗಾರರಲ್ಲೂ ಅಸಂತೃಪ್ತಿ ಮಡುಗಟ್ಟಿದೆ. ಎಫ್‌ಆರ್‌ಪಿ ದರಕ್ಕಾಗಿ ಪ್ರತಿ ವರ್ಷ ಪ್ರತಿಭಟನೆಗಳನ್ನು ನಡೆಸುತ್ತಲೇ ಬಂದಿದ್ದಾರೆ. ಹಾಗಿದ್ದರೂ, ಅವರ ಬೇಡಿಕೆ ಈಡೇರಿಲ್ಲ.

ಮಂಡ್ಯ ಜಿಲ್ಲೆಯಲ್ಲಿ ಈಗಾಗಲೇ ಮೈಷುಗರ್, ಚಾಂಷುಗರ್ ಸಕ್ಕರೆ ಕಾರ್ಖಾನೆ ವ್ಯಾಪ್ತಿಯ ರೈತರು ವಿವಿಧ ಬೇಡಿಕೆ ಈಡೇರಿಕೆಗಾಗಿ ಹಲವು ಹೋರಾಟಗಳನ್ನು ನಡೆಸಿದ್ದಾರೆ. ಕಾರ್ಖಾನೆಗಳು ಬಾಕಿ ಉಳಿಸಿಕೊಂಡಿದ್ದನ್ನೂ ಪಾವತಿ ಮಾಡಿಲ್ಲ ಎಂಬುದು ರೈತರ ಆಕ್ರೋಶಕ್ಕೆ ಮತ್ತೊಂದು ಕಾರಣ.

'2022-23ರ ಹಂಗಾಮಿನಲ್ಲಿ ಕಾರ್ಖಾನೆಗಳಿಗೆ ಕಬ್ಬು ಪೂರೈಸಿದ್ದವರಿಗೆ ರಾಜ್ಯ ಸರ್ಕಾರ ಟನ್ ಕಬ್ಬಿಗೆ ₹150 ಪ್ರೋತ್ಸಾಹ ಧನ ಪಾವತಿಸುವುದಾಗಿ ಘೋಷಿಸಿತ್ತು. ಕೂಡಲೇ ಅದನ್ನು ನೀಡಬೇಕು' ಎಂದು ರೈತ ಸಂಘದ ವಿಭಾಗೀಯ ಉಪಾಧ್ಯಕ್ಷ ಶಂಕರೇಗೌಡ ಆಗ್ರಹಿಸಿದ್ದಾರೆ.

'ಪ್ರತಿ ಟನ್ ಕಬ್ಬಿಗೆ ಕನಿಷ್ಠ ₹14 ಸಾವಿರದಿಂದ ₹15 ಸಾವಿರದಷ್ಟು ಆದಾಯ ಪಡೆಯುತ್ತಿರುವ ಸಕ್ಕರೆ ಕಾರ್ಖಾನೆ ಮಾಲೀಕರು ಬೆಳೆಗಾರರನ್ನು ಶೋಷಿಸುತ್ತಿದ್ದಾರೆ. ಕಬ್ಬು ಪೂರೈಸಿದವರಿಗೆ 14 ದಿನಗಳೊಳಗೆ ಹಣ ಪಾವತಿಸಬೇಕೆಂಬ ನಿಯಮವಿದ್ದರೂ ಒಂದೂವರೆ ತಿಂಗಳಿಗೂ ಹೆಚ್ಚು ಸಮಯವಾದರೂ ಪಾವತಿಸುತ್ತಿಲ್ಲ. ನಿರೀಕ್ಷಿತ ಬೆಲೆ ಸಿಗದೆ ಬೆಳೆಗಾರರು ಕಬ್ಬಿನಿಂದ ವಿಮುಖರಾಗುತ್ತಿದ್ದಾರೆ. ಶೇ 9.5ರಷ್ಟು ಇಳುವರಿಗೆ ಕನಿಷ್ಠ ₹5,500 ಎಫ್‌ಆರ್‌ಪಿ ನಿಗದಿ ಪಡಿಸಬೇಕು ಸಂಘ ಒತ್ತಾಯಿಸುತ್ತಿದೆ. ಆದರೆ, ರಾಜಕೀಯ ಪ್ರಭಾವವುಳ್ಳ ಕಾರ್ಖಾನೆ ಮಾಲೀಕರು ದರ ನಿಗದಿ ಮಾಡಲು ಬಿಡುತ್ತಿಲ್ಲ' ಎಂಬುದು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ಎಲ್. ಭರತ್‌ರಾಜ್ ದೂರು.

ಚನ್ನಮ್ಮನ ಕಿತ್ತೂರಿನಲ್ಲಿ ರೈತರು ರಸ್ತೆ ತಡೆ ನಡೆಸಿದ್ದರಿಂದ ಬುಧವಾರವೂ ಕಬ್ಬಿನ ಲಾರಿಗಳು ಸಾಲಾಗಿ ನಿಂತವು ಪ್ರಜಾವಾಣಿ ಚಿತ್ರ: ಪ್ರದೀಪ ಮೇಲಿನಮನಿ

ಮಾಹಿತಿ: ಬಸವರಾಜ ಹವಾಲ್ದಾರ, ಬಸವರಾಜ ಸಂಪಳ್ಳಿ, ಸತೀಶ್ ಎಂ.ಬೆಳ್ಳಕ್ಕಿ, ಸಿದ್ದು ಆರ್.ಜಿ.ಹಳ್ಳಿ, ಗಣಪತಿ ಹೆಗಡೆ, ಬಸೀರ ಅಹ್ಮದ್ ನಗಾರಿ

ಸಮಪಾಲು

ನುಡಿ ಬೆಳಗು

ಪಿ.ಚಂದ್ರಿಕಾ

ರೈತನೊಬ್ಬ ತನ್ನ ಹೊಲದಲ್ಲಿ ಬಾವಿಯನ್ನು ತೋಡಿಸುತ್ತಿದ್ದ. ಸುತ್ತಮುತ್ತ ಅಂಥಾ ನೀರಿನ ಸೌಕರ್ಯ ಇರಲಿಲ್ಲ. ಇದ್ದ ಬಾವಿಗಳ ನೀರು ಕುಡಿಯಲು ಯೋಗ್ಯವಾಗಿರಲಿಲ್ಲ. ಅನಿವಾರ್ಯ ಜೀವನಾಧಾರವಾದ ಅದನ್ನೇ ಕುಡಿಯುತ್ತಿದ್ದರು. ರೈತನು ತೋಡುತ್ತಿದ್ದ ಬಾವಿಯಲ್ಲಿ ನೀರು ಸಿಕ್ಕಿತು. ಈಗವನಿಗೆ ತನ್ನ ಜಮೀನಿನಲ್ಲಿ ಸಿಕ್ಕ ನೀರಿನ ಬಗ್ಗೆ ಎಲ್ಲರಲ್ಲೂ ಹೇಳಿಕೊಳ್ಳಬೇಕೆಂದು ಆಸೆಯಾಯಿತು. ಸಿಕ್ಕವರ ಬಳಿಯೆಲ್ಲಾ ತನ್ನ ಜಮೀನಿನ ನೀರು ತುಂಬಾ ಸಿಹಿಯಾಗಿದೆ, ತುಂಬಾ ರುಚಿಕರವಾಗಿದೆ ಎಂದೆಲ್ಲಾ ಹೇಳತೊಡಗಿದ. ಈ ಗೀಳು ಅವನನ್ನು ಹೇಗೆ ಆವರಿಸಿಕೊಳ್ಳುತ್ತಾ ಹೋಯಿತೆಂದರೆ ಅದರ ಬಗ್ಗೆ ಕಥೆಗಳನ್ನು ಕಟ್ಟತೊಡಗಿದ, 'ರಾತ್ರಿ ತನ್ನ ಕನಸಿನಲ್ಲಿ ದೇವತೆಯೊಬ್ಬಳು ಕಾಣಿಸಿಕೊಂಡು ನಿನ್ನ ಜಮೀನಿನಲ್ಲಿ ಸಿಕ್ಕಿರುವುದು ಅಮೃತ ಜಲ, ದೇವಲೋಕದಿಂದ ಸೀದಾ ಇಲ್ಲಿಗೇ ಬಂದಿದೆ. ನಿನ್ನ ಅದೃಷ್ಟಕ್ಕೆ ಎಣೆಯೇ ಇಲ್ಲ' ಎಂದು ಹೇಳಿದ್ದಳು. ನನ್ನಂಥಾ ಅದೃಷ್ಟವಂತ ಮತ್ತ್ಯಾರಿದ್ದಾರೆ...' ಹೀಗೇ ಏನೇನೋ ಹೇಳಲು ಆರಂಭಿಸಿದ್ದ. ಬರಬರುತ್ತಾ ಅದು ಅಹಂಕಾರಕ್ಕೂ ತಿರುಗಿತ್ತು.

ರೈತನ ಅತಿಯಾದ ಮಾತುಗಳಿಂದ ಜನರಿಗೆ ಬೇಸರವೂ ಆಗಿತ್ತು. ಸಿಕ್ಕಸಿಕ್ಕವರ ಬಳಿ ರೈತ `ನನ್ನ ಬಾವಿಯ ನೀರಿನ ರುಚಿ ನೀವು ನೋಡಬೇಕು, ಅಸದೃಶವಾಗಿದೆ' ಎಂದು ಹೇಳುತ್ತಿದ್ದ. ಕರೆದುಕೊಂಡು ಹೋಗಿ ನೀರು ಕುಡಿಸಿ ಹೊಗಳಿಸಿಕೊಳ್ಳುತ್ತಿದ್ದ. ಊರವರಿಗೆ ಮಾತ್ರ ಒಂದು ಹನಿ ನೀರನ್ನೂ ಮನೆಗೆ ತೆಗೆದುಕೊಂಡು ಹೋಗಲು ಬಿಡುತ್ತಿರಲಿಲ್ಲ. ಇದನ್ನೆಲ್ಲಾ ನೋಡುತ್ತಿದ್ದ ಹಿರಿಯನೊಬ್ಬ `ಭೂಮಿತಾಯಿ ಕೊಟ್ಟರಷ್ಟೇ ನಮಗೆ. ಈ ಹುಚ್ಚಾಟದಿಂದ ಏನು ಪ್ರಯೋಜನ' ಎಂದ. ಇದನ್ನು ಕೇಳಿ ಸಿಟ್ಟಿಗೆದ್ದ ರೈತ, 'ನಿನ್ನ ಭೂಮಿಯಲ್ಲಿ ಇಂಥಾ ನೀರು ಸಿಗಲಿಲ್ಲ ಎನ್ನುವ ಹೊಟ್ಟೆಉರಿ. ನನ್ನ ಬಾವಿಯ ನೀರು ರುಚಿಕರವಿಲ್ಲ ಎಂದು ಒಬ್ಬ ಸಣ್ಣ ಹುಡುಗನ ಹತ್ತಿರ ಹೇಳಿಸಿಬಿಡು ನೋಡೋಣ' ಎಂದು ಸವಾಲು ಒಡ್ಡುತ್ತಾನೆ. ಹಿರಿಯನಿಗೆ ಇವನಿಗೆ ಬುದ್ಧಿ ಕಲಿಸದೆ ಬೇರೆ ಗತ್ಯಂತರವೇ ಇರಲಿಲ್ಲ. ಹತ್ತು ಜನ ಹುಡುಗರನ್ನು ಕರೆಸಿ ಅವರಿಗೆ ಸಿಹಿಯನ್ನು ತಿನ್ನಿಸಿ ನಂತರ ರೈತನ ಬಳಿಗೆ ಕರೆತರುತ್ತಾನೆ. ಸಿಹಿ ತಿಂದಿದ್ದ ಆ ಮಕ್ಕಳು ಬಾವಿಯ ನೀರನ್ನು ಕುಡಿದು ಸಪ್ಪೆ ಎನ್ನುತ್ತಾರೆ. ಅರೆ ಇದೇನಿದು ಈ ಮಕ್ಕಳು ಹೀಗೆ ಹೇಳುತ್ತಿದ್ದಾರಲ್ಲಾ ಎಂದು ರೈತನಿಗೆ ಆಶ್ಚರ್ಯವಾಗುತ್ತದೆ. ಅವಮಾನವೂ ಆಗುತ್ತದೆ. ಆ ಮಕ್ಕಳಿಗೆ ಎಷ್ಟೇ ಹೇಳಿಕೊಟ್ಟರೂ ಸುಳ್ಳು ಹೇಳುವ ವಯಸ್ಸಂತೂ ಅಲ್ಲ. ಇದರಲ್ಲೇನೋ ಮಸಲತ್ತಿದೆ ಎನ್ನಿಸಿದರೂ, ಅವಮಾನದಿಂದ ತಲೆತಗ್ಗಿಸುತ್ತಾನೆ.

ಎಲ್ಲವನ್ನು ಗಮನಿಸಿದ ಹಿರಿಯ ಹೇಳಿದ, 'ನೀನು ಸೋಲೊಪ್ಪಿಕೊಳ್ಳುವ ಅಗತ್ಯ ಖಂಡಿತಾ ಇಲ್ಲ. ಇದೆಲ್ಲಾ ನಾನೇ ಮಾಡಿದ್ದು ಮಕ್ಕಳಿಗೆ ಸಿಹಿಕೊಟ್ಟು ಕರೆದುಕೊಂಡು ಬಂದೆ. ಒಂದು ನೆನಪಿಟ್ಟುಕೋ ಪ್ರಕೃತಿ ಪ್ರೀತಿಯಿಂದ ನಮಗೆ ಏನನ್ನು ಕೊಡುತ್ತದೆಯೋ ಅದನ್ನು ತೆಗೆದುಕೊಳ್ಳುವುದಷ್ಟೇ ನಮ್ಮ ಕೆಲಸ. ನಮ್ಮದೇ ಜಮೀನಿನಲ್ಲಿ ಸಿಕ್ಕರೂ ಅದರಲ್ಲಿ ಎಲ್ಲರಿಗೂ ಸಮಪಾಲಿದೆ. ನಾಲ್ಕು ಜನರಿಗೆ ಉಪಯೋಗವಾಗುವ ಹಾಗೆ ಅದನ್ನು ನಾವು ಬಳಸಿಕೊಳ್ಳಬೇಕು' ಎನ್ನುತ್ತಾನೆ. ಹಿರಿಯನ ಮಾತುಗಳಿಂದ ಬುದ್ಧಿ ಕಲಿತ ರೈತ, ತನ್ನ ಬಾವಿಯ ನೀರನ್ನು ಯಾರು ಬೇಕಾದರೂ ತೆಗೆದುಕೊಳ್ಳಬಹುದು ಎಂದು ಘೋಷಿಸಿದ.

ನಮಗೆ ದಕ್ಕಿದ ಒಳ್ಳೆಯದನ್ನು ನಾಲ್ಕು ಜನರಿಗೆ ಹಂಚಬೇಕು. ಅದೇ ಸಾರ್ಥಕತೆ. ❖

ಗುಂಡಣ್ಣ

© 2014 by King Features Syndicate, Inc. World Rights reserved
www.Blondie.com

ಪದಬಂಧ 6215

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪೊಳ್ಳು ಹರಟೆಯಿದು (4)
3.ಉತ್ತ ನೆಲವನ್ನು ಮಟ್ಟ ಮಾಡುವ ಸಾಧನ (3)
5.ವಿನಾಯಕ ಇಲ್ಲಿಯೇ ಪ್ರತ್ಯಕ್ಷ! (3)
7.ತಿರುಗಿ ಲಾಗ ಹಾಕಿದಾಗ ಆದ ಗದ್ದಲ! (3)
8.ಲೋಹದ ಹಕ್ಕಿಯಲ್ಲಿನ ಪಯಣ (5)
11.ಮುಳ್ಳುಗಳ ನಡುವೆ ಅರಳುವ ಹೂ (3)
12.ಆನೆಯ ಮರಿಯಿದು (3)
15.ಮೆಟ್ಟಿಲಿರುವ ಚೌಕಾಕಾರದ ಕೊಳ (3)
16.ಕೊನೆಗೆ ದನವನ್ನಿಟ್ಟು ತುಂಡು ಮಾಡುವಿಕೆ! (4)

ಮೇಲಿಂದ ಕೆಳಕ್ಕೆ

1.ಯೋಗವಿದ್ದರೂ ಅಗಲಿಕೆಯೇ! (3)
2.ಹದಿನೈದು ದಿನಗಳ ಅವಧಿ (2)
3.ಕೆಲಸಕ್ಕೆ ಬಾರದ ಮಾತಾಡುವಿಕೆ (3)
4.ಬೆಳಕು ಬರಲು ಮಾಡಿರುವ ಗವಾಕ್ಷ (4)
6.ಚಿಗುರು ಇಲ್ಲಿ ಕಾಣುತ್ತಿದೆ (3)
7.ಆಕಾಶವನ್ನು ಮುಟ್ಟುವಂಥಾ ಕಟ್ಟಡ (5)
9.ಸೊಂಟದಿಂದ ಪ್ರಾರಂಭವಾದ ಕಂಪನ (3)
10.ನಾಶ ಮಾಡುವವನು ಇಲ್ಲಿದ್ದಾನೆ (4)
11.ರಾಣಿ ಹಿಡಿದಿರುವ ಢಾಲು (3)
13.ಕಾಡಿನ ಕೊನೆಗಿರುವ ಮನೆ (3)
14.ಸಂಸಾರ ಬಂಧನಕ್ಕೊಳಗಾದವನು (2)



6214ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ದಾಸೋಹ 2.ಅಂದ 5.ಸರಾಸರಿ 7.ನಿಮೀಲನ 9.ರೋಗ 10.ಅಸಂಬದ್ಧಪ್ರಲಾಪ 12.ಪಾನು 15.ತರಗತಿ 16.ಮಂಗಳೂರು 17.ಕತ್ತೆ 18.ಅಂಕೋಲ

ಮೇಲಿಂದ ಕೆಳಕ್ಕೆ: 1.ದಾರ್ಶನಿಕ 3.ದಸರ 4.ಝರಿ 6.ಸಮಾರೋಪ 8.ನವಾಬ 10.ಅನುರಾಗ 11.ಪ್ರಪಾತ 13.ಪ್ರತಿಫಲ 14.ಮರುಕ 16.ಮಂಜು

ಸುಡೊಕು 6599

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	5		7		2		8	6
		2				3	7	4
	7	8	3		9		1	
1		4			5		2	3
				3				
8		7	6				5	9
		3	9		6	5	4	8
5								
	8		5		4		3	

6598 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

06 ನವೆಂಬರ್ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣಪ್ರತಿಪದ್ ಗಂ. 14-55 **ನಕ್ಷತ್ರ:** ಭರಣಿ ಗಂ 6-34 ನಂತರ ಕೃತಿಕ ಗಂ 27-28 **ಯೋಗ:** ವ್ಯತೀಪಾತ ಗಂ. 7-05 ತುಲಾ ಮಾಸದ 20 ನೇ ದಿನ. **ಮಳೆ ನಕ್ಷತ್ರ:** ಸ್ವಾತಿ 4 ನೇ ಪಾದ. **ರಾಹುಕಾಲ:** ಮಧ್ಯಾಹ್ನ 01-30 - 03-00. **ಸೂರ್ಯೋದಯ:** 06-30, **ಸೂರ್ಯಾಸ್ತ :** 05-58. **ಮುಸ್ಲಿಂ ದಿನಾಂಕ:** 14 ಜುಮಾದುಲ್ಲಾವಲ್. **ಅದೃಷ್ಟ ಸಂಖ್ಯೆ:** 3, 4.

ಮೇಷ: ವಿದ್ಯಾಭ್ಯಾಸದಲ್ಲಿ ಹಿನ್ನಡೆ ಕಂಡು ವಿದ್ಯಾರ್ಥಿಗಳಿಗೆ ನಿರಾಸೆ ಮೂಡಲಿದೆ. ಹಲವು ದಿನಗಳಿಂದಿರುವ ದೇಹಾಯಾಸವು ಇಂದಿಗೆ ಶಮನವಾಗುವುದು. ಬ್ಯಾಂಕ್ ನೌಕರರು ವರ್ಗಾವಣೆ ರದ್ದು ಮಾಡಿಸಿಕೊಳ್ಳುವಲ್ಲಿ ಸಫಲರಾಗುವಿರಿ.

ವೃಷಭ: ಹೊಸ ಹುದ್ದೆಯನ್ನು ವಹಿಸಿಕೊಳ್ಳಲು ಬೇಕಾದ ಧೈರ್ಯ ಮತ್ತು ಸಲಹೆಯನ್ನು ಸಹೋದರರಿಂದ ಪಡೆಯುವಿರಿ. ಮಹತ್ವದ ವಿಷಯಗಳನ್ನು ಗಂಭೀರವಾಗಿ ಚಿಂತಿಸುವುದು ಅಗತ್ಯ. ಮಾನಸಿಕ ಉದ್ವೇಗ ಕಂಡುಬಂದೀತು.

ಮಿಥುನ: ಆತುರದ ನಿರ್ಧಾರ ತೆಗೆದುಕೊಳ್ಳದಂತೆ ಮಗನಿಗೆ ತಿಳಿಹೇಳಿ. ಸಂಸಾರ ನಿರ್ವಹಣೆಗಾಗಿ ಹೆಚ್ಚು ಹಣ ವ್ಯಯಿಸುವಿರಿ. ಗೃಹ ಕೈಗಾರಿಕೆ ಕೆಲಸಗಳಲ್ಲಿ ಮನೆಯವರ ಪರಿಶ್ರಮ ಸಾರ್ಥಕವೆನಿಸುವುದು.

ಕರ್ಕಾಟಕ: ಸಂಬಂಧಗಳು ಗಟ್ಟಿಗೊಂಡು ಸುರಕ್ಷತೆಯ ಭಾವ ಮೂಡಲಿದೆ. ಉತ್ತಮ ಸನ್ನಿವೇಶ ನಿರ್ಮಾಣವಾಗಲಿದೆ. ಭೂ ವ್ಯವಹಾರಗಳಿಂದ ಹೆಚ್ಚಿನ ಲಾಭ . ಅನಿರೀಕ್ಷಿತ ಪ್ರಯಾಣವು ಬದುಕಿನ ಹೊಸ ದಾರಿಗೆ ಕಾರಣವಾಗಲಿದೆ.

ಸಿಂಹ: ಅಧಿಕಾರಿಗಳ ದಿಢೀರ್ ಭೇಟಿಯಿಂದ ಕೆಲಸ ಕಾರ್ಯಗಳು ಏರುಪೇರಾಗುವುದು. ಕಾರ್ಯರಂಗದಲ್ಲಿ ಅಪವಾದದ ಭೀತಿ ಕಾಡಲಿದೆ. ವ್ಯವಹಾರದಲ್ಲಿ ಲಾಭಾಂಶ ಕಡಿಮೆಯಾದರೂ ಮೂಲಧನಕ್ಕೆ ಮೋಸವಿಲ್ಲ.

ಕನ್ಯಾ: ರಾಸಾಯನಿಕ ವಸ್ತು ವ್ಯಾಪಾರದಿಂದ ಹೆಚ್ಚು ಲಾಭ. ವೈದ್ಯ ವಿದ್ಯಾರ್ಥಿಗಳಿಗೆ ಓದಿನತ್ತ ಗಮನ ಹೆಚ್ಚುವುದು. ತೆರೆಮರೆಯಲ್ಲಿ ನಿಮ್ಮ ವಿರುದ್ಧ ನಡೆಯುತ್ತಿರುವ ರಾಜಕೀಯ ಚಟುವಟಿಕೆಗಳು ತಿಳಿಯುವುದು.

ತುಲಾ: ನೃತ್ಯಾಭ್ಯಾಸ ಮುಂದುವರಿಸುವಂತೆ ಮನೆಯವರಿಂದ ಒತ್ತಾಯ ಹೆಚ್ಚುವುದು. ನೃತ್ಯಗಾರರಿಗೆ ಅಪರೂಪದ ಅವಕಾಶ ಸಿಗಲಿದೆ. ಸ್ನೇಹಿತರಿಂದ ಅಪೇಕ್ಷಿಸುವ ಸಹಕಾರ ಸಿಗಲಿದೆ. ನಿಮಗೆ ಈ ದಿನ ಅದೃಷ್ಟದ ದಿನವೆನಿಸಲಿದೆ.

ವೃಶ್ಚಿಕ: ಒಂದು ಅನಿಶ್ಚಿತ ಕಾರ್ಯಕ್ರಮಕ್ಕಾಗಿ ಹಣ ಖರ್ಚು ಮಾಡುವಿರಿ. ನೀವು ಅಂದುಕೊಂಡ ಧಾರ್ಮಿಕ ಕಾರ್ಯಕ್ರಮವು ನಿರ್ವಿಘ್ನವಾಗಿ ನಡೆಯುವುದು. ತಾಯಿಯ ಆರೋಗ್ಯದ ಬಗ್ಗೆ ಕಳವಳಗೊಳ್ಳುವಿರಿ.

ಧನು: ಮನೆಯಲ್ಲಿ ಹಿರಿಯರಿಗೆ ನೆರವಾಗುವುದರ ಮೂಲಕ ಹಲವು ಸೂಕ್ಷ್ಮತೆಗಳನ್ನು ಅರಿತುಕೊಳ್ಳುವಿರಿ. ದುಡ್ಡಿನ ವಿಚಾರದಲ್ಲಿ ನೀವು ಸ್ವಲ್ಪ ಬಿಗುವಾಗದ ಹೊರತು ನಿಮ್ಮ ಮಕ್ಕಳು ನೀವಂದುಕೊಂಡ ರೀತಿಯಲ್ಲಿ ಇರುವುದಿಲ್ಲ.

ಮಕರ: ಕೆಲವರೊಂದಿಗೆ ಇಂದು ವರ್ತಿಸುವಾಗ ನಿಮ್ಮ ಭಾವನೆಗಳು ಕೃತಕವಾದರೂ ಸಹ ಸಾವಧಾನವಾಗಿ ವರ್ತಿಸುವುದು ಅತ್ಯಗತ್ಯವಾಗಿರುತ್ತದೆ. ವಾಹನವನ್ನು ಮಾರಾಟ ಮಾಡಲು ಪ್ರಯತ್ನಿಸುವಿರಿ.

ಕುಂಭ: ನಿಶ್ಚಯವಾಗಿ ಇಲ್ಲದ ದಿನಚರಿಯ ಕಾರಣ ದೇಹಾಯಾಸವನ್ನು ಅನುಭವಿಸುವಿರಿ. ನಿಮ್ಮನ್ನು ಕಾಪಾಡುತ್ತಿದ್ದ ನ್ಯಾಯಾಧೀಶರನ್ನು ಅನಿವಾರ್ಯ ಕಾರಣದಿಂದ ಬೇಸರಗೊಳಿಸುವಿರಿ. ದಂತ ವೇದನೆ ಉಂಟಾಗಬಹುದು.

ಮೀನ: ವಿದೇಶದಲ್ಲಿ ಕೆಲಸ ಹುಡುಕುತ್ತಿದ್ದವರಿಗೆ ಉತ್ತಮ ಫಲ ದೊರೆಯಲಿದೆ. ಸುಲಭ ಕೆಲಸಗಳನ್ನು ನೀವು ಹೆಚ್ಚು ಯೋಚಿಸುವುದರಿಂದ ಅದು ಬಹಳ ಕ್ಲಿಷ್ಟಕರವಾಗಿ ಕಾಣಲಿದೆ.

ಚಿಟಿಕೆ ಸುದ್ದಿ

'ಎ.ಐ: ಅಗತ್ಯ ಎದುರಾದರೆ ನಿಯಂತ್ರಣ'

ನವದೆಹಲಿ (ಪಿಟಿಐ): ಕೃತಕ ಬುದ್ಧಿಮತ್ತೆ (ಎ.ಐ) ವಲಯದಲ್ಲಿ ಅಗತ್ಯ ಸೃಷ್ಟಿಯಾದಾಗ ನಿಯಂತ್ರಣ ಕ್ರಮಗಳನ್ನು ಅಥವಾ ಕಾನೂನನ್ನು ಜಾರಿಗೆ ತರಲಾಗುವುದು ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ (ಐ.ಟಿ.) ಕಾರ್ಯದರ್ಶಿ ಎಸ್. ಕೃಷ್ಣನ್ ಹೇಳಿದ್ದಾರೆ.

ಈಗ ಸರ್ಕಾರವು ಕೃತಕ ಬುದ್ಧಿಮತ್ತೆ ವಲಯದಲ್ಲಿನ ಆವಿಷ್ಕಾರಗಳ ಮೇಲೆ ಗಮನ ನೀಡುತ್ತಿದೆ. ಎ.ಐ. ಮೂಲಕ ದೇಶದ ಜನರಿಗೆ ಅತ್ಯಂತ ಹೆಚ್ಚಿನ ಲಾಭ ತಂದುಕೊಡಲು ಸರ್ಕಾರ ಬಯಸುತ್ತಿದೆ ಎಂದು ಅವರು ಬುಧವಾರ ಹೇಳಿದ್ದಾರೆ.

'ಆವಿಷ್ಕಾರಗಳಿಗೆ ಹೆಚ್ಚಿನ ಆದ್ಯತೆ ನೀಡುವುದು ಇಂದಿನ ಆದ್ಯತೆ ಎಂದು ಭಾವಿಸುವುದಾದರೆ, ನಿಯಂತ್ರಣ ಕ್ರಮಗಳನ್ನು ಜಾರಿಗೆ ತರುವುದು ಇಂದಿನ ಆದ್ಯತೆ ಆಗುವುದಿಲ್ಲ... ಆದರೆ ನಿಯಂತ್ರಣ ಕ್ರಮಗಳಿಗೆ ಅಥವಾ ಕಾನೂನಿನ ಜಾರಿಗೆ ಅಗತ್ಯ ಎದುರಾದರೆ ಸರ್ಕಾರ ಆಗ ಹಿಂದೇಟು ಹಾಕುವುದಿಲ್ಲ' ಎಂದು ಕೃಷ್ಣನ್ ತಿಳಿಸಿದ್ದಾರೆ.

15 ಪ್ಯಾಲೆಸ್ಟೀನಿಯರ ಶವ ಹಸ್ತಾಂತರಿಸಿದ ಇಸ್ರೇಲ್

ದೀರ್ ಅಲ್‌–ಬಲಾಹ್ (ಎಪಿ): ಪ್ಯಾಲೆಸ್ಟೀನಿಯರ 15 ಶವಗಳನ್ನು ಇಸ್ರೇಲ್ ಹಸ್ತಾಂತರಿಸಿದೆ. ಇದರೊಂದಿಗೆ ಈವರೆಗೆ ಇಸ್ರೇಲ್ ಹಸ್ತಾಂತರಿಸಿದ ಪ್ಯಾಲೆಸ್ಟೀನಿಯರ ಶವಗಳ ಸಂಖ್ಯೆ 285ಕ್ಕೆ ಏರಿಕೆಯಾಗಿದೆ ಎಂದು ಗಾಜಾ ಆಸ್ಪತ್ರೆಯ ಅಧಿಕಾರಿಗಳು ತಿಳಿಸಿದರು.

ಹಮಾಸ್ ಬಂಡುಕೋರರು ತಾವು ಒತ್ತೆಯಾಳಾಗಿ ಇರಿಸಿಕೊಂಡಿದ್ದ ಇಸ್ರೇಲ್ ಸೈನಿಕನ ಶವವನ್ನು ಹಸ್ತಾಂತರಿಸಿದ ಬಳಿಕ, ಪ್ಯಾಲೆಸ್ಟೀನಿಯರ ಶವವನ್ನು ಇಸ್ರೇಲ್ ಹಸ್ತಾಂತರಿಸಿದೆ.

ಅ.10ರಂದು ಕದನ ವಿರಾಮ ಘೋಷಣೆಯಾದಾಗಿನಿಂದ ಈವರೆಗೆ 21 ಮಂದಿಯ ಶವಗಳ ಅವಶೇಷಗಳನ್ನು ಹಮಾಸ್ ಇಸ್ರೇಲ್‌ಗೆ ಹಸ್ತಾಂತರ ಮಾಡಿದೆ. ಕಳೆದ ವರ್ಷ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ದಾಳಿ ನಡೆಸಿದ್ದ ಹಮಾಸ್ ಬಂಡುಕೋರರು ಸುಮಾರು 30 ಮಕ್ಕಳು ಸೇರಿದಂತೆ 251ಜನರನ್ನು ಅಪಹರಿಸಿದ್ದರು ಮತ್ತು 1,200ಕ್ಕೂ ಅಧಿಕ ಜನರನ್ನು ಹತ್ಯೆ ಮಾಡಿದ್ದರು. ಬಳಿಕ ಪ್ಯಾಲೆಸ್ಟೀನ್ ವಿರುದ್ಧ ಇಸ್ರೇಲ್ ಆರಂಭಿಸಿದ ತೀವ್ರ ಮಿಲಿಟರಿ ದಾಳಿಯಲ್ಲಿ ಈವರೆಗೆ 68,000ಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದಾರೆ.

ಡಿಸೆಂಬರ್‌ನಿಂದ ರಷ್ಯಾ ತೈಲ ಇಲ್ಲ

ನೇರ ಆಮದು ನಿಲ್ಲುವ ಸಾಧ್ಯತೆ, ಮಧ್ಯವರ್ತಿಗಳು ಹಾಗೂ ಪರ್ಯಾಯ ಮಾರ್ಗಗಳ ಮೂಲಕ ಆಮದು ಮುಂದುವರಿಕೆ

ನವದೆಹಲಿ (ಪಿಟಿಐ): ಭಾರತದ ಕಂಪನಿಗಳು ರಷ್ಯಾದಿಂದ ಕಚ್ಚಾ ತೈಲವನ್ನು ನೇರವಾಗಿ ಆಮದು ಮಾಡಿಕೊಳ್ಳುವುದನ್ನು ನವೆಂಬರ್ ಕೊನೆಯ ವಾರದಿಂದ ಕಡಿಮೆ ಮಾಡಲಿವೆ.

ರಷ್ಯಾದ ರೊಸ್ನೆಫ್ಟ್ ಹಾಗೂ ಲುಕಾಯಿಲ್ ಕಂಪನಿಗಳ ಮೇಲೆ ಅಮೆರಿಕವು ವಿಧಿಸಿರುವ ನಿರ್ಬಂಧಗಳನ್ನು ಅನುಸರಿಸುವಂತೆ ಭಾರತದ ತೈಲ ಸಂಸ್ಕರಣಾ ಕಂಪನಿಗಳು ನಡೆದುಕೊಳ್ಳುವ ನಿರೀಕ್ಷೆ ಇದೆ ಎಂದು ತಜ್ಞರು ಹೇಳಿದ್ದಾರೆ.

'ಇದರಿಂದಾಗಿ ಡಿಸೆಂಬರ್‌ನಲ್ಲಿ ಭಾರತಕ್ಕೆ ಬರುವ ರಷ್ಯಾದ ಕಚ್ಚಾ ತೈಲದ ಪ್ರಮಾಣ ತೀವ್ರವಾಗಿ ತಗ್ಗಲಿದೆ. ನಂತರದಲ್ಲಿ, 2026ರ ಆರಂಭದಿಂದ ಮಧ್ಯವರ್ತಿಗಳು ಹಾಗೂ ಪರ್ಯಾಯ ವ್ಯಾಪಾರ ಮಾರ್ಗಗಳ ಮೂಲಕ ರಷ್ಯಾದ ಕಚ್ಚಾ ತೈಲದ ಆಮದು ನಿಧಾನವಾಗಿ ಹೆಚ್ಚಳವಾಗುವ ಅಂದಾಜು ಇದೆ.

ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವ ಕಂಪನಿಗಳ ಸಾಲಿನಲ್ಲಿ ಮೊದಲ ಸ್ಥಾನದಲ್ಲಿರುವ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಅಲ್ಲಿಂದ ಖರೀದಿಯನ್ನು ನಿಲ್ಲಿಸಿದೆ. ಸರ್ಕಾರಿ ಸ್ವಾಮ್ಯದ ಇತರ ಎಂದು ಸಂಸ್ಕರಣಾ ಕಂಪನಿಗಳು ರಷ್ಯಾದಿಂದ ತೈಲ ಆಮದು ನಿಲ್ಲಿಸುವುದಾಗಿ ಹೇಳಿವೆ. ಎಂಆರ್‌ಪಿಎಲ್ ಹಾಗೂ ಎಚ್‌ಪಿಸಿಎಲ್‌–ಮಿತ್ತಲ್ ಎನರ್ಜಿ ಲಿಮಿಟೆಡ್ ಕಂಪನಿ ಮುಂದಿನ ದಿನಗಳಲ್ಲಿ ಆಮದನ್ನು ಅಮಾನತಿನಲ್ಲಿ ಇರಿಸುವ ಆಲೋಚನೆ ಇರುವುದಾಗಿ ಹೇಳಿವೆ.

ಆದರೆ ನಯಾರಾ ಎನರ್ಜಿ ಕಂಪನಿಯ ವಾದಿನಾರ್ ತೈಲ ಸಂಸ್ಕರಣಾ ಘಟಕವು ರಷ್ಯಾದಿಂದ ತೈಲ ಆಮದನ್ನು ಮುಂದುವರಿಸುವ ನಿರೀಕ್ಷೆ ಇದೆ. ನಯಾರಾ ಕಂಪನಿಯಲ್ಲಿ ರೊಸ್ನೆಫ್ಟ್ ಹೂಡಿಕೆ ಇದೆ.

ದತ್ತಾಂಶ ವಿಶ್ಲೇಷಣಾ ಸಂಸ್ಥೆ ಕೆಪ್ಲರ್‌ನ ಮುಖ್ಯ ಸಂಶೋಧನಾ ವಿಶ್ಲೇಷಕ ಸುಮಿತ್ ರಿತೋಲಿಯಾ ಅವರ ಪ್ರಕಾರ, ಅಕ್ಟೋಬರ್‌ನಲ್ಲಿ ಭಾರತಕ್ಕೆ ಕಚ್ಚಾ ತೈಲ ಪೂರೈಸಿದ ದೇಶಗಳ ಸಾಲಿನಲ್ಲಿ ರಷ್ಯಾ ಮೊದಲ ಸ್ಥಾನದಲ್ಲಿದೆ. ಇರಾಕ್ ಮತ್ತು ಸೌದಿ ಅರೇಬಿಯಾ ನಂತರದ ಸ್ಥಾನಗಳಲ್ಲಿವೆ.

ತಜ್ಞರ ಪ್ರಕಾರ ರಷ್ಯಾದಿಂದ ಕಚ್ಚಾ ತೈಲ ಆಮದು ಸಂಪೂರ್ಣವಾಗಿ ನಿಲ್ಲುವ ಸಾಧ್ಯತೆ ಇಲ್ಲ. ಆದರೆ ಮುಂದಿನ ದಿನಗಳಲ್ಲಿ ಆಮದು ಹೆಚ್ಚು ಸಂಕೀರ್ಣವಾದ ಸಾಗಣೆ ಮತ್ತು ಖರೀದಿ ವ್ಯವಸ್ಥೆಯನ್ನು ಆಶ್ರಯಿಸಲಿದೆ.

'ಡಿಸೆಂಬರ್‌ನಲ್ಲಿ ರಷ್ಯಾದ ಕಚ್ಚಾ ತೈಲ ಆಮದು ಗಣನೀಯವಾಗಿ ಕಡಿಮೆ ಆಗುವುದು. 2026ರ ಮೊದಲರ್ಧದ ಮಧ್ಯಭಾಗದಲ್ಲಿ ಅಥವಾ ಕೊನೆಯ ಹಂತದಲ್ಲಿ, ಹೊಸ ಮಧ್ಯವರ್ತಿಗಳು ಸೃಷ್ಟಿಯಾದ ನಂತರ ಅಲ್ಲಿಂದ ತೈಲ ತರಿಸಿಕೊಳ್ಳುವುದು ಹಂತ ಹಂತವಾಗಿ ಹೆಚ್ಚಳವಾಗಬಹುದು' ಎಂದು ಹೇಳಿದ್ದಾರೆ.

ಮುಖ್ಯಾಂಶಗಳು

- ರಷ್ಯಾದ ರೊಸ್ನೆಫ್ಟ್, ಲುಕಾಯಿಲ್ ಮೇಲಿನ ನಿರ್ಬಂಧ ಇದಕ್ಕೆ ಕಾರಣ
- ಖರೀದಿ ನಿಲ್ಲಿಸಲಿರುವ ಸರ್ಕಾರಿ ಹಾಗೂ ಖಾಸಗಿ ತೈಲ ಕಂಪನಿಗಳು
- ನಯಾರಾ ಎನರ್ಜಿ ಕಂಪನಿಯಿಂದ ಆಮದು ಮುಂದುವರಿಕೆ

ಸುದ್ದಿ 2 ನಿಮಿಷ

3 ಕೋಟಿ ವಾಹನ ಮಾರಾಟ: ಮಾರುತಿ

ನವದೆಹಲಿ (ಪಿಟಿಐ): ವಾಹನ ತಯಾರಿಕಾ ಕಂಪನಿ ಮಾರುತಿ ಸುಜುಕಿ ಇಂಡಿಯಾ ಇದುವರೆಗೆ ಭಾರತದ ಮಾರುಕಟ್ಟೆಯಲ್ಲಿ 3 ಕೋಟಿಗೂ ಹೆಚ್ಚು ವಾಹನಗಳನ್ನು ಮಾರಾಟ ಮಾಡಿದೆ.

1983ರ ಡಿಸೆಂಬರ್ 14ರಂದು ಕಂಪನಿಯು ತನ್ನ 'ಮಾರುತಿ 800' ಮಾದರಿಯ ವಾಹನದ ಮೂಲಕ ದೇಶದ ಮಾರುಕಟ್ಟೆ ಪ್ರವೇಶಿಸಿತ್ತು.

ಮಾರುತಿ ಸುಜುಕಿ ಕಂಪನಿಗೆ ದೇಶದಲ್ಲಿ ಮೊದಲ 1 ಕೋಟಿ ವಾಹನಗಳನ್ನು ಮಾರಾಟ ಮಾಡಲು 28 ವರ್ಷ 2 ತಿಂಗಳ ಸಮಯ ಬೇಕಾಗಿತ್ತು, ನಂತರ ಮತ್ತೆ ಒಂದು ಕೋಟಿ ವಾಹನಗಳು ಮಾರಾಟವಾಗಲು 7 ವರ್ಷ ಐದು ತಿಂಗಳು ಬೇಕಾದವು. ಉಳಿದ ಇನ್ನೊಂದು ಕೋಟಿ ವಾಹನಗಳು ಮಾರಾಟವಾಗಲು 6 ವರ್ಷ 4 ತಿಂಗಳು ತೆಗೆದುಕೊಂಡಿತು.

ಕಂಪನಿಯು ಮಾರಾಟ ಮಾಡಿರುವ ವಾಹನಗಳ ಪೈಕಿ ಆಲ್ಟೊ ಮಾದರಿಯು ಹೆಚ್ಚಿನ ಬೇಡಿಕೆ ಕಂಡಿದೆ. ಆಲ್ಟೊ ಮಾದರಿಯ 47 ಲಕ್ಷಕ್ಕೂ ಅಧಿಕ ಕಾರುಗಳು ಮಾರಾಟವಾಗಿವೆ. ವ್ಯಾಗನ್ ಆರ್ 34 ಲಕ್ಷ, ಸ್ವಿಫ್ಟ್ 32 ಲಕ್ಷಕ್ಕೂ ಹೆಚ್ಚು ಮಾರಾಟವಾಗಿವೆ. ಬ್ರೆಜಾ ಮತ್ತು ಫ್ರಾಂಕ್ಸ್ ಮಾದರಿಯ ವಾಹನಗಳು ಸಹ ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾಗಿವೆ ಎಂದು ಕಂಪನಿ ಬುಧವಾರ ತಿಳಿಸಿದೆ.

'ಪ್ರತಿ ಸಾವಿರ ಜನರಲ್ಲಿ ಅಂದಾಜು 33 ಜನ ಕಾರಿನ ಮಾಲೀಕತ್ವ ಹೊಂದಿದ್ದಾರೆ. ದೇಶದಲ್ಲಿ ನಮ್ಮ ಕಂಪನಿಗೆ ಬೆಳೆಯಲು ಇನ್ನೂ ಬಹಳಷ್ಟು ಅವಕಾಶ ಇದೆ' ಎಂದು ಮಾರುತಿ ಸುಜುಕಿ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಹಿಸಾಶಿ ತಕೆಯುಚಿ ಹೇಳಿದ್ದಾರೆ.

ಅದಾನಿ ಪೋರ್ಟ್ಸ್ ಮುನ್ನೋಟ ಪರಿಷ್ಕರಣೆ

ನವದೆಹಲಿ (ಪಿಟಿಐ): ಅದಾನಿ ಸಮೂಹದ ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್ ಮತ್ತು ಅದಾನಿ ಎನರ್ಜಿ ಸಲ್ಯೂಷನ್ಸ್ ಕಂಪನಿಗಳಿಗೆ ನೀಡಿದ್ದ ಮುನ್ನೋಟವನ್ನು ಜಾಗತಿಕ ರೇಟಿಂಗ್ ಸಂಸ್ಥೆ ಫಿಚ್ ಪರಿಷ್ಕರಿಸಿದೆ.

ಈ ಮೊದಲು ಫಿಚ್, ಈ ಕಂಪನಿಗಳನ್ನು 'ಋಣಾತ್ಮಕ' ಪಟ್ಟಿಗೆ ಸೇರಿಸಿತ್ತು. ಈಗ ಅದನ್ನು ಪರಿಷ್ಕರಿಸಿದ್ದು 'ಸ್ಥಿರ' ರೇಟಿಂಗ್ಸ್ ಪಟ್ಟಿಗೆ ಸೇರಿಸಿದೆ. ಫಿಚ್ ಎರಡೂ ಕಂಪನಿಗಳಿಗೆ ನೀಡಿರುವ ದೀರ್ಘಾವಧಿಯ ರೇಟಿಂಗ್‌ಅನ್ನು 'ಬಿಬಿಬಿ–' ಮಟ್ಟದಲ್ಲಿ ಉಳಿಸಿಕೊಂಡಿದೆ.

ಈ ಎರಡೂ ಕಂಪನಿಗಳು ಅಗಾಧ ಪ್ರಮಾಣದಲ್ಲಿ ಹಣದ ಹರಿವನ್ನು ಹೊಂದಿವೆ. ದೇಶ ಮತ್ತು ಸಾಗರೋತ್ತರ ಸಾಲದಾತರಿಂದ 2024ರ ಅಂತ್ಯದಿಂದ ಅದಾನಿ ಸಮೂಹವು ₹2.12 ಲಕ್ಷ ಕೋಟಿ ಸಾಲ ಪಡೆದಿದೆ.

ಈ ಮುನ್ನೋಟದ ಪರಿಷ್ಕರಣೆಯು ಅದಾನಿ ಸಮೂಹವು ಅಪಾಯ ಎದುರಿಸುವ ಪ್ರಮಾಣ ಕಡಿಮೆ ಆಗಿರುವುದನ್ನು ಹೇಳುತ್ತದೆ.

ಸ್ಟಾರ್‌ಲಿಂಕ್ ಜೊತೆ ಮಹಾರಾಷ್ಟ್ರ ಸರ್ಕಾರ ಒಪ್ಪಂದ

ಮುಂಬೈ (ಪಿಟಿಐ): ಉಪಗ್ರಹ ಆಧಾರಿತ ಇಂಟರ್‌ನೆಟ್ ಸೇವೆ ಒದಗಿಸುವ, ಉದ್ಯಮಿ ಇಲಾನ್ ಮಸ್ಕ್ ಒಡೆತನದ ಸ್ಟಾರ್‌ಲಿಂಕ್ ಕಂಪನಿಯ ಜೊತೆ ಮಹಾರಾಷ್ಟ್ರ ಸರ್ಕಾರ ಒಪ್ಪಂದ ಮಾಡಿಕೊಂಡಿದೆ.

ಮಹಾರಾಷ್ಟ್ರವು ಸ್ಟಾರ್‌ಲಿಂಕ್ ಜೊತೆಗೆ ಒಪ್ಪಂದ ಮಾಡಿಕೊಂಡ ದೇಶದ ಮೊದಲ ರಾಜ್ಯವಾಗಿದೆ ಎಂದು ಮಹಾರಾಷ್ಟ್ರ ಸರ್ಕಾರ ಬುಧವಾರ ತಿಳಿಸಿದೆ. ಈ ಕುರಿತ ಒಪ್ಪಂದಕ್ಕೆ ಸರ್ಕಾರವು ಸ್ಟಾರ್‌ಲಿಂಕ್ ಸ್ಯಾಟ್‌ಲೈಟ್ ಕಮ್ಯುನಿಕೇಷನ್ಸ್ ಪ್ರೈವೆಟ್ ಲಿಮಿಟೆಡ್‌ನೊಂದಿಗೆ ಸಹಿ ಹಾಕಿದೆ.

'ಈ ಒಪ್ಪಂದದಿಂದ ಉಪಗ್ರಹ ಆಧಾರಿತ ಇಂಟರ್‌ನೆಟ್ ಸೇವೆಯನ್ನು ಸರ್ಕಾರಿ ಸಂಸ್ಥೆಗಳು, ಗ್ರಾಮೀಣ ಪ್ರದೇಶಗಳು, ಕುಗ್ರಾಮ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಒದಗಿಸಲಾಗುವುದು' ಎಂದು ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ಸ್ಟಾರ್‌ಲಿಂಕ್ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ಐಸಿಟಿ) ಕ್ಷೇತ್ರದ ಅತಿದೊಡ್ಡ ಕಂಪನಿಗಳಲ್ಲಿ ಒಂದಾಗಿದೆ. ಕಂಪನಿಯೊಂದಿಗೆ ಮಹಾರಾಷ್ಟ್ರ ಒಪ್ಪಂದ ಹೊಂದಿರುವುದು ನಮಗೆ ಗೌರವವಾಗಿದೆ' ಎಂದು ತಿಳಿಸಿದ್ದಾರೆ.

ಈ ಸಹಯೋಗವು ಡಿಜಿಟಲ್ ಮಹಾರಾಷ್ಟ್ರ ಮಿಷನ್, ಕರಾವಳಿ ಅಭಿವೃದ್ಧಿ ಸೇರಿ ಹಲವು ಅಭಿವೃದ್ಧಿಗೆ ನೆರವಾಗಲಿದೆ ಎಂದು ಹೇಳಿದ್ದಾರೆ.

ಡೆಟ್ರಾಯಿಟ್: ಮೊದಲ ಮಹಿಳಾ ಮೇಯರ್ ಆಯ್ಕೆ

ಡೆಟ್ರಾಯಿಟ್ (ಎಎಫ್‌ಪಿ): ಡೆಟ್ರಾಯಿಟ್‌ನ ಮೊದಲ ಮಹಿಳಾ ಮೇಯರ್ ಆಗಿ ಮೇರಿ ಶೆಫೀಲ್ಡ್ ಅವರು ಆಯ್ಕೆಯಾಗಿದ್ದಾರೆ. ಸದ್ಯ ಅವರು ಸಿಟಿ ಕೌನ್ಸಿಲ್ ಅಧ್ಯಕ್ಷೆ ಆಗಿದ್ದಾರೆ.



ಮೇರಿ ಶೆಫೀಲ್ಡ್

ಪ್ರಮುಖ ಚರ್ಚ್‌ವೊಂದರ ಪ್ರಸಿದ್ಧ ಪಾದ್ರಿ ಸೊಲೊಮನ್ ಕಿನ್ಲೊಚ್ ಅವರನ್ನು ಶೆಫೀಲ್ಡ್ ಸಾರ್ವತ್ರಿಕ ಚುನಾವಣೆಯಲ್ಲಿ ಮಂಗಳವಾರ ಪರಾಭವಗೊಳಿಸಿದ್ದಾರೆ. ಮೇಯರ್ ಆಗಿ ಜನವರಿಯಲ್ಲಿ ಅವರು ಅಧಿಕಾರ ಸ್ವೀಕರಿಸಲಿದ್ದಾರೆ.

2013ರಲ್ಲಿ ಶೆಫೀಲ್ಡ್ ತಮ್ಮ 26ನೇ ವಯಸ್ಸಿನಲ್ಲಿ ಸಿಟಿ ಕೌನ್ಸಿಲ್‌ಗೆ ಆಯ್ಕೆಯಾಗಿದ್ದು, 2022ರಲ್ಲಿ ಕೌನ್ಸಿಲ್‌ನ ಅಧ್ಯಕ್ಷರಾಗಿದ್ದರು.

'ಡೆಟ್ರಾಯಿಟ್‌ನ ಮಕ್ಕಳಿಗೆ ಶಿಕ್ಷಣ ನೀಡುವ ಕಡೆ ಹೆಚ್ಚು ಗಮನ ನೀಡುತ್ತೇನೆ. ಸಾರ್ವಜನಿಕರ ಸುರಕ್ಷತೆ ಮತ್ತು ಜೀವನಮಟ್ಟ ಸುಧಾರಿಸುವುದು ಚುನಾಯಿತ ಮೇಯರ್ ಆಗಿ ನನ್ನ ಆದ್ಯತೆಯಾಗಿದೆ' ಎಂದು ಮೇರಿ ಶೆಫೀಲ್ಡ್ ಹೇಳಿದ್ದಾರೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು		
	100 ಕ್ಕೆ	₹605
	12 ಕ್ಕೆ	₹80
ಮೈಸೂರು:	100 ಕ್ಕೆ	₹605

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್‌-4	₹181
ಆರ್‌ಎಸ್‌ಎಸ್‌-5	₹176
ಗುಡ್ ಲಾಟ್	₹163

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1410 (1410)
ಸೋಯಾ (ರಿಫೈನ್ಡ್)	₹1255 (1260)
ಸೂರ್ಯಕಾಂತಿ (ರಿಫೈನ್ಡ್)	₹1480 (1480)
ಪಾಮೋಲಿನ್	₹1250 (1260)

ಸಾಲದ ಹಣ ಕೌಶಲ ವೃದ್ಧಿಗೆ ಬಳಕೆ: ಸಮೀಕ್ಷೆ

ಮುಂಬೈ (ಪಿಟಿಐ): ದೇಶದ ಯುವಕರು ಸಾಲದ ರೂಪದಲ್ಲಿ ಪಡೆಯುವ ಹಣವನ್ನು ಬಹಳ ಜವಾಬ್ದಾರಿಯಿಂದ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಅವರು ಈ ಹಣವನ್ನು ಕೌಶಲ ಹೆಚ್ಚಿಸಿಕೊಳ್ಳಲು, ವೃತ್ತಿಯಲ್ಲಿ ಬೆಳವಣಿಗೆ ಸಾಧಿಸಲು, ಉದ್ಯಮ ಲೋಕದಲ್ಲಿನ ಗುರಿಗಳನ್ನು ಸಾಧಿಸಲು ಬಳಸುತ್ತಿದ್ದಾರೆ ಎಂದು ಸಮೀಕ್ಷೆಯೊಂದು ಹೇಳಿದೆ.

ಸಾಲ ನೀಡುವ ವೇದಿಕೆ ಎಂ–ಪಾಕೆಟ್ ನಡೆಸಿರುವ ಸಮೀಕ್ಷೆಯ ಪ್ರಕಾರ ಇಂದಿನ ತಲೆಮಾರಿನ ಜನರಿಗೆ ಸಾಲ ಪಡೆಯುವುದು ಹೊಸ ಸಾಧ್ಯತೆಗಳನ್ನು ಅರಸಲು ಇರುವ ಒಂದು ಮಾರ್ಗ.

ಸಮೀಕ್ಷೆಯಲ್ಲಿ ಭಾಗಿಯಾಗಿದ್ದವರ ಪೈಕಿ ಶೇಕಡ 63ರಷ್ಟು ಮಂದಿ ಸಾಲದಿಂದಾಗಿ ತಮ್ಮ ಹಣಕಾಸಿನ ಸ್ಥಿತಿಯ ಮೇಲೆ ಉತ್ತಮ ಪರಿಣಾಮ ಉಂಟಾಗಿದೆ ಎಂದು ಹೇಳಿದ್ದಾರೆ, ಶೇ 40ರಷ್ಟು ಮಂದಿ ಸಾಲವನ್ನು ವೃತ್ತಿಯಲ್ಲಿ ಮುಂದೆ ಬರಲು, ಜೀವನಶೈಲಿಯಲ್ಲಿ ಸುಧಾರಣೆ ತರಲು, ಶಿಕ್ಷಣಕ್ಕಾಗಿ ಬಳಕೆ ಮಾಡಿಕೊಂಡಿದ್ದಾರೆ.

ಮೂರು ಸಾವಿರಕ್ಕೂ ಹೆಚ್ಚು ಯುವಕರು ಈ ಸಮೀಕ್ಷೆಯಲ್ಲಿ ಭಾಗಿಯಾಗಿದ್ದರು. ಶೇ 23.4ರಷ್ಟು ಮಂದಿ ಆರೋಗ್ಯ ವೆಚ್ಚ ನಿಭಾಯಿಸಲು ಸಾಲ ಪಡೆಯುತ್ತಿದ್ದಾರೆ, ಶೇ 12.4ರಷ್ಟು ಮಂದಿ ತುರ್ತು ಸಂದರ್ಭ ನಿಭಾಯಿಸಲು ಸಾಲ ಪಡೆಯುತ್ತಿದ್ದಾರೆ. ಯುವಕರು ಸಾಲ ಪಡೆದು ತಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು, ದೀರ್ಘಾವಧಿಯಲ್ಲಿ ಬೆಳವಣಿಗೆ ಸಾಧಿಸಲು ಅದನ್ನು ಬಳಸಿಕೊಳ್ಳುತ್ತಿರುವುದು ಸಮೀಕ್ಷೆಯಲ್ಲಿ ಕಂಡುಬಂದಿದೆ.

ಅಡಿಕೆ ಧಾರಣೆ

ಕುಮಟಾ					
ಚಾಲಿ	44295-47399	ರಾಶಿ	46869-60209		
ಚಿಪ್ಪು	22001-33099	ಸರಕು	81100-88999	ತಟ್ಟಿಬೆಟ್ಟೆ	39099-50099
ಕೋಕ	10001-30199	**ಸಿದ್ದಾಪುರ**		**ಶಿರಸಿ**	
ಶಿವಮೊಗ್ಗ		ಬಿಳಿಗೋಟು	26209-37600	ಬೆಟ್ಟೆ	39899-48161
ಬೆಟ್ಟೆ	63600-73029	ಚಾಲಿ	41689-48519	ಬಿಳಿಗೋಟು	28699-39608
ಗೊರಬಲು	22800-37089	ಕೋಕ	20199-30555	ಚಾಲಿ	43099-49599
ಹೊಸತು	44599-58199	ಕೆಂಪುಗೋಟು	28999-33199	ಕೆಂಪುಗೋಟು	24299-34001
		ರಾಶಿ	48999-56999	ರಾಶಿ	53699-58909

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹325-665
ದ್ವಿತಳಿ (ಬಿ.ವಿ)	₹289-796

ಮುಂಬೈ ಧಾರಣೆ (ಶೇಂಗಾ) 05-11-2025	
ಜಾವಾ 70/80(ಹೊಸ)	10300-10400
ಜಾವಾ 80/90(ಹೊಸ)	9600-9700
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1420 (1420)
ಒಂದು ವಾರದ ಡೆಲಿವರಿ	1415 (1415)
ಪಾಮ್ ವಾರದ ಡೆಲಿವರಿ	1248 (1258)
ಸೂರ್ಯಕಾಂತಿ ಎಣ್ಣೆ ಕಚ್ಚಾ	1410 (1410)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,19,600 (1,19,700)
ಬೆಳ್ಳಿ ಕೆ.ಜಿಗೆ	1,47,000 (1,45,400)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಶೌಚಾಲಯದಲ್ಲಿ ಕ್ಯಾಮೆರಾ: ಬೃಹತ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಚೆನ್ನೈ: ಹೊಸೂರಿನಲ್ಲಿರುವ ಟಾಟಾ ಎಲೆಕ್ಟ್ರಾನಿಕ್ಸ್ ಪ್ರೈವೆಟ್ ಲಿಮಿಟೆಡ್‌ನ ವಸತಿನಿಲಯದ ಶೌಚಾಲಯದಲ್ಲಿ ಕ್ಯಾಮೆರಾ ಪತ್ತೆಯಾದ ಕಾರಣ ಕಂಪನಿಯ ನೂರಾರು ಮಹಿಳಾ ಸಿಬ್ಬಂದಿ ಮಂಗಳವಾರ ರಾತ್ರಿ ಬೃಹತ್ ಪ್ರತಿಭಟನೆ ನಡೆಸಿದರು.

'ಶೌಚಾಲಯದಲ್ಲಿ ಕ್ಯಾಮೆರಾ ಅಳವಡಿಸಿರುವ ಸಹಸಿಬ್ಬಂದಿಯ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಶೌಚಾಲಯದಲ್ಲಿ ಕ್ಯಾಮೆರಾ ಇರುವುದು ಭಾನುವಾರ ಬೆಳಿಗ್ಗೆ ಮಹಿಳಾ ಸಿಬ್ಬಂದಿಯೊಬ್ಬರ ಗಮನಕ್ಕೆ ಬಂದಿದ್ದು, ಅವರು ಈ ಬಗ್ಗೆ ಮಾಹಿತಿ ನೀಡಿದ್ದರು. ಒಡಿಶಾ ಮೂಲದ ನೀಲು ಕುಮಾರಿ(22) ಎಂಬವರು ಕ್ಯಾಮೆರಾ ಇಟ್ಟಿರುವ ಸಿಬ್ಬಂದಿ ಎಂಬುವುದು ಆಂತರಿಕ ತನಿಖೆಯಿಂದ ತಿಳಿದು ಬಂದಿತ್ತು. ಆದರೆ ಅವರ ವಿರುದ್ಧ ಕಂಪನಿ ಯಾವುದೇ ಕ್ರಮಕೈಗೊಂಡಿರಲಿಲ್ಲ.

ಇದನ್ನು ಖಂಡಿಸಿ ಮಹಿಳಾ ಸಿಬ್ಬಂದಿ ವಸತಿನಿಲಯದ ಆವರಣದಲ್ಲಿ ಮಂಗಳವಾರ ರಾತ್ರಿ ಪ್ರತಿಭಟನೆ ನಡೆಸಿದ್ದಾರೆ. ವಸತಿನಿಲಯದ ಎಲ್ಲ ಶೌಚಾಲಯಗಳಲ್ಲಿ ಪರಿಶೀಲನೆ ನಡೆಸುವಂತೆ ಆಗ್ರಹಿಸಿದ್ದಾರೆ.

'ಕುಮಾರಿ ಅವರನ್ನು ಮಂಗಳವಾರ ರಾತ್ರಿ ಬಂಧಿಸಲಾಗಿದೆ. ಬೆಂಗಳೂರಿನಲ್ಲಿರುವ ತನ್ನ ಸ್ನೇಹಿತನ ಒತ್ತಡದ ಕಾರಣಕ್ಕೆ ಕ್ಯಾಮೆರಾ ಇಟ್ಟಿದ್ದು, ಆದರೆ ಈವರೆಗೆ ಯಾವುದೇ ದೃಶ್ಯಗಳನ್ನು ಹಂಚಿಕೊಂಡಿಲ್ಲ ಎಂದು ಆರೋಪಿ ತಿಳಿಸಿದ್ದಾರೆ' ಎಂಬುದಾಗಿ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ನಾಸ್ಕಾಂ ಫೌಂಡೇಷನ್‌ನಿಂದ ಮಹಿಳಾ ಉದ್ಯಮಿಗಳಿಗೆ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಉದ್ಯಮಿಗಳನ್ನು ಇ–ವಾಣಿಜ್ಯ ಕ್ಷೇತ್ರದ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ನಾಸ್ಕಾಂ ಫೌಂಡೇಷನ್ ಮತ್ತು ಒಎನ್‌ಡಿಸಿ ನೆಟ್‌ವರ್ಕ್ ಜೊತೆಯಾಗಿ ಹೊಸ ಯೋಜನೆಯೊಂದನ್ನು ರೂಪಿಸಿವೆ. ಇದು ಕರ್ನಾಟಕದ ಮಹಿಳಾ ಉದ್ಯಮಿಗಳನ್ನು ಆದ್ಯತೆಯನ್ನಾಗಿ ಇರಿಸಿಕೊಂಡಿದೆ.

ಈ ಯೋಜನೆಯ ಮೂಲಕ ಮಹಿಳೆಯರ ನೇತೃತ್ವದ 200 ಉದ್ಯಮಗಳನ್ನು ಒಎನ್‌ಡಿಸಿ ನೆಟ್‌ವರ್ಕ್ ವ್ಯಾಪ್ತಿಗೆ ತರಲಾಗಿದೆ, ಅವರಿಗೆ ಇ–ವಾಣಿಜ್ಯ ಮಾರುಕಟ್ಟೆ ಲಭ್ಯವಾಗುವಂತೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

'ಭಾರತದ ಇ–ವಾಣಿಜ್ಯ ಮಾರುಕಟ್ಟೆಯು 2034ರ ವೇಳೆಗೆ ಅಮೆರಿಕದ ಇ–ವಾಣಿಜ್ಯ ಮಾರುಕಟ್ಟೆಯನ್ನು ಮೀರಿ ಬೆಳೆಯುವ ಅಂದಾಜು ಇದೆ. ಹೀಗಿದ್ದರೂ, ಈ ವಲಯದಲ್ಲಿ ಬೆಳೆಯಲು ಬೇಕಿರುವ ಡಿಜಿಟಲ್ ಪರಿಣತಿಯು ಸಣ್ಣ ಹಾಗೂ ಮಧ್ಯಮ ಗಾತ್ರದ ವ್ಯಾಪಾರಿಗಳ ಪೈಕಿ ಹಲವರಿಗೆ ಈಗಲೂ ಇಲ್ಲ. ಒಎನ್‌ಡಿಸಿ ಜೊತೆಗಿನ ನಮ್ಮ ಪಾಲುದಾರಿಕೆಯು 200ಕ್ಕೂ ಹೆಚ್ಚು ಮಹಿಳಾ ಉದ್ಯಮಿಗಳಿಗೆ ಆನ್‌ಲೈನ್ ಮಾರುಕಟ್ಟೆಯಲ್ಲಿ ಬೆಳವಣಿಗೆ ಸಾಧಿಸಲು ನೆರವಾಗಿದೆ' ಎಂದು ನಾಸ್ಕಾಂ ಫೌಂಡೇಷನ್‌ನ ಸಿಇಒ ಜ್ಯೋತಿ ಶರ್ಮಾ ಹೇಳಿದ್ದಾರೆ. ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಬೆಳಗಾವಿ, ಉಡುಪಿ ಸೇರಿದಂತೆ 22 ಜಿಲ್ಲೆಗಳ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗಿದೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಅಣ್ವಸ್ತ್ರ ಪರೀಕ್ಷೆ ಪುನರಾರಂಭ: ವ್ಲಾದಿಮಿರ್ ಪುಟಿನ್ ಸೂಚನೆ

ಮಾಸ್ಕೊ (ಎಪಿ): 'ಅಣ್ವಸ್ತ್ರ ಪರೀಕ್ಷೆಗಳನ್ನು ಪುನರಾರಂಭಿಸುವ ಸಾಧ್ಯತೆ ಕುರಿತು ಶೀಘ್ರವೇ ಪ್ರಸ್ತಾವ ಸಲ್ಲಿಸಿ' ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅಧಿಕಾರಿಗಳಿಗೆ ಆದೇಶಿಸಿದ್ದಾರೆ.

ಅಮೆರಿಕವು ಅಣ್ವಸ್ತ್ರ ಪರೀಕ್ಷೆಗಳನ್ನು ಪುನರಾರಂಭಿಸುವ ಬಗ್ಗೆ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಇತ್ತೀಚಿನ ಹೇಳಿಕೆಗೆ ಪ್ರತಿಯಾಗಿ ರಷ್ಯಾ ಈ ಪ್ರತಿಕ್ರಿಯೆ ನೀಡಿದೆ.

ಭದ್ರತಾ ಮಂಡಳಿ ಸದಸ್ಯರೊಂದಿಗೆ ಚರ್ಚೆ ನಡೆಸಿದ ಪುಟಿನ್, 'ಅಮೆರಿಕ ಮೊದಲು ಅಣ್ವಸ್ತ್ರ ಪರೀಕ್ಷೆ ನಡೆಸಿದರೆ ಮಾತ್ರ ರಷ್ಯಾ ಅಣ್ವಸ್ತ್ರ ಪರೀಕ್ಷೆಗಳನ್ನು ಪುನರಾರಂಭಿಸುತ್ತದೆ' ಎಂಬ ತಮ್ಮ ಹಿಂದಿನ ಹೇಳಿಕೆಯನ್ನು ದೃಢಪಡಿಸಿದರು.

ಮತ್ತೆ ಮೇಯರ್ ಆದ ಪುರೆವಾಲ್

ನ್ಯೂಯಾರ್ಕ್ (ಪಿಟಿಐ): ಭಾರತೀಯ ಮೂಲದ ಪುರೆವಾಲ್ ಅವರು ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರ ಸಹೋದರ ಕೋರಿ ಬೌಮನ್ ಅವರನ್ನು ಪರಾಭವಗೊಳಿಸಿ ಎರಡನೇ ಬಾರಿಗೆ ಸಿನ್ಸಿನಾಟಿಯ ಮೇಯರ್ ಹುದ್ದೆಗೇರಿದ್ದಾರೆ. ಇದರೊಂದಿಗೆ ಡೆಮಾಕ್ರಟ್‌ಗಳು ಸಿನ್ಸಿನಾಟಿಯ ಸ್ಥಳೀಯ ಸರ್ಕಾರದ ಹಿಡಿತವನ್ನು ಪಡೆದಿದ್ದಾರೆ ಮತ್ತು ಒಹಿಯೊನಲ್ಲಿ ಪುರೆವಾಲ್ ಅವರ ರಾಜಕೀಯ ಭವಿಷ್ಯವು ಉಜ್ವಲವಾಗುವ ಸೂಚನೆ ಲಭಿಸಿದೆ ಎಂದು ಸ್ಥಳೀಯ ಮಾಧ್ಯಮಗಳಲ್ಲಿ ವರದಿಯಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಆರ್ಚನ್ಸ್ ಹೆಚ್ ಆರ್ ಸರ್ವೀಸಸ್ ಪ್ರೈ. ಲಿಮಿಟೆಡ್. ಬೆಂಗಳೂರಿನಲ್ಲಿ ಕೆಲಸ ಮಾಡಲು ಸಹಾಯಕರು ಮತ್ತು ನಿರ್ವಾಹಕರು ಬೇಕಾಗಿದ್ದಾರೆ. ನಾವು ESIC, PF, ಆಹಾರ ಮತ್ತು ಕ್ಯಾಬ್ ಸೌಲಭ್ಯವನ್ನು ಒದಗಿಸುತ್ತೇವೆ. ಸಂಪರ್ಕಿಸಿ: 9845030637/8296415656

ಸಂಕಲ್ಪ್ ವೆಂಚರ್ಸ್. ಬೆಂಗಳೂರಿನಲ್ಲಿ ಕೆಲಸ ಮಾಡಲು ಸಹಾಯಕರು ಮತ್ತು ನಿರ್ವಾಹಕರು ಬೇಕಾಗಿದ್ದಾರೆ. ನಾವು ESIC, PF, ಆಹಾರ ಮತ್ತು ಕ್ಯಾಬ್ ಸೌಲಭ್ಯವನ್ನು ಒದಗಿಸುತ್ತೇವೆ. ಸಂಪರ್ಕಿಸಿ: 9738365092/7975258465

ಕಂಪನಿಗಳಿಗೆ ಬೇಕಾಗಿದ್ದಾರೆ.7TH, PUC, Degree, ಡಿಪ್ಲೋಮಾದವರು ಯುವಕ, ಯುವತಿಯರಿಗೆ ಸಂಬಳ 18,000- 45,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9916788422

Part-Time Jobs

ಮನೆಯಿಂದಲೇ ಕೆಲಸ Part Time/Full Time ವರ್ಕ್ ಗಳಿಗೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18,000/ 25,000. ಕೊರಿಯರ್ ಸೌಲಭ್ಯವಿದೆ. 8095043191

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

Wanted

ಯುವಕ ಯುವತಿಯರು ಹೆಲ್ಪರ್ ಕೆಲಸಕ್ಕೆ ಬೇಕಾಗಿದ್ದಾರೆ. ವಿದ್ಯಾಭ್ಯಾಸ SSLC/PUC ತಿಂಗಳಿಗೆ ವೇತನ 16000-20000 ಸಾವಿರವರೆಗೆ ವಿಳಾಸ: ಸೆಲೆಬ್ರಿಟಿ ವೆಲ್ನೆಸ್, ಕಿನೋ ಅಪಾರ್ಟ್ ಮೆಂಟ್ ಎದುರು ಆನಂದರಾವ್ ಸರ್ಕಲ್ ಹತ್ತಿರ ಶೇಷಾದ್ರಿಪುರಂ ಬೆಂಗಳೂರು. Ph:8431378847

ಪ್ರವಾಸ

Travel Agencies

ದುಬೈ ಪ್ರವಾಸ 6 ದಿನಗಳು 12/12/25, ಬುರ್ಜ್ ಖಲೀಫಾ ದುಬೈ ಫ್ರೇಮ್ ಡೆಸರ್ಟ್ ಸಫಾರಿ ಗ್ಲೋಬಲ್ ವಿಲೇಜ್ ಮಿರಾಕಲ್ ಗಾರ್ಡನ್ ದುಬೈ ಮ್ಯೂಸಿಯಂ ಇತರೆ ಸುವರ್ಣಯಾತ್ರಾ 9480843945/ 9019462508

Travel

★ಶ್ರೀಶ್ರೇಯಸ್ ಟೂರ್ಸ್★ 04.12.2025,04.01.2026 4ದಿನಗಳು ಅಖಂಡ ಒರಿಸ್ಸಾರಾಜ್ಯ ಪ್ರವಾಸ.04.01.2026 04.02.2026 6ದಿನಗಳು ಅಡಮಾನ್ ದ್ವೀಪಪ್ರವಾಸ. 09.12.2025 15 ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ (ಅಮರಕಂಠಕ,ಮಯ್ಯಾರ್ ಸಹಿತ).01.12.2025 12.12.2025 10ದಿನಗಳು ಅಖಂಡ ಆಂಧ್ರತೆಲಂಗಾಣ ರಾಜ್ಯಪ್ರವಾಸ.22.11.2025 12.12.2025,22.12.2025 10ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ.06.12.2025 22.12.2025,22.01.2026 04/06/08ದಿನಗಳು ಕಾಶಿ ಪ್ರಯಾಗ್,ಗಯಾ, ನೈಮಿಷ್ಯಾರಣ್ಯ,ದೇವಘರ್. 11.12.2025 12/16/21ದಿನಗಳು ಈಶಾನ್ಯ ರಾಜ್ಯಗಳ (ಸೆವೆನ್ ಸಿಸ್ಟರ್ಸ್) ಅಸ್ಸಾಂ, ಅರುಣಾಚಲ, ಮೇಘಾಲಯ,ಮಣಿಪುರ,ತ್ರಿಪುರ ನಾಗಲ್ಯಾಂಡ್,ಮಿಝೋರಾಂ. 8073824856 9206979202 9846954639

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೆಟ್ ಲಿ. ಬೆಂಗಳೂರು

ಐತಿಹಾಸಿಕ ಗೆಲುವು ದಾಖಲಿಸಿದ ಭಾರತ ಸಂಜಾತ • ಅಧ್ಯಕ್ಷ ಟ್ರಂಪ್ ವಲಸೆ ನೀತಿಗೆ ಸವಾಲೆಸೆದ ನೂತನ ಮೇಯರ್

'ನ್ಯೂಯಾರ್ಕ್ ಎಂದಿಗೂ ವಲಸಿಗರು, ಕಾರ್ಮಿಕರ ನಗರ'

ನ್ಯೂಯಾರ್ಕ್ (ಪಿಟಿಐ): 'ಇಂದು ರಾತ್ರಿ, ನಾವು ಹಳೆಯದರಿಂದ ಹೊಸದಕ್ಕೆ ಹೆಜ್ಜೆ ಹಾಕುತ್ತಿದ್ದೇವೆ...'

'ಹೌದು... ನ್ಯೂಯಾರ್ಕ್ ನಗರದ ಮೇಯರ್ ಆಗಿ ಆಯ್ಕೆಗೊಂಡು ನಿಮ್ಮ ಮುಂದೆ ಬಂದು ನಿಲ್ಲುವಾಗ, ನನಗೆ ಮೊದಲಿಗೆ ನೆನಪಿಗೆ ಬರುವುದು ಭಾರತದ ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಈ ಮಾತು'.

'ಒಂದು ಯುಗ ಕೊನೆಗೊಂಡಾಗ, ಆ ರಾಷ್ಟ್ರದ ಆತ್ಮವು ಹೊಸ ಧ್ವನಿ ಪಡೆಯುವಾಗ, ನಾವು ಹಳೆಯದರಿಂದ ಹೊಸದಕ್ಕೆ ಹೆಜ್ಜೆ ಹಾಕುತ್ತೇವೆ. ಇಂತಹ ಕ್ಷಣಗಳು ಇತಿಹಾಸದಲ್ಲಿ ವಿರಳಾತಿ ವಿರಳ. ಹೌದು, ನನ್ನ ಗೆಲುವು ದೀರ್ಘಕಾಲದ ರಾಜಕೀಯ ಅರಸೊತ್ತಿಗೆಯನ್ನು ಉರುಳಿಸಿದೆ'.

ನ್ಯೂಯಾರ್ಕ್ ನಗರದ ಮೇಯರ್ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಚಾರಿತ್ರಿಕ ಗೆಲುವು ಗಳಿಸಿದ ಭಾರತ ಸಂಜಾತ ಅಭ್ಯರ್ಥಿ ಜೊಹ್ರಾನ್ ಮಮ್ದಾನಿ ಅವರು, ವಿಜಯೋತ್ಸವ ವೇಳೆ ಆಡಿದ ನುಡಿಗಳಿವು.

ಮಮ್ದಾನಿ ಅವರು ಜನವರಿ 1ರಂದು ಅಮೆರಿಕದ ಅತಿ ದೊಡ್ಡ ನಗರವಾದ ನ್ಯೂಯಾರ್ಕ್‌ನ ಮೇಯರ್ ಪಟ್ಟಕ್ಕೇರುವಾಗ, ಈ ಸ್ಥಾನ ಅಲಂಕರಿಸುತ್ತಿರುವ ಮೊದಲ ಮುಸ್ಲಿಂ, ಮೊದಲ ಭಾರತೀಯ, ಆಫ್ರಿಕಾದಲ್ಲಿ ಜನಿಸಿದ ಮೊದಲ ವ್ಯಕ್ತಿ ಮತ್ತು ಕಳೆದೊಂದು ಶತಮಾನದಲ್ಲಿ ಮೇಯರ್ ಹುದ್ದೆಗೇರಿದ ಕಿರಿಯ ವ್ಯಕ್ತಿ ಎಂಬ ಹೆಗ್ಗಳಿಕೆಗಳಿಗೂ ಪಾತ್ರರಾಗಲಿದ್ದಾರೆ.

ಮಮ್ದಾನಿ ಗೆಲುವಿನೊಂದಿಗೆ ನ್ಯೂಯಾರ್ಕ್ ನಗರ ಮತ್ತು ಅಮೆರಿಕವು ಹೊಸ ರಾಜಕೀಯ ಮತ್ತು ಸೈದ್ಧಾಂತಿಕ ಯುಗಕ್ಕೆ ಮುನ್ನುಡಿ ಬರೆದಿದೆ. ಬಂಡವಾಳಶಾಹಿಯ ವಿರುದ್ಧ ಪ್ರಜಾಪ್ರಭುತ್ವವಾದಿ, ಸಮಾಜವಾದಿಯ ಐತಿಹಾಸಿಕ ಗೆಲುವು, ದೇಶದ ರಾಜಕೀಯ ಸ್ಥಿತ್ಯಂತರಕ್ಕೂ ಕಾರಣವಾಗಲಿವೆ ಎಂಬ ವಿಶ್ಲೇಷಣೆಗಳು ನಡೆಯುತ್ತಿವೆ.

ಡೊನಾಲ್ಡ್ ಟ್ರಂಪ್ ಅವರೇ, ನನ್ನ ಮಾತನ್ನು ಸರಿಯಾಗಿ ಕೇಳಿಸಿಕೊಳ್ಳಿ, 'ನ್ಯೂಯಾರ್ಕ್ ನಗರವು ಮುಂದೆಯೂ ವಲಸಿಗರ ನಗರವಾಗಿಯೇ ಮುಂದುವರಿಯಲಿದೆ. ಈ ನಗರವನ್ನು ಕಾರ್ಮಿಕರು, ವಲಸಿಗರು ಬೆವರು ಸುರಿಸಿ ಕಟ್ಟಿದ್ದಾರೆ. ಈಗ ಒಬ್ಬ ವಲಸಿಗನಿಗೆ ಈ ನಗರವನ್ನು ಮುನ್ನಡೆಸಲು ಅವಕಾಶ ಲಭಿಸಿದೆ. 'ನಾನೊಬ್ಬ ಮುಸ್ಲಿಂ' ಎಂಬ ಕಾರಣಕ್ಕೆ ಕ್ಷಮೆಯಾಚಿಸುವುದನ್ನು ನಿರಾಕರಿಸುತ್ತೇನೆ. ಜತೆಗೆ ನಮ್ಮಲ್ಲಿ (ವಲಸಿಗರು) ಯಾರನ್ನಾದರೂ ಮುಟ್ಟಬೇಕಿದ್ದರೆ, ನೀವು ನಮ್ಮೆಲ್ಲರನ್ನೂ ದಾಟಬೇಕಾಗುತ್ತದೆ' ಎಂದು ಮಮ್ದಾನಿ ಟ್ರಂಪ್ ಅವರ ವಲಸೆ ನೀತಿಗೂ ಸವಾಲು ಹಾಕಿದ್ದಾರೆ.

ನ್ಯೂಯಾರ್ಕ್‌ನ ನೂತನ ಮೇಯರ್ ಆಗಿ ಆಯ್ಕೆಯಾಗಿರುವ ಜೊಹ್ರಾನ್ ಮಮ್ದಾನಿ ಅವರು, ತಮ್ಮ ತಂದೆ ಮುಹಮ್ಮದ್ ಮಮ್ದಾನಿ, ಪತ್ನಿ ರಮಾ ದುವಾಜಿ ಮತ್ತು ತಾಯಿ ಮೀರಾ ನಾಯರ್ ಅವರೊಂದಿಗೆ ಮಂಗಳವಾರ ಸಂಭ್ರಮಿಸಿದರು —ಎಪಿ ಚಿತ್ರ

'ವೆಚ್ಚ ಕಡಿಮೆಗೊಳಿಸಿ, ಜೀವನ ಸುಗಮಗೊಳಿಸಿ'

ಬೆಲೆ ಏರಿಕೆ, ಹಣದುಬ್ಬರ ಹೆಚ್ಚಳ, ಉದ್ಯೋಗ ಕಡಿತ ಸೇರಿದಂತೆ ರಾಜಕೀಯ ಮತ್ತು ಆರ್ಥಿಕ ಅಸ್ಥಿರತೆ ಎದುರಿಸುತ್ತಿರುವ ಅಮೆರಿಕನ್ನರಿಗೆ, ವಿಶೇಷವಾಗಿ ನ್ಯೂಯಾರ್ಕ್‌ನ ಜನರಿಗೆ, 'ಜೀವನ ನಿರ್ವಹಣೆ ವೆಚ್ಚವನ್ನು ಕಡಿಮೆ ಮಾಡಲೆಂದೇ ನ್ಯೂಯಾರ್ಕ್‌ನ ಮೇಯರ್ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದೇನೆ' ಎಂಬ ಮಮ್ದಾನಿ ಅವರ ಭರವಸೆಯ ನುಡಿಗಳು ವಿಶ್ವಾಸ ಮೂಡಿಸಿದ್ದವು. ನಗರ ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ, ಮಕ್ಕಳಿಗಾಗಿ ಸಾರ್ವಜನಿಕ ಆಸ್ಪತ್ರೆ, ಕಡಿಮೆ ವೆಚ್ಚದ ಮನೆಗಳು ಸೇರಿದಂತೆ 'ವೆಚ್ಚ ಕಡಿಮೆಗೊಳಿಸಿ, ಜೀವನ ಸುಗಮಗೊಳಿಸಿ' ಎನ್ನುವುದು ಅವರ ಚುನಾವಣಾ ಘೋಷಣೆಯಾಗಿತ್ತು.

ಬಂಡವಾಳಶಾಹಿ ವ್ಯವಸ್ಥೆಗೆ ವಿರುದ್ಧವಾಗಿದ್ದ ಈ ಯುವ ರಾಜಕಾರಣಿಯು ನ್ಯೂಯಾರ್ಕ್‌ನ ಯುವಸಮೂಹ ಹಾಗೂ ಶ್ರಮಿಕ ವರ್ಗದ ಅಪಾರ ಬೆಂಬಲವನ್ನು ಗಳಿಸಿರುವುದು ಚುನಾವಣಾ ಫಲಿತಾಂಶದಲ್ಲಿ ಸ್ಪಷ್ಟವಾಗಿದೆ.

ಭಾರತದ ನಂಟು

ತಮ್ಮ ಮೊದಲ ವಿಜಯೋತ್ಸವ ಭಾಷಣದಲ್ಲಿ ಮಮ್ದಾನಿ, ಭಾರತ ಅಥವಾ ಭಾರತೀಯರನ್ನು ನೇರವಾಗಿ ಉಲ್ಲೇಖಿಸದಿದ್ದರೂ, ನೆಹರೂ ಮತ್ತು 'ಧೂಮ್ ಮಚಾಲೆ' ಹಾಡಿನ ಮೂಲಕ ತಮ್ಮ ಭಾರತೀಯ ಬೇರನ್ನು ಸ್ಮರಿಸಲು ಮರೆಯಲಿಲ್ಲ. ವಿಜಯೋತ್ಸವ ಭಾಷಣದ ಬೆನ್ನಲ್ಲೇ ವೇದಿಕೆಯಲ್ಲಿ ಬಾಲಿವುಡ್‌ನ ಜನಪ್ರಿಯ 'ಧೂಮ್ ಮಚಾಲೆ' ಹಾಡು ಕೇಳಿಬಂತು. ಮಮ್ದಾನಿ ಅವರ ವಾಕ್ಚಾತುರ್ಯ ಮತ್ತು ಸಾಮಾಜಿಕ ಮಾಧ್ಯಮದ ಮೇಲಿನ ಹಿಡಿತ ಕೂಡ ಅವರ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ ಎನ್ನಲಾಗುತ್ತಿದೆ.

> ಅಸಾಧ್ಯವಾದುದನ್ನು ಸಾಧ್ಯವಾಗಿಸಬಹುದು ಎಂದು ನ್ಯೂಯಾರ್ಕ್ ನಗರದ ನಿವಾಸಿಗಳು ಬಯಸಿದ್ದರಿಂದ ನಾವು ಚುನಾವಣೆ ಗೆದ್ದಿದ್ದೇವೆ
> **ಜೊಹ್ರಾನ್ ಮಮ್ದಾನಿ,** ನ್ಯೂಯಾರ್ಕ್‌ನ ಚುನಾಯಿತ ಮೇಯರ್

> ಟ್ರಂಪ್ ಮತದಾನದಲ್ಲಿ ಇರಲಿಲ್ಲ ಎಂಬ ಕಾರಣಕ್ಕೆ ಮತ್ತು ಮತದಾನದಲ್ಲಿ ರಿಪಬ್ಲಿಕ್ ಪಕ್ಷದ ಅನುಪಸ್ಥಿತಿಯಿಂದಾಗಿ ನಾವು ಸೋತಿದ್ದೇವೆ
> **ಡೊನಾಲ್ಡ್ ಟ್ರಂಪ್,** ಅಮೆರಿಕ ಅಧ್ಯಕ್ಷ, ಟ್ರುಥ್ ಸೋಷಿಯಲ್‌ನಲ್ಲಿ

ದಾಖಲೆ ಮತ ಚಲಾವಣೆ

ಜೊಹ್ರಾನ್ ಮಮ್ದಾನಿ, ನ್ಯೂಯಾರ್ಕ್‌ನ ಮಾಜಿ ಗವರ್ನರ್, ಪ್ರಭಾವಿ ರಾಜಕೀಯ ಮುಖಂಡ ಆ್ಯಂಡ್ರ್ಯೂ ಕೌಮೊ ಮತ್ತು ರಿಪಬ್ಲಿಕನ್ ಅಭ್ಯರ್ಥಿ ಕರ್ಟಿಸ್ ಸ್ಲಿವಾ ಅವರನ್ನು ಮಣಿಸಿದ್ದಾರೆ. ಒಟ್ಟು 9,48,202 ಮತಗಳನ್ನು (ಶೇ 50.6) ಅವರು ಪಡೆದಿದ್ದಾರೆ. ಆ್ಯಂಡ್ರ್ಯೂ ಕೌಮೊ 7,76,547 ಮತಗಳನ್ನು (ಶೇ 41.3) ಹಾಗೂ ಕರ್ಟಿಸ್ ಸ್ಲಿವಾ 1,37,030 ಮತಗಳನ್ನು ಪಡೆದಿದ್ದಾರೆ.

ನ್ಯೂಯಾರ್ಕ್ ಮೇಯರ್ ಚುನಾವಣೆಯಲ್ಲಿ 1969ರ ಬಳಿಕ ಇದೇ ಮೊದಲ ಬಾರಿಗೆ 20 ಲಕ್ಷ ಮತಗಳು ಚಲಾವಣೆಯಾಗಿವೆ ಎಂದು ನ್ಯೂಯಾರ್ಕ್‌ನ ಚುನಾವಣಾ ಮಂಡಳಿ ಹೇಳಿದೆ.

ಜೊಹ್ರಾನ್ ಕ್ರಮಿಸಿದ ಹಾದಿ: ಕ್ವೀನ್ಸ್‌ನ ಡೆಮಾಕ್ರಟಿಕ್ ಸೋಷಿಯಲಿಸ್ಟ್ ಮತ್ತು ಸ್ಟೇಟ್ ಅಸೆಂಬ್ಲಿ ಸದಸ್ಯರಾಗಿದ್ದ ಜೊಹ್ರಾನ್ ಅವರು ನ್ಯೂಯಾರ್ಕ್‌ನ ಮೇಯರ್ ಹುದ್ದೆಗೇರಿದ ಯಶೋಗಾಥೆ ಹಲವು ತಲೆಮಾರುಗಳಿಗೆ ಸ್ಫೂರ್ತಿ ತುಂಬುವಂಥದ್ದು.

ಮಮ್ದಾನಿ ಅವರು ಬ್ರಾಂಕ್ಸ್ ಹೈಸ್ಕೂಲ್ ಆಫ್ ಸೈನ್ಸ್‌ನಲ್ಲಿ ಪ್ರೌಢ ಶಿಕ್ಷಣ ಹಾಗೂ ಬೌಡೊಯಿನ್ ಕಾಲೇಜಿನಿಂದ ಪದವಿ ಪಡೆದಿದ್ದಾರೆ. ಪ್ರೌಢಶಾಲಾ ಹಂತದ ಕ್ರಿಕೆಟ್ ತಂಡದಲ್ಲೂ ಅವರು ಪ್ರಮುಖ ಆಟಗಾರರಾಗಿದ್ದರು.

ವಸತಿ ಸಲಹೆಗಾರ ಅಧಿಕಾರಿಯಾಗಿಯೂ ಕಾರ್ಯನಿರ್ವಹಿಸಿದ್ದ ಅವರು, ನ್ಯೂಯಾರ್ಕ್‌ನಲ್ಲಿ ಕಡಿಮೆ ಆದಾಯ ಹೊಂದಿರುವ ವಲಸಿಗರನ್ನು ಮನೆಗಳಿಂದ ಹೊರಹಾಕುವುದನ್ನು ತಡೆಗಟ್ಟಲು ಅಪಾರವಾಗಿ ಶ್ರಮಿಸಿದ್ದರು. ಈ ಕಾರ್ಯಕ್ಕಾಗಿ ವಲಸಿಗರ, ಕಾರ್ಮಿಕರ ವಿಶ್ವಾಸ ಗಳಿಸಿದ್ದ ಅವರು, 2020ರಲ್ಲಿ ಮೊದಲ ಬಾರಿ ನ್ಯೂಯಾರ್ಕ್ ಅಸೆಂಬ್ಲಿಗೆ ಆಯ್ಕೆಯಾಗಿದ್ದರು.

ಜೊಹ್ರಾನ್ ಮಮ್ದಾನಿ ಭಾರತದ ಸಿನಿಮಾ ನಿರ್ದೇಶಕಿ ಮೀರಾ ನಾಯರ್, ಕೊಲಂಬಿಯಾ ವಿವಿ ಪ್ರಾಧ್ಯಾಪಕ ಮಹಮದ್ ಮಮ್ದಾನಿ ಅವರ ಪುತ್ರ. ಮಮ್ದಾನಿ ಜನಿಸಿದ್ದು ಉಗಾಂಡಾದ ಕಂಪಾಲದಲ್ಲಿ. ಅವರಿಗೆ 5 ವರ್ಷವಿದ್ದಾಗ ದಕ್ಷಿಣ ಆಫ್ರಿಕಾದ ಕೇಪ್ ಟೌನ್‌ಗೆ, ನಂತರ 7 ವರ್ಷ ಇದ್ದಾಗ ನ್ಯೂಯಾರ್ಕ್‌ಗೆ ವಲಸೆ ಬಂದು ಅವರ ಕುಟುಂಬ ನೆಲೆಗೊಂಡಿತ್ತು. ಮಮ್ದಾನಿ ಅವರಿಗೆ 2018ರಲ್ಲಿ ಅಮೆರಿಕದ ಪೌರತ್ವ ಲಭಿಸಿತ್ತು. ಅಮೆರಿಕನ್ ಅನಿಮೇಟರ್ ರಮಾ ಸವಾಫ್ ದುವಾಜಿ ಅವರ ಪತ್ನಿ.

ನ್ಯೂಯಾರ್ಕ್ ಮೇಯರ್ ಚುನಾವಣೆಯ ಪ್ರಾಥಮಿಕ ಹಂತದಿಂದಲೇ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಮ್ದಾನಿ ಅವರನ್ನು ವಿರೋಧಿಸಿಕೊಂಡು ಬಂದಿದ್ದರು. 'ಜೊಹ್ರಾನ್ ಅವರನ್ನು ಮೇಯರ್ ಸ್ಥಾನದ ಅಭ್ಯರ್ಥಿಯಾಗಿ ಆಯ್ಕೆ ಮಾಡಿರುವ ನ್ಯೂಯಾರ್ಕ್‌ನ ಜನರು ಮರುಳರು. ಅವರೊಬ್ಬ ಕಮ್ಯುನಿಸ್ಟ್. ಅಂಥವರ ಆಯ್ಕೆ ಯಾವತ್ತೂ ಕೆಟ್ಟ ಕಡೆಯದ್ದಾಗಿರಬೇಕು' ಎಂದಿದ್ದರು.

ಗಿಲ್ಲಿ ನಟ

ಡೆವಿಲ್‌ನಲ್ಲಿ ಗಿಲ್ಲಿ ನಟ

ಸದ್ಯ 'ಬಿಗ್‌ಬಾಸ್‌'ನ 12ನೇ ಆವೃತ್ತಿಯಲ್ಲಿ ಮಿಂಚುತ್ತಿರುವ 'ಕಾಮಿಡಿ ಕಿಲಾಡಿಗಳು', 'ಭರ್ಜರಿ ಬ್ಯಾಚುಲರ್ಸ್‌', 'ಡಾನ್ಸ್ ಕರ್ನಾಟಕ ಡಾನ್ಸ್' ರಿಯಾಲಿಟಿ ಶೋ ಖ್ಯಾತಿಯ ಗಿಲ್ಲಿ ನಟ, 'ಡೆವಿಲ್' ಸಿನಿಮಾದಲ್ಲೂ ಬಣ್ಣಹಚ್ಚಿದ್ದಾರೆ.

ಪ್ರಕಾಶ್ ವೀರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ, ದರ್ಶನ್ ನಟನೆಯ 'ಡೆವಿಲ್–ದಿ ಹೀರೊ' ಸಿನಿಮಾ ಡಿ.12ರಂದು ತೆರೆಕಾಣುತ್ತಿದೆ. 'ಇದು ಚಿತ್ರದ ಪ್ರಮುಖ ಪಾತ್ರಗಳಲ್ಲೊಂದು' ಎನ್ನುತ್ತಾ ಗಿಲ್ಲಿ ನಟನನ್ನು ಪರಿಚಯಿಸಿದೆ ಚಿತ್ರತಂಡ. ಮಂಡ್ಯದ ಮಳವಳ್ಳಿಯ ನಟರಾಜ ಕಿರುತೆರೆಗೆ ಹೆಜ್ಜೆ ಇಟ್ಟ ಬಳಿಕ ಗಿಲ್ಲಿ ನಟನೆಂದೇ ಖ್ಯಾತಿ ಪಡೆದಿದ್ದಾರೆ. ಹಲವು ಕಿರುಚಿತ್ರಗಳಲ್ಲಿ ನಟಿಸಿ 'ಕಾಲಾಪತ್ಥರ್' ಸಿನಿಮಾದಲ್ಲೂ ಬಣ್ಣಹಚ್ಚಿದ್ದರು. ಇದೀಗ 'ಡೆವಿಲ್'ನಲ್ಲಿ ಭಿನ್ನವಾದ ಒಂದು ಲುಕ್‌ನಲ್ಲಿ ಅವರು ಕಾಣಿಸಿಕೊಂಡಿದ್ದಾರೆ.

ಶ್ರೀ ಜೈ ಮಾತ ಕಂಬೈನ್ಸ್ ಲಾಂಛನದಲ್ಲಿ ಜೆ.ಜಯಮ್ಮ ನಿರ್ಮಾಣ ಮಾಡಿರುವ 'ಡೆವಿಲ್'ನ ಚಿತ್ರೀಕರಣ ಬೆಂಗಳೂರು, ರಾಜಸ್ಥಾನ, ಬ್ಯಾಂಕಾಕ್ ಮುಂತಾದ ಕಡೆ ನಡೆದಿದೆ. ಸುಧಾಕರ್ ಎಸ್.ರಾಜ್ ಛಾಯಾಚಿತ್ರಗ್ರಹಣ, ಬಿ.ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಹರೀಶ್ ಕೊಮ್ಮೆ ಸಂಕಲನ, ಮೋಹನ್ ಬಿ.ಕೆರೆ ಕಲಾ ನಿರ್ದೇಶನ ಹಾಗೂ ರಾಮ್ ಲಕ್ಷ್ಮಣ್ ಸಾಹಸ ನಿರ್ದೇಶನ ಚಿತ್ರಕ್ಕಿದೆ. ರಚನಾ ರೈ ಚಿತ್ರದ ನಾಯಕಿಯಾಗಿದ್ದು, ತುಳಸಿ, ಅಚ್ಯುತ್ ಕುಮಾರ್, ಮಹೇಶ್ ಮಂಜ್ರೇಕರ್, ಶ್ರೀನಿವಾಸಪ್ರಭು, ಶೋಭರಾಜ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಸಾಗರ್ ರಾಮ್ ಹಾಗೂ ಜಯಸೂರ್ಯ ಜೊತೆ ಧ್ರುವ ಸರ್ಜಾ

'ದಿ ಟಾಸ್ಕ್'ಗೆ ಧ್ರುವ ಸರ್ಜಾ ಸಾಥ್

ರಾಘು ಶಿವಮೊಗ್ಗ ನಿರ್ದೇಶನದ 'ದಿ ಟಾಸ್ಕ್' ಸಿನಿಮಾ ನ.21ರಂದು ತೆರೆಕಾಣುತ್ತಿದ್ದು, ಇತ್ತೀಚೆಗೆ ನಟ ಧ್ರುವ ಸರ್ಜಾ ಸಿನಿಮಾದ ಹಾಡೊಂದನ್ನು ರಿಲೀಸ್ ಮಾಡಿದರು.

'ಸಾಗುವ ದಾರಿಯ ತುಂಬಾ..' ಹಾಡು ಸೆಮಿರ್‍ಯಾಪ್ ಶೈಲಿಯಲ್ಲಿದ್ದು, ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯ ಹಾಡಿಗಿದೆ. ರಾಘು ಶಿವಮೊಗ್ಗ ಹಾಗೂ ಚೇತನ್ ನಾಯ್ಕ್ ದನಿಯಾಗಿರುವ ಈ ಹಾಡಿಗೆ ಜೂಡಾ ಸ್ಯಾಂಡಿ ಸಂಗೀತ ನೀಡಿದ್ದಾರೆ.

ಲೋಕಪೂಜ್ಯ ಪಿಕ್ಚರ್ ಹೌಸ್ ಸಂಸ್ಥೆಯಡಿ ವಿಜಯ್ ಕುಮಾರ್ ಹಾಗೂ ರಾಮಣ್ಣ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. 'ಈ ಸಿನಿಮಾ ಮೂಲಕ ಇಬ್ಬರು ಹೊಸ ನಾಯಕರು ಚಿತ್ರರಂಗಕ್ಕೆ ಹೆಜ್ಜೆ ಇಡುತ್ತಿದ್ದಾರೆ. ಟೀಸರ್ ನೋಡಿದರೆ ಇದೊಂದು ಆ್ಯಕ್ಷನ್ ಥ್ರಿಲ್ಲರ್ ಎನಿಸುತ್ತದೆ. ಸಿನಿಮಾ ನೋಡಬೇಕು ಎನ್ನುವ ನಿರೀಕ್ಷೆ ಹುಟ್ಟುವಂತೆ ಚಿತ್ರದ ದೃಶ್ಯಗಳಿವೆ' ಎಂದರು ಧ್ರುವ ಸರ್ಜಾ.

'ಚೂರಿಕಟ್ಟೆ' ಖ್ಯಾತಿಯ ರಾಘು ಶಿವಮೊಗ್ಗ ನಿರ್ದೇಶಿಸಿರುವ ಈ ಚಿತ್ರದಲ್ಲಿ 'ಭೀಮ' ಸಿನಿಮಾ ಖ್ಯಾತಿಯ ಜಯಸೂರ್ಯ ಆರ್. ಅಜಾದ್, 'ಪೆಂಟಗನ್' ಸಿನಿಮಾ ಖ್ಯಾತಿಯ ಸಾಗರ್ ರಾಮ್ ಹಾಗೂ ಬಾಲ ನಟಿ ಬೇಬಿ ಶ್ರೀಲಕ್ಷ್ಮಿ ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದಾರೆ. ರಾಘು ಶಿವಮೊಗ್ಗ ನಿರ್ದೇಶನದ ಜೊತೆಗೆ ಒಂದು ಮುಖ್ಯ ಪಾತ್ರವನ್ನು ನಿರ್ವಹಿಸಿದ್ದಾರೆ. ಉಳಿದಂತೆ ಅಚ್ಯುತ್ ಕುಮಾರ್, ಗೋಪಾಲಕೃಷ್ಣ ದೇಶಪಾಂಡೆ, ಅರವಿಂದ್ ಕುಪ್ಪಿಕರ್, ಹರಿಣಿ ಶ್ರೀಕಾಂತ್, ಸಂಪತ್ ಎಂ., ಬಾಲಾಜಿ ಮನೋಹರ್, ಬಿ.ಎಂ.ಗಿರಿರಾಜ್ ತಾರಾಬಳಗದಲ್ಲಿದ್ದಾರೆ.

ಸಂದೀಪ್ ಜೊತೆ ಶ್ರೀಜೈ ಸಿನಿಮಾ

ಶ್ರೀಜೈ

'ಆರ್ ಎಕ್ಸ್ ಸೂರಿ' ಮತ್ತು 'ಭೈರಾದೇವಿ' ನಿರ್ದೇಶಕ ಶ್ರೀಜೈ ಹೊಸ ಸಿನಿಮಾಗೆ ಚಾಲನೆ ನೀಡಿದ್ದಾರೆ. ಶ್ರೀಜೈ ಆ್ಯಕ್ಷನ್ ಕಟ್ ಹೇಳಲಿರುವ ಹೊಸ ಸಿನಿಮಾದಲ್ಲಿ ಸಂದೀಪ್ ನಾಗರಾಜ್ ನಾಯಕನಾಗಿ ನಟಿಸಲಿದ್ದಾರೆ.

ಪ್ರೊಡಕ್ಷನ್ ನಂ.1 ವರ್ಕಿಂಗ್ ಟೈಟಲ್‌ನಲ್ಲಿ ಸಿನಿಮಾ ಘೋಷಣೆಯಾಗಿದ್ದು, ಇತ್ತೀಚೆಗೆ ಬೆಂಗಳೂರಿನಲ್ಲಿ ಚಿತ್ರದ ಸ್ಕ್ರಿಪ್ಟ್ ಪೂಜೆ ನಡೆದಿದೆ. ಸಂದೀಪ್ ಈಗಾಗಲೇ 'ಗೂಗ್ಲಿ', 'ಅನಂತು ವರ್ಸಸ್ ನುಸ್ರತ್', 'ಪ್ರಭುತ್ವ', '1/2 ಮೆಂಟ್ಲು' ಸಿನಿಮಾಗಳಲ್ಲಿ ನಟಿಸಿದ್ದು, ಇದೀಗ ಹೊಸ ಸಿನಿಮಾದಲ್ಲಿ ಪೂರ್ಣವಾದ ಮಾಸ್ ಲುಕ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಚಿತ್ರತಂಡ ಬಿಡುಗಡೆ ಮಾಡಿರುವ ಪೋಸ್ಟರ್ ನೋಡಿದರೆ ಇದು ರೌಡಿಸಂ ಕಥೆ ಎನ್ನುವುದು ಸ್ಪಷ್ಟವಾಗಿದೆ.

ಡ್ರೀಮ್ ವರ್ಲ್ಡ್ ಸಿನಿಮಾಸ್ ಹಾಗೂ ರಾಧಾಕೃಷ್ಣ ಆರ್ಟ್ಸ್ ಬ್ಯಾನರ್‌ನಡಿ ಈ ಸಿನಿಮಾ ನಿರ್ಮಾಣವಾಗಲಿದೆ. ಸೋಲೋಮನ್ ಚಿತ್ರಕ್ಕೆ ಕ್ಯಾಮೆರಾ ಹಿಡಿಯಲಿದ್ದು, ಶ್ರೀಕಾಂತ್ ಸಂಕಲನ ಚಿತ್ರಕ್ಕಿದ್ದು, 'ಭೈರಾದೇವಿ' ಸಿನಿಮಾಗೆ ಸಂಗೀತ ನಿರ್ದೇಶನ ಮಾಡಿದ್ದ ಸೆಂಥಿಲ್ ಪ್ರಶಾಂತ್ ಈ ಚಿತ್ರಕ್ಕೂ ಸಂಗೀತ ನಿರ್ದೇಶನ ಮಾಡಲಿದ್ದಾರೆ.

ಜ.9ಕ್ಕೇ 'ದಿ ರಾಜಾಸಾಬ್'



ಪ್ರಭಾಸ್

ತೆಲುಗು ನಟ ಪ್ರಭಾಸ್ ನಟನೆಯ ಪ್ಯಾನ್ ಇಂಡಿಯಾ ಸಿನಿಮಾ 'ದಿ ರಾಜಾಸಾಬ್' ಜ.9ರಂದೇ ತೆರೆಕಾಣಲಿದೆ ಎಂದು ಚಿತ್ರತಂಡ ಸ್ಪಷ್ಟಪಡಿಸಿದೆ. ಈ ಮೂಲಕ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಊಹಾಪೋಹದ ಸುದ್ದಿಗೆ ತಂಡ ತೆರೆಎಳೆದಿದೆ.

ಈ ಹಿಂದೆ ಡಿ.5ರಂದು ಸಿನಿಮಾ ತೆರೆಕಾಣಲಿದೆ ಎಂದು ಚಿತ್ರತಂಡ ಹೇಳಿತ್ತು. ವಾರದ ಹಿಂದೆ ಜ.9ರಂದು ಸಿನಿಮಾ ತೆರೆಕಾಣಲಿದೆ ಎಂದು ಪ್ರಭಾಸ್ ಇನ್‌ಸ್ಟಾಗ್ರಾಂನಲ್ಲಿ ತಿಳಿಸಿದ್ದರು. ಇದಾದ ಬಳಿಕ ಸಿನಿಮಾ ಮತ್ತೆ ಮುಂದೂಡಿಕೆಯಾಗಲಿದೆ ಎನ್ನುವ ಗಾಳಿಸುದ್ದಿ ಹರಿದಾಡಿತ್ತು. ಮಾರುತಿ ನಿರ್ದೇಶನದ ಈ ಪ್ಯಾನ್ ಇಂಡಿಯಾ ಸಿನಿಮಾವನ್ನು ಪೀಪಲ್ ಮೀಡಿಯಾ ಫ್ಯಾಕ್ಟರಿ ನಿರ್ಮಾಣ ಮಾಡಿದೆ. ಈ ಹಾರರ್-ಫ್ಯಾಂಟಸಿ ಡ್ರಾಮಾ ಸಿನಿಮಾದಲ್ಲಿ ಹಲವು ಶೇಡ್‌ಗಳಲ್ಲಿ ಪ್ರಭಾಸ್ ಕಾಣಿಸಿಕೊಳ್ಳಲಿದ್ದಾರೆ. ಟಿ.ಜಿ.ವಿಶ್ವ ಪ್ರಸಾದ್ ಬಂಡವಾಳ ಹೂಡಿರುವ ಈ ಸಿನಿಮಾ ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಸಿದ್ಧವಾಗಿದೆ. ಸಂಜಯ್ ದತ್, ಜರೀನಾ ವಹಾಬ್, ಬೊಮನ್ ಇರಾನಿ, ನಿಧಿ ಅಗರವಾಲ್, ಮಾಳವಿಕಾ ಮೋಹನನ್ ಮತ್ತು ರಿದ್ಧಿ ಕುಮಾರ್ ಚಿತ್ರದ ತಾರಾಬಳಗದಲ್ಲಿದ್ದಾರೆ.

ದೀಪ್ತಾಯನ್‌ಗೆ ಮಣಿದ ನಿಪೊಮ್‌ನಿಷಿ

ಫಿಡೆ ಚೆಸ್ ವಿಶ್ವಕಪ್: 3ನೇ ಸುತ್ತಿಗೆ ಗುಕೇಶ್, ಅರ್ಜುನ್, ಅನಿಶ್

ಪಣಜಿ (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ದೀಪ್ತಾಯನ್ ಘೋಷ್ ಅವರು ಹಾಲಿ ವಿಶ್ವಕಪ್ ಚೆಸ್‌ನಲ್ಲೇ ದೊಡ್ಡ ಅನಿರೀಕ್ಷಿತ ಫಲಿತಾಂಶಕ್ಕೆ ಕಾರಣರಾದರು. ಎರಡನೆ ಸುತ್ತಿನ ಪಂದ್ಯದಲ್ಲಿ ಬುಧವಾರ ಬಂಗಾಳದ ಆಟಗಾರ, ಮಾಜಿ ವಿಶ್ವ ಚಾಂಪಿಯನ್‌ಷಿಪ್ ಚಾಲೆಂಜರ್ ಇಯಾನ್ ನಿಪೊಮ್‌ನಿಷಿ ಅವರನ್ನು 1.5–0.5 ರಿಂದ ಸೋಲಿಸಿದರು.

ಇವರಿಬ್ಬರ ನಡುವಣ ಮಂಗಳವಾರ ಮೊದಲ ಆಟ ಡ್ರಾ ಆಗಿತ್ತು. ಎರಡನೇ ಕ್ಲಾಸಿಕಲ್ ಆಟ ಏಕಪಕ್ಷೀಯವಾಗಿದ್ದು, ಬಿಳಿ ಕಾಯಿಗಳಲ್ಲಿ ಆಡಿದ ರಷ್ಯಾದ (ಇಲ್ಲಿ ಫಿಡೆ ಪ್ರತಿನಿಧಿಸಿದ) ಆಟಗಾರನಿಗೆ ಘೋಷ್ ಅವರು ಚೇತರಿಸುವ ಅವಕಾಶವನ್ನೇ ನೀಡಲಿಲ್ಲ.

'ನಿಪೊ ಅವರನ್ನು ಸೋಲಿಸಿದ್ದು, ನಿಸ್ಸಂದೇಹವಾಗಿ ನನ್ನ ಚೆಸ್ ಜೀವನದ ಅತಿ ದೊಡ್ಡ ಗೆಲುವು' ಎಂದು ವಿಜಯದ ನಂತರ ಭಾರತದ ಆಟಗಾರ ಪ್ರತಿಕ್ರಿಯಿಸಿದರು.

ಅರ್ಜುನ್ ಇರಿಗೇಶಿ ಮುನ್ನಡೆ: ಎರಡನೇ ಶ್ರೇಯಾಂಕದ ಅರ್ಜುನ್ ಇರಿಗೇಶಿ, ಬಲ್ಗೇರಿಯಾದ ಮಾರ್ಟಿನ್ ಪೆಟ್ರೋವ್ ಅವರನ್ನು ಎರಡನೇ ಪಂದ್ಯದಲ್ಲೂ ಮಣಿಸಿ (2–0) ಅಮೋಘ ರೀತಿಯಲ್ಲಿ ಮೂರನೇ ಸುತ್ತಿಗೆ ತಲುಪಿದರು.

ಅಗ್ರ ಶ್ರೇಯಾಂಕದ ಗುಕೇಶ್ ದೊಮ್ಮರಾಜು ಎರಡನೇ ಕ್ಲಾಸಿಕಲ್ ಆಟದಲ್ಲಿ, ಕಜಾಕಸ್ತಾನ ನದಿರ್ಬೆಕ್ ಕಝಿಬೆಕ್ ಅವರನ್ನು ಸೋಲಿಸಿದರು. ಆ ಮೂಲಕ 1.5–0.5 ರಿಂದ ಪಂದ್ಯ ಗೆದ್ದರು.

ಅನುಭವಿ ಗ್ರ್ಯಾಂಡ್‌ಮಾಸ್ಟರ್ ಪಿ.ಹರಿಕೃಷ್ಣ 1.5–0.5 ರಿಂದ ನೆಸ್ಟೆರೋವ್ ಅರ್ಸೆನಿ (ಫಿಡೆ) ವಿರುದ್ಧ ಗೆದ್ದು ಮೂರನೇ ಸುತ್ತು ತಲುಪಿದ ಮೊದಲಿಗರೆನಿಸಿದರು.

ಆದರೆ ವಿಶ್ವ ಜೂನಿಯರ್ ಚಾಂಪಿಯನ್ ವಿ. ಪ್ರಣವ್, ನಾರ್ವೆಯ ಆರ್ಯನ್ ತರಿ ಎದುರು ಎರಡನೇ ಆಟದಲ್ಲಿ ಸೋತಿದ್ದು, ಸ್ಕೋರ್ 1–1 ಸಮಬಲವಾಗಿದೆ. ಈ ಸೆಣಸಾಟ ಟೈಬ್ರೇಕರ್‌ಗೆ ವಿಸ್ತರಿಸಿದೆ.

ನೆದರ್ಲೆಂಡ್ಸ್‌ನ ಅನಿಶ್ ಗಿರಿ ಅವರು ಬೋಸ್ನಿಯಾದ ಮಕ್ಸಿಮೋವಿಚ್ ಬೊಯಾನ್ ಅವರನ್ನು 1.5–0.5 ರಿಂದ ಮಣಿಸಿ ಮೂರನೇ ಸುತ್ತಿಗೆ ಮುನ್ನಡೆದರು.

ಹೊರಬಿದ್ದ ವೆಸ್ಲಿ ಸೊ: ಐದನೇ ಶ್ರೇಯಾಂಕದ ಅಮೆರಿಕದ ಆಟಗಾರ ವೆಸ್ಲಿ ಸೊ ಅನಿರೀಕ್ಷಿತವಾಗಿ ಎರಡನೇ ಸುತ್ತಿನಲ್ಲೇ ಹೊರಬಿದ್ದರು. ಅವರು ಲಿಥುವೇನಿಯಾದ 27 ವರ್ಷ ವಯಸ್ಸಿನ ಆಟಗಾರ ತಿತಾಸ್ ಸ್ಟ್ರೆಮೆವಿಸಿಯಸ್ ಅವರಿಗೆ 0.5–1.5ರಲ್ಲಿ ಮಣಿದರು.

ಟ್ರೋಫಿ ಮೇಲೆ ಕಣ್ಣಿಟ್ಟಿರುವ ಜರ್ಮನಿಯ ವಿನ್ಸೆಂಟ್ ಕೀಮರ್, ಚೀನಾದ ವೀ ಯಿ, ಹಂಗೆರಿಯ ರಿಚರ್ಡ್ ರ್‍ಯಾಪೋರ್ಟ್ ಅವರೂ 2–0 ಅಂತರದಿಂದ ಎದುರಾಳಿಗಳನ್ನು ಬಗ್ಗುಬಡಿದರು.

ಅಮೆರಿಕದ ಲೆವೋನ್ ಅರೋನಿಯನ್ 1.5–0.5 ರಿಂದ ಐಎಂ ಅರಣ್ಯಕ್ ಘೋಷ್ ಅವರನ್ನು ಮಣಿಸಿದರು. ಮೊದಲ ಆಟ ಜಯಿಸಿದ್ದ ಅರೋನಿಯನ್, ಎರಡನೇ ಆಟವನ್ನು ಸುರಕ್ಷಿತವಾಗಿ ಡ್ರಾ ಮಾಡಿಕೊಂಡರು.

ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಇನ್ನೊಂದು ಪಂದ್ಯದಲ್ಲಿ ಭಾರತದ ಅನುಭವಿ ಸೂರ್ಯಶೇಖರ ಗಂಗೂಲಿ ಅವರನ್ನು 1.5–0.5 ರಿಂದ ಸೋಲಿಸಿ ಮೂರನೇ ಸುತ್ತಿಗೆ ಕಾಲಿಟ್ಟರು. ಉಜ್ಬೇಕಿಸ್ತಾನದ ಜಾವೊಕಿರ್ ಸಿಂಧರೋವ್, ಸ್ಲೊವೇನಿಯಾದ ವ್ಲಾದಿಮಿರ್ ಫೆಡೊಸೀವ್ ಸಹ ಮುಂದಿನ ಸುತ್ತಿಗೆ ಮುನ್ನಡೆದರು.

ಡ್ರಾ ಪಂದ್ಯದಲ್ಲಿ ಪ್ರಜ್ಞಾನಂದ

ಮೂರನೇ ಶ್ರೇಯಾಂಕದ ಪ್ರಜ್ಞಾನಂದ ಅವರು ಆಸ್ಟ್ರೇಲಿಯಾದ ಕುಯ್ಬೊಕರೋವ್ ತೆಮೂರ್ ಅವರ ಜೊತೆ ಎರಡನೇ ಪಂದ್ಯದಲ್ಲೂ ಡ್ರಾ ಮಾಡಿಕೊಳ್ಳಬೇಕಾಯಿತು. ಹೀಗಾಗಿ ಅವರು ಗುರುವಾರ ಟೈಬ್ರೇಕ್ ಪಂದ್ಯಗಳಲ್ಲಿ ಆಡಬೇಕಾಗಿದೆ.

ವಿದಿತ್ ಗುಜರಾತಿ ಮತ್ತು ಅರ್ಜೆಂಟೀನಾದ ಬಾಲಪ್ರತಿಭೆ ಫೌಸ್ಟಿನೊ ಒರೊ ನಡುವಣ ಎರಡನೇ ಕ್ಲಾಸಿಕಲ್ ಆಟವೂ ಡ್ರಾ ಆಗಿದ್ದು, ಇಬ್ಬರೂ ಗುರುವಾರ ಟೈಬ್ರೇಕರ್‌ನಲ್ಲಿ ಆಡಬೇಕಾಗಿದೆ.

ಇಯಾನ್ ನಿಪೊಮ್‌ನಿಷಿ (ಎಡಗಡೆ) ಎದುರು ಗೆದ್ದ ದೀಪ್ತಾಯನ್ 'ಎಕ್ಸ್' ಚಿತ್ರ

ಮಿನಿ ಗೇಮ್ಸ್: ಮಿಹಿಕಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿಹಿಕಾ ಉಡುಪ ಅವರು 'ರಾಜ್ಯ ಮಿನಿ ಗೇಮ್ಸ್'ನ ಟೇಬಲ್ ಟೆನಿಸ್ ಸ್ಪರ್ಧೆಯಲ್ಲಿ ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಸ್ಥಳೀಯ ಪ್ರತಿಭೆ ಮಿಹಿಕಾ, ಬುಧವಾರ ನಡೆದ ಫೈನಲ್ ಹಣಾಹಣಿಯಲ್ಲಿ ಮಂಡ್ಯದ ರಚಿತಾ ಎಸ್. ಅವರನ್ನು 3–1 (8–11, 11–5, 11–7, 11–9) ರಿಂದ ಮಣಿಸಿದರು. ಬಾಲಕರ ಸಿಂಗಲ್ಸ್‌ನಲ್ಲಿ ಶ್ರೀರಾಮ್ ಕಿರಣ್ ಅವರು 11–5, 11–5, 11–7ರಿಂದ ಶರ್ವಿಲ್ ಕರಂಬೇಲ್ಕರ್ ವಿರುದ್ಧ ನೇರ ಸೆಟ್‌ಗಳಲ್ಲಿ ಗೆಲುವು ಸಾಧಿಸಿ ಪ್ರಶಸ್ತಿಗೆ ಮುತ್ತಿಕ್ಕಿದರು.

ಬಾಲಕಿಯರ 80 ಮೀ. ಹರ್ಡಲ್ಸ್‌ನಲ್ಲಿಯೂ ಬೆಂಗಳೂರು ನಗರ ಜಿಲ್ಲೆಯ ಅಥ್ಲೀಟ್‌ಗಳು ಮೂರೂ ಸ್ಥಾನಗಳನ್ನು ಗೆದ್ದು ಪಾರಮ್ಯ ಮೆರೆದರು. ಶಾಶ್ವತಿ ಸುರೇಶ್ 13.3 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದರೆ, ಸ್ವರ್ಣರೇಖಾ ಹಾಗೂ ಪಾಲಾಕ್ ಎಡ್ವರ್ಡ್ಸ್ ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಜಯಿಸಿದರು. ಬಾಲಕರ ವಿಭಾಗದಲ್ಲಿ ಚಿತ್ರದುರ್ಗದ ಸುಭಾಷ್ ಆರ್. (12.07 ಸೆ.) ಸ್ವರ್ಣಕ್ಕೆ ಕೊರಳೊಡ್ಡಿದರು. ಶಿವಮೊಗ್ಗದ ಪ್ರಥಮ್ ಸಿ.ಆರ್. ಮತ್ತು ಬೆಂಗಳೂರಿನ ಧ್ರುವನ್ ಎಸ್.ಆರ್. ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಬಾಲಕಿಯರ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ಮೈಸೂರಿನ ಮಾನಿಕಾ ಎ. ಅವರು 5.07 ಮೀಟರ್ ಜಿಗಿಯುವುದರೊಂದಿಗೆ ಸ್ವರ್ಣ ಜಯಿಸಿದರು. ಬೆಂಗಳೂರಿನ ಸಾನ್ವಿಯಾ ಎಂ. ಮತ್ತು ಜಾಯ್ಸ್ ಎ. (ಇಬ್ಬರೂ 4.56 ಮೀ.) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ರಾಜ್ಯ ಒಲಿಂಪಿಕ್ಸ್ ಸಂಸ್ಥೆಯು (ಕೆಒಎ) ಈ ಕೂಟವನ್ನು ಆಯೋಜಿಸಿದೆ.

35 ಕೆ.ಜಿ.ಯೊಳಗಿನ ಬಾಲಕಿಯರ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಮೈಸೂರಿನ ಕಶಿಕಾ ಕಾರ್ಯಪ್ಪ ಚಿನ್ನ ಗೆದ್ದರು. ಬೆಳಗಾವಿಯ ಗೌರಿ ಹಲಗೇಕರ್ ಅವರು 40 ಕೆ.ಜಿ.ಯೊಳಗಿನವರ ಹಾಗೂ 45 ಕೆ.ಜಿ.ಯೊಳಗಿನವರ ಸ್ಪರ್ಧೆಯಲ್ಲಿ ಚಿನ್ನಕ್ಕೆ ಕೊರಳೊಡ್ಡಿದರು. 50 ಕೆ.ಜಿ.ಯೊಳಗಿನವರ ಸ್ಪರ್ಧೆಯಲ್ಲಿ ಬೆಂಗಳೂರಿನ ಅನಿಕಾ ಉಶಾ ಸ್ವರ್ಣ ತಮ್ಮದಾಗಿಸಿಕೊಂಡರು.

ಬೆಳಗಾವಿಯ ಸಾಯಿನಾಥ್ ರಾಜು, ಹೇಮಂತ್ ನಾಯಕ್ ಹಾಗೂ ಮೊಹಮ್ಮದ್ ನೂಮನ್ ಅವರು ಕ್ರಮವಾಗಿ 35 ಕೆ.ಜಿ., 40 ಕೆ.ಜಿ. ಹಾಗೂ 70 ಕೆ.ಜಿ.ಯೊಳಗಿನ ಬಾಲಕರ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದರು. ಕಾರವಾರದ ಅಲೆಕ್ಸ್ ಸಿದ್ದಿ 45 ಕೆ.ಜಿ. ಯೊಳಗಿನವರ ಸ್ಪರ್ಧೆಯಲ್ಲಿ ಚಿನ್ನಕ್ಕೆ ಕೊರಳೊಡ್ಡಿದರು. ಬೆಂಗಳೂರಿನ ಸ್ಯಾಮ್ಯುಯೆಲ್ (55 ಕೆ.ಜಿ.), ರಚಿತ್ ತರುಣ್ (55 ಕೆ.ಜಿ.) ಹಾಗೂ ಕಾಲ್ವಿನ್ ರಿಕ್ಕಿ (65 ಕೆ.ಜಿ.) ಚಾಂಪಿಯನ್‌ಗಳಾಗಿ ಹೊರಹೊಮ್ಮಿದರು.

ಹಲಸೂರು ಕೆರೆಯಲ್ಲಿ ನಡೆದ 200 ಮೀ. 'ಡ್ರ್ಯಾಗನ್ ಬೋಟ್ ರೇಸ್' ಸ್ಪರ್ಧೆಯಲ್ಲಿ ಬೆಂಗಳೂರು ನಗರ ಜಿಲ್ಲಾ ತಂಡವು ಪ್ರಥಮ ಸ್ಥಾನ ಗಳಿಸಿತು ಚಿತ್ರ: ಪ್ರಶಾಂತ್ ಎಚ್‌.ಜಿ.

ಅಭಿಷೇಕ್, ವರುಣ್ ಅಗ್ರಸ್ಥಾನ ಅಬಾಧಿತ

ಅಭಿಷೇಕ್

ವರುಣ್

ದುಬೈ (ಪಿಟಿಐ): ಆಕ್ರಮಣಕಾರಿ ಆರಂಭ ಆಟಗಾರ ಅಭಿಷೇಕ್ ಶರ್ಮಾ ಮತ್ತು 'ವಿಸ್ಮಯ' ಸ್ಪಿನ್ನರ್ ವರುಣ್ ಚಕ್ರವರ್ತಿ ಅವರು ಬುಧವಾರ ಪ್ರಕಟವಾದ ಐಸಿಸಿ ಪುರುಷರ ಟಿ20 ರ್‍ಯಾಂಕಿಂಗ್‌ನಲ್ಲಿ ಕ್ರಮವಾಗಿ ಬ್ಯಾಟರ್‌ಗಳ ಮತ್ತು ಬೌಲರ್‌ಗಳ ವಿಭಾಗದಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಅಭಿಷೇಕ್ 925 ರೇಟಿಂಗ್ ಪಾಯಿಂಟ್ಸ್ ಗಳಿಸಿದ್ದು, ಇಂಗ್ಲೆಂಡ್‌ನ ಫಿಲ್ ಸಾಲ್ಟ್ ಮತ್ತು ತಿಲಕ್ ವರ್ಮಾ ಅವರಿಗಿಂತ ಮುಂದೆಯಿದ್ದಾರೆ. ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಎಂಟನೇ ಸ್ಥಾನದಲ್ಲಿದ್ದು, ಅಗ್ರ 10ರಲ್ಲಿ ಸ್ಥಾನ ಪಡೆದಿರುವ ಭಾರತದ ಮತ್ತೊಬ್ಬ ಆಟಗಾರ ಎನಿಸಿದ್ದಾರೆ.

ಸ್ಪಿನ್ನರ್ ಚಕ್ರವರ್ತಿ ಅಗ್ರಸ್ಥಾನ ಅಬಾಧಿತವಾಗಿ ಉಳಿದಿದೆ. ವೆಸ್ಟ್ ಇಂಡೀಸ್‌ನ ಅಖೀಲ್ ಹುಸೇನ್ ಮತ್ತು ಅಫ್ಘಾನಿಸ್ತಾನದ ರಶೀದ್ ಖಾನ್ ನಂತರದ ಸ್ಥಾನಗಳಲ್ಲಿದ್ದಾರೆ. ಭಾರತದ ಇತರ ಯಾವುದೇ ಬೌಲರ್ ಅಗ್ರ 10ರಲ್ಲಿ ಸ್ಥಾನ ಪಡೆದಿಲ್ಲ.

ಭಾರತ ವಿರುದ್ಧ ಏಕದಿನ ಸರಣಿಯಲ್ಲಿ ಅಮೋಘ ಬೌಲಿಂಗ್ ಪ್ರದರ್ಶಿಸಿದ ಆಸ್ಟ್ರೇಲಿಯಾದ ವೇಗಿ ಜೋಶ್ ಹ್ಯಾಜಲ್‌ವುಡ್ ಅವರು ಎರಡು ಸ್ಥಾನ ಬಡ್ತಿ ಪಡೆದು ಹತ್ತನೇ ಸ್ಥಾನಕ್ಕೇರಿದ್ದಾರೆ.

ಆಲ್‌ರೌಂಡರ್‌ಗಳ ಯಾದಿಯಲ್ಲಿ ಹಾರ್ದಿಕ್ ಪಾಂಡ್ಯ ಅವರು ನಾಲ್ಕನೇ ಸ್ಥಾನದಲ್ಲಿದ್ದಾರೆ. ಅವರನ್ನು ಬಿಟ್ಟರೆ ಅಗ್ರ 10ರಲ್ಲಿ ಭಾರತದ ಯಾವುದೇ ಆಟಗಾರ ಸ್ಥಾನ ಪಡೆದಿಲ್ಲ. ಈ ವಿಭಾಗದಲ್ಲಿ ಪಾಕಿಸ್ತಾನದ ಸಯೀಮ್ ಅಯೂಬ್ ಅಗ್ರಸ್ಥಾನದಲ್ಲಿದ್ದಾರೆ. ಜಿಂಬಾಬ್ವೆಯ ಸಿಕಂದರ್ ರಝಾ, ವೆಸ್ಟ್ ಇಂಡೀಸ್‌ನ ರೋಸ್ಟನ್ ಚೇಸ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ.

ಸೆಮಿಫೈನಲ್‌ಗೆ ಪಂಜಾಬ್ ಎಫ್‌ಸಿ

ಮಡಗಾಂವ್ (ಪಿಟಿಐ): ಒತ್ತಡದ ಪರಿಸ್ಥಿತಿಯನ್ನು ನಿಭಾಯಿಸಿದ ಪಂಜಾಬ್ ಎಫ್‌ಸಿ ತಂಡ ಪೆನಾಲ್ಟಿ ಶೂಟೌಟ್‌ನಲ್ಲಿ ಬೆಂಗಳೂರು ಎಫ್‌ಸಿ ತಂಡವನ್ನು 5–4 ಗೋಲುಗಳಿಂದ ಸೋಲಿಸಿತು. ಬುಧವಾರ ನಡೆದ ಸೂಪರ್ ಕಪ್ 'ಸಿ' ಗುಂಪಿನ ಈ ಕೊನೆಯ ಪಂದ್ಯ 'ಗೆಲ್ಲುವ' ಮೂಲಕ ಪಂಜಾಬ್ ಎಫ್‌ಸಿ ಸೆಮಿಫೈನಲ್‌ಗೆ ಸ್ಥಾನ ಕಾದಿರಿಸಿತು.

ನಿಗದಿತ ಅವಧಿಯ ಆಟ ಗೋಲುರಹಿತವಾಗಿತ್ತು.

ಗುಂಪಿನಲ್ಲಿ ಎರಡೂ ತಂಡಗಳು ತಲಾ ಏಳು ಪಾಯಿಂಟ್ಸ್ ಗಳಿಸಿದವು. ಇಬ್ಬರೂ ತಲಾ ಎರಡು ಗೆದ್ದು, ಒಂದು ಡ್ರಾ ಮಾಡಿಕೊಂಡಿದ್ದವು. ಗೋಲು ಸರಾಸರಿ ಸಹಿತ ಸಮಾನವಾಗಿತ್ತು. ಹೀಗಾಗಿ ಗುಂಪಿನ ವಿಜೇತರನ್ನು ಪೆನಾಲ್ಟಿ ಶೂಟೌಟ್ ಮೂಲಕ ನಿರ್ಧರಿಸಲಾಯಿತು.

ಚೆಸ್: ರಿತೇಶ್, ವರ್ಣಿತಾಗೆ ಅಗ್ರಸ್ಥಾನ

ಪ್ರಜಾವಾಣಿ ವಾರ್ತೆ

ಶಹಾಪುರ (ಯಾದಗಿರಿ ಜಿಲ್ಲೆ): ಟೂರ್ನಿಯುದ್ದಕ್ಕೂ ಗಮನಾರ್ಹ ಪ್ರದರ್ಶನ ತೋರಿದ ಉಡುಪಿಯ ರಿತೇಶ್ ಕೆ. ಹಾಗೂ ವರ್ಣಿತಾ ವಿ.ಕುಂದರ್ ಅವರು ಶಹಾಪುರದ ಸರ್ಕಾರಿ ಮಾದರಿ ಪದವಿ ಕಾಲೇಜಿನಲ್ಲಿ ಬುಧವಾರ ಮುಕ್ತಾಯಗೊಂಡ 17 ವರ್ಷದ ಒಳಗಿನವರ ರಾಜ್ಯ ಮಟ್ಟದ ಚೆಸ್ ಟೂರ್ನಿಯಲ್ಲಿ ಅಗ್ರಸ್ಥಾನ ಸಂಪಾದಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ನಡೆದ ಟೂರ್ನಿಯ ಬಾಲಕರ ವಿಭಾಗದಲ್ಲಿ ರಿತೇಶ್ ಕೆ. ಆಡಿದ 9 ಪಂದ್ಯಗಳಲ್ಲಿ 8ರಲ್ಲಿ ಗೆದ್ದು ಒಂದರಲ್ಲಿ ಸೋತು 8 ಅಂಕ ಗಳಿಸಿದರೆ, ಬಾಲಕಿಯರ ವಿಭಾಗದಲ್ಲಿ ವರ್ಣಿತಾ 8 ಪಂದ್ಯಗಳಲ್ಲಿ ಗೆದ್ದು, ಒಂದು ಡ್ರಾ ಮಾಡಿಕೊಂಡು 8.5 ಅಂಕ ಸಂಪಾದಿಸಿದರು.

ಬಾಲಕರ ವಿಭಾಗದಲ್ಲಿ ಗದಗಿನ ವೈಭವ್ ಸಂಗನಬಶೆಟ್ಟರ, ಶಿವಮೊಗ್ಗದ ಪ್ರಥಮ್ ರಾವ್, ಮೈಸೂರಿನ ನಂದನ್ ಎಂ.ಎಂ.ಬಿ., ತಲಾ 7.5 ಮತ್ತು ಮೈಸೂರಿನ ಹೃತ್ವಿಕ್ ಆರ್. ತಲಾ 7 ಅಂಕ ಪಡೆದು ಎರಡರಿಂದ ಐದವರೆಗಿನ ಸ್ಥಾನಗಳನ್ನು ಪಡೆದರು.

ಟೂರ್ನಿಯಲ್ಲಿ 300ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು. ಮೊದಲ ಐದು ಸ್ಥಾನಗಳನ್ನು ಪಡೆದ ಆಟಗಾರರು ನವೆಂಬರ್ 26ರಿಂದ ತ್ರಿಪುರದಲ್ಲಿ ನಡೆಯುವ ರಾಷ್ಟ್ರ ಮಟ್ಟದ ಟೂರ್ನಿಯಲ್ಲಿ ಪಾಲ್ಗೊಳ್ಳುವರು.

ಅಗ್ರಸ್ಥಾನ ಪಡೆದ ರಿತೇಶ್ ಕೆ. ಮತ್ತು ವರ್ಣಿತಾ ಕೆ.ಕುಂದರ್

ತಾಯಿ ಹುಲಿ ಹತ್ಯೆ ಶಂಕೆ: ಸಿಐಡಿ ತನಿಖೆ

ಪ್ರಜಾವಾಣಿ ವಾರ್ತೆ

ಈಶ್ವರ ಖಂಡ್ರೆ

ಬೆಂಗಳೂರು: ಚಾಮರಾಜನಗರ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಪುಣಜನೂರು ವಲಯದ ಬೇಡಗುಳಿ ಅರಣ್ಯ ಪ್ರದೇಶದಲ್ಲಿ ಮೂರು ನವಜಾತ ಹುಲಿ ಮರಿಗಳೊಂದಿಗೆ ಕೆಲವರು ವಾಹನದ ಬೆಳಕಿನಲ್ಲಿ ಫೋಟೊ ತೆಗೆಸಿಕೊಂಡು, ವಿಡಿಯೊ ಮಾಡಿರುವ ಮತ್ತು ತಾಯಿ ಹುಲಿಯ ಹತ್ಯೆಯ ಶಂಕೆಯ ಕುರಿತು ಸಿಐಡಿ ತನಿಖೆ ನಡೆಸುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಆದೇಶಿಸಿದ್ದಾರೆ.

ಈ ಕುರಿತು ಅವರು ಇಲಾಖೆಯ ಮುಖ್ಯ ಕಾರ್ಯದರ್ಶಿಯವರಿಗೆ ಲಿಖಿತ ಸೂಚನೆ ನೀಡಿದ್ದಾರೆ.

2015ರಲ್ಲಿ ಅರಣ್ಯ ಅಪರಾಧ ಪ್ರಕರಣ ದಾಖಲಾಗಿದ್ದ ಸಂಸ್ಥೆಯೊಂದಿಗೆ ನಂಟು ಹೊಂದಿರುವವರೂ ಸೇರಿ ಕೆಲವರು ಅರಣ್ಯದಲ್ಲಿ ವಾಹನದ ಹೆಡ್‌ಲೈಟ್ ಬೆಳಕಲ್ಲಿ, ಹುಲಿ ಮರಿಗಳ ಚಿತ್ರೀಕರಣ ಮಾಡಿ, ಸ್ಪರ್ಶಿಸಿ ವನ್ಯಜೀವಿ ಕಾಯ್ದೆ ಉಲ್ಲಂಘಿಸಿದ್ದಾರೆ. ಅಲ್ಲದೆ ತಾಯಿ ಹುಲಿಯ 'ಇರುವಿಕೆ' ಬಗ್ಗೆ ಸಂಶಯ ವ್ಯಕ್ತಪಡಿಸಿ ದೂರುಗಳು ಬಂದಿವೆ. ಈ ಹಿನ್ನೆಲೆಯಲ್ಲಿ ಸಮಗ್ರ ತನಿಖೆಗೆ ಆದೇಶಿಸಲಾಗಿದೆ ಎಂದು ಖಂಡ್ರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಕ್ಟೋಬರ್ 15ರಂದು ಬಿಆರ್‌ಟಿ ಅರಣ್ಯ ವಿಭಾಗದ ವತಿಯಿಂದ ನೀಡಿದ ಮಾಧ್ಯಮ ಪ್ರಕಟಣೆ ಮತ್ತು ಹುಲಿ ಮರಿಗಳ ಜೊತೆ ವಿಡಿಯೊ ಮಾಡಿರುವ ದೃಶ್ಯಗಳು ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹರಿದಾಡಿದ ಬಳಿಕ ಅಧಿಕಾರಿಗಳು ನೀಡಿರುವ ಹೇಳಿಕೆಗಳಲ್ಲಿ ವ್ಯತ್ಯಾಸ ಮತ್ತು ಗೊಂದಲಗಳಿವೆ. ತಾಯಿ ಹುಲಿ ಹತ್ಯೆ ಆಗಿರುವ ಸಂಶಯವೂ ಇದೆ. ಅಲ್ಲದೇ ಎನ್‌ಜಿಒಗಳಿಗೆ ಬರುವ ಹಣದ ದುರುಪಯೋಗದ ಆರೋಪವೂ ಇರುವುದರಿಂದ ಈ ಪ್ರಕರಣವನ್ನು ಸಿಐಡಿ ವಹಿಸುವುದು ಸೂಕ್ತ ಎಂದು ತೀರ್ಮಾನಿಸಿರುವುದಾಗಿ ಹೇಳಿದ್ದಾರೆ.

ಆಟಗಾರ್ತಿಯರ ಜೊತೆ ಪ್ರಧಾನಿ ಸಂವಾದ • ಚಾರಿತ್ರಿಕ ಸಾಧನೆಗೆ ಶ್ಲಾಘನೆ

ವಿಶ್ವಕಪ್ ಗೆದ್ದ ತಂಡ ಭೇಟಿಯಾದ ಮೋದಿ

ನವದೆಹಲಿ (ಪಿಟಿಐ): ಏಕದಿನ ವಿಶ್ವಕಪ್ ಟ್ರೋಫಿ ಗೆದ್ದುಕೊಂಡ ಭಾರತ ಮಹಿಳಾ ತಂಡವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ತಮ್ಮ ನಿವಾಸದಲ್ಲಿ ಭೇಟಿಯಾದರು. ಸತತ ಸೋಲುಗಳ ನಂತರ ನಿರ್ಣಾಯಕ ಹಂತದಲ್ಲಿ 'ಅಸಾಧಾರಣ ಪುನರಾಗಮನ' ಮಾಡಿ ವಿಶ್ವಕಪ್ ಗೆದ್ದ ತಂಡದ ಆಟಗಾರ್ತಿಯರನ್ನು ಶ್ಲಾಘಿಸಿದರು.

ಆರಂಭದ ಹಿನ್ನಡೆಯ ನಂತರ ತಂಡವು ಜಾಲತಾಣಗಳಲ್ಲಿ ಟ್ರೋಲಿಂಗ್‌ಗೆ ಒಳಗಾಗಿದ್ದನ್ನು ಪ್ರಸ್ತಾಪಿಸಿದ ಮೋದಿ, ಆಟಗಾರ್ತಿಯರು ಗಟ್ಟಿ ಮನೋಬಲದಿಂದ ಪುಟಿದೆದ್ದು ಇತಿಹಾಸ ನಿರ್ಮಿಸಿದ್ದನ್ನು ಕೊಂಡಾಡಿದರು.

2017ರ ವಿಶ್ವಕಪ್ ನಂತರ ಮೋದಿ ಅವರ ಜೊತೆಗಿನ ಭೇಟಿಯನ್ನು ಸ್ಮರಿಸಿದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು, ಅಂದು ತಂಡವು ಟ್ರೋಫಿಯೊಂದಿಗೆ ಬಂದಿರಲಿಲ್ಲ. ಈಗಿನಂತೆ ಇನ್ನು ಮುಂದೆ ಸಹ ಯಶಸ್ಸು ಸಾಧಿಸಿ ಪ್ರಧಾನಿಯನ್ನು ಮತ್ತೆ ಮತ್ತೆ ಭೇಟಿಯಾಗುವ ಅವಕಾಶ ಒದಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಧಾನಿಯವರ ಮಾತುಗಳು ಪ್ರೇರಣಾದಾಯಿಯಾಗಿದ್ದವು ಎಂದು ಉಪ ನಾಯಕಿ ಸ್ಮೃತಿ ಮಂದಾನ ಹೇಳಿದರು.

ನವಿ ಮುಂಬೈನಲ್ಲಿ ನಡೆದ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಭಾರತ 52 ರನ್‌ಗಳಿಂದ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿತ್ತು.

ಚಟಾಕಿ: ಅಮನ್ಜೋತ್ ಕೌರ್ ಜಗ್ಲಿಂಗ್ ಮಾಡಿ (ಎರಡು–ಮೂರನೇ ಯತ್ನದಲ್ಲಿ ಕ್ಯಾಚ್ ಪೂರೈಸಿದ್ದು) ಹಿಡಿದ ಕ್ಯಾಚ್ ಅನ್ನು ಪ್ರಸ್ತಾಪಿಸಿ ಮೋದಿ ತಮಾಷೆ ಮಾಡಿದರು. 'ಕ್ಯಾಚ್ ಪಡೆಯುವಾಗ ನೀನು ಚೆಂಡನ್ನು ನೋಡಿದ್ದಿ. ಚೆಂಡು ಹಿಡಿದ ಮೇಲೆ ನಿನಗೆ ಟ್ರೋಫಿ ಕಾಣಿಸಿರಬೇಕು' ಎಂದು ಚಟಾಕಿ ಹಾರಿಸಿದರು.

ಶಾಲೆಗಳಿಗೆ ಭೇಟಿ ನೀಡಿ ಕ್ರೀಡೆಯಲ್ಲಿ ತೊಡಗಲು ಎಳೆ ಮನಸ್ಸುಗಳಿಗೆ ಪ್ರೋತ್ಸಾಹ ನೀಡುವಂತೆ ಅವರು ಸಲಹೆ ನೀಡಿದರು.

ಆಟಗಾರ್ತಿಯರು ಪ್ರಧಾನಿ ಭೇಟಿಯ ನಂತರ ತಮ್ಮ ತಮ್ಮ ಊರುಗಳಿಗೆ ಮರಳಲು ಸಜ್ಜಾದರು.

ಭಾರತ ತಂಡದ ಆಟಗಾರ್ತಿಯರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಬುಧವಾರ ಭೇಟಿ ಮಾಡಿದರು ಎಎಫ್‌ಪಿ ಚಿತ್ರ

ನಂದಿನಿ ತುಪ್ಪ ಲೀ.ಗೆ ₹90 ದುಬಾರಿ

ಒಂದನೇ ಪುಟದಿಂದ...

ಬುಧವಾರದಿಂದಲೇ ಜಾರಿಗೆ ಬರುವಂತೆ ಪ್ರತಿ ಲೀಟರ್ ತುಪ್ಪದ ದರ ₹90 ಹೆಚ್ಚಳವಾಗಿದೆ. ಪ್ರತಿ ಕೆ.ಜಿ ಬೆಣ್ಣೆ ದರವನ್ನು ₹38 ಹೆಚ್ಚಿಸಿದ್ದು, ನ.7ರಿಂದ ಇದು ಜಾರಿಗೆ ಬರಲಿದೆ.

ಕೇಂದ್ರ ಸರ್ಕಾರ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕಡಿತ ಮಾಡಿದ್ದರಿಂದ ಒಂದೂವರೆ ತಿಂಗಳ ಹಿಂದೆ ತುಪ್ಪ ಹಾಗೂ ನಂದಿನಿ ಉತ್ಪನ್ನಗಳ ದರವನ್ನು ಶೇ 7ರಷ್ಟು ಇಳಿಕೆ ಮಾಡಲಾಗಿತ್ತು. ಈಗ ತುಪ್ಪ ದರವನ್ನು ಶೇ 15ರಷ್ಟು, ಬೆಣ್ಣೆ ದರ ಶೇ 6ರಷ್ಟು ಹೆಚ್ಚಿಸಲಾಗಿದೆ.

ಪ್ರತಿ ಲೀಟರ್ ಪ್ಯಾಕೆಟ್ ನಂದಿನಿ ತುಪ್ಪದ ದರ ಸದ್ಯ ₹610 ಇತ್ತು. ಈಗ ₹700 ಆಗಿದೆ. ಅರ್ಧ ಲೀಟರ್ ತುಪ್ಪದ ದರವನ್ನು ₹305 ರಿಂದ ₹350ಕ್ಕೆ ಹೆಚ್ಚಿಸಲಾಗಿದೆ. 12 ಎಂಎಲ್ ಪ್ಯಾಕೆಟ್, 50, 100, 200 ಮಿಲಿ ಲೀಟರ್ ಪ್ಯಾಕೆಟ್ ಹಾಗೂ ಪೆಟ್ ಜಾರ್, ಅರ್ಧ ಹಾಗೂ ಒಂದು ಲೀಟರ್ ಪ್ಯಾಕೆಟ್, ಪೆಟ್ ಜಾರ್, 5 ಲೀಟರ್ ಹಾಗೂ 15 ಕೆಜಿ ತುಪ್ಪದ ಟಿನ್, ಪ್ಯಾಕೆಟ್ ದರದಲ್ಲೂ ಹೆಚ್ಚಳವಾಗಿದೆ.

ನಂದಿನಿ ಬೆಣ್ಣೆ ದರವನ್ನು ಒಂದು ಕೆ.ಜಿಗೆ ₹572 ರಿಂದ ₹610ಕ್ಕೆ, ಅರ್ಧ ಕೆ.ಜಿ ಬೆಣ್ಣೆ ದರವನ್ನು ₹286ರಿಂದ ₹310ಕ್ಕೆ ಏರಿಕೆ ಮಾಡಲಾಗಿದೆ.

ನಂದಿನಿ ತುಪ್ಪದ ದರ ಏರಿಕೆಯಿಂದ ಹೋಟೆಲ್ ಹಾಗೂ ಬೇಕರಿ ಉತ್ಪನ್ನಗಳ ದರದಲ್ಲೂ ಏರಿಕೆಯಾಗುವ ಅಂದಾಜಿದೆ.

ಕೆಎಂಎಫ್ ಸದ್ಯ ಪ್ರತಿ ತಿಂಗಳು 3,000 ಮೆಟ್ರಿಕ್ ಟನ್ ನಂದಿನಿ ತುಪ್ಪ ಉತ್ಪಾದಿಸಿ ಮಾರಾಟ ಮಾಡುತ್ತಿದೆ. ತುಪ್ಪದ ದರ ಹೆಚ್ಚಳದಿಂದ ವಾರ್ಷಿಕ ₹300 ಕೋಟಿಗೂ ಅಧಿಕ ಆದಾಯ ಮಹಾಮಂಡಳಕ್ಕೆ ಬರುವ ನಿರೀಕ್ಷೆಯಿದೆ.

'ಹಾಲು ಒಕ್ಕೂಟಗಳ ಕಾರ್ಯ ನಿರ್ವಾಹಕ ನಿರ್ದೇಶಕರೊಂದಿಗೆ ನಡೆದ ಸಭೆಯಲ್ಲಿ ನಂದಿನಿ ತುಪ್ಪ ಹಾಗೂ ಬೆಣ್ಣೆ ದರ ಪರಿಷ್ಕರಣೆ ಮಾಡುವ ನಿರ್ಧಾರ ಮಾಡಲಾಗಿದೆ' ಎಂದು ಕೆಎಂಎಫ್‌ನ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ತಿಳಿಸಿದ್ದಾರೆ.

'ಏರಿಕೆ ನಂತರವೂ ಖಾಸಗಿಗಿಂತ ಕಡಿಮೆ'

'ಖಾಸಗಿ ಕಂಪನಿಗಳ ಪ್ರತಿ ಕೆಜಿ ತುಪ್ಪದ ದರ ₹800 ವರೆಗೂ ಇದೆ. ನಂದಿನಿ ತುಪ್ಪದ ಬೆಲೆ ಮೊದಲಿನಿಂದಲೂ ಖಾಸಗಿಗಿಂತ ಕಡಿಮೆ ಇದೆ. ದರ ಏರಿಕೆ ನಂತರವೂ ಖಾಸಗಿ ಕಂಪನಿಗಳ ತುಪ್ಪಕ್ಕಿಂತ ನಂದಿನಿ ತುಪ್ಪದ ಬೆಲೆ ಕಡಿಮೆಯೇ ಇದೆ' ಎಂದು ಕೆಎಂಎಫ್‌ನ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ದರ ಏರಿಕೆ ಏಕೆ?

13 ಹಾಲು ಒಕ್ಕೂಟಗಳಲ್ಲಿ ಪ್ರತಿ ದಿನ 1 ಕೋಟಿ ಲೀಟರ್ ಹಾಲನ್ನು ಸಂಗ್ರಹಿಸಲಾಗುತ್ತಿದೆ. ಇದರಲ್ಲಿ 70 ಲಕ್ಷ ಲೀಟರ್ ಹಾಲು ಮಾರಾಟವಾದರೆ, 8 ಲಕ್ಷ ಲೀಟರ್ ಹಾಲು ಕ್ಷೀರ ಭಾಗ್ಯ ಯೋಜನೆಯಡಿ ವಿತರಣೆ ಮಾಡಲಾಗುತ್ತಿದೆ. 5 ಲಕ್ಷ ಲೀಟರ್‌ನಲ್ಲಿ ಇತರೆ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ. ಪ್ರತಿ ನಿತ್ಯ ಸುಮಾರು 15 ಲಕ್ಷ ಲೀಟರ್ ಹಾಲನ್ನು ಬೆಣ್ಣೆ, ತುಪ್ಪ ತಯಾರಿಸಲು ಬಳಕೆ ಮಾಡಲಾಗುತ್ತಿದೆ.

'ಕೆಲವು ಒಕ್ಕೂಟಗಳ ಹಾಲು ಸಂಗ್ರಹ ಪ್ರಮಾಣ ಹೆಚ್ಚಿದ್ದರೂ ಮಾರಾಟ ಪ್ರಮಾಣ ಕಡಿಮೆಯಿದೆ. 2025ರ ಏಪ್ರಿಲ್‌ನಿಂದಲೂ ನಿರಂತರವಾಗಿ ಇದೇ ರೀತಿ ಹಾಲು ಸಂಗ್ರಹಣೆ ಆಗುತ್ತಿರುವುದರಿಂದ ರೈತರಿಗೆ ನೀಡುವ ಹಾಲಿನ ದರ ಹಾಗೂ ಸಹಾಯಧನದ ಪ್ರಮಾಣದಲ್ಲಿ ಏರಿಕೆಯಾಗಿದೆ. ಆರ್ಥಿಕ ಹೊಂದಾಣಿಕೆಗೆ ತುಪ್ಪ ಹಾಗೂ ಬೆಣ್ಣೆ ದರ ಏರಿಕೆ ಮಾಡಲಾಗಿದೆ' ಎಂದು ಕೆಎಂಎಫ್ ಮೂಲಗಳು ತಿಳಿಸಿವೆ.

ದೊಡ್ಡ ಇನಿಂಗ್ಸ್ ನಿರೀಕ್ಷೆಯಲ್ಲಿ ಗಿಲ್

ಆಸ್ಟ್ರೇಲಿಯಾ ವಿರುದ್ಧ 4ನೇ ಟಿ20 ಪಂದ್ಯ ಇಂದು • ಹುಮ್ಮಸ್ಸಿನಲ್ಲಿ ಭಾರತ ತಂಡ

ಕರಾರ (ಗೋಲ್ಡ್‌ಕೋಸ್ಟ್), (ಪಿಟಿಐ): ಭಾರತ ತಂಡವು ಗುರುವಾರ ನಡೆಯಲಿರುವ ನಾಲ್ಕನೇ ಟಿ20 ಪಂದ್ಯದಲ್ಲಿ ಆತಿಥೇಯ ಆಸ್ಟ್ರೇಲಿಯಾ ವಿರುದ್ಧ ಹುಮ್ಮಸ್ಸಿನಿಂದ ಕಣಕ್ಕಿಳಿಯಲಿದ್ದು, ಸರಣಿಯಲ್ಲಿ ಮುನ್ನಡೆ ಸಾಧಿಸುವ ತವಕಲ್ಲಿದೆ. ಉಪನಾಯಕ ಶುಭಮನ್ ಗಿಲ್ ಅವರೂ ದೊಡ್ಡ ಇನಿಂಗ್ಸ್‌ನ ನಿರೀಕ್ಷೆಯಲ್ಲಿದ್ದಾರೆ.

ಐದು ಪಂದ್ಯಗಳ ಸರಣಿ ಸದ್ಯ 1–1 ಸಮಬಲವಾಗಿದೆ. ಮೊದಲ ಪಂದ್ಯ ಮಳೆಯ ಪಾಲಾಗಿತ್ತು. ಅತ್ಯುತ್ತಮ ಲಯದಲ್ಲಿರುವ ವೇಗದ ಬೌಲರ್ ಜೋಶ್ ಹ್ಯಾಜಲ್‌ವುಡ್ ಅವರ ಅನುಪಸ್ಥಿತಿ ಭಾರತ ತಂಡಕ್ಕೆ ನೆರವಾಗಿತ್ತು. ಆಸ್ಟ್ರೇಲಿಯಾ ತಂಡವು 186 ರನ್‌ಗಳ ಉತ್ತಮ ಮೊತ್ತ ರಕ್ಷಿಸಲು ವಿಫಲ ವಾಗಿತ್ತು. ಆ್ಯಷಸ್‌ಗೆ ಸಜ್ಜಾಗಲು ಹ್ಯಾಜಲ್‌ವುಡ್ ಅವರನ್ನು ಸರಣಿಯ ಮೊದಲ ಎರಡು ಪಂದ್ಯಗಳಿಗೆ ಮಾತ್ರ ಆಯ್ಕೆಮಾಡಲಾಗಿತ್ತು.

ಇನ್ನೊಬ್ಬ ಪ್ರಮುಖ ಆಟಗಾರ ಟ್ರಾವಿಸ್ ಹೆಡ್ ಅವರು ಆ್ಯಷಸ್ ಸರಣಿಗೆ ಸಿದ್ಧರಾಗಲು ಶೆಫೀಲ್ಡ್ ಶೀಲ್ಡ್ ಸರಣಿಯಲ್ಲಿ ಆಡಲಿರುವ ಕಾರಣ ಅವರೂ ನಾಲ್ಕನೇ ಪಂದ್ಯಕ್ಕೆ ಅಲಭ್ಯರಾಗಿದ್ದು, ಆತಿಥೇಯ ತಂಡ ಇನ್ನಷ್ಟು ದುರ್ಬಲವಾಗಿದೆ.

ಹೀಗಾಗಿ ಭಾರತಕ್ಕೆ ಸರಣಿಯಲ್ಲಿ 2–1 ಮುನ್ನಡೆ ಪಡೆಯಲು ಸುವರ್ಣಾವಕಾಶವಿದೆ. ಅಂತಿಮ ಪಂದ್ಯ ಬ್ರಿಸ್ಬೇನ್‌ನಲ್ಲಿ ನಡೆಯಲಿದೆ.

ಈ ಹಿಂದಿನ ಪಂದ್ಯದಲ್ಲಿ ಭಾರತ ತಂಡವು ಸಂಯೋಜನೆಗೆ ತಕ್ಕಂತೆ ಆಡಿತ್ತು. ಆದರೆ ತಂಡ ಗಿಲ್ ಅವರಿಂದ ಉತ್ತಮ ಬ್ಯಾಟಿಂಗ್ ನಿರೀಕ್ಷಿಸುತ್ತಿದೆ. ಕಳೆದ ಆರು ಪಂದ್ಯಗಳಲ್ಲಿ ಅವರು ಒಂದೂ ಅರ್ಧ ಶತಕ ಗಳಿಸಿಲ್ಲ. ಈ ಪ್ರವಾಸದಲ್ಲಿ ಏಕದಿನ ಸರಣಿಯಿಂದ ಹಿಡಿದು ಇಲ್ಲಿಯವರೆಗಿನ ಪಂದ್ಯಗಳಲ್ಲಿ ಅವರ ಗಳಿಕೆ... 10, 9, 24, ಔಟಾಗದೇ 37, 5 ಮತ್ತು 15.

ಕೆನ್‌ಬೆರಾದಲ್ಲಿ ನಡೆದ ಮೊದಲ ಪಂದ್ಯದಲ್ಲಿ ಅವರು ಉತ್ತಮ ಲಯದಲ್ಲಿದ್ದಂತೆ ಕಂಡಿತ್ತು. ಅಲ್ಲಿ ನಾಯಕ ಸೂರ್ಯಕುಮಾರ್ ಜೊತೆ ಉತ್ತಮ ಆರಂಭ ನೀಡಿದ್ದರು.

ಭಾರತ ತಂಡದ ಉಪನಾಯಕ ಶುಭಮನ್ ಗಿಲ್ ತಾಲೀಮು —ಬಿಸಿಸಿಐ ಚಿತ್ರ

ಆದರೆ ಮಳೆಯಿಂದಾಗಿ ಆ ಪಂದ್ಯ ಹತ್ತು ಓವರು ಕಾಣುವ ಮೊದಲೇ ಸ್ಥಗಿತಗೊಂಡಿತ್ತು. ಲಯ ಕಂಡುಕೊಳ್ಳಲು ಯತ್ನಿಸು ತ್ತಿರುವ ಗಿಲ್ ಅವರು ಬೌನ್ಸ್ ಅಂದಾಜಿಸುವಲ್ಲಿ ಎಡವುತ್ತಿದ್ದಾರೆ.

ಆದರೆ ಅಭಿಷೇಕ್ ಶರ್ಮಾ ತಮ್ಮ ಖ್ಯಾತಿಗೆ ತಕ್ಕಂತೆ ಬ್ಯಾಟ್ ಬೀಸುತ್ತಿದ್ದಾರೆ. ಒಂದು ಆಕರ್ಷಕ ಅರ್ಧ ಶತಕದೊಂದಿಗೆ ಅವರು ವಿಶ್ವದ ಅಗ್ರಮಾನ್ಯ ಬ್ಯಾಟರ್ ಪಟ್ಟಕ್ಕೆ ನ್ಯಾಯ ಒದಗಿಸಿದ್ದಾರೆ. ಆದರೆ ಸದ್ಯದಲ್ಲೇ ದಕ್ಷಿಣ ಆಫ್ರಿಕಾ ವಿರುದ್ಧ ನಡೆಯುವ ಟೆಸ್ಟ್ ಸರಣಿಗೆ ಸಜ್ಜಾಗಬೇಕಾಗಿರುವ ಗಿಲ್ ಅವರಿಗೆ ವಿಶ್ವಾಸ ಗಳಿಸಲು ಉತ್ತಮ ಇನಿಂಗ್ಸ್ ಆಡುವ ಅಗತ್ಯವಿದೆ. ಸಾಧಾರಣ ಫಾರ್ಮ್‌ನಲ್ಲಿರುವ ನಾಯಕ ಸೂರ್ಯ ಅವರೂ ಉತ್ತಮ ಇನಿಂಗ್ಸ್ ಆಡುವ ತವಕದಲ್ಲಿದ್ದಾರೆ.

ಮೂರನೇ ಪಂದ್ಯದಲ್ಲಿ ಅವಕಾಶ ಪಡೆದ ಅರ್ಷದೀಪ್ ಸಿಂಗ್ ತಮ್ಮ ಆಯ್ಕೆ ಸಮರ್ಥಿಸಿ ಕೊಂಡಿದ್ದಾರೆ. ದಕ್ಷಿಣ ಆಫ್ರಿಕಾ ವಿರುದ್ಧ ಸರಣಿಗೆ ಸಜ್ಜಾಗಲು ಕುಲದೀಪ್ ಯಾದವ್ ಅವರನ್ನು ತವರಿಗೆ ಕಳುಹಿಸಲಾಗಿದೆ. ವಾಷಿಂಗ್ಟನ್ ಸುಂದರ್ ಬ್ಯಾಟಿಂಗ್‌ನಲ್ಲಿ ಉಪಯುಕ್ತ (49, 23ಎ) ಕಾಣಿಕೆ ನೀಡಿದ್ದರು.

ಆಸ್ಟ್ರೇಲಿಯಾ ತಂಡವು ದೊಡ್ಡ ಮೊತ್ತಕ್ಕೆ ನಾಯಕ ಮಿಚೆಲ್ ಮಾರ್ಷ್ ಮತ್ತು ಟಿಮ್ ಡೇವಿಡ್ ಅವರ ಆಟವನ್ನೇ ಹೆಚ್ಚು ಅವಲಂಬಿಸಿದೆ. ಟ್ರಾವಿಸ್ ಹೆಡ್ ಗೈರುಹಾಜರಿಯಲ್ಲಿ ಮ್ಯಾಥ್ಯೂ ಶಾರ್ಟ್ ಅವರು ಮಾರ್ಷ್ ಜೊತೆ ಇನಿಂಗ್ಸ್ ಆರಂಭಿಸಬಹುದು.

ಅನುಭವಿಗಳಿಲ್ಲದೇ ಬೌಲಿಂಗ್ ವಿಭಾಗದಲ್ಲಿ ಆಸ್ಟ್ರೇಲಿಯಾ ಸ್ವಲ್ಪ ಬಡವಾದಂತೆ ಕಾಣುತ್ತಿದೆ.

ಪಂದ್ಯ ಆರಂಭ: ಮಧ್ಯಾಹ್ನ 1.45.

ಭಾರತ ಎ–ದಕ್ಷಿಣ ಆಫ್ರಿಕಾ ಎ ಹಣಾಹಣಿ ಇಂದಿನಿಂದ

ಪಂತ್ ಪಡೆಗೆ ಬವುಮಾ ಬಳಗ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಷಭ್ ಪಂತ್ ನಾಯಕತ್ವದ ಭಾರತ ಎ ತಂಡವು ಗುರುವಾರ ಇಲ್ಲಿ ಆರಂಭವಾಗಲಿರುವ ‘ಟೆಸ್ಟ್’ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಎ ವಿರುದ್ಧ ಕಣಕ್ಕಿಳಿಯಲಿದೆ. ವಿಶ್ವ ಟೆಸ್ಟ್ ಚಾಂಪಿಯನ್ ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬಾ ಬವುಮಾ ಇಲ್ಲಿ ಎ ತಂಡವನ್ನೂ ಮುನ್ನಡೆಸಲಿದ್ದಾರೆ.

ಈಚೆಗೆ ಇಲ್ಲಿ ನಡೆದ ಮೊದಲ ಪಂದ್ಯದಲ್ಲಿ ಭಾರತ ಎ ತಂಡವು ದಕ್ಷಿಣ ಆಫ್ರಿಕಾ ಎ ಬಳಗದ ಎದುರು ಜಯಿಸಿತ್ತು. ಎರಡನೇ ಪಂದ್ಯದಲ್ಲಿಯೂ ಗೆದ್ದು ಸರಣಿಯನ್ನು ಕೈವಶ ಮಾಡಿಕೊಳ್ಳುವತ್ತ ಚಿತ್ತ ನೆಟ್ಟಿದೆ. ನಗರದ ಹೊರವಲಯದಲ್ಲಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯದಲ್ಲಿ ಕರ್ನಾಟಕದ ಕೆ.ಎಲ್. ರಾಹುಲ್, ವೇಗಿ ಪ್ರಸಿದ್ಧ ಕೃಷ್ಣ ಹಾಗೂ ದೇವದತ್ತ ಪಡಿಕ್ಕಲ್ ಕೂಡ ಆಡಲಿದ್ದಾರೆ.

ಭಾರತ ಟೆಸ್ಟ್ ತಂಡದಲ್ಲಿ ಈ ಮೂವರೂ ಸ್ಥಾನ ಪಡೆದಿದ್ದಾರೆ. ವೇಗಿ ಮೊಹಮ್ಮದ್ ಸಿರಾಜ್ ಮತ್ತು ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರೂ ಇಲ್ಲಿ ಕಣಕ್ಕಿಳಿಯಲಿದ್ದಾರೆ. ವೇಗಿ ಆಕಾಶ್ ದೀಪ್ ಕೂಡ ಗಾಯದಿಂದ ಚೇತರಿಸಿಕೊಂಡಿದ್ದು ಈ ಪಂದ್ಯದಲ್ಲಿ ತಮ್ಮ ಸಾಮರ್ಥ್ಯವನ್ನು ಪರೀಕ್ಷೆಗೊಡ್ಡಲಿದ್ದಾರೆ.

ಮೊದಲ ಪಂದ್ಯದಲ್ಲಿ ರಿಷಭ್ ಅವರು ಎರಡನೇ ಇನಿಂಗ್ಸ್‌ನಲ್ಲಿ 90 ರನ್ ಗಳಿಸಿದ್ದರು. ತನುಷ್ ಕೋಟ್ಯಾನ್ ಎರಡೂ ಇನಿಂಗ್ಸ್‌ಗಳಲ್ಲಿಯೂ ಅಮೋಘ ಬೌಲಿಂಗ್ ಮಾಡಿ ಗೆಲುವಿನ ರೂವಾರಿಯಾಗಿದ್ದರು. ಸಾಯಿ ಸುದರ್ಶನ್, ದೇವದತ್ತ ಪಡಿಕ್ಕಲ್ ಅವರು ಆ ಪಂದ್ಯದಲ್ಲಿ ದೀರ್ಘ ಇನಿಂಗ್ಸ್ ಆಡಿರಲಿಲ್ಲ. ಆದ್ದರಿಂದ ಈ ಪಂದ್ಯದಲ್ಲಿ ತಮ್ಮ ಲಯ ಕಂಡುಕೊಳ್ಳುವ ಸವಾಲು ಅವರ ಮುಂದಿದೆ.

ದಕ್ಷಿಣ ಆಫ್ರಿಕಾ ಎ ತಂಡದ ಸ್ಪಿನ್ನರ್ ಪ್ರೆನೆಲನ್ ಸುಬ್ರಾಯನ್ ಮತ್ತು ವೇಗಿ ವ್ಯಾನ್ ವುರನ್ ಅವರು ಕಳೆದ ಪಂದ್ಯದಲ್ಲಿ ಉತ್ತಮವಾಗಿ ಆಡಿದ್ದರು. ಈ ಪಂದ್ಯದಲ್ಲಿಯೂ ತಮ್ಮ ಕೈಚಳಕ ಮೆರೆಯಲು ಸಿದ್ಧರಾಗಿದ್ದಾರೆ. ತೆಂಬಾ ತಂಡಕ್ಕೆ ಮರಳಿರುವುದರಿಂದ ಬ್ಯಾಟಿಂಗ್ ವಿಭಾಗ ಬಲಗೊಂಡಿದೆ. ಇದೇ 14ರಿಂದ ಭಾರತದ ಎದುರು ದಕ್ಷಿಣ ಆಫ್ರಿಕಾ ತಂಡವು ಮೊದಲ ಟೆಸ್ಟ್ ಪಂದ್ಯ ಆಡಲಿದೆ. ಅದಕ್ಕೂ ಮುನ್ನ ತೆಂಬಾ ಅವರಿಗೆ ಈ ಪಂದ್ಯವು ‘ಪೂರ್ವಾಭ್ಯಾಸ’ದ ವೇದಿಕೆಯಾಗಲಿದೆ.

ಕೆ.ಎಲ್. ರಾಹುಲ್

ಪಂದ್ಯ ಆರಂಭ: ಬೆಳಿಗ್ಗೆ 9.30

‘ಆರ್‌ಸಿಬಿ’ ಮಾರಾಟ ಪ್ರಕ್ರಿಯೆಗೆ ಇಂಬು?

ಬೆಂಗಳೂರು: ಐಪಿಎಲ್ ಫ್ರ್ಯಾಂಚೈಸಿ ‘ಆರ್‌ಸಿಬಿ’ಯ ಮಾರಾಟ ಸುದ್ದಿಗೆ ಇಂಬು ನೀಡುವಂತೆ ಹೊಸ ಬೆಳವಣಿಗೆ ನಡೆದಿದೆ. ಫ್ರ್ಯಾಂಚೈಸಿ ಮಾಲೀಕರಾದ ಯುನೈಟೆಡ್ ಸ್ಪಿರಿಟ್ಸ್ ಲಿ. (ಯುಎಸ್‌ಎಲ್), ರಾಯಲ್ ಚಾಲೆಂಜರ್ಸ್ ಸ್ಪೋರ್ಟ್ಸ್ ಪ್ರೈ.ಲಿ.ನಲ್ಲಿ ಮಾಡಿರುವ ಹೂಡಿಕೆಗಳಿಗೆ ಸಂಬಂಧಿಸಿ ವಿವರವಾದ ಮೌಲ್ಯಮಾಪನಕ್ಕೆ ಮುಂದಾಗಿದೆ.

ಐಪಿಎಲ್‌ನಲ್ಲಿ ಪುರುಷರ ಮತ್ತು ಡಬ್ಲ್ಯುಪಿಎಲ್‌ನಲ್ಲಿ ಆರ್‌ಸಿಬಿ ತಂಡಗಳನ್ನು ಈ ರಾಯಲ್ ಚಾಲೆಂಜರ್ಸ್ ಸ್ಪೋರ್ಟ್ಸ್ ಪ್ರೈ.ಲಿ. ನಿರ್ವಹಿಸುತ್ತಿದೆ.

‘ಮೌಲ್ಯಮಾಪನ ಪ್ರಕ್ರಿಯೆಯು 2026ರ ಮಾರ್ಚ್ ಅಂತ್ಯದ ಒಳಗೆ ಮುಗಿಯಲಿದೆ’ ಎಂದು ಯುಎಸ್‌ಎಲ್, ಮುಂಬೈ ಷೇರುಪೇಟೆಗೆ ಬುಧವಾರ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಹೇಳಿದೆ.

ಮೂಲ ಉದ್ಯಮವಾದ ‘ಮದ್ಯ ಮಾರಾಟ’ದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಮುಂದಾಗಿರುವುದಾಗಿ ಹೇಳಿದೆ. ಫ್ರ್ಯಾಂಚೈಸಿ ಮಾರಾಟದ ಬಗ್ಗೆ ಪ್ರತಿಕ್ರಿಯಿಸಲು ಆರ್‌ಸಿಬಿ ಮಾತೃಸಂಸ್ಥೆ ಡಿಯಾಜಿಯೊ ಈ ಹಿಂದೆ ನಿರಾಕರಿಸಿತ್ತು.

ದಕ್ಷಿಣ ಆಫ್ರಿಕಾ ವಿರುದ್ಧ ಎರಡು ಪಂದ್ಯಗಳ ಸರಣಿ

ಟೆಸ್ಟ್ ತಂಡಕ್ಕೆ ಪಂತ್ ಪುನರಾಗಮನ

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕಾ ವಿರುದ್ಧ ಎರಡು ಪಂದ್ಯಗಳ ಟೆಸ್ಟ್ ಸರಣಿಗೆ ಭಾರತ ತಂಡವನ್ನು ಬುಧವಾರ ಪ್ರಕಟಿಸಲಾಗಿದ್ದು, ಸ್ಟಾರ್ ವಿಕೆಟ್ ಕೀಪರ್ ರಿಷಭ್ ಪಂತ್ ಅವರು ಬಹುನಿರೀಕ್ಷಿತ ಪುನರಾಗಮನ ಮಾಡಿದ್ದಾರೆ.

ಕೆ.ಎಲ್.ರಾಹುಲ್ ಜೊತೆಗೆ ಮಧ್ಯಮ ಕ್ರಮಾಂಕದ ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರು ಸ್ಥಾನ ಉಳಿಸಿಕೊಂಡಿದ್ದಾರೆ. ಆದರೆ ಪ್ರಸಿದ್ಧ ಕೃಷ್ಣ ಸ್ಥಾನ ಕಳೆದುಕೊಂಡಿದ್ದಾರೆ.

ಜುಲೈನಲ್ಲಿ ಇಂಗ್ಲೆಂಡ್ ಪ್ರವಾಸದ ವೇಳೆ ಮ್ಯಾಂಚೆಸ್ಟರ್‌ನಲ್ಲಿ ನಡೆದ ನಾಲ್ಕನೇ ಟೆಸ್ಟ್‌ನಲ್ಲಿ ಪಂತ್ ಅವರ ಪಾದಕ್ಕೆ ಚೆಂಡುಬಡಿದು ಮೂಳೆ ಮುರಿದಿತ್ತು. ತವರಿನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಸರಣಿಯಲ್ಲೂ ಆಡಿರಲಿಲ್ಲ.

ನಿರೀಕ್ಷೆಯಂತೆ ಎನ್.ಜಗದೀಶನ್ ತಂಡದಿಂದ ಹೊರಬಿದ್ದಿದ್ದಾರೆ.

ಭುಜದ ನೋವಿನಿಂದ ಚೇತರಿಸಿಕೊಂಡಿರುವ ಬಂಗಾಳದ ವೇಗಿ ಆಕಾಶ್ ದೀಪ್ ಅವರೂ ಪುನರಾಗಮನ ಮಾಡಿದ್ದಾರೆ. ಅವರು ರಣಜಿ ಟ್ರೋಫಿ ಮತ್ತು ಇರಾನಿ ಟ್ರೋಫಿಯಲ್ಲಿ ಆಡಿದ್ದರು. ಅವರು ಬೆಂಗಳೂರಿನಲ್ಲಿ ದಕ್ಷಿಣ ಆಫ್ರಿಕಾ ‘ಎ’ ವಿರುದ್ಧ ಗುರುವಾರ ಆರಂಭವಾಗಲಿರುವ ಎರಡನೇ ಟೆಸ್ಟ್‌ಗೆ ಭಾರತ ಎ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ರಿಷಭ್ ಪಂತ್

ಭಾರತದ ವೇಗದ ಪಡೆಯು ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್ ಅವರನ್ನೂ ಒಳಗೊಂಡಿದೆ. ಸ್ಪಿನ್ ವಿಭಾಗವು ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಕುಲದೀಪ್ ಜೊತೆಗೆ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರನ್ನು ಒಳಗೊಂಡಿದೆ.

ರಣಜಿ ಟ್ರೋಫಿ ಟೂರ್ನಿಯಲ್ಲಿ ಆಡುತ್ತಿರುವ ಅನುಭವಿ ಬೌಲರ್ ಮೊಹಮ್ಮದ್ ಶಮಿ ಅವರನ್ನು ಮತ್ತೆ ಕಡೆಗಣಿಸಲಾಗಿದೆ.

ತಂಡ ಇಂತಿದೆ: ಶುಭಮನ್ ಗಿಲ್ (ನಾಯಕ), ರಿಷಭ್ ಪಂತ್ (ವಿಕೆಟ್ ಕೀಪರ್– ಉಪನಾಯಕ), ಯಶಸ್ವಿ ಜೈಸ್ವಾಲ್, ಕೆ.ಎಲ್.ರಾಹುಲ್, ಸಾಯಿ ಸುದರ್ಶನ್, ದೇವದತ್ತ ಪಡಿಕ್ಕಲ್, ಧ್ರುವ್ ಜುರೇಲ್, ರವೀಂದ್ರ ಜಡೇಜ, ವಾಷಿಂಗ್ಟನ್ ಸುಂದರ್, ಜಸ್‌ಪ್ರೀತ್ ಬೂಮ್ರಾ, ನಿತೀಶ್ ಕುಮಾರ್ ರೆಡ್ಡಿ, ಅಕ್ಷರ್ ಪಟೇಲ್, ಮೊಹಮ್ಮದ್ ಸಿರಾಜ್, ಕುಲದೀಪ್ ಯಾದವ್ ಮತ್ತು ಆಕಾಶ್ ದೀಪ್.

ದಕ್ಷಿಣ ಆಫ್ರಿಕಾ ವಿರುದ್ಧದ ಟೆಸ್ಟ್ ಸರಣಿ		
ಮೊದಲ ಟೆಸ್ಟ್	ಕೋಲ್ಕತ್ತ	ನ. 14 ರಿಂದ
ಎರಡನೇ ಟೆಸ್ಟ್	ಗುವಾಹಟಿ	ನ. 22ರಿಂದ

ಛತ್ತೀಸಗಢ ವಿರುದ್ಧ ರಾಜ್ಯ ತಂಡಕ್ಕೆ ಸೋಲು

ಮೈಸೂರು: ದೇವ್ ಆದಿತ್ಯ ಸಿಂಗ್ (32ಕ್ಕೆ 4) ಮತ್ತು ಪ್ರಶಾಂತ್ ಸಾಯಿ ಪೈಂಕ್ರಾ (39ಕ್ಕೆ 4) ಅವರ ಅಮೋಘ ವೇಗದ ಬೌಲಿಂಗ್ ದಾಳಿಯ ನೆರವಿನಿಂದ ಛತ್ತೀಸಗಢ ತಂಡವು 242 ರನ್‌ಗಳಿಂದ ಆತಿಥೇಯ ಕರ್ನಾಟಕ ತಂಡದ ಮೇಲೆ ಭಾರಿ ಜಯಗಳಿಸಿತು.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆದ ಕರ್ನಲ್ ಸಿ.ಕೆ.ನಾಯ್ಡು ಕ್ರಿಕೆಟ್ ಟೂರ್ನಿ ಪಂದ್ಯದ ಕಡೇ ದಿನವಾದ ಬುಧವಾರ ಗೆಲ್ಲಲು 365 ರನ್‌ಗಳ ಗುರಿ ಎದುರಿಸಿದ ಕರ್ನಾಟಕ ತಂಡ ಎರಡನೇ ಇನ್ನಿಂಗ್ಸ್‌ನಲ್ಲಿ 122 ರನ್‌ಗಳಿಗೆ ಕುಸಿಯಿತು.

ಫೈಜಾನ್ ಖಾನ್ (34 ರನ್, 4x5) ಮತ್ತು ಹರ್ಷಿಲ್ ಧರ್ಮನಿ (22 ರನ್) ಹೊರತು ಪಡಿಸಿ ಯಾರೊಬ್ಬರೂ ಪ್ರತಿರೋಧ ತೋರಲಿಲ್ಲ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಛತ್ತೀಸಗಢ: 303. ಕರ್ನಾಟಕ: 212. 2ನೇ ಇನಿಂಗ್ಸ್: ಛತ್ತೀಸಗಢ 94.5 ಓವರ್‌ಗಳಲ್ಲಿ 7ಕ್ಕೆ 273 ಡಿ., ಕರ್ನಾಟಕ: 41.5 ಓವರ್‌ಗಳಲ್ಲಿ 122 (ಫೈಜಾನ್ ಖಾನ್ 34, ದೇವ್ ಆದಿತ್ಯ ಸಿಂಗ್ 32ಕ್ಕೆ 4, ಪ್ರಶಾಂತ್ ಸಾಯಿ ಪೈಂಕ್ರಾ 39ಕ್ಕೆ 4).
ಫಲಿತಾಂಶ: ಛತ್ತೀಸಗಢ ತಂಡಕ್ಕೆ 242 ರನ್ ಜಯ.

ALVA'S
ALVA'S Education Foundation®
ENGLISH MEDIUM SCHOOL (STATE SYLLABUS)
CENTRAL SCHOOL (CBSE CURRICULUM)
ICSE SCHOOL (ICSE CURRICULUM)
REGISTRATION OPEN 2026-27
STATE SYLLABUS 6th 7th 8th 9th 10th
CBSE 5th 6th 7th 8th 9th 10th
ICSE 5th 6th 7th 8th 9th
EFFECTIVE IIT & NEET FOUNDATION COACHING FOR INTERESTED SELECTED STUDENTS FROM 6th TO 10th Std
HOSTEL FACILITY IS AVAILABLE
77602 72525 | 70265 29757
63663 77824 | 90717 05131
FOR MORE DETAILS
www.alvasschools.com
VIDYAGIRI, MOODUBIDIRE, D.K. - 574227

DAILY EMI STARTING FROM ₹89$
LOW DOWN PAYMENT STARTING FROM ₹1,999$
CORPORATE OFFERS UP TO ₹2,200$
GET INSTANT DISCOUNT UP TO ₹10,000$
HDFC BANK FESTIVE TREATS
Powered by pine labs
INDIA'S FIRST 5 YEAR WARRANTY* *Conditions apply
Hero GoodLife Stand a chance to win 100% Cashback | 24 Carat Gold Coin and many more assured benefits*
Additional offers on Flipkart amazon.in
Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. I CIN: L35911DL1984PLC017354 I For further information, contact your nearest Hero MotoCorp authorised outlet or visit us on www.HeroMotoCorp.com. *Fastest compared to all air-cooled engine motorcycles in the 125cc segment as per internal testing. **66 km/l with E5 petrol under standard tests; mileage may vary. Accessories and features shown may not be a part of standard fitment. Always wear a helmet while riding a two-wheeler. As per cumulative dispatch numbers till August 2025. #Ex-Showroom price of Xtreme 125R IBS OBD2B variant in Karnataka. ^Offer amount and combination of offer may vary for model/variant and states and it is applicable on select models only, for limited time period or till stock lasts. $Finance offer is at the sole discretion of the Financier, subject to its respective T&Cs. Available at select dealerships. T&C apply.
TOLL FREE 1800 266 0018
AUTHORISED DEALERS: BENGALURU - HOSUR ROAD: RT KRISHNA HERO - PH: 9289923177. LALBAGH ROAD: PRAKASH HERO - PH: 9289922117. BYATARAYANAPURA: BIMAL HERO - PH: 9289922863. PEENYA: SAI HERO - PH: 9289922830. HOSUR ROAD: RT KRISHNA HERO - PH: 9289923177. BANASHANKARI: SAI HERO - PH: 9289922476. BANASWADI: BHAGATH HERO - PH: 9289922738. MAGADI ROAD: POORNA HERO - PH: 9289923212. MARATHALLI: VAAYURATHA HERO - PH: 9289923811. RAJAJI NAGAR: MAX HERO - PH: 9289923023. KOLAR: SAI BALAJI HERO PH. 9821745024. CHIKKABALLAPUR: MANJUNATH HERO - PH: 9821751332. TUMKUR: SAI HERO - PH: 9289922986. B.H.ROAD – SAI HERO, PH. 7022752841. KAMAKSHIPALYA: POORNA MOTORS - PH: 9606922534. JP NAGAR: SAI HERO, PH: 99002 36280. KANAKPURA ROAD: SAI HERO - 8904677394. HOSKOTE: BHAGATH HERO - PH: 8884600051. K R PURAM: BHAGATH HERO - PH: 7829488706. JIGANI: RT KRISHNA HERO – PH: 8762860999. RT NAGAR: BIMAL HERO 9535327710. TIPTUR: SAI HERO PH. 9164840456. KUNIGAL: SAI HERO - PH: 7022752858. DODDABALLAPURA: BIMAL HERO 9742202125. Associate Dealer: BELATHUR - 9902649569. MADIWALA - 9731660639. BANASHANKARI 3RD STAGE - 9513353864. BANNERGHATTA ROAD - 41209619. KENGERI - 9739275523. YELAHANKA - 28462524, 9341025589. MYSORE ROAD: 9611997733. DEVANAHALLI - 9964560599. KANAKAPURA - 9880212346. WHITEFIELD - 9741646466. BAGEPALLI - 282828. SRINIVASPUR - 9738504002. SIDLAGHATTA - 254827. NELAMANGALA - 27723395. PAVAGADA - 9740324639. MADHUGIRI - 9972278989. VIJAYAPURA: 9449619920. SIRA: 9448417393. CHANDAPURA: 9481329064. VIDYARANYAPURA: 9606934533. MAGADI: 9482090890. GOTTIGERE: 81976 78979. Also Available at: DUNNASANDRA: 8310166369. HSR LAYOUT: 7428893265. MATHIKERE: 9035027951. DOMLUR: 7353919910- J.P.NAGAR: 9035024274. RT NAGAR: 9535327710. ATTIBELE: 8050609104. B NARAYANAPURA: 9945472149. VARTHUR: 9900877227. PAPAREDDYPALYA: 9916678309. ANEKAL: 9739519252. KONANKUNTE: 9886122251. SARJAPUR MAIN ROAD: 8762860999. BIDADI: 9844767719. RAMANAGARA: 9663399909. JIGANI: 9986498884. CHIKKANAYAKANAHALLI: 9880807399. TURUVEKERE: 9448403205. KORATAGERE: 9731713711. PERESANDRA: 9901502049. For Bulk deals/Corporate purchase - “bangalore@heromotocorp.com” & kiran.kumart@heromotocorp.com For Buy/Sell/Exchange Old any Vehicle contact VV PURAM, Bengaluru Olety Sai Hero Sure: 98450 74491.
SAATCHI & SAATCHI